ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭಾಷಾಭಿವೃದ್ಧಿ ಯೋಜನೆ

ಐನೆಲೆ ಕರಿಬಸವಾರ್ಯ ವಿರಚಿತ

ಸ್ತೋತ್ರ ರತ್ನಾಕರ

ಸಂಪಾದಕರು

ಡಾ. ಈಶ್ವರಯ್ಯ ಕೂಡಂಬಲ್

ಕನ್ನಡ ಅಧ್ಯಯನ ಸಂಸ್ಥೆ

ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ-೫೮೫೧೦೬

ಐನೆಲೆ ಕರಿಬಸವಾರ್ಯ ವಿರಚಿತ

ಸ್ತೋತ್ರ ರತ್ನಾಕರ

ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭಾಷಾಭಿವೃದ್ಧಿ ಯೋಜನೆ

ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆ ಹಾಗೂ ಪ್ರಕಟಣಾ ಯೋಜನೆ – ೨

ಐನೆಲೆ ಕರಿಬಸವಾರ್ಯ ವಿರಚಿತ

ಸ್ತೋತ್ರ ರತ್ನಾಕರ

ಪ್ರಧಾನ ಸಂಪಾದಕರು

ಡಾ. ಬಸವರಾಜ ಪೋಲಿಸ ಪಾಟೀಲ

ಸಂಪಾದಕರು

ಡಾ. ಈಶ್ವರಯ್ಯ ಕೂಡಂಬಲ್

ಕನ್ನಡ ಅಧ್ಯಯನ ಸಂಸ್ಥೆ

ಗುಲಬರ್ಗಾ ವಿಶ್ವವಿದ್ಯಾಲಯ

ಗುಲಬರ್ಗಾ – ೫೮೫ ೧೦೬

AINELE KARIBASVRYA VIRACHITA
STOTRA RATNAKARA
Chief Editor : Dr. Basavaraj Police Patil Professor Institute of
Kannada studies Gulbarga University,Gulbarga
Editor : Dr. Ishwaryya Kudambal Post :Ainoli Ta:Chincholi Dist: Gulbarga
Published by : Institute of Kannada Studies
Gulbarga University, Gulbarga
Funding Agency : Government of Karnataka
Institute of Kannada Studies
First Impression : 2012
Total Pages : XLVi +294
Paper Used : 80 G. S.M.Maplitho
Price : Rs. 300.00

ಐನೆಲೆ ಕರಿಬಸವಾರ್ಯ ವಿರಚಿತ ಸ್ತೋತ್ರ ರತ್ನಾಕರ
ಪ್ರಧಾನ ಸಂಪಾದಕರು ಡಾ.ಬಸವರಾಜ ಪೋಲಿಸ ಪಾಟೀಲ ಪ್ರಾಧ್ಯಾಪಕರು
ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ
ಸಂಪಾದಕರು ಡಾ. ಈಶ್ವರಯ್ಯ ಕೂಡಂಬಲ್
ಅಂಚೆ ಐನೂಲಿ ತಾ- ಚಿಂಚೋಳಿ ಜಿ: ಗುಲಬರ್ಗಾ
ಪ್ರಕಾಶಕರು : ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ,
ಗುಲಬರ್ಗಾ
ಪ್ರಥಮ ಮುದ್ರಣ : ೨೦೧೨
ಪುಟಗಳು: XLVi + ೨೯೪
ಬಳಸಿದ ಕಾಗದ : ೮೦ ಜಿ.ಎಸ್. ಎಮ್. ಮ್ಯಾಪಲಿಥೊ
ಬೆಲೆ : ರೂ. ೩೦೦.೦೦
ಕೃತಿ ದೊರೆಯುವ ಸ್ಥಳ : ಕನ್ನಡ ಅಧ್ಯಯನ ಸಂಸ್ಥೆ

ಮುದ್ರಕರು :
ಪ್ರಿಂಟ್ ಪಾರ್ಕ್
ಕ್ವಾಲಿಟಿ ಆಫ್ ಸೆಟ್ ಪ್ರಿಂಟರ್ಸ್
೧೪೯೬/೪, ೩ನೇ ಅಡ್ಡರಸ್ತೆ, ಮರಿಯಪ್ಪನಪಾಳ್ಯ
ಶ್ರೀರಾಂಪುರಂ ಅಂಚೆ,
ಬೆಂಗಳೂರು – ೫೬೦ ೦೨೧.
ದೂ : ೦೮೦-೨೩೪೨೨೮೩೮

ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

ಕನ್ನಡ ಭಾಷಾಭಿವೃದ್ಧಿ ಯೋಜನೆ ಸಮಿತಿ

ಅಧ್ಯಕ್ಷರು
ಪ್ರೊ. ಈ.ಟಿ. ಪುಟ್ಟಯ್ಯ
ಕುಲಪತಿಗಳು

ಉಪಾಧ್ಯಕ್ಷರು
ಪ್ರೊ. ಎಸ್.ಎಲ್. ಹಿರೇಮಠ
ಕುಲಸಚಿವರು

ಸಂಚಾಲಕರು
ಪ್ರೊ. ನಾಗಾಬಾಯಿ ಬಿ. ಬುಳ್ಳಾ
ಅಧ್ಯಕ್ಷರು, ಕನ್ನಡ ಅಧ್ಯಯನ ಸಂಸ್ಥೆ

ಸದಸ್ಯರು

ಡಾ. ಪಿ.ಕೆ.ಖಂಡೋಬಾ
ಡಾ. ವ್ಹಿ.ಜಿ.ಪೂಜಾರ
ಡಾ. ವೀರಣ್ಣ ದಂಡೆ
ಡಾ. ಎಚ್.ಟಿ.ಪೋತೆ
ಡಾ. ಜಯಶ್ರೀ ದಂಡೆ
ಡಾ. ಡಿ.ಬಿ.ನಾಯಕ
ಡಾ. ಬಸವರಾಜ ಸಬರದ
ಡಾ. ಬಿ.ಎಸ್. ಪೋಲಿಸ ಪಾಟೀಲ
ಡಾ. ಎಸ್.ಎಂ. ಹಿರೇಮಠ

ಡಿ.ವಿ.ಸದಾನಂದಗೌಡ
ಮುಖ್ಯಮಂತ್ರಿ
ಸಿಎಂ/ಪಿಎಸ್/57/11

ಕರ್ನಾಟಕ ಸರ್ಕಾರ

ಬೆಂಗಳೂರು–560 001
ದಿ: 02.11.2011

ಶುಭ ಹಾರೈಕೆ

ನಮ್ಮ ಸರ್ಕಾರದ ಪ್ರಯತ್ನದ ಫಲವಾಗಿ ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನ ದೊರೆತಿದ್ದು, ಈ ಹಿನ್ನೆಲೆಯಲ್ಲಿ ಕನ್ನಡ ಭಾಷಾಭಿವೃದ್ಧಿ ಯೋಜನೆ ಕಾರ್ಯಕ್ರಮಗಳಿಗೆ ನಮ್ಮ ಸರ್ಕಾರ ವಿಶೇಷ ಅನುದಾನವಾಗಿ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಿಗೆ ತಲಾ ಎರಡು ಕೋಟಿ ರೂಪಾಯಿ ಅನುದಾನವನ್ನು ಮೀಸಲಿಟ್ಟು ಈಗಾಗಲೇ ಒಂದು ಕೋಟಿ ರೂಪಾಯಿ ಬಿಡುಗಡೆ ಮಾಡಲಾಗಿದೆ. ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯೂ ಸೇರಿದಂತೆ ನಾಡಿನ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳು ಈ ಕಾರ್ಯಯೋಜನೆಯನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕಾರ್ಯತತ್ಪರರಾಗಿರುವುದು ಮೆಚ್ಚತಕ್ಕ ಸಂಗತಿ.

ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ವಚನ ಸಾಹಿತ್ಯ, ದಾಸ ಸಾಹಿತ್ಯ ತತ್ವಪದ ಸಾಹಿತ್ಯ, ದಲಿತ–ಬಂಡಾಯ ಸಾಹಿತ್ಯ, ಜಾನಪದ, ಶಾಸನ, ಇತಿಹಾಸ, ಹಸ್ತಪ್ರತಿ, ಸಾಹಿತ್ಯ ಚರಿತ್ರೆ, ರಂಗಭೂಮಿ, ತಂತ್ರಜ್ಞಾನ, ಕನ್ನಡೇತರರಿಗೆ ಕನ್ನಡ ಪರಿಚಯ ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ ರೂಪಿಸಲಾದ ವಿವಿಧ ಕ್ರಿಯಾಯೋಜನೆಗಳು ಹೆಚ್ಚು ಉಪಯುಕ್ತಕಾರಿಯಾಗಿವೆ. ಕನ್ನಡ ಅಧ್ಯಯನ ಮತ್ತು ಸಂಶೋಧನಾ ವ್ಯಾಪ್ತಿಯನ್ನು ವಿಸ್ತರಿಸುವುದರ ಮೂಲಕ ಕನ್ನಡಕ್ಕೆ ಹೊಸ ಆಯಾಮಗಳನ್ನು ಜೋಡಿಸಿದೆ. ಈ ಕಾರ್ಯದಲ್ಲಿ ನಾಡಿನ ಅನೇಕ ಸಂಶೋಧನಾಸಕ್ತರು ಪಾಲುಗೊಂಡಿದ್ದು, ಅವರ ಎಲ್ಲ ಸಂಶೋಧನೆ, ಅಧ್ಯಯನ, ಪುಸ್ತಕ ರೂಪದಲ್ಲಿ ಪ್ರಕಟಗೊಳ್ಳುತ್ತಿರುವುದು ಶ್ಲಾಘನೀಯ.

ಕನ್ನಡ ಭಾಷೆಗೆ ಎರಡು ಸಾವಿರ ವರ್ಷಗಳ ಸುದೀರ್ಘ ಇತಿಹಾಸವಿದೆ. ಸಮೃದ್ಧವೂ, ಪ್ರಬುದ್ಧವೂ ಆದ ಕನ್ನಡ ಭಾಷಾ ಸಾಹಿತ್ಯ ತನ್ನ ಭಾಷಿಕ, ಸಾಂಸ್ಕೃತಿಕ, ಸಾಹಿತ್ಯಿಕ ಅನನ್ಯತೆಯಿಂದ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿದೆ. ಈ ಬೆಳವಣಿಗೆಗೆ ಕನ್ನಡದ ಅಸಂಖ್ಯಾತ ಕವಿಗಳೂ, ಲೇಖಕರೂ, ಕಲಾವಿದರೂ ಕಾರಣರಾಗಿದ್ದಾರೆ. ಕನ್ನಡ ಭಾಷೆ ಸೃಜನಶೀಲವಾಗಿ ಮತ್ತು ಶಾಸ್ತ್ರೀಯವಾಗಿ ಶ್ರೇಷ್ಠ ಮಟ್ಟದ

ಬೆಳವಣಿಗೆಯನ್ನು ಹೊಂದಿದೆ. ವೈವಿಧ್ಯಪೂರ್ಣವಾದ ಒಂದು ದೊಡ್ಡ ಪರಂಪರೆ ನಮ್ಮ ಹಿಂದಿದೆ. ಈ ಮಹಾಪರಂಪರೆಯ ಮುಂಚೂಣಿಯಲ್ಲಿ ನಾವಿದ್ದೇವೆ. ಕನ್ನಡವನ್ನು ಇನ್ನೂ ಎತ್ತರಕ್ಕೆ ತೆಗೆದುಕೊಂಡು ಹೋಗುವ ಬಹುಮುಖ್ಯ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಕನ್ನಡ ಕಟ್ಟುವ ಈ ಮಹತ್ವದ ಕೈಂಕರ್ಯಕ್ಕೆ ಎಲ್ಲರೂ ಕೈಜೋಡಿಸಬೇಕಾಗಿದೆ.

ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಲವು ಯೋಜನೆಗಳಲ್ಲಿ ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆ ಹಾಗೂ ಪ್ರಕಟಣಾ ಯೋಜನೆಯು ಒಂದಾಗಿದೆ. ಹಲವಾರು ಅಪ್ರಕಟಿತ ಹಸ್ತ ಪ್ರತಿಗಳನ್ನು ಪ್ರಕಟಿಸಿದ ಪ್ರಧಾನ ಸಂಪಾದಕರಿಗೂ, ಸಂಪಾದಕರಿಗೂ ಅಭಿನಂದಿಸಿ, ಈ ಕೃತಿಗಳು ನಾಡಿನ ಸಹೃದಯರ ಮನ ಗೆಲ್ಲಲಿ ಎಂದು ಹಾರೈಸಿ ಶುಭ ಕೋರುತ್ತೇನೆ.

ಡಿ.ವಿ. ಸದಾನಂದಗೌಡ
ಮುಖ್ಯಮಂತ್ರಿಗಳು

ಗೋವಿಂದ. ಎಂ. ಕಾರಜೋಳ
ಸಣ್ಣ ನೀರಾವರಿ,
ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕರ್ನಾಟಕ ಸರ್ಕಾರ

ನಂ. 330, 3ನೇ ಮಹಡಿ
ವಿಧಾನಸೌಧ
ಬೆಂಗಳೂರು- 560 001
ದಿ: 16.11.2011

ಶುಭಹಾರೈಕೆ

ಕನ್ನಡ ನಾಡು-ನುಡಿಗೆ ಸುದೀರ್ಘವಾದ ಇತಿಹಾಸವಿದೆ. ಭವ್ಯ ಪರಂಪರೆಯನ್ನು ಈ ನಾಡು ಹೊಂದಿದೆ. ಭಾರತೀಯ ಭಾಷೆಗಳಲ್ಲಿಯೇ ಅತೀ ಹೆಚ್ಚು ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದಿರುವ ಹೆಗ್ಗಳಿಕೆಗೆ ನಮ್ಮ ಭಾಷೆ ಪಾತ್ರವಾಗಿದೆ. ಈ ನಾಡಿನ ಕವಿಗಳು, ಸಾಹಿತಿಗಳು, ಕಲಾವಿದರು, ಸಂಶೋಧಕರು, ಶಿಕ್ಷಣತಜ್ಞರು, ವಿಜ್ಞಾನಿಗಳು ವಿಶ್ವದಾದ್ಯಂತ ಹೆಸರು ಮಾಡಿದ್ದಾರೆ.

ಕನ್ನಡ ನಾಡು-ನುಡಿಗೆ ಸಂಬಂಧಪಟ್ಟ ಮಾತುಗಳು ರಾಮಾಯಣ ಮಹಾಭಾರತಗಳಲ್ಲಿ ಕಂಡು ಬರುತ್ತವೆ. ಕ್ರಿಸ್ತಪೂರ್ವದಿಂದಲೇ ಕನ್ನಡ ಭಾಷೆಯ ಅಸ್ತಿತ್ವವನ್ನು ಸಂಶೋಧಕರು ಗುರುತಿಸಿದ್ದಾರೆ. ಕ್ರಿಸ್ತಶಕ 450 ರ ಹಲ್ಮಿಡಿಶಾಸನ ಕನ್ನಡದ ಉಪಲಬ್ಧವಿರುವ ಮೊದಲ ಲಿಖಿತ ರೂಪದ ಶಾಸನ. ಕನ್ನಡದ ಆದಿ ಮಹಾಕವಿ ಪಂಪನಿಗಿಂತ ಹಿಂದೆಯೇ ಒಂದು ಸಮೃದ್ಧವಾದ ಸಾಹಿತ್ಯ ಪರಂಪರೆಯನ್ನು ಕನ್ನಡ ಕಂಡಿದೆ ಎಂಬುದಕ್ಕೆ ಸಂಶೋಧಕರು ಸಾಕಷ್ಟು ಪುರಾವೆಗಳನ್ನು ನೀಡಿದ್ದಾರೆ. ಶಾತವಾಹನರು, ಕದಂಬರು, ಚಾಲುಕ್ಯರು, ಗಂಗರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಅರಸರು ಈ ನಾಡಿನ ಕಲೆ, ಸಾಹಿತ್ಯ, ವಾಸ್ತುಶಿಲ್ಪ, ಸಂಗೀತ ಮೊದಲಾದ ಕ್ಷೇತ್ರಗಳಲ್ಲಿ ಅಪೂರ್ವ ಕೊಡುಗೆ ನೀಡಿದ್ದಾರೆ.

ಇಂಥ ಅಪೂರ್ವ ಪರಂಪರೆ ಹೊಂದಿರುವ ಕನ್ನಡ ಭಾಷೆಯನ್ನು ಕೇಂದ್ರ ಸರ್ಕಾರ ಶಾಸ್ತ್ರೀಯ ಭಾಷೆ ಎಂದು ಘೋಷಿಸಿದೆ. ಕನ್ನಡದ ಕೆಲಸಕ್ಕೆ ಕೈ ಜೋಡಿಸಿರುವ ಕರ್ನಾಟಕ ರಾಜ್ಯ ಸರ್ಕಾರ 'ಕನ್ನಡ ಭಾಷಾಭಿವೃದ್ಧಿ ಯೋಜನೆ'ಗೆ ವಿಶೇಷ ಅನುದಾನ ಬಿಡುಗಡೆ ಮಾಡಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಕಟ್ಟುವ ಕೆಲಸ ಭರದಿಂದ ನಡೆದಿದೆ. ಕನ್ನಡದ ಇತಿಹಾಸ, ಭಾಷೆ, ಸಾಹಿತ್ಯ, ಪರಂಪರೆ, ಜಾನಪದ, ವಿಜ್ಞಾನ, ಮಾನವಿಕ ಇನ್ನಿತರ ಅಂಶಗಳನ್ನು ಕುರಿತ ಹೊತ್ತಿಗೆಗಳು ಸಿದ್ಧವಾಗುತ್ತಿವೆ. ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಹಸ್ತಪ್ರತಿಗಳ ಸಂಗ್ರಹ ಸಂರಕ್ಷಣೆ ಹಾಗೂ ಪ್ರಕಟಣಾ ಯೋಜನೆಯಡಿಯಲ್ಲಿ ಹಲವಾರು

ಅಪ್ರಕಟಿತ್ತಿದೆ ಹಸ್ತಪ್ರತಿಗಳನ್ನು ಪ್ರಕಟಿಸಿದ ಪ್ರಧಾನ ಸಂಪಾದಕರಿಗೂ, ಸಂಪಾದಕರಿಗೂ ಇಲ್ಲಿ ಅಭಿನಂದಿಸುವೆನು.

ಕನ್ನಡ ತೇರು ಎಳೆಯುವ ಮಹತ್ಕಾರ್ಯದಲ್ಲಿ ಎಲ್ಲಾ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಪ್ರೇರೇಪಿಸಿ, ಉತ್ತೇಜಿಸಿ ಆ ಎಲ್ಲ ವಿಶೇಷ ಯೋಜನೆಗಳನ್ನು ಕಾರ್ಯಗತಗೊಳಿಸುವಂತೆ ನಿರ್ದೇಶನ ನೀಡಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಾದ ಶ್ರೀ ಮನು ಬಳಿಗಾರ್ ಅವರನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಈ ಮಾಲೆಯಲ್ಲಿ ಈ ಬಗೆಯ ಇನ್ನೂ ಅನೇಕ ಕೃತಿಗಳು ಕನ್ನಡಿಗರಿಗೆ ದೊರೆಯಲಿವೆ ಎಂಬ ವಿಚಾರ ತಿಳಿದಾಗಲಂತೂ ನನಗೆ ಇನ್ನಷ್ಟು ಮಹದಾನಂದವಾಗಿದೆ. ಇದರ ಪೂರ್ಣ ಪ್ರಯೋಜನವನ್ನು ನಾಡಿನ ಜನತೆ ಪಡೆಯುವಂತಾಗಲಿ.

ರಾಜ್ಯ ಸರ್ಕಾರದ ಈ ಯೋಜನೆ ಕನ್ನಡ ನಾಡು-ನುಡಿ ಸಂಸ್ಕೃತಿಯ ಪುನರುತ್ಥಾನಕ್ಕೆ ಕಾರಣವಾಗಿದೆ. ಈ ಮೂಲಕ ವಿವಿಧ ಜ್ಞಾನ ಶಿಸ್ತುಗಳಲ್ಲಿ ಕನ್ನಡಿಗರ ಅಧ್ಯಯನ ಆಸಕ್ತಿ ಬೆಳೆಯಲು ವಿವಿಧ ಕ್ರಿಯಾ ಯೋಜನೆಗಳು ಸಹಕಾರಿಯಾಗಿವೆ. ಇದರಿಂದ ಹೊಸ ಚೈತನ್ಯವನ್ನು ಹುಟ್ಟುಹಾಕುವ ಹೊಸ ಸಂಚಲನವನ್ನು ಉಂಟುಮಾಡುವ ಅನನ್ಯ ಪರಂಪರೆಯೊಂದಕ್ಕೆ ಚಾಲನೆ ಸಿಕ್ಕಂತಾಗಿದೆ.

ಈ ಪರ್ವಕಾಲದಲ್ಲಿ ನಾವಿದ್ದೇವೆ ಎನ್ನುವದು ಸಂತಸದ ಸಂಗತಿ. ಕನ್ನಡದ ಅಪೂರ್ವ ಪರಂಪರೆಯನ್ನು ಉಳಿಸಿ ಬೆಳೆಸುವ ಮಹತ್ಕಾರ್ಯದಲ್ಲಿ ಎಲ್ಲರೂ ಕೈ ಜೋಡಿಸಿದ್ದಾರೆ. ನಾಡು-ನುಡಿಯ ಅಭಿವೃದ್ಧಿ ವಿಚಾರದಲ್ಲಿ ಸರ್ಕಾರ ಸದಾ ಸಹಕಾರ ನೀಡುವದು. ಕನ್ನಡಿಗರಿಗೆ ಒಳಿತಾಗಲಿ, ಸರ್ವರೂ ಸುಖ ಶಾಂತಿಯಿಂದ ಬದುಕಿ ಬಾಳಲೆಂದು ಹೃದಯತುಂಬಿ ಹಾರೈಸುವೆ.

ಗೋವಿಂದ. ಎಂ. ಕಾರಜೋಳ
ಸಚಿವರು

ಬಿ. ಬಸವರಾಜು ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ
ಹಾಗೂ ವಾರ್ತಾ ಇಲಾಖೆ

ಕರ್ನಾಟಕ ಸರ್ಕಾರ

2, ನೆಲಮಹಡಿ, ವಿಕಾಸ ಸೌಧ,
ಬೆಂಗಳೂರು– 560 001
✆ 22205781ಮ 2203400
ಫ್ಯಾಕ್ಸ್: 22353105
ಇ–ಮೇಲ್. secy-kc@karnataka. Gov.in

ದಿ: 24.10.2011

ಶುಭಹಾರೈಕೆ

ದ್ರಾವಿಡ ಭಾಷಾ ಪರಂಪರೆಯ ನಡುವೆ ಕನ್ನಡ ಭಾಷೆಯ ಶ್ರೀಮಂತಿಕೆ ಮತ್ತು ಅದರ ಸಾಂಸ್ಕೃತಿಕ ವೈವಿಧ್ಯತೆ ಎದ್ದುಕಾಣುವಂತಿದೆ. ತಮಿಳು ಭಾಷೆಯ ಪರಂಪರೆಗೆ ಸರಿಸಮಾನವಾಗಿಯೇ ಬೆಳೆದು ಬಂದಿರುವ ಕನ್ನಡಕ್ಕೆ ನಿಖರವಾಗಿಯೇ ಒಂದೂವರೆ ಸಾವಿರ ವರ್ಷಗಳಿಗೂ ಮೀರಿದ ಇತಿಹಾಸವಿದೆ. ಕ್ರಿ.ಶ.450ರ ಹಲ್ಮಿಡಿ ಶಾಸನದ ಕಾಲಕ್ಕೆ ಕನ್ನಡ, ಕರ್ನಾಟಕದಲ್ಲಿ ಬಳಕೆಯಲ್ಲಿತ್ತು. ವ್ಯಾಸಕೃತ ಮಹಾಭಾರತದಲ್ಲಿಯೇ ಕರ್ನಾಟಕದ ಪ್ರಸ್ತಾಪವಿದೆ. ಶಾತವಾಹನರು, ಕದಂಬರು ಇಲ್ಲಿನ ಪ್ರಾಚೀನ ಅರಸು ಮನೆತನದವರೆಂದು ಇತಿಹಾಸಕಾರರು ಗುರುತಿಸಿರುತ್ತಾರೆ. ಗ್ರೀಕ್ ಭೂಗೋಳಶಾಸ್ತ್ರದ ಟಾಲೆಮಿಯ ಪ್ರವಾಸಿ ಬರವಣಿಗೆಯಲ್ಲಿಯೇ ಕನ್ನಡ ನಾಡಿನ ಅನೇಕ ಪ್ರದೇಶಗಳ ಪ್ರಸ್ತಾಪ ಇರುವುದನ್ನು ಸಂಶೋಧಕ ಗೋವಿಂದ ಪೈ ಅವರು ಬೆಳಕಿಗೆ ತಂದರು. ಅಶೋಕನು ದಕ್ಷಿಣ ಭಾರತದಲ್ಲಿ ಹಾಕಿಸಿದ ಶಾಸನಗಳು ಮೊದಲು ದೊರಕಿರುವುದು ಕರ್ನಾಟಕದಲ್ಲಿಯೇ! ಚಿತ್ರದುರ್ಗದ ಸಿದ್ದಾಪುರ, ರಾಯಚೂರಿನ ಮಸ್ಕಿ ಭಾಗದಲ್ಲಿ ದೊರಕಿರುವ ಶಾಸನದಿಂದಲೇ ಅಶೋಕನಿಗೆ 'ದೇವನಾಂಪ್ರಿಯ' ಎಂಬ ಬಿರುದು ಇದ್ದಿತೆಂದು ತಿಳಿದುಬರುತ್ತದೆ. ಅಶೋಕನು ದಕ್ಷಿಣ ಭಾರತದ ಕರ್ನಾಟಕದಲ್ಲಿ ತನ್ನ ಶಾಸನಗಳನ್ನು ಹಾಕಿಸಿದನೆಂದರೆ ಕರ್ನಾಟಕದಲ್ಲಿಯ ಭಾಷಾಪ್ರದೇಶಗಳು ಚೆನ್ನಾಗಿಯೇ ನೆಲೆಯೂರಿದ್ದವೆಂದು ತಿಳಿಯಬಹುದಾಗಿರುತ್ತದೆ. ಇಷ್ಟೇ ಅಲ್ಲದೆ ಕಾಳಿದಾಸನ ಕಾಲ ನಿಗದಿ ಮಾಡುವುದರಲ್ಲಿಯೂ ಮೊದಲು ಸಹಾಯಕ್ಕೆ ಬಂದದ್ದು ಕರ್ನಾಟಕದ ಐಹೊಳೆಯ ಮೇಗುತಿ ದೇವಾಲಯದ ರವಿಕೀರ್ತಿಯ 5ನೇ ಶತಮಾನದ ಶಾಸನ. 'ಅಯ್ಯಾಹೊಳೆಯ' ಐನೂರು ಜನ ವ್ಯಾಪರಸ್ಥರು ದಕ್ಷಿಣ ಭಾರತದ ವ್ಯಾಪಾರವನ್ನೆಲ್ಲ ನಿಯಂತ್ರಿಸುತ್ತಿದ್ದರಂತೆ. ಅಂದರೆ ಭಾರತದ ಇತಿಹಾಸಕ್ಕೆ ತನ್ನದೇ ಆದ ಕಾಣಿಕೆ ನೀಡಿದ ಕರ್ನಾಟಕದ ಸಾಂಸ್ಕೃತಿಕ ಪರಂಪರೆಯ ಈ ಹೆಗ್ಗುರುತುಗಳನ್ನು ಇಲ್ಲಿ ಪ್ರಸ್ತಾಪಿಸುತ್ತಿರುವುದರ ಕಾರಣವೆಂದರೆ, ಭಾರತ ಸರಕಾರ ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನಮಾನವನ್ನು ನೀಡಿರುವುದು ಎಲ್ಲಾ ರೀತಿಯಿಂದಲೂ ಸಮಂಜಸ

ಹಾಗೂ ಸೂಕ್ತ ಎಂಬುವುದಕ್ಕಾಗಿ. 2009ರಲ್ಲಿ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರೆತ ಸಂದರ್ಭದಲ್ಲಿ ಕರ್ನಾಟಕದ ಅಂದಿನ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪ ನವರು ಕರ್ನಾಟಕದ ಎಲ್ಲಾ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳಿಗೂ ಎರಡೆರಡು ಕೋಟಿ ಅನುದಾನವನ್ನು ಬಿಡುಗಡೆ ಮಾಡಿ ಅದರ ಅಡಿಯಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿಯ ಸಂವರ್ಧನೆಯ ಯೋಜನೆಗಳು ನೆರವೇರುವಂತಾಗಲಿ ಎಂದು ತಿಳಿಸಿದ್ದರು. ಅದರಂತೆ ಕರ್ನಾಟಕದ ವಿವಿಧ ಭಾಗದ ವಿಶ್ವವಿದ್ಯಾಲಯದ ಕನ್ನಡ ವಿಭಾಗಗಳು ಕನ್ನಡ ಸಾಹಿತ್ಯ ಪರಂಪರೆ ಕುರಿತಾಗಿ ಅನೇಕ ಸಂಶೋಧನ ಯೋಜನೆಗಳನ್ನು ಕೈಗೆತ್ತಿಕೊಂಡಿರುತ್ತವೆ.

ಈ ಹಿನ್ನೆಲೆಯಲ್ಲಿ ಗುಲ್ಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ವಿಭಿನ್ನ ಸಂಪುಟಗಳ ಪ್ರಕಟಣಾ ಯೋಜನೆಯನ್ನು ಹಮ್ಮಿಕೊಂಡು ಅದರಡಿಯಲ್ಲಿ **ಹಸ್ತ ಪ್ರತಿಗಳ ಸಂಗ್ರಹ ಸಂರಕ್ಷಣೆ ಹಾಗೂ ಪ್ರಕಟಣಾ ಯೋಜನೆಯಲ್ಲಿ ಹಲವಾರು ಅಪ್ರಕಟಿತ ಹಸ್ತ ಪ್ರತಿಗಳನ್ನು ಪ್ರಕಟಿಸಿದೆ.** ಕನ್ನಡ ಆಸಕ್ತರು ನಮ್ಮ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆ ಕುರಿತಂತೆ ಸಮಗ್ರ ಅರಿವನ್ನು ಪಡೆಯುವಂತೆ ರಚಿತವಾಗಿರುತ್ತವೆ. ಇಂಥದೊಂದು ಯೋಜನೆಯನ್ನು ಕೈಗೆತ್ತುಕೊಂಡು ಅದರ ಮೊದಲ ಹಂತದ ಕಾರ್ಯ ಮುಗಿಸಿ, ಮುಂದಿನ ಹಂತದಲ್ಲಿಯೂ ಈ ಬಗೆಯ ಇನ್ನಷ್ಟು ಗ್ರಂಥಗಳ ಪ್ರಕಟಣೆಯ ಯೋಜನೆಯನ್ನು ಕೈಗೆತ್ತಿಕೊಂಡು ಉತ್ಸಾಹದಿಂದ ಮುಂದುವರೆಸುತ್ತಿರುವ ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಈ.ಟಿ.ಪುಟ್ಟಯ್ಯ ಅವರನ್ನು ಮತ್ತು ಕುಲಸಚಿವ ಪ್ರೊ.ಎಸ್.ಎಲ್.ಹಿರೇಮಠ ಅವರನ್ನು ಈ ಸಂಪುಟದ ಪ್ರಧಾನ ಸಂಪಾದರಾದ ಬಸವರಾಜ ಪೋಲಿಸ ಪಾಟೀಲ ಮತ್ತು ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರಾದ ಡಾ. ನಾಗಾಬಾಯಿ ಬಿ. ಬುಳ್ಳಾ ಅವರನ್ನು ನಾನು ಕರ್ನಾಟಕ ಸರ್ಕಾರದ ಪರವಾಗಿ ಅಭಿನಂದಿಸುತ್ತೇನೆ.

ಬಿ. ಬಸವರಾಜು

ಕಾರ್ಯದರ್ಶಿ

ಮನು ಬಳಿಗಾರ್ ಕ.ಆ.ಸೇ
ಆಯುಕ್ತರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕರ್ನಾಟಕ ಸರ್ಕಾರ

ಕನ್ನಡ ಭವನ, ಜೆ.ಸಿ. ರಸ್ತೆ,
ಬೆಂಗಳೂರು- 560 001
ದಿ: 15.10.2011

ನಲ್ನುಡಿ

ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಂಪರೆಯೇ ಕುತೂಹಲಕರ ಮತ್ತು ವೈವಿಧ್ಯಮಯವಾದುದು. ಹತ್ತನೆಯ ಶತಮಾನ ಮತ್ತು ಅದರ ಪೂರ್ವಯುಗವನ್ನು 'ವೀರಯುಗ' ಎಂದು ವಿದ್ವಾಂಸರು ಕರೆದಿರುವುದಲ್ಲದೆ, ಆ ಕಾಲಕ್ಕೆ ಬಂದ ಕೃತಿಗಳೆಲ್ಲವೂ ಕ್ಷಾತ್ರಧರ್ಮ ಮತ್ತು ಅದರ ಮೌಲ್ಯಗಳನ್ನೇ ಹೇಳುವಂಥವಾಗಿರುತ್ತವೆ. ಪಂಪ ಬರೆದದ್ದು ವಿಕ್ರಮಾರ್ಜುನ ವಿಜಯವಾದರೆ ರನ್ನ ಬರೆದದ್ದು ಸಾಹಸಭೀಮ ವಿಜಯ. ಇದೆಲ್ಲಕ್ಕಿಂತ ಪೂರ್ವದಲ್ಲಿ ಕವಿರಾಜ ಮಾರ್ಗಕಾರನು ಕನ್ನಡ ನಾಡಿನ ಜನಗಳನ್ನು ಕಲಿಗಳೆಂದೂ, ಕವಿಗಳೆಂದೂ ಮುಕ್ತಕಂಠದಿಂದ ಪ್ರಶಂಸಿಸುತ್ತಾನೆ. ಕನ್ನಡ ನಾಡಿನ ಸಾಂಸ್ಕೃತಿಕ ಇತಿಹಾಸವನ್ನು ಕುರಿತು ಆರಂಭ ಕಾಲಕ್ಕೆ ಎಲ್ಲ ಕವಿಗಳು ಹೇಳುವ ಮಾತಿನಲ್ಲಿ ಆಶ್ಚರ್ಯಕರ, ಕುತೂಹಲಕರ ಹೊಂದಾಣಿಕೆ ಇದೆ. ಕವಿರಾಜ ಮಾರ್ಗಕಾರನು ಕನ್ನಡ ಜನರು ಕವಿಗಳೂ, ಕಲಿಗಳೂ ಆಗಿದ್ದರೆಂದರೆ, ಪಂಪ ತಾನೇ ಸತ್ಕವಿ, ಕಲಿ ಎಂದು ಹೇಳಿಕೊಳ್ಳುತ್ತಾನೆ. ಪಂಪ, ರನ್ನರ ಕೃತಿಗಳಲ್ಲಿ ಬರುವ ಸ್ತ್ರೀಪಾತ್ರಗಳು ಕೂಡ ಪುರುಷ ಪರಾಕ್ರಮವನ್ನು ಪುರಸ್ಕರಿಸಿ ಮಾತನಾಡುತ್ತವೆ. ಇದು ಕನ್ನಡ ನಾಡಿನ ಹತ್ತನೆಯ ಶತಮಾನ ಮತ್ತು ಅದರ ಪೂರ್ವ ವಿವರವಾದರೆ ಹನ್ನೆರಡನೆಯ ಶತಮಾನದ ಸಂಗತಿಯೇ ಬೇರೆ. ಅರಮನೆಯಲ್ಲಿ ಬೆಳೆದ ಸಾಹಿತ್ಯ ಸಾಮಾನ್ಯರ ನಡುವೆ ಬಂದು ಚಳುವಳಿಯ ರೂಪ ಪಡೆದುಕೊಂಡಿತು. ಪಾಂಡಿತ್ಯಪೂರ್ಣ ಸಾಹಿತ್ಯ ಸೃಷ್ಟಿಗಿಂತ ಜನಸಾಮಾನ್ಯರಿಗೆ ಅರ್ಥವಾಗುವ ಸಂಗತಿ ಮುಖ್ಯವೆಂಬ ಧೋರಣೆಯ ವಚನಕಾರರು ಪ್ರಭುತ್ವವನ್ನೇ ಪ್ರತಿಭಟಿಸಿ ಹೊರಬಂದದ್ದು ಆಶ್ಚರ್ಯಕರ ಬೆಳವಣಿಗೆ, ಬಸವಣ್ಣ, ಅಕ್ಕಮಹಾದೇವಿ, ಹರಿಹರ, ರಾಘವಾಂಕ ಇವರೆಲ್ಲ ಅರಸನ ವೈಭವದ ಆಸ್ಥಾನವನ್ನು ಬಿಟ್ಟು ಬಂದವರೆ. ತಮ್ಮ ಸಾಹಿತ್ಯ ಕೃತಿಗಳಲ್ಲಿ ಮಾನವೀಯತೆ, ಸರ್ವಸಮಾನತೆ, ಭಕ್ತಿ ಮತ್ತು ಆಧ್ಯಾತ್ಮವನ್ನು ಸಂಸ್ಥಾಪಿಸಿದವರು; ಅದಕ್ಕನುಗುಣವಾದ ಕಥೆ ಹಾಗೂ ಪಾತ್ರಗಳನ್ನೇ ಸೃಷ್ಟಿಸಿದರು.

ವಚನಕಾರರ ಕಾಲಕ್ಕೆ ಸಾಮಾನ್ಯ ಜನರ ನಡುವೆ ಬಂದ ಸಾಹಿತ್ಯವು ದಾಸವರೇಣ್ಯರ ಕಾಲಕ್ಕೆ ಜನಸಮೂಹದ ಅಂತರಂಗವನ್ನು ರಾಗ, ತಾಳಗಳ ಮುಖೇನ ಕಾಂತಾಸಮ್ಮಿತ ಭಾವದ ಮೂಲಕವೇ ಮುಟ್ಟತೊಡಗಿತು. 'ವೀರನಾರಾಯಣನೇ ಕವಿ, ಲಿಪಿಕಾರ

ಕುವರವ್ಯಾಸ, ಕೇಳುವ ಸೂರಿಗಳೆ ಜಂಗಮ ಜನಾರ್ಧನರು' ಎನ್ನುತ್ತಾನೆ ಕುಮಾರವ್ಯಾಸ. ಹೀಗೆ ಅರಮನೆಯಿಂದ ಜನಸಾಮಾನ್ಯರ ಕಡೆಗೆ ಪ್ರವಹಿಸಿದ ಕನ್ನಡ ಸಾಹಿತ್ಯ ಪರಂಪರೆಯೇ ವೈವಿಧ್ಯಮಯವಾದುದು. ಆಧುನಿಕ ಕನ್ನಡ ಸಂದರ್ಭದ ಕವಿ, ಕಥೆಗಾರ, ಕಾದಂಬರಿಕಾರರ ಪ್ರತಿಭಾನ್ವಿತ ಬರವಣಿಗೆಯಂತೂ ಸಮಸ್ತ ಕನ್ನಡಿಗರ ಅರಿವಿಗೆ ಬಂದಿರುವಂಥದ್ದೆ. ಹೀಗೆ ಒಂದೂವರೆ ಸಾವಿರ ವರ್ಷಗಳ ಸ್ಪಷ್ಟ ಮತ್ತು ಸಮಗ್ರ ಇತಿಹಾಸವಿರುವ ಕನ್ನಡ ಭಾಷಾ ಶ್ರೀಮಂತಿಕೆಗೆ 2009ರಲ್ಲಿ ಭಾರತ ಸರ್ಕಾರ ಶಾಸ್ತ್ರೀಯ ಸ್ಥಾನಮಾನ ನೀಡಿತು. ಈ ಸಂದರ್ಭದಲ್ಲಿ ಕರ್ನಾಟಕ ಸರ್ಕಾರವೂ ಕೂಡ ಕನ್ನಡನಾಡಿನ ಎಲ್ಲ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳಿಗೆ ತಲಾ ಎರಡು ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಿತು. ಈಗ ಎಲ್ಲ ವಿಶ್ವವಿದ್ಯಾಲಯಗಳು ಕನ್ನಡ ಸಾಹಿತ್ಯ, ಸಂಸ್ಕೃತಿ ತತ್ಸಂಬಂಧದ ಸಂಶೋಧನೆಯ ಯೋಜನೆಗಳಲ್ಲಿ ತೊಡಗಿಸಿಕೊಂಡಿವೆ. ಈ ನಿಟ್ಟಿನಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಹಲವು ಸಂಪುಟಗಳ ಪ್ರಕಟಣಾ ಯೋಜನೆಯನ್ನು ಕೈಗೆತ್ತಿಕೊಂಡು ಅದರ ಅಡಿಯಲ್ಲಿ ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆ ಹಾಗೂ ಪ್ರಕಟನಾ ಯೋಜನೆಯಲ್ಲಿ ಹಲವಾರು ಹಸ್ತಪ್ರತಿಗಳನ್ನು ಪ್ರಕಟಿಸಿದೆ. ಈ ಯೋಜನೆಯ ಯಶಸ್ಸಿಗೆ ಕಾರಣರಾದ ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ ಈ.ಟಿ.ಪುಟ್ಟಯ್ಯ ಅವರಿಗೆ, ಕುಲಸಚಿವರಾದ ಪ್ರೊ ಎಸ್.ಎಲ್. ಹಿರೇಮಠ ಅವರಿಗೆ, ಈ ಸಂಪುಟದ ಪ್ರಧಾನ ಸಂಪಾದಕರಾದ ಡಾ. ಬಸವರಾಜ ಪೋಲಿಸ ಪಾಟೀಲ ಮತ್ತು ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರಾದ ಡಾ. ನಾಗಾಬಾಯಿ ಬುಳ್ಳಾ ಅವರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪರವಾಗಿ ನಾನು ಹೃತ್ಪೂರ್ವಕವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಮನು ಬಳಿಗಾರ್

ಆಯುಕ್ತರು

ಪ್ರೊ. ಈ.ಟಿ. ಪುಟ್ಟಯ್ಯ
ಕುಲಪತಿಗಳು

ಕಾರ್ಯಸೌಧ
ಗುಲಬರ್ಗಾ ವಿಶ್ವವಿದ್ಯಾಲಯ,
ಗುಲಬರ್ಗಾ
ದಿ: 25.10.2011

ಕುಲಪತಿಗಳ ನುಡಿ

ಗುಲಬರ್ಗಾ ವಿಶ್ವವಿದ್ಯಾಲಯವು ಹೈದ್ರಾಬಾದ ಕರ್ನಾಟಕ ಪ್ರದೇಶದ ಹೆಮ್ಮೆಯ ವಿದ್ಯಾಸಂಸ್ಥೆಯಾಗಿದೆ. 1970-71ರಲ್ಲಿ ಇದು ಕರ್ನಾಟಕ ವಿಶ್ವವಿದ್ಯಾಲಯದ ಒಂದು ಸ್ನಾತಕೋತ್ತರ ಕೇಂದ್ರವಾಗಿ, ಮುಂದೆ 1980ರಲ್ಲಿ ಸ್ವತಂತ್ರ ವಿಶ್ವವಿದ್ಯಾಲಯವಾಗಿ ಮಾರ್ಪಟ್ಟಿತು. ಕಳೆದ ಮೂವತ್ತು ವರ್ಷಗಳಿಂದ ಈ ವಿಶ್ವವಿದ್ಯಾಲಯವು ಬೋಧನೆ, ಸಂಶೋಧನೆ ಹಾಗೂ ಪ್ರಕಟನೆಗಳ ಮೂಲಕ ಜನಮನ್ನಣೆಯನ್ನು ಗಳಿಸಿದೆ. ಈ ವಿಶ್ವವಿದ್ಯಾಲಯದ ಬೌದ್ಧಿಕ ಆಸ್ತಿ ಬೋಧನೆ ಮತ್ತು ಸಂಶೋಧನೆ. ಇವು ಸಾಕಾರಗೊಳ್ಳುವುದು ಪ್ರಕಟನೆಗಳ ಮೂಲಕವೇ. ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಸಾರಾಂಗವು ಅನೇಕ ಮೌಲಿಕವಾದ ಪ್ರಕಟಣೆಗಳನ್ನು ಪ್ರಕಟಿಸಿದೆ. ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರುಗಳು ಇದುವರೆಗೆ ನಾಲ್ಕು ನೂರಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದುದು ತುಂಬ ಹೆಮ್ಮೆಯ ಸಂಗತಿಯಾಗಿದೆ. ಕನ್ನಡ ಅಧ್ಯಯನ ಸಂಸ್ಥೆಯ ಸಂಶೋಧನ ವಿದ್ಯಾರ್ಥಿಗಳು ಬರೆದ ಸಂಶೋಧನ ಲೇಖನಗಳ ಸಂಕಲನ 'ಜ್ಞಾನ ಗಂಗಾ' ಸಂಚಿಕೆಗಳಂತೂ ತುಂಬ ಜನಪ್ರಿಯವಾಗಿವೆ. ಒಟ್ಟಿನಲ್ಲಿ ಕನ್ನಡ ಅಧ್ಯಯನ ಸಂಸ್ಥೆಯು ತನ್ನ ಅಪೂರ್ವ ಪ್ರಕಟನೆಗಳ ಮೂಲಕ ಜನಮೆಚ್ಚುಗೆಯನ್ನು ಪಡೆದಿದೆ.

ಕರ್ನಾಟಕ ಸರ್ಕಾರವು ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಕನ್ನಡ ಭಾಷೆ, ಸಂಸ್ಕೃತಿ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದಂತೆ ಉನ್ನತ ಸಂಶೋಧನ ನಡೆಸಲೆಂಬ ಧ್ಯೇಯವನ್ನಿರಿಸಿಕೊಂಡು ನಮ್ಮ ವಿಶ್ವವಿದ್ಯಾಲಯಕ್ಕೆ ವಿಶೇಷ ಅನುದಾನವನ್ನು ನೀಡಿದೆ. ಕನ್ನಡ ಭಾಷಾಭಿವೃದ್ಧಿ ಯೋಜನೆಯಡಿ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ನೀಡಿದ ಅನುದಾನ ಪಡೆದು ನಮ್ಮ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರು ಬಸವಾದಿ ಶರಣರ ಸ್ಮಾರಕಗಳು, ತತ್ವಪದಕಾರರ ಸ್ಮಾರಕಗಳು, ಕೀರ್ತನಕಾರರ ಸ್ಮಾರಕಗಳು, ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯಕೋಶ, ಹೈದ್ರಾಬಾದ ಕರ್ನಾಟಕದ ಸಾಹಿತ್ಯ ಚರಿತ್ರೆ, ಆಧುನಿಕ ನಾಟಕಗಳು, ಹಸ್ತಪ್ರತಿಗಳ ಸಂರಕ್ಷಣೆ ಹಾಗೂ ಪ್ರಕಟನೆ, ಶರಣಸಾಹಿತ್ಯ ವಿಮರ್ಶಾ

ಸಂಪುಟಗಳ ಪ್ರಕಟನೆ ಈ ಮುಂತಾದ ಮಹತ್ವದ ಸಂಶೋಧನಾ ಯೋಜನೆಗಳನ್ನು ಕೈಗೆತ್ತಿಕೊಂಡು ಅಧ್ಯಯನ ನಡೆಸುತ್ತಿರುವರು. ಇವುಗಳಲ್ಲಿ ಹಸ್ತ ಪ್ರತಿಗಳ ಸಂಗ್ರಹ, ಸಂರಕ್ಷಣೆ ಹಾಗೂ ಪ್ರಕಟನಾ ಯೋಜನೆಯೂ ಒಂದಾಗಿದೆ. ಈ ಯೋಜನೆಯಲ್ಲಿ ಹಲವಾರು ಮಹತ್ವದ ಅಪ್ರಕಟಿತ ಹಸ್ತ ಪ್ರತಿಗಳನ್ನು ಪ್ರಕಟಿಸಿದ್ದಾರೆ. ಹಸ್ತಪ್ರತಿಗಳನ್ನು ಸಂಪಾದನೆ ಮಾಡಿ ಕೊಟ್ಟಿರುವ ಸಂಪಾದಕರಿಗೂ ಈ ಸಂಪುಟದ ಪ್ರಧಾನ ಸಂಪಾದಕರೂ ಹಾಗೂ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರಾದ ಡಾ. ನಾಗಾಬಾಯಿ ಬಿ. ಬುಳ್ಳಾ ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ. ಬಿ.ಬಸವರಾಜು ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಾದ ಶ್ರೀ ಮನು ಬಳಿಗಾರ ಅವರಿಗೂ ಅಲ್ಲದೆ ಇತರ ಅಧಿಕಾರಿ ವರ್ಗದವರಿಗೂ ವಿಶೇಷ ಕೃತಜ್ಞತೆಗಳು ಸಲ್ಲುತ್ತವೆ.

ಪ್ರೊ. ಈ.ಟಿ. ಪುಟ್ಟಯ್ಯ
ಕುಲಪತಿಗಳು

ಪ್ರಧಾನ ಸಂಪಾದಕರ ನುಡಿ

ಹಸ್ತಪ್ರತಿಗಳು ನಮ್ಮ ನಾಡಿನ ಅಮೂಲ್ಯ ಜ್ಞಾನ ಸಂಪತ್ತು. ಇವು ಇಂದಿನ ಜನಾಂಗಕ್ಕೆ ಮಾತ್ರವಲ್ಲದೆ ಮುಂದಿನ ಪೀಳಿಗೆಗೂ ಸಾಗಿಸಬಲ್ಲ ಸಾಧನ ಸಾಮಗ್ರಿಗಳು. ಪುರಾತನ ಜ್ಞಾನ ಸಂಪತ್ತನ್ನು ಆಧುನಿಕ ಜನಾಂಗಕ್ಕೆ ನೀಡುವ ಅವಶ್ಯಕತೆ ಇಂದಿನದು. ಕನ್ನಡ ನಾಡು ತನ್ನ ಕವಿ, ಲಿಪಿಕಾರ, ಓದುಗ, ಪೋಷಕ ಹಾಗೂ ಕಲಾವಿದರಿಂದ ಆಯಾ ಸಂದರ್ಭದಲ್ಲಿ ರಚಿಸಿಕೊಂಡ ಚರಿತ್ರೆಗಳೇ ಹಸ್ತಪ್ರತಿಗಳು. ಹಲವು ವೈವಿಧ್ಯಮಯ ಹಿನ್ನೆಲೆಯಲ್ಲಿ ರಚಿತವಾದವುಗಳು. ದಾನಕ್ಕಾಗಿ, ರೋಗ ನಿವಾರಣೆಗಾಗಿ, ವಿದ್ಯಾರ್ಜನೆಗಾಗಿ, ಮೋಕ್ಷ ಸಂಪಾದನೆಗಾಗಿ, ಕಷ್ಟ ಪರಿಹಾರಕ್ಕಾಗಿ, ಪುತ್ರ ಸಂತಾನಕ್ಕಾಗಿ – ಹೀಗೆ ಹಲವು ರೀತಿಯ ಫಲಾಪೇಕ್ಷೆಗಳು ಹಾಗೂ ಜೀವನ ದೃಷ್ಟಿಗಳಿಗಾಗಿ ಬರೆಯಲ್ಪಟ್ಟವು ಹಸ್ತಪ್ರತಿಗಳು.

ಕನ್ನಡದ ಹಲವು ಅಮೂಲ್ಯ ಹಸ್ತಪ್ರತಿಗಳು ಜನತೆಯ ಅಜ್ಞಾನದಿಂದ ಮಣ್ಣು ಪಾಲಾಗಿರುವುದು ದುರದೃಷ್ಟಕರ. ಹುಳಗಳಿಂದ, ನೀರಿನಿಂದ, ತೇವಾಂಶದಿಂದ – ಹೀಗೆ ಹಲವು ಕಾರಣಗಳಿಂದ ಹಸ್ತಪ್ರತಿಗಳು ಹಾಳಾಗುತ್ತಿವೆ. ಈಗಲೂ ಹಲವು ಮನೆಗಳಲ್ಲಿ, ಮಠ-ಮಂದಿರಗಳಲ್ಲಿ, ಪೂಜಾಗೃಹಗಳಲ್ಲಿ ಓಲೆಕಟ್ಟುಗಳು ಇಟ್ಟಲ್ಲಿಯೇ ಹಾಳಾಗುತ್ತಿರುವುದನ್ನು ನೋಡುತ್ತಿದ್ದೇವೆ. ಇವು ನಮ್ಮ ಪೂರ್ವಜರಿಂದ ಬಂದ ಪವಿತ್ರ ಆಸ್ತಿ ಹೊರಗೆ ಕೊಡಬಾರದೆಂಬ ಅಂಧಶ್ರದ್ಧೆಯ ಪರಿಣಾಮವಾಗಿ ಯಾವ ರಕ್ಷಣೆಯನ್ನು ಕಾಣದೆ ಕಾಲಕ್ರಮೇಣ ಹಸ್ತಪ್ರತಿಗಳು ಗೊಬ್ಬರವಾಗಿ ಪರಿಣಮಿಸುತ್ತಿವೆ. ರಚಿಸಿದ ಒಂದು ಅಪಾರ ಜ್ಞಾನಸಂಪತ್ತು ನಮಗರಿವಿಲ್ಲದ ಹಾಗೆ ನಾವೇ ಇನ್ನೊಂದೆಡೆ ನಮ್ಮ ಅಜ್ಞಾನದ ಫಲವಾಗಿ ಅವುಗಳ ವಿನಾಶಕ್ಕೆ ಕಾರಣರಾಗುತ್ತಿದ್ದೇವೆ. ಇಲ್ಲಿ ಅಜ್ಞಾನ ಎಷ್ಟು ಮುಖ್ಯವಾಗಿದೆಯೋ ಅಷ್ಟೇ ಮುಖ್ಯವಾಗಿ, ಹಸ್ತಪ್ರತಿಗಳ ಪರಮ ವೈರಿಯಾಗಿರುವವು ಜಿರಲೆ ಮತ್ತು ಗೆದ್ದಲು ಹುಳುಗಳು, ಗೆದ್ದಲು ಮೊದಲಾಗಿ ಕ್ರಿಮಿ– ಕೀಟಗಳಿಂದ ಹಲವಾರು ಮಠ– ಮಂದಿರಗಳಲ್ಲಿನ ಹಸ್ತಪ್ರತಿಗಳು ಹಾಳಾಗುತ್ತಿರುವುದುಂಟು. ಹಲವು ಕಟ್ಟುಗಳನ್ನು ಒಂದೆಡೆ ಕಟ್ಟಿ, ದಶಕಗಳಿಂದ ಬಿಚ್ಚದೆ ಯಾವ ರಕ್ಷಣೆಯೂ ಇಲ್ಲದೆ ಕೆಟ್ಟ ಪರಿಸ್ಥಿತಿಯಲ್ಲಿ ಹಸ್ತಪ್ರತಿಗಳು ನಶಿಸುತ್ತಿವೆ.

ಹಸ್ತಪ್ರತಿಯಲ್ಲಿನ ಜ್ಞಾನ ಸಂಪತ್ತನ್ನು ಉಳಿಸಿಕೊಳ್ಳಬೇಕು, ಮತ್ತೊಮ್ಮೆ ಓದುಗರಿಗೆ

ಪರಿಚಯಿಸಬೇಕು, ಅದು ಹಾಗೆಯೇ ಅಳಿದು ಹೋಗಬಾರದೆನ್ನುವ ಉದ್ದೇಶದಿಂದ ಕರ್ನಾಟಕ ಸರಕಾರ ಕನ್ನಡ ಭಾಷಾಭಿವೃದ್ಧಿ ಯೋಜನೆಯಡಿಯಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಹಮ್ಮಿಕೊಂಡ ಹಲವು ಸಂಶೋಧನ ಯೋಜನೆಗಳಲ್ಲಿ, ಹಸ್ತಪ್ರತಿ ಸಂಗ್ರಹ – ಸಂಪಾದನೆ ಹಾಗೂ ಪ್ರಕಟಣಾ ಯೋಜನೆ ಭಾಗ – ೨ ಕೂಡ ಒಂದಾಗಿದೆ.

ಈ ಹಿನ್ನೆಲೆಯಲ್ಲಿ ಐನೆಲೆ ಕರಿಬಸವಾರ್ಯ ವಿರಚಿತ "ಸ್ತೋತ್ರರತ್ನಾಕರ" ಎನ್ನುವ ಹಸ್ತಪ್ರತಿ ಈ ಯೋಜನೆಯಡಿ ಈಗ ಮುದ್ರಣಗೊಳ್ಳುತ್ತಿದೆ. ಕವಿ ಬದುಕಿದ ಕಾಲ ಕ್ರಿ.ಶ. ಸುಮಾರು ೧೮೦೦. ಈತ ಶ್ರೀ ಕುಮಾರ ವಿಜಯ ವಿಳಾಸಂ, ಸ್ವರವಚನಗಳು, ಸ್ತೋತ್ರಗಳು, ಅಷ್ಟಕಗಳು, ಶತಕಗಳು ಮುಂತಾದ ಕೃತಿಗಳನ್ನು ರಚಿಸಿದ್ದಾನೆ. ಕವಿಯ ಈ ಎಲ್ಲ ಕೃತಿಗಳು ಈಗಾಗಲೇ ಪ್ರಕಟವಾಗಿದ್ದು, 'ಸ್ತೋತ್ರರತ್ನಾಕರ' ಮಾತ್ರ ಪ್ರಕಟವಾಗದೇ ಇರುವುದರಿಂದ ಈಗ ಈ ಕೃತಿಯನ್ನು ಈ ಯೋಜನೆಯಡಿ ಕೈಗೆತ್ತಿಗೊಳ್ಳಲಾಗಿದೆ.

ಕೃತಿಯ ಸಂಪಾದಕರಾದ ಡಾ. ಕೊಡಂಬಲ ಈಶ್ವರಯ್ಯ ಚಿಂಚೋಳಿ ಅವರಿಗೆ ಹೃತ್ಪೂರ್ವಕ ವಂದನೆಗಳು, ಯೋಜನೆಯ ಸಂಚಾಲಕರು, ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರಾದ ಡಾ. ನಾಗಾಬಾಯಿ ಬುಳ್ಳಾ ಅವರಿಗೆ ಧನ್ಯವಾದಗಳು, ಯೋಜನಾ ಸಮಿತಿಯ ಅಧ್ಯಕ್ಷರು ನಮ್ಮ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಈ.ಟಿ. ಪುಟ್ಟಯ್ಯ ಅವರಿಗೂ ಕುಲಸಚಿವರಾದ ಪ್ರೊ. ಎಸ್.ಎಲ್. ಹಿರೇಮಠ ಅವರಿಗೂ ಹಾಗೂ ಇನ್ನಿತರ ಅಧಿಕಾರಿ ವರ್ಗಕ್ಕೂ ಕೃತಜ್ಞತೆಗಳು, ಸುಂದರ ಮುದ್ರಣ ಕಾರ್ಯ ಮಾಡಿಕೊಟ್ಟ ಬೆಂಗಳೂರಿನ ಮೆ॥ ಪ್ರಿಂಟ್ ಪಾರ್ಕ್ ಒಡೆಯರಾದ ಶ್ರೀ ಜಿ.ಬಿ.ಪಾಟೀಲ ಹಾಗೂ ಸಿಬ್ಬಂದಿವರ್ಗದವರಿಗೆ ನೆನಕೆಗಳು.

– **ಡಾ. ಬಸವರಾಜ ಪೋಲಿಸ ಪಾಟೀಲ**

ಪ್ರಧಾನ ಸಂಪಾದಕರು

ಸಂಪಾದಕರ ನುಡಿ

"ನಮ್ಮ ಹಿರಿಯರು ಜನ ಬದುಕಬೇಕೆಂದು ಬಯಸಿ ಬರೆದಿಟ್ಟಿರುವ ಎಲ್ಲ ಕೃತಿಗಳನ್ನು ಸಾಧ್ಯವಾದ ಮಟ್ಟಿಗೆ ಉಳಿಸಿಕೊಳ್ಳುವುದು ಅವರ ಉತ್ತಾಧಿಕಾರಿಗಳಾದ ನಮ್ಮ ಕರ್ತವ್ಯವಾಗಿದೆ." ಈ ಕರ್ತವ್ಯ ಪ್ರಜ್ಞೆಯ ಸಾಕಾರ ರೂಪವೇ ಹಸ್ತಪ್ರತಿ ಸಂರಕ್ಷಣೆ ಹಾಗೂ ಪ್ರಕಟಣೆಯೋಜನೆ. ಕರ್ನಾಟಕ ಸರಕಾರವು ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಕನ್ನಡ ಭಾಷೆ ಸಂಸ್ಕೃತಿ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಉನ್ನತ ಸಂಶೋಧನೆ ನಡೆಸಬೇಕೆಂಬ ಧ್ಯೆಯವನ್ನಿರಿಸಿಕೊಂಡು ಕನ್ನಡ ಭಾಷಾಭಿವೃದ್ಧಿ ಯೋಜನೆಯಡಿ ಹಾಗೂ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ವಿಶೇಷ ಅನುದಾನವನ್ನು ನೀಡಿದೆ. ಕನ್ನಡ ನಾಡಿನ ಸಮಸ್ತ ಮುಖಗಳ ಅಧ್ಯಯನ – ಪ್ರಕಟಣೆಯೆ ಇದರ ಗುರಿ.

ಈ ಯೋಜನೆಯಡಿಯಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಮಹತ್ವದ ಸಂಶೋಧನಾ ಯೋಜನೆಗಳನ್ನು ತುಂಬಾ ಕಟ್ಟೆಚ್ಚರದಿಂದ ಪುಸ್ತಕಗಳನ್ನು ಹೊರತರುತ್ತಿರುವುದು. ಈ ಯೋಜನೆಗಳಲ್ಲಿ ಹಸ್ತಪ್ರತಿಗಳ ಸಂಪಾದನೆ ಮಾಡುವ ಜವಾಬ್ದಾರಿಯುತವಾದ ಕೆಲಸವನ್ನು ನನಗೆ ವಹಿಸಿದ ಕನ್ನಡ ಅಧ್ಯಯನ ಸಂಸ್ಥೆಗೆ ಸದಾಕಾಲ ನಾನು ಚಿರರುಣಿ.

ಹದಿನೆಂಟನೇ ಶತಮಾನದಲ್ಲಿ ಬಾಳಿ ಬದುಕಿದ ಕವಿ ಕರಿಬಸವಾಚಾರ್ಯರು ಗುಲಬರ್ಗಾ ಜಿಲ್ಲೆಯ ಚಿಂಚೋಳಿ ತಾಲೂಕಿನ ಐನೂಲಿ ಗ್ರಾಮದಲ್ಲಿ ಜನಿಸಿದವರು. ಅವರು ರಚಿಸಿದ ಕೃತಿಗಳು ಅಪಾರ. ಅವು ಸಾಹಿತ್ಯಿಕ ದೃಷ್ಟಿಯಿಂದ ಶ್ರೇಷ್ಠವಾದವುಗಳು. ಆದರೂ ಅವರ ಹೆಸರು ಸಾಹಿತ್ಯ ಪ್ರಪಂಚಕ್ಕೆ ಅಪರೂಪ. ಶ್ರೀ ಕುಮಾರ ವಿಜಯ ವಿಳಾಸಂ. ಎಂಬ ಮಹಾಕಾವ್ಯ ಹಾಗೂ ಏಳನೂರಕ್ಕಿಂತಲೂ ಹೆಚ್ಚು ಸ್ವರವಚನಗಳು, ಮೂವತ್ತಕ್ಕಿಂತಲೂ ಹೆಚ್ಚು ಬಿಡಿಬಿಡಿಯಾದ ಕೃತಿಗಳನ್ನು ಬರೆದರೂ ಕರಿಬಸವಾರ್ಯರ ಹೆಸರು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ದಾಖಲೆಯಾಗದೆ ಉಳಿದಿರುವುದು ಕನ್ನಡ ಸಾಹಿತ್ಯದ ಕೊರತೆಯಂದೇ ಹೇಳಬಹುದು.

ಕರಿಬಸವಾರ್ಯರು ಬರೆದ ಎರಡು ಕೃತಿಗಳು ಮಾತ್ರ ಪ್ರಕಟವಾಗಿವೆ. ಒಂದು ಅವರ ಮಹಾಕಾವ್ಯ , ಇನ್ನೊಂದು ಅವರ ಸ್ವರವಚನಗಳ ಸಂಗ್ರಹವಾದ ಕೃತಿ.

ಇವೆರಡನ್ನು ಬಿಟ್ಟರೆ ಅವರ ಯಾವ ಕೃತಿಗಳು ಪ್ರಕಟವಾಗಿರಲಿಲ್ಲ. ಪ್ರಸ್ತುತ "ಸ್ತೋತ್ರರತ್ನಾಕರ" ಗ್ರಂಥ ಕರಿಬಸವಾಚಾರ್ಯರ ಮೂರನೆ ಕೃತಿ. ಅವರು ಬರೆದ ಸ್ತೋತ್ರ ಅಷ್ಟಕ ಶತಕ ಮತ್ತು ಸ್ತುತಿ ರೂಪದ ಗೀತೆಗಳ ಕೃತಿಯನ್ನು ಸಂಪಾದನೆ ಮಾಡಲು, ಈ ಸಂಪಾದನಾ ಕಾರ್ಯದ ಸುಳುಹನ್ನು ನೀಡಿ ಮಾರ್ಗದರ್ಶನ ಮಾಡಿದ ಈ ಸಂಪುಟದ ಪ್ರಧಾನ ಸಂಪಾದಕರಾದ ಡಾ. ಬಸವರಾಜ ಪೋಲಿಸ್ ಪಾಟೀಲ ಗುರುಗಳಿಗೆ ಹಾಗೂ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರಾದ ಡಾ. ನಾಗಾಬಾಯಿ ಬಿ. ಬುಳ್ಳಾ ಅವರಿಗೆ ಮೊಟ್ಟ ಮೊದಲು ಅಭಿನಂದಿಸುತ್ತೇನೆ.

ಕರಿಬಸವಾಚಾರ್ಯರು ಬರೆದ ಸ್ತೋತ್ರ ರೂಪದ ಸಾಹಿತ್ಯವನ್ನೇ ಒಂದೆಡೆ ಸೇರಿಸಿ ಈ ಗ್ರಂಥವನ್ನು ಪ್ರಕಟಿಸುತ್ತಿರವದರಿಂದ ಇದಕ್ಕೆ 'ಸ್ತೋತ್ರರತ್ನಾಕರ' ಎಂಬ ಶೀರ್ಷಿಕೆಯಲ್ಲಿ ಪ್ರಕಟಿಸುವುದು ಔಚಿತ್ಯ ಪೂರ್ಣವಾಗಿದೆ. ಈ ನನ್ನ ಸಂಪಾದನಾ ಕಾರ್ಯಕ್ಕೆ ಆಶೀರ್ವದಿಸಿ ಮಾರ್ಗದರ್ಶನ ಮಾಡಿದ ನನ್ನ ತಂದೆಯವರಾದ ಶ್ರೀ ರಾಮಯ್ಯ ಸ್ವಾಮಿ ತಾಯಿ ಗಂಗಮ್ಮ ಅವರಿಗೂ ನಮನಗಳು. ನನಗೆ ಸದಾಕಾಲ ಶುಭ ಹಾರೈಸುವ ಪೂಜ್ಯ ಆನಂದಸ್ವಾಮಿ ಚಾಮನಾಳ, ಡಾ . ಎನ್. ವಿ. ಹುಗ್ಗಿ, ಶ್ರೀ ಬಿ.ಕೆ. ಬನ್ನಪ್ಪ ಸರ್, ಡಾ. ರವೀಂದ್ರಕುಮಾರ ಪ್ಪಿ. ಗಬಾಡೆ , ಪ್ರೊ॥ ಕಾಶಿನಾಥ ಹಣಜೆ, ಅಣ್ಣಪ್ಪ ಮಾಸ್ಟರ್ ಕಲಶಟ್ಟಿ ಚಿಂಚೋಳಿ, ಶ್ರೀ ಚಂದ್ರಕಾಂತ ಕೊಡಂಗಲ್, ಚಿಮ್ಮನಚೋಡ ಮಲ್ಲಯ್ಯ ಬಾವಿದೊಡ್ಡಿ ಜಗದೇವಿ ಬಾವಿದೊಡ್ಡಿ ಮೊದಲಾದವರಿಗೂ ನನ್ನ ನಮನಗಳು.

ಈ ಕಾರ್ಯಕ್ಕೆ ಸಹಾಯ ಮಾಡಿದ ಡಾ ॥ ಅಶೋಕ ಬೆನ್ನೂರ, ಡಾ. ಬಸವರಾಜ ಬಲ್ಲೂರ, ಡಾ. ವೀರಯ್ಯ ಜಿ. ಮಠಪತಿ ಅವರಿಗೂ ಹಾಗೂ ನನ್ನ ವಿದ್ಯಾರ್ಥಿಗಳಾದ ಪ್ರೇಮಾ ಹೂಗಾರ, ಸಾತೀಹ ಬೇಗಮ್, ಶಶಿನಾಥ, ನಾಗರಾಜ ಸಂಜೀವಕುಮಾರ, ದತ್ತಕುಮಾರ, ಲುಂಬಿಣಿ, ಮಹಾನಂದ, ಶ್ರೀದೇವಿ, ವೀರಾರೆಡ್ಡಿ, ಧನರಾಜ, ಸರೂಬಾಯಿ ನೆರವಾಗಿದ್ದಾರೆ. ಅವರ ಸಹಕಾರವನ್ನು ಸ್ಮರಿಸುತ್ತೇನೆ. ನನ್ನ ಬರವಣಿಗೆಗೆ ಪತ್ನಿಯಾದ ಚೆನ್ನಶ್ರೀ ಹಾಗೂ ಮಕ್ಕಳಾದ ಶಾಂಭವಿ, ಶ್ರೀವಿಜಯ, ಶಿವಸ್ವಾಮಿ ಅವರಿಗೂ ಕೃತಜ್ಞತೆಗಳು.

ಕನ್ನಡ ಅಧ್ಯಯನ ಸಂಸ್ಥೆಯ ಎಲ್ಲ ಅಧ್ಯಾಪಕರ ಸಹಕಾರಕ್ಕೆ ಧನ್ಯವಾದಗಳು ಈ ಕೃತಿಗೆ ಶುಭ'ಹಾರೈಕೆ ನೀಡಿದ ಮಾನ್ಯ ಮುಖ್ಯಮಂತ್ರಿಗಳಾದ ಡಿ.ವಿ.ಸದಾನಂದಗೌಡರಿಗೂ, ಸಚಿವರಾದ ಗೋವಿಂದ ಎಂ. ಕಾರಜೋಳ ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ ಕಾರ್ಯದರ್ಶಿಗಳಾದ ಬಿ. ಬಸವರಾಜು ಅವರಿಗೂ ಹಾಗೂ ನಲ್ನುಡಿ ಬರೆದ ಕ.ಸಂ. ಇಲಾಖೆ ಆಯುಕ್ತರಾದ ಮನು ಬಳಿಗಾರ ಹಾಗೂ ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿಗಳಾದ ಶ್ರೀ ಈ.ಟಿ.

ಪುಟ್ಟಯ್ಯ ಮೊದಲಾದವರಿಗೂ ವಿಶೇಷ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಇದನ್ನು ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟ ಮುದ್ರಣದ ಮಾಲಿಕರಾದ ಜಿ.ಬಿ.ಪಾಟೀಲ ಅವರಿಗೂ ಅನಂತ ಧನ್ಯವಾದಗಳು.

ಡಾ || ಕೊಡಂಬಲ್ ಈಶ್ವರಯ್ಯ

ಸಂಪಾದಕರು

ಪ್ರಸ್ತಾವನೆ

ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಐನೂಲಿ ಕರಿಬಸವಾರ್ಯರು ಅಪರೂಪದ ಕವಿ ಹದಿನೆಂಟನೆಯ ಶತಮಾನದಲ್ಲಿ ಜೀವಿಸಿ ಕನ್ನಡ ಸಾಹಿತ್ಯಲೋಕಕ್ಕೆ ಅದ್ಭುತವಾದ ಕಾವ್ಯ ಕೃತಿಗಳನ್ನು ಕೊಟ್ಟ ಮಹಾಕವಿ. ಈ ಶತಮಾನದಲ್ಲಿ ರಾಜಾಶ್ರಯದಿಂದ ವಂಚಿತಗೊಂಡ ಕನ್ನಡ ಸಾಹಿತ್ಯವು ತನ್ನ ಅಸ್ತಿತ್ವವನ್ನು ಕಳೆದುಕೊಂಡು ಸೊರಗಿ ಹೋಗಿತ್ತು. ಇಂಗ್ಲೀಷ ಮರಾಠಿ ಉರ್ದು ಮೊದಲಾದ ಭಾಷೆಗಳ ಪ್ರಭಾವದಿಂದ ಕನ್ನಡ ನಾಡು – ನುಡಿಗಳಲ್ಲಿ ಕಾಳಜಿಯೆಂಬುದು ಕಡಿಮೆಯಾಗಿ ಕನ್ನಡತನವನ್ನೇ ಮರೆಯುವಂತೆ ಮಾಡಿದ ಅಂದಿನ ಪರಭಾಷೆಗಳು ತಮ್ಮತನವನ್ನೇ ಸ್ಥಾಪಿಸಿಕೊಂಡಿದ್ದವು. ಅಂಥ ಸಂದರ್ಭದಲ್ಲಿ ಅದರ ಉಳಿವಿಗಾಗಿ ಹೋರಾಡಿದವರೆಂದರೆ ಈ ಕಾಲದ ವೀರಶೈವ ಕವಿಗಳು. ಅಂಥವರಲ್ಲಿ ಐನೂಲಿಯ ಕರಿಬಸವಾರ್ಯರು ಒಬ್ಬರು.

ಹದಿನೆಂಟನೆಯ ಶತಮಾನದ ಸಂದರ್ಭದಲ್ಲಿ ಸಾಹಿತ್ಯಿಕ ದೃಷ್ಟಿಯಿಂದ ಅಷ್ಟೊಂದು ಗಂಭೀರವಾದ ಸತ್ವಪೂರ್ಣವಾದ ಕೃತಿಗಳು ಹೊರಬರಲಿಲ್ಲ. ಇದಕ್ಕೆ ಅಪವಾದವೆಂಬಂತೆ ಕರಿಬಸವಾರ್ಯರು ಯಾವುದೇ ರಾಜಾಶ್ರಯವಿಲ್ಲದೆ **"ಶ್ರೀ ಕುಮಾರ ವಿಜಯ ವಿಳಾಸಂ"** ಎಂಬ ಮಹಾಕಾವ್ಯವೊಂದನ್ನು ಬರೆದರು. ತಮ್ಮ ಕಾಲದ ಮತ್ತು ತಮಗಿಂತಲೂ ಪೂರ್ವದ ಸಾಹಿತ್ಯವನ್ನು ಅವಲೋಕಿಸಿ (ಹಳಗನ್ನಡ ನಡುಗನ್ನಡ ಕಾಲದ) ಕಾವ್ಯವಸ್ತುವೊಂದನ್ನು ಆಯ್ದುಕೊಂಡು ಅಂದು ಪ್ರಚಲಿತವಿದ್ದ ದೇಶಿ ಛಂದೋಬಂಧವಾಗಿರುವ ವಾರ್ಧಕ ಷಟ್ಪದಿಯನ್ನು ಕಾವ್ಯಕ್ಕೆ ಬಂಧವಾಗಿಟ್ಟುಕೊಂಡು ಪ್ರೌಢ ಕಾವ್ಯವೊಂದನ್ನು ರಚಿಸಿದರು. ಅದರ ಮೂಲಕ ದುಡಿದ ಭಾಷೆ ಸಂಸ್ಕೃತ ಶಬ್ದ ಪ್ರಚುರವಾದ ಹಳಗನ್ನಡ. ಹೀಗಾಗಿ ಶ್ರೀ ಕುಮಾರ ವಿಜಯ ವಿಳಾಸಂ ಕಾವ್ಯವು ಕರಿಬಸವಾರ್ಯರ ಮಾರ್ಗ – ದೇಶಿಗಳ ಹೊಸ ಸಮನ್ವಯದ ಪ್ರಯತ್ನವೆನ್ನಬಹುದು. ಇಂಥ ಪ್ರೌಢ ಕಾವ್ಯವೊಂದನ್ನು ರಚಿಸಿದ ಕರಿಬಸವಾರ್ಯರು ಹಳಗನ್ನಡ ಕಾವ್ಯ ಪರಂಪರೆಯ ಕೊನೆಯ ಮಹಾಕವಿಯಾಗಿ ನಿಲ್ಲುತ್ತಾರೆ. ಮಹಾಕಾವ್ಯವೊಂದನ್ನು ರಚಿಸಿ ಅಂದಿನ ಪಂಡಿತ ಜನಗಳ ಮೇಲೆ ತಮ್ಮ ಛಾಪನ್ನು ಮೂಡಿಸಿದಂತೆ ೨೦೦ಕ್ಕಿಂತಲೂ ಹೆಚ್ಚು ಸ್ವರವಚನಗಳನ್ನು ವಿವಿಧ ವಸ್ತುಗಳಿಗೆ ವಿವಿಧ

ಛಂದೋಬಂಧಗಳನ್ನು ಬಳಸಿಕೊಂಡು ರಚಿಸಿ ಅಂದಿನ ಜನಸಾಮಾನ್ಯರ ಮೇಲೂ ತಮ್ಮ ಪ್ರಭಾವವನ್ನು ಬೀರಿದ್ದಾರೆ. ಅಲ್ಲದೆ ಸ್ತೋತ್ರ , ಅಷ್ಟಕ, ಶತಕ, ಟೀಕೆ ಮೊದಲಾದ ಕೃತಿಗಳನ್ನು ರಚಿಸಿ ಭಕ್ತಿ ಸಾಹಿತ್ಯಕ್ಕೆ ತಮ್ಮದೆ ಆದ ಕೊಡುಗೆಯನ್ನು ನೀಡಿದ್ದಾರೆ. ಇಷ್ಟೆಲ್ಲ ಇದ್ದರೂ ಸಹ ಕರಿಬಸವಾರ್ಯರ ಹೆಸರು ಕವಿಚರಿತೆಯಲ್ಲಾಗಲಿ ಸಾಹಿತ್ಯಚರಿತ್ರೆಯಲ್ಲಾಗಲಿ ದಾಖಲೆಯಾಗದೆ ಇರುವುದು ಕನ್ನಡ ಸಾಹಿತ್ಯ ಚರಿತ್ರೆಯ ಕೊರತೆಯೆಂದೇ ಹೇಳಬಹುದು.

ಕರಿಬಸವಾರ್ಯರ ಕಾಲದ ಕನ್ನಡದ ಸ್ಥಿತಿಗತಿ: ಹದಿನೆಂಟನೆ ಶತಮನದಲ್ಲಿ ಕನ್ನಡನಾಡು ಅನೇಕ ರಾಜಮನೆತನಗಳ ಆಳ್ವಿಕೆಯಲ್ಲಿತ್ತು. ವಿಜಯನಗರ ಸಾಮ್ರಾಜ್ಯ ಹಾಳಾದ ಮೇಲೆ ಅನೇಕ ಸಣ್ಣಪುಟ್ಟ ರಾಜರೂ, ಪಾಳೆಯಗಾರರೂ, ಸುಲ್ತಾನರು ಪ್ರಬಲರಾದರು. ಅವರು ಪರಸ್ಪರ ಕಾದಾಡಿ ರಾಜ್ಯದಾಹದಿಂದ ಬಳಲುತ್ತಿದ್ದರು. ಪೋರ್ಚುಗೀಸರು ಫ್ರೆಂಚರು ಮತ್ತು ಇಂಗ್ಲೀಷರು ಇಂಡಿಯಾ ದೇಶದಲ್ಲಿ ಠಾಣ್ಯಗಳನ್ನು ಸ್ಥಾಪಿಸಿದ್ದರು. ಇದೇ ಕಾಲದಲ್ಲಿ ಮರಾಠರೂ ಆಗಾಗ ಕನ್ನಡ ನಾಡಿನೊಳಗೆ ನುಗ್ಗಿ ಬರುತ್ತಿದ್ದರು. ಮುಸಲ್ಮಾನರೂ ದಕ್ಷಿಣ ಭಾರತವನ್ನು ಪ್ರವೇಶಿಸಿ ಅಲ್ಲಲ್ಲಿ ನೆಲೆಸಿ ತಮ್ಮ ಸಂಸ್ಕೃತಿಯನ್ನು ಹರಡುತ್ತಿದ್ದರು. ಕರ್ನಾಟಕದ ಮೈಸೂರು, ಕೆಳದಿ, ಬೀಳಗಿ, ಚಿತ್ರದುರ್ಗ ಮೊದಲಾದ ಕಡೆಗಳಲ್ಲಿ ಪ್ರಾಂತಗಳ ಪಾಳೆಯಗಾರರೇ ಹಿಂದೂ ಧರ್ಮ ಸಾಹಿತ್ಯ ಸಂಸ್ಕೃತಿಗಳನ್ನು ಪರಿಪೋಷಿಸುತ್ತಿದ್ದರು. ಅಲ್ಲದೆ ಅನೇಕ ಕವಿಗಳಿಗೆ ಆಶ್ರಯದಾತರೂ ಆಗಿದ್ದರು. ಆದರೆ ಹೈದ್ರಾಬಾದ ಕರ್ನಾಟಕ ಭಾಗವು ಸಂಪೂರ್ಣವಾಗಿ ನಿಜಾಂ ರಾಜರುಗಳ ಆಡಳಿತದಲ್ಲಿತ್ತು. ಅವರ ಆಡಳಿತದಲ್ಲಿ ರಾಜ್ಯಭಾಷೆ, ಆಡಳಿತ ಭಾಷೆ ಮತ್ತು ಶಿಕ್ಷಣ ಮಾಧ್ಯಮದ ಭಾಷೆ ಉರ್ದುವಾಗಿತ್ತು. ನೃಪತುಂಗನ ನಾಡಾದ ಈ ಪ್ರದೇಶದಲ್ಲಿ ಕನ್ನಡಕ್ಕೆ ಉರ್ದುಭಾಷೆಯ ಪ್ರಭಾವದಿಂದ ಬಲವಿಲ್ಲದಂತಾಯಿತು. ಕನ್ನಡಕ್ಕೆ ಯಾವ ಪೋಷಣೆ ಇಲ್ಲದೆ ತನ್ನ ಅಸ್ತಿತ್ವವನ್ನು ಕಳೆದುಕೊಂಡು ಸೊರಗಿ ಹೋಗಿತ್ತು ನೃಪತುಂಗನ ಕಾಲದಲ್ಲಿ ಕನ್ನಡ ಭಾಷೆಯ ತಾಯ್ನಾಡು ಎನಿಸಿಕೊಂಡ ಮತ್ತು ಕಲ್ಯಾಣಿ ಚಾಲುಕ್ಯರ ಅವಧಿಯಲ್ಲಿ ವೈಭವದಿಂದ ಮೆರೆದಂಥ ಕನ್ನಡವು ೧೮ನೇ ಶತಮಾನದ ಸಂದರ್ಭದಲ್ಲಿ ಪರಭಾಷಾ ದಬ್ಬಾಳಿಕೆಯಿಂದ ತತ್ತರಿಸಿ ಹೋಗಿತ್ತು. ನಿಜಾಂದೊರೆಗಳ ಆಕ್ರಮಣವು ಎಷ್ಟಿತ್ತೆಂದರೆ ಈ ಭಾಗದ ಮೇಲೆ ರಾಜಕೀಯ ಒತ್ತಡ ತಂದು ಹೆದರಿಸಿ ಬೆದರಿಸಿ ಉರ್ದುವನ್ನು ಕಲಿಸುತ್ತಿದ್ದರು. ಹೀಗೆ ಮಾಡಿ ಅಂದಿನ ಜನರಲ್ಲಿ ಕನ್ನಡ ಭಾಷೆ ಸಾಹಿತ್ಯ ಸಂಸ್ಕೃತಿಗಳ ಅರಿವಿಲ್ಲದಂತೆ ಮಾಡಿದ್ದರು. ಇಂಥ ಸಂದರ್ಭದಲ್ಲಿ ಜೀವಿಸಿದ್ದ ಕರಿಬಸವಾರ್ಯರು ಅಂದಿನ ರಾಜಶಾಹಿಗೆ ಹೆದರದೆ ಕನ್ನಡ ಭಾಷೆ ಸಾಹಿತ್ಯದ ಉಳಿವಿಗಾಗಿ ಹೋರಾಡಿ ಈ ಪ್ರದೇಶದಲ್ಲಿಯೇ ಜೀವಿಸಿ ಸ್ವಧರ್ಮ ಸಾಹಿತ್ಯ ಸಂಸ್ಕೃತಿಯ ರಕ್ಷಣೆ ಮಾಡಿದಂಥವರು.

ಜನ್ಮಸ್ಥಳ: ಕರಿಬಸವಾರ್ಯರ ಜನ್ಮಸ್ಥಳದ ಬಗ್ಗೆ ಯಾವುದೇ ಭಿನ್ನಾಭಿಪ್ರಾಯಗಳಿಲ್ಲ. ಏಕೆಂದರೆ ಅವರು ಐನೆಲೆ ಕರಿಬಸವಾರ್ಯರೆಂದೇ ಖ್ಯಾತಿವೆತ್ತಿದ್ದಾರೆ. ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿಗೆ ಸೇರಿದ ಇಂದಿನ 'ಐನೂಲಿ' ಗ್ರಾಮವೇ ಕರಿಬಸವಾರ್ಯರ ಹುಟ್ಟೂರು. ಇದು ಚಿಂಚೋಳಿ ತಾಲ್ಲೂಕಾ ಸ್ಥಳದಿಂದ ೫ ಕ.ಮಿ. ದೂರದಲ್ಲಿದೆ.

ಈ ಹಿಂದೆ ಈ ಗ್ರಾಮವನ್ನು 'ಐನಿಲಯ', 'ಐನಿಲಯಪುರ' ಎಂದು ಕರೆಯುತ್ತಿದ್ದರೆಂಬುದು ಸಾಹಿತ್ಯ ಕೃತಿಗಳಿಂದ ತಿಳಿದುಬರುತ್ತದೆ. ಇಂದು ಈ ಗ್ರಾಮವನ್ನು 'ಐನೂಲಿ' 'ಐನಲ್ಲಿ' 'ಐನೊಳ್ಳಿ' 'ಐನಲ್ಲಿ' ಎಂದು ಅನೇಕ ಪರ್ಯಾಯ ನಾಮಗಳಿಂದ ಕರೆಯಲಾಗುತ್ತದೆ. ಕರಿಬಸವಾರ್ಯರು ತಮ್ಮ ಕೃತಿಗಳಲ್ಲಿ ತಮ್ಮ ಗ್ರಾಮವನ್ನು "ಐನೆಲೆವಾಸ ಐನೆಲೆಪುರವಾಸ ಎಂದು ಬಳಸಿಕೊಂಡಿದ್ದಾರೆ. ಅವರು ಬರೆದ 'ಬಸವೇಶ್ವರ ಸ್ತೋತ್ರ ಪರಿವರ್ಧಿನಿ" ಕೃತಿಯಲ್ಲಿ 'ಐನೆಲೆವಾಸ' ಎಂದರೆ 'ಐದೆಸಳಿನ ಕರಕಮಲದಲ್ಲಿ ವಾಸನೆಂಬರ್ಥ' ಎಂದು ಹೇಳಿದ್ದಾರೆ.. ಅಲ್ಲದೆ 'ಐನೆಲೆ' ಇದನ್ನು 'ಐ' ಎಂದರೆ ಮೋಕ್ಷ, 'ನೆಲೆ' ಎಂದರೆ ಸ್ಥಾನವಾದ ಕೈಲಾಸ ಎಂದು ಬಣ್ಣಿಸಿದ್ದಾರೆ. 'ಐನಿಲಯ'ಇದು ಅಯ್ಯನ ನಿಲಯ ಎಂಬುದಾಗಿದೆ. 'ಅಯ್ಯ' ಎಂದರೆ ಪರಮಾತ್ಮ, 'ನಿಲಯ' ಎಂದರೆ ವಾಸ ಸ್ಥಾನ; ಹೀಗಾಗಿ ಪರಮಾತ್ಮನ ವಾಸ ಸ್ಥಳವೇ 'ಐನಿಲಯ' ಎಂದು ಇಂದಿಗೂ ಜನರ ಆಡು ಭಾಷೆಯಲ್ಲಿ ಜನಜನಿತವಾಗಿದೆ.

ತಮ್ಮ ಊರಿನ ಮೇಲೆ ಅಪಾರವಾದ ಪ್ರೀತಿಯನ್ನು ಹೊಂದಿರುವ ಕರಿಬಸವಾರ್ಯರು ಐನೂಲಿಯನ್ನು ಅನೇಕ ವಿಶೇಷಣಗಳಿಂದ ಹಾಡಿ ಹೊಗಳಿದ್ದಾರೆ. ಅವರ ಸ್ವರವಚನಗಳ ಅಂಕಿತದ ಪೂರ್ವದಲ್ಲಿ ಸುಂದರೈನಿಲಯ, ಶುಭದೈನಿಲಯ, ಸುಖದೈನಿಲಯ, ಚೆಲ್ವೈನಿಲಯ, ಮೋಕ್ಷದೈನಿಲಯ, ವಿನತೈನಿಲಯ, ರಾಜಿತೈನಿಲಯ ಮೊದಲಾಗಿ ಮನತುಂಬಿ ವರ್ಣಿಸಿದ್ದಾರೆ.

ಊರ ಪಶ್ಚಿಮಕ್ಕೆ ಇರುವ ನದಿಯ ಬಸವಣ್ಣದೇವರು ಗ್ರಾಮದ ಆರಾಧ್ಯದೈವ, ಹಾಗೂ ಜಾಗೃತ ದೇವರು. ಕರಿಬಸವಾರ್ಯರು ಬಸವಣ್ಣನಲ್ಲಿ ಹೀಗೆ ಪ್ರಾರ್ಥಿಸಿಕೊಂಡಿದ್ದಾರೆ.

ನೋಡಿ ರಕ್ಷಸು ಎನ್ನೊಡೆಯ ಬಸವೇಶ
ನಾಡ ಐನೆಲೆ ಪುರಿಯ ನದಿಯ ಬಸವೇಶ

ಮತ್ತು ಗ್ರಾಮದ ಪೂರ್ವ ದಿಕ್ಕಿಗೆ ಉಮಾಚಲ ಪರ್ವತವಿದ್ದು, ಪರ್ವತದಲ್ಲಿರುವ ಭೋಗಲಿಂಗೇಶ್ವರನನ್ನು ಕುರಿತಾಗಿ " ಭೋಗಲಿಂಗೇಶ್ವರ ಶತಕ"ವನ್ನು ಬರೆದಿದ್ದಾರೆ. ಈ ಎಲ್ಲ ಮಾಹಿತಿಗಳಿಂದ ಕರಿಬಸವಾರ್ಯರ ಜನ್ಮಸ್ಥಳ ಐನೂಲಿ ಎಂದೇ ಹೇಳಬಹುದು.

ಕಾಲ: ಕರಿಬಸವಾರ್ಯರು ತಾವು ಬದುಕಿದ ಕಾಲವನ್ನು ಸ್ಪಷ್ಟವಾಗಿ ತಮ್ಮ ಕಾವ್ಯಗಳಲ್ಲಿ ಎಲ್ಲಿಯೂ ಹೇಳಿಕೊಂಡಿಲ್ಲ. ಕೆಲವು ಸುಳುಹು ಪ್ರಮಾಣಗಳನ್ನು ಲಕ್ಷಿಸಿ ಅವರ ಕಾಲವನ್ನು ಗುರುತಿಸಲಾಗಿದೆ.

ಕರಿಬಸವಾರ್ಯರನ್ನು 'ಸಂಗಮೇಶ್ವರ ಪುರಾಣ'ದ ಕರ್ತೃವಾದ ಬಸವರಾಜ (ಕ್ರಿ.ಶ. ೧೮೦೦) ಹಾಗೂ ಚತುರಾಚಾರ್ಯ ಪುರಾಣದ ಕರ್ತೃ ತಿಲಕಪುರದ ಸೋಮಕವಿ (ಕಾಲ ಕಿ.ಶ. ೧೮೩೧) ಇವರುಗಳು ತಮ್ಮ ಕೃತಿಗಳ ಆದಿಯಲ್ಲಿ ಸ್ಮರಿಸಿದ್ದಾರೆ. ಇವರನ್ನು ಬಿಟ್ಟರೆ ಇಡಿಯಾಗಿ ಇಲ್ಲವೆ ಬಿಡಿಯಾಗಿ ಎಲ್ಲಿಯೂ ಕರಿಬಸವಾರ್ಯರ ಕುರಿತಾದ ಮಾಹಿತಿಗಳು ಲಭ್ಯವಿಲ್ಲ. ಅವರ ಕಾಲವನ್ನು ಕುರಿತು ಅನೇಕ ವಿದ್ವಾಂಸರು ತಮ್ಮದೇ ಆದ ಅಭಿಪ್ರಾಯ ನೀಡಿದ್ದಾರೆ.

- ಡಾ. ಎಮ್. ಎಸ್. ಲಠ್ಠೆಯವರು ಕರಿಬಸವಾರ್ಯರು ಕ್ರಿ.ಶ. ಸು ೧೭೪೫ರಲ್ಲಿ ಜನಿಸಿ ತಮ್ಮ ೯೫ನೇ ವಯಸ್ಸಿನಲ್ಲಿ ಅಂದರೆ ಕ್ರಿ.ಶ. ೧೮೪೦ರಲ್ಲಿ ಲಿಂಗೈಕ್ಯರಾದರು ಎಂದು ಅಭಿಪ್ರಾಯ ಪಡುತ್ತಾರೆ.
- ಎಸ್. ಶಿವಣ್ಣನವರು ಕರಿಬಸವಾರ್ಯರು ಸುಮಾರು ಕ್ರಿ.ಶ. ೧೭೪೫ರಿಂದ ಕ್ರಿ.ಶ. ೧೮೪೦ರ ಮಧ್ಯದಲ್ಲಿ ಬದುಕಿದವರು ಎಂದು ಅಭಿಪ್ರಾಯ ಪಡುತ್ತಾರೆ.
- ಡಾ. ಬಸವರಾಜ ಸಬರದ ಅವರು ಕ್ರಿ.ಶ. ೧೭೭೫ರಲ್ಲಿ ಕರಿಬಸವಾರ್ಯರು ಜನಿಸಿದರು ಎನ್ನುತ್ತಾರೆ.
- ಶ್ರೀ ಶಿವರಾಜ ದೇವಪ್ಪನವರು ಕವಿಯ ಕಾಲವನ್ನು ಕ್ರಿ.ಶ. ಸುಮಾರು ೧೭೭೫ರಿಂದ ಕ್ರಿ.ಶ. ೧೮೬೫ರ ವರೆಗೆ ಗುರುತಿಸಿದ್ದಾರೆ.

ಆದರೆ ಕರಿಬಸವಾರ್ಯರು ತಮ್ಮ ಕಕ್ಕನ ಮಗನಾದ ಗೊಟ್ಟಂಗೊಟ್ಟಿಯ ಬಕ್ಕಪ್ಪಯ್ಯ (ಈತನ ಕಾಲ ಕ್ರಿ.ಶ.ಸು. ೧೮೧೪ರಿಂದ ೧೮೭೨)ನು ಕಾಲವಾದಾಗ ಒಂದು ಚರಮಗೀತೆಯನ್ನು ಬರೆದಿರುವರು. ಅದು ಹೀಗಿದೆ.

ಹೇ ಮಹಾದೇವನೆ ಯಾಕೆ ಬಕ್ಕಪ್ಪನ
ನೀ ಮಾಯ ಮಾಡುವರೆ ———
ಜಾತ ರುಜಕೆ ವೇತಂಡ
ಪಾತಕ ಪರವಿದ್ಯ ಘಾತಕ ತಂತ್ರದ
ಭೀತಿ ಅಳಿದ ಪ್ರಚಂಡ
ಭೂತಳದೊಳಗೆ ತಾನೀತೆರದಿರುವ ಪ್ರ
ಖ್ಯಾತ ಬಕ್ಕಪ್ಪನ ಯೊಕೊಯಿದಿರಿ ದೇವ

ಪರಿಜನರಿಗೆ ಗಾಢ ನೆರಳಾಗಿರುವ ದೊಡ್ಡ
ಮರವ ಮುರಿದಂತಾಯಿತು ---------
ಹಲವು ಪಕ್ಷಿಗಳಿಗೆ ಫಲವ ಕೊಡುವ ವೃಕ್ಷ
ನೆಲಕೆ ಬಿದ್ದಂತಾಯಿತು ------------

ಎಂದು ದುಃಖಿಸಿದ್ದಾರೆ. ಹೀಗಾಗಿ ಕರಿಬಸವಾರ್ಯನ ಕೊನೆಯ ದಿನಗಳು ಕ್ರಿ.ಶ. ಸುಮಾರು ೧೮೪೦ ಕ್ಕಿಂತಲೂ ಮುಂಚೆಯೇ ಬರುತ್ತದೆ.

ಹೀಗಾಗಿ ಸುಮಾರು ೬೫ ವರ್ಷಗಳ ತುಂಬುಜೀವನ ಸಾಗಿಸಿದ ಕರಿಬಸವಾರ್ಯರ ಬದುಕಿನ ಕಾಲವನ್ನು ಕ್ರಿ.ಶ. ಸು. ೧೭೮೦ರಿಂದ ಕ್ರಿ.ಶ.ಸು. ೧೮೭೫ರ ವರೆಗೆ ಎಂದು ನಿಗದಿ ಪಡಿಸಬಹುದಾಗಿದೆ.

ಜನನ ಮತ್ತು ಬಾಲ್ಯ : ಶರಣರ ನೈಜ ಜೀವನ ಆರಂಭವಾಗುವುದು ಶಿವದೀಕ್ಷೆಯ ನಂತರವೇ. ಶಿವದೀಕ್ಷೆಯನ್ನು ಕೈಕೊಂಡ ಶರಣ ಕವಿಗಳಿಗೆ ಸಹಜವಾದ ನಿಜಜೀವನವನ್ನು ಪ್ರಾರಂಭಿಸುವಾಗಲೂ ತಮ್ಮ ಪೂರ್ವಾಶ್ರಮವನ್ನು ಸಂಪೂರ್ಣವಾಗಿ ಮರೆತು ತಮ್ಮ ಮುಂದಿನ ಎಲ್ಲ ವ್ಯವಹಾರಗಳಲ್ಲಿ ತಮಗೆ ಜನ್ಮವಿತ್ತ ತಂದೆ ತಾಯಿಗಳನ್ನು ನೆನೆಯದೇ, ಹೆಸರಿಸದೇ, ದೀಕ್ಷೆಯನ್ನಿತ್ತ ಗುರುವನ್ನೇ ಮುಂದೆ ಮಾಡುತ್ತ 'ಗುರುಕರಕಮಲ ಸಂಜಾತ'ರೆಂದು ಹೇಳಿಕೊಳ್ಳುತ್ತಾರೆ. ಕರಿಬಸವಾರ್ಯರೂ ಸಹ ತಮ್ಮ 'ಶ್ರೀ ಕುಮಾರ ವಿಜಯ ವಿಳಾಸಂ' ಕೃತಿಯಲ್ಲಿ '---- ಚನ್ನವೀರೇಶನ ಕರಾಂಭೋಜ ಗರ್ಭೋದ್ಭವಂ' ಎಂದು ದೀಕ್ಷೆಯನ್ನು ನೀಡಿದ ಗುರುಗಳನ್ನು ಒತ್ತಿ ಹೇಳಿದ್ದಾರೆ. ಅಪರೂಪವೆಂಬಂತೆ ಕರಿಬಸವಾರ್ಯರು ತಮ್ಮ ಕೃತಿಯಲ್ಲಿ ತಮ್ಮ ತಂದೆಯ ಹೆಸರನ್ನು ಹೇಳಿಕೊಂಡಿದ್ದಾರೆ. ಇದೊಂದನ್ನು ಬಿಟ್ಟು ಅವರು ತಮ್ಮ ಜೀವನಕ್ಕೆ ಸಂಬಂಧಪಟ್ಟ ವಿಷಯಾವಾಗಲಿ, ಜನನದ ವಿಷಯವಾಗಲಿ, ಬಾಲ್ಯವನ್ನು ಕುರಿತಾಗಲಿ ಎಲ್ಲಿಯೂ ಹೇಳಿಕೊಂಡಿಲ್ಲ. ಶ್ರೀ ಕುಮಾರ ವಿಜಯ ವಿಳಾಸಂ ಕಾವ್ಯದಲ್ಲಿ ತಮ್ಮ ಗುರುವಿನ ಮತ್ತು ತಮ್ಮ ವಂಶದ ಹಿರಿಯರಾದ ತಂದೆ ಮತ್ತು ಚಿಕ್ಕಪ್ಪನ ಹೆಸರನ್ನು ಉಲ್ಲೇಖಿಸಿದ್ದಾರೆ.

"ಚೆನ್ನವೀರಣಾಚಾರ್ಯ ಚರಪುಂಗವನ ಶ್ರೀ ಚರಣಸೇವಕ ಶಿಷ್ಯೋತ್ತಮನಾದ ------ವೀರಸಂಗಮದೇವನ ಅನುಜನು ----ಶಿವಮತ ಪಾರಿಜಾತನು ಸುಜಾತನು ಶತಾನಂದ ಮೂರ್ತಿಯೆಂದು ಕರೆಯಲ್ಪಡುವ ಶತಾನಂದನ ಸುಪುತ್ರನ್ ಕವೀಂದ್ರ ಶಾಬಕ ನೆನುತಿರೆ ---------"

"ಐನಿಲಯಪುರನಿವಾಸ ವೀರಸಂಗಮದೇವನ ಅನುಜ ಶತಾನಂದಾಖ್ಯ ಭೂರುದ್ರನ ಪುತ್ರ ಕರಿಬಸವೈಯ್ಯನು ಈ ನೂತನ ಕಾವ್ಯ ವಿರಚಿಸಿ ಬರೆದನು"

ಈ ಮೇಲಿನ ಪದ್ಯಗಳಲ್ಲಿ ಕರಿಬಸವಾರ್ಯರು ತಮ್ಮ ವಂಶದ ಕುರಿತ ಮಾಹಿತಿ ನೀಡಿದ್ದಾರೆ. ಈ ಮಾಹಿತಿಯನ್ನು ಮತ್ತು ಐನೂಲಿಯ ಕ್ಷೇತ್ರ ಪರಿವೀಕ್ಷಣೆಯ ಸಂದರ್ಭದಲ್ಲಿ ಗ್ರಾಮದ ಗುರುಹಿರಿಯರಿಂದ ಸಂಗ್ರಹಿಸಿದ ಆಧಾರಗಳಿಂದ ಕರಿಬಸವಾರ್ಯರ ಬದುಕಿನ ಚಿತ್ರಣವನ್ನು ಸಂಗ್ರಹಿಸಲಾಗಿದೆ.

ಐನೂಲಿಯ ಮಠಪತಿ ಮನೆತನದಲ್ಲಿ 'ರುದ್ರಸ್ವಾಮಿ' ಎಂಬುವವನಿದ್ದು ಅವನಿಗೆ 'ಶತಾನಂದಮೂರ್ತಿ' ಮತ್ತು ವೀರಸಂಗಮದೇವ'ರೆಂಬ ಇಬ್ಬರು ಮಕ್ಕಳಿದ್ದರು. ಈ ಶತಾನಂದಮೂರ್ತಿಯ ಮಗನೇ ಕರಿಬಸವಾರ್ಯ.

ಕರಿಬಸವಾರ್ಯರು ತಮ್ಮ ಕೃತಿಯಲ್ಲಿ ಮನೆಯ ಹಿರಿಯನಾದ ರುದ್ರಸ್ವಾಮಿಯನ್ನಾಗಲಿ ಅಥವಾ ತಮ್ಮ ತಂದೆಯನ್ನಾಗಲಿ ಮೊದಲು ನೆನೆಯದೆ ತಮ್ಮ ತಂದೆಗಿಂತಲೂ ಚಿಕ್ಕವನಾದ ಚಿಕ್ಕಪ್ಪ ವೀರಸಂಗಮದೇವನನ್ನು ಮೊದಲು ಉಲ್ಲೇಖಿಸಿದ್ದಾರೆ. ಇದಕ್ಕೆ ಕಾರಣವೇನೆಂದು ಸೂಕ್ಷ್ಮವಾಗಿ ಅವಲೋಕಿಸಿದಾಗ ಅವರ ಮನೆಯ ಹಿರಿಯ ವ್ಯಕ್ತಿಯಾದ ರುದ್ರಸ್ವಾಮಿ ಮತ್ತು ತಂದೆ ಶತಾನಂದಮೂರ್ತಿ ಇಬ್ಬರು ಮರಣ ಹೊಂದಿದ್ದರು. ಕಾರಣ ಸದ್ಯ (ಕವಿಯು ಬದುಕಿದಾಗ) ಮನೆಯ ಹಿರಿಯನೆಂದರೆ ವೀರಸಂಗಮದೇವ ಹೀಗಾಗಿ ಕರಿಬಸವಾರ್ಯರು ತಮ್ಮ ಕೃತಿಯಲ್ಲಿ ವೀರಸಂಗಮದೇವನನ್ನು ಮೊದಲು ಗುರುತಿಸಿದ್ದಾರೆ. ಬಾಲ್ಯದಲ್ಲಿಯೇ ತಂದೆಯನ್ನು ಕಳೆದುಕೊಂಡ ಕರಿಬಸವಾರ್ಯರು ದೇವನಲ್ಲಿ ಈ ರೀತಿಯಾಗಿ ಪ್ರಾರ್ಥಿಸಿಕೊಂಡಿದ್ದಾರೆ.

ಮರಣವಾದ ತಂದೆಯ ಕಂಡು
ಮೊರೆ ಹೊಕ್ಕೆನು ನಾ ಭಯಗೊಂಡು

ಕರಿಬಸವಾರ್ಯರದು–ಬಡತನದ ಜೀವನ. ತಂದೆಯನ್ನು ಕಳೆದುಕೊಂಡ ನಿರಾಶ್ರಿತವಾದ ಬದುಕು. ಹೀಗಾಗಿ ತಾಯಿಯ ಆಶ್ರಯದಲ್ಲಿಯೇ ಬೆಳೆಯುತ್ತಾ ಉಪಜೀವನ ನಡೆಯಲು ತಾಯಿ ಕರಿಬಸವಾರ್ಯರನ್ನು ದನಗಳನ್ನು ಕಾಯಲು ಹಚ್ಚಿದಳು. ಊರ ಪಶ್ಚಿಮಕ್ಕಿರುವ ನದಿಯ ಬಸವಣ್ಣನ ಗುಡಿಯ ಹತ್ತಿರ ಈತನು ದನಗಳನ್ನು ಕಾಯಲು ಹೋಗುತ್ತಿದ್ದನು. ದನಗಳನ್ನು ಮೇಯಲು ಬಿಟ್ಟು ತಾನು ದೇವರ ಮುಂದೆ ಧ್ಯಾನಾಸಕ್ತನಾಗಿ ಕುಳಿತುಕೊಳ್ಳುತ್ತಿದ್ದನು. ಬೆಳೆಯುವ ಸಿರಿ ಮೊಳಕೆಯಲ್ಲಿಯೇ ನೋಡು ಎಂಬಂತೆ ದನಕಾಯುವ ಕೆಲಸ ಲೌಕಿಕ ದೃಷ್ಟಿಯಾಗಿದ್ದರೆ ಈತನ ಮನಸ್ಸು ಆಧ್ಯಾತ್ಮದ ದಾರಿ ಹಿಡಿದಿತ್ತು. ಅವನು ದನಗಳನ್ನು ಕಾಯುವ ವಾರಿಗೆಯ ಗೆಳೆಯರಂತಿರಲಿಲ್ಲ. ಸದಾ ಮೌನದಲ್ಲಿರುತ್ತ ಅಲ್ಲಲ್ಲಿ ಬಿದ್ದಿರುವ ಕಲ್ಲಲ್ಲಿ ಇನ್ನೊಂದು ಕಲ್ಲಿನಿಂದ ಏನೇನೋ ಗೀಚುತ್ತಿದ್ದನು. ಕೆಲವು ಸಲ ಅದು 'ಓಂ'ಕಾರ ಪ್ರಣವಾಕ್ಷರವೇ ಆಗುತ್ತಿತ್ತು. ಹೀಗಿರುವಾಗ ಒಂದು ದಿನ ಇವರ ಮನೆಯ ಗುರುಗಳು

ಮನೆಗೆ ಬಂದಾಗ ಹುಡುಗನ ಮಾತು ಚಲನ ವಲನಗಳನ್ನು ಗಮನಿಸಿ " ಇವನಿಗೆ ಅಕ್ಷರಭ್ಯಾಸ ಮಾಡಿಸಿದರೆ ದೊಡ್ಡ ಜ್ಞಾನಿಯಾಗುತ್ತಾನೆ" ಎಂದು ಭವಿಷ್ಯ ನುಡಿದರು.

ಮುಂದೆ ಕೆಲವು ದಿನಗಳು ಕಳೆಯುತ್ತಿದ್ದಂತೆಯೇ ದನಗಳನ್ನು ಕಾಯಲು ಹೋದ ದಾರಿಯಲ್ಲಿ ಆಕಸ್ಮಿಕವಾಗಿ ಗಾರಂಪಳ್ಳಿಯ ವರದಿ ಬಸಪ್ಪ ಎಂಬುವವರು ಹೊರಟಿದ್ದರು. ದಾರಿಯಲ್ಲಿ ಬಿದ್ದ ಕಲ್ಲುಗಳ ಮೇಲೆ ದೃಷ್ಟಿ ಬೀಳಲು ಆಶ್ಚರ್ಯ ಚಕಿತರಾಗಿ ದನಗಳನ್ನು ಕಾಯುವ ಹುಡುಗರಿಗೆ ಕೇಳಿದಾಗ ಕರಿಬಸವಾರ್ಯನನ್ನು ತೋರಿಸಿದರು. ಹುಡುಗ ಕರಿಬಸವನನ್ನು ಮಾತನಾಡಿಸಿ ಸಂತೋಷ ಪಟ್ಟು ಇವನಿಗೆ ಅಕ್ಷರಭ್ಯಾಸ ಮಾಡಿಸಿದರೆ ನನ್ನ ಜನ್ಮ ಸಾರ್ಥಕವಾದೀತು ಎಂದುಕೊಂಡು ಕರಿಬಸವಾರ್ಯರ ತಾಯಿಯ ಹತ್ತಿರ ಹೋಗಿ ಕೇಳಲು, ಬಡತನದ ಬವಣೆಯಲ್ಲಿದ್ದ ನನಗೆ ಓದಿಸಲು ಆಗುವದಿಲ್ಲ, ಎಂದಾಗ ಅದನ್ನು ಅರಿತುಕೊಂಡ ಬಸಪ್ಪನವರು ತಾವೇ ಮುತುವರ್ಜಿವಹಿಸಿ ಸುಲೇಪೇಟದ ಖಟ್ವಾಂಗೇಶ್ವರ ಮಠದಲ್ಲಿ ಓದಿಸುವ ವ್ಯವಸ್ಥೆ ಮಾಡಿಸಿದರು.

ಪ್ರತಿಭಾನ್ವಿತರಾದ ಕರಿಬಸವಾರ್ಯರು ಬಹುಬೇಗ ಓದುಬರಹ ಕಲಿತರು. ಪ್ರಾರಂಭಿಕ ಶಿಕ್ಷಣ ಮುಗಿಸಿ ಹೆಚ್ಚಿಗೆ ಕಲಿಯಬೇಕೆಂಬ ಹಂಬಲ ಕರಿಬಸವಾರ್ಯರಲ್ಲಿ ಮೂಡಿ ತಾವೇ ಹೆಚ್ಚಿನ ಓದಿಗಾಗಿ ಬೀದರ ಜಿಲ್ಲೆಯ ಹುಮನಾಬಾದ ತಾಲ್ಲೂಕಿನ ಚಿಟಗುಪ್ಪಿಯ ಅಯ್ಯಪ್ಪ ಸ್ವಾಮಿ ಮಠಕ್ಕೆ ಬಂದರು. ಈ ಮಠದ ಗುರು ಚನ್ನವೀರೇಶ್ವರರು ಕರಿಬಸವಾರ್ಯರಲ್ಲಿ ಸೂಪ್ತವಾಗಿ ಅಡಗಿದ ಜ್ಞಾನದಾಹವನ್ನು ಅರಿತು ಚೆನ್ನಾಗಿ ಮಾರ್ಗದರ್ಶನ ಮಾಡಿದರು ಅದರಂತೆ ಕೆಲವೇ ವರ್ಷಗಳಲ್ಲಿ ಕನ್ನಡ, ಸಂಸ್ಕೃತ, ತೆಲಗು ಭಾಷೆಗಳ ವ್ಯಾಕರಣ ಛಂದಸ್ಸು ನಿಘಂಟುಗಳನ್ನು ಕರತಲಾಮಲಕ ಮಾಡಿಕೊಂಡರು. ಸಹಜ ಪ್ರತಿಭಾನ್ವಿತರಾದ ಕರಿಬಸವಾರ್ಯರು ತಮ್ಮ ಸ್ವಾನುಭವದಿಂದ ಹರಿಹರ – ರಾಘವಾಂಕ ಭೀಮಕವಿ ಚಾಮರಸ ಮೊದಲಾದ ಕವಿಶ್ರೇಷ್ಠರ ಕಾವ್ಯಗಳನ್ನು ಅಧ್ಯಯನ ಮಾಡಿ ಅವುಗಳ ಅಂತರ್ಯವನ್ನು ಅರಿತುಕೊಂಡರು. ಬಳಿಕ ಐನೂಲಿಗೆ ಬಂದು ಸದಾಕಾಲ ಸತ್ಸಂಗ ಸತ್ಕಾರ್ಯಗಳಲ್ಲಿ ತೊಡಗುತ್ತ ಅಂದಿನ ಸಾಮಾಜಿಕ ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಕ್ಷೇತ್ರದ ಪ್ರಗತಿಗಾಗಿ ದುಡಿಯತೊಡಗಿದರು.

ಇಷ್ಟೊತ್ತಿಗಾಗಲೇ ಕರಿಬಸವಾರ್ಯರ ಪ್ರತಿಭೆ ಗರಿಗೆದರಿತು. ಸ್ವತಃ ತಾವೇ ಅನುಭವ ಪದಗಳನ್ನು ರಚಿಸಿ ಹಾಡಲಾರಂಭಿಸಿದರು. "ಐನೆಲೆವಾಸ ಗುರುಚನ್ನವೀರೇಶವೆಂಬ ತನ್ನ ಊರು ಮತ್ತು ದೀಕ್ಷೆ ನೀಡಿದ ಗರುಗಳನ್ನು ಹೆಸರಿಸುವ ಅಂಕಿತವನ್ನಿಟ್ಟುಕೊಂಡು ಸ್ವರವಚನ, ಸ್ತೋತ್ರ, ಅಷ್ಟಕ, ಶತಕ, ಕಂದ ಮೊದಲಾದವುಗಳನ್ನು ರಚಿಸುವುದರ ಮೂಲಕ ಅಂದಿನ ಕಾಲದ ಶ್ರೇಷ್ಠ ಕವಿಗಳೆನಿಸಿಕೊಂಡರು. ಅಂತೆಲೆ ಅವರಿಗೆ ಕವೀಂದ್ರ

ಶಾಬಕ, ಶಾಬಕವಿ ಎಂಬ ಬಿರುದುಗಳು ಸಂದಿದ್ದವು. ಜೊತೆಗೆ ಪುರಾಣ ಪ್ರವಚನಗಳನ್ನು ಹೇಳತೊಡಗಿದರು. ಭಕ್ತಿ ರಸಭರಿತವಾದ ಸಾಹಿತ್ಯ ಕೃತಿಗಳ ರಚನೆ ಮಾಡುತ್ತ ಕೀರ್ತಿ ಹೆಚ್ಚಿಸಿಕೊಂಡರು. ಹೀಗೆ ಕರಿಬಸವಾರ್ಯರು ತಾವು ಸಂಪಾದಿಸಿದ ವಿದ್ಯೆಯಿಂದ ತನ್ನ ಉದ್ಧಾರದೊಂದಿಗೆ ಸಮಾಜದ ಜನತೆಯ ಉದ್ಧಾರಗೈಯುತ್ತ ಜೀವನ ಸಾಗಿಸಿದರು.

ವಿವಾಹ – ವೈರಾಗ್ಯ –ಐಕ್ಯ : ಚಿಟಗುಪ್ಪಿಯಿಂದ ಐನೂಲಿಗೆ ಬಂದ ಕೆಲವು ದಿನಗಳ ನಂತರ ಕರಿಬಸವಾರ್ಯರಿಗೆ 'ರಾಚಮ್ಮ' ಎಂಬುವವಳೊಂದಿಗೆ ಮದುವೆಯಾಯಿತು. ಶರಣರ ಗಾಢ ಪ್ರಭಾವಕ್ಕೆ ಒಳಗಾದ ಅವರ ಬದುಕು ತುಂಬಾ ಅನೋನ್ಯವಾಗಿತ್ತು. "ವೀರಬಸಯ್ಯ" ಎಂಬ ಒಬ್ಬ ಮಗ ಹುಟ್ಟಿದ್ದು, ಈತನು ಕವಿಯಾಗಿದ್ದನು. 'ಐನೆಲೆ ಮರುಳಸಿದ್ಧ' ಎಂಬ ಕಾವ್ಯನಾಮದಿಂದ ಅನೇಕ ಸ್ವರವಚನಗಳನ್ನು ಹಾಗೂ 'ಲವಕುಶರ ಕಾಳಗ' ಎಂಬ ಕಾವ್ಯವನ್ನು ರಚಿಸಿರುವನೆಂದು ತಿಳಿದುಬರುತ್ತದೆ.

ಕರಿಬಸವಾರ್ಯರ ಜೀವನ ಸವೆದಂತೆಲ್ಲ ಅನುಭವ ಪಕ್ವಗೊಂಡು ಕ್ರಮೇಣ ಆಧ್ಯಾತ್ಮದ ಹಂಬಲ ಹೆಚ್ಚಿತು. ಸಂಸಾರ ಸುಖಕ್ಕಿಂತಲೂ ಸಾಹಿತ್ಯರಚನೆ, ಪುರಾಣ ಪ್ರವಚನಗಳನ್ನು ಹೇಳುವುದರಲ್ಲಿ ಹೆಚ್ಚಿನ ಒಲವು ಉಂಟಾಯಿತು. ಜನಹಿತ ಬಯಸಿ ಸೇವೆ ಮಾಡುತ್ತ ನಡೆದ ಅವರು ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿಯೇ ತಮ್ಮನ್ನು ಪೂರ್ತಿಯಾಗಿ ತೊಡಗಿಸಿಕೊಂಡರು. ಅವರ ಈ ಚಟುವಟಿಕೆಗಳು ಮಡದಿಯಾದ ರಾಚಮ್ಮಳಿಗೆ ಹಿಡಿಸಲಿಲ್ಲ. ಅದರಿಂದ ತುಂಬಾ ಬೇಸರಗೊಂಡ ಆಕೆ ಗಂಡನನ್ನು ಸಂಸಾರದ ಕಡೆ ಗಮನ ಹರಿಸುವಂತೆ ಮಾಡಲು ಪ್ರಯತ್ನಿಸಿದಳು. ಆದರೆ ಸಮಾಜ ಸೇವೆಯಲ್ಲಿ ನಿರತರಾಗಿದ್ದ ಕರಿಬಸವಾರ್ಯರು ತನ್ನ ಸಾಧನೆಗೆ ಅಡ್ಡಿಯಾಗಿ ನಿಂತ ಹೆಂಡತಿಯನ್ನು

> ನಡಿ ನಡಿ ಹೋಗೆಲೆ ಸಖಿಯೆ ನೀ ನಡಿ ನಡಿ
> ಹಿತವು ಇರುವತನಕ ಸತಿಯಳೆಂದೆನಿಸಿ
> ಹಿತವು ತೀರಿದ ಮ್ಯಾಲೆ ನಡಿ ನಡಿ ––––––
> ಆಡಿಕೊಂಬುವದ್ಯಾಕ ರೂಢಿಯೊಳಗಪ ಕೀರ್ತಿ
> ರೂಢಿಯೊಳಗ ಶ್ರೀ ಚನ್ನ ವೀರೇಶನ ಕರುಣೆ ಇರೊತನಕ ನಡಿ ನಡಿ

ಎಂದು ಹೇಳಿ ಮನೆಯನ್ನು ತೊರೆದು ಐನೂಲಿಯನ್ನು ಬಿಟ್ಟು ಚಿಂಚೋಳಿಗೆ ಬಂದು ನೆಲೆಸಿದರು. ಶರಣ ಜೀವಿಯಾಗಿ ಪಾರಮಾರ್ಥದ ಕಡೆಗೆ ಹೆಚ್ಚಿನ ಒಲವು ಹರಿಸಿದರು. ಕ್ಷಣಿಕವಾದ ಸಂಸಾರ ಸುಖದಿಂದ ದೂರ ಸರಿದು ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ತಮ್ಮನ್ನು ತಾವು ಸಂಪೂರ್ಣವಾಗಿ ತೊಡಗಿಸಿಕೊಂಡರು. ಚಿಂಚೋಳಿಯಲ್ಲಿಯೇ ನಲವತ್ತೈದು ವರ್ಷಗಳ ಕಾಲ ಬಾಳಿ ತಮ್ಮ ೮೫ನೇ

ವಯಸ್ಸಿನಲ್ಲಿ ಅಂದರೆ ಕ್ರಿ.ಶ. ಸುಮಾರು ೧೮೭೫ರಲ್ಲಿ ತಮ್ಮ ಜೀವಿತದ ಅಂತ್ಯವನ್ನು ಕಂಡುಕೊಂಡರು.

ಇವರ ಸಮಾಧಿಯು ಚಿಂಚೋಳಿಯ ನಡುವಿನ ಮಠದಲ್ಲಿ ಇತ್ತೆಂದು ಜನ ಹೇಳುತ್ತಾರೆ. ಆದರೆ ಈಗ ಇಲ್ಲಿ ಕವಿಯ ಸಮಾಧಿಯ ಯಾವ ಕುರುಹುಗಳು ಇಲ್ಲ. ಅವರು ತೀರಿಕೊಳ್ಳುವ ಮೊದಲೇ "ನನ್ನ ಸಮಾಧಿಯನ್ನು ಜನರು ಓಡಾಡುವ ಮಾರ್ಗ ಮಧ್ಯದಲ್ಲಿ ಮಾಡಬೇಕು. ಜನರ ಪಾದಧೂಳಿಯಿಂದ ನಾನು ಪಾವನನಾಗಬೇಕು" ಎಂದು ಹೇಳಿದರಂತೆ. ಅದಕ್ಕಾಗಿ ಅವರ ಕೊನೆಯ ಬಯಕೆಯಂತೆ ಕರಿಬಸವಾರ್ಯರನ್ನು ಮಠದ ಮಹಾದ್ವಾರದ ಬಾಗಿಲಿನ ಮುಂಭಾಗದಲ್ಲಿಯೇ, ಜನರು ಅದರ ಮೇಲಿಂದ ಓಡಾಡುವ ಮಾರ್ಗದ ಮಧ್ಯದಲ್ಲಿ ಸಮಾಧಿ ಮಾಡಲಾಗಿತ್ತು ಎಂದು ಅನೇಕ ಹಿರಿಯರು ಹೇಳುತ್ತಾರೆ. ಕೆಲವು ದಿನಗಳು ಗತಿಸಿದ ಮೇಲೆ ಶ್ರೀ ಹಾರಕೂಡ ಚನ್ನಬಸವ ಶಿವಯೋಗಿಗಳು "ಶರಣರ ಮಾರ್ಗಾವಲಂಬಿಯಾದ ಕರಿಬಸವಾರ್ಯರ ಉದ್ದೇಶ ಒಳ್ಳೆಯದು. ಆದರೆ ನಾವು ಅದರ ಮೇಲಿಂದ ಓಡಾಡುವದಕ್ಕಿಂತ ಆ ಸ್ಥಳವನ್ನು ಗೌರವದಿಂದ ಕಾಣಬೇಕು" ಎಂದು ಭಕ್ತ ಸಮೂಹವನ್ನು ಕರೆದು ಮಠದ ಬಾಗಿಲನ್ನು ಮುಚ್ಚಿಸಿದರು. ಅಲ್ಲೊಂದು ಸಮಾಧಿಯನ್ನು ಕಟ್ಟಿಸಿ ಪೂಜೆಮಾಡಲು ಸೂಚಿಸಿದರು. ಅದರಂತೆ ಕೆಲದಿನಗಳ ಹಿಂದೆಯೇ ಸಮಾಧಿ ಇತ್ತು. ಪೂಜೆಯು ನಡೆಯುತ್ತಿತ್ತು ಎಂದು ಇಲ್ಲಿನ ಹಿರಿಯ ಜೀವಿಗಳು ಹೇಳುತ್ತಾರೆ. ಆದರೆ ಈಗ ಇಲ್ಲಿ ಕವಿಗಳ ಸಮಾಧಿಯ ಯಾವ ಕುರುಹುಗಳಿಲ್ಲ. ಕೆಲವು ದುಷ್ಕರ್ಮಿಗಳು ತಮ್ಮ ವೈಯಕ್ತಿಕ ಸ್ವಾರ್ಥಕ್ಕಾಗಿ ಎಲ್ಲವನ್ನು ಅಸ್ತವ್ಯಸ್ತಗೊಳಿಸಿ ಸಮಾಧಿಯ ಕುರುಹುಗಳಿಲ್ಲದಂತೆ ಮಾಡಿದ್ದಾರೆ.

ಕರಿಬಸವಾರ್ಯರ ಸಮಾಧಿಯು ಚಿಂಚೋಳಿಯ ಇಂದಿನ ನಡುವಿನ ಮಠದಲ್ಲಿಯೇ ಆಗಿತ್ತು ಎಂದು ಹೇಳಬಹುದು. ಏಕೆಂದರೆ ಈ ನಡುವಿನ ಮಠದ ಬಾಗಿಲು ದಕ್ಷಿಣದಿಕ್ಕಿಗೆ ಇದೆ. ಸಾಮಾನ್ಯವಾಗಿ ವೀರಶೈವ ಮಠಗಳ ದ್ವಾರ ಬಾಗಿಲು ಪೂರ್ವದಿಕ್ಕಿಗೆ ಇರುತ್ತವೆ. ಆದರೆ ಈ ಮಠದ ಬಾಗಿಲು ದಕ್ಷಿಣ ದಿಕ್ಕಿಗಿದೆ. ದಕ್ಷಿಣ ದಿಕ್ಕಿಗೆ ಬಾಗಿಲಿರುವ ಮಠಗಳು ನಮಗೆ ಕಂಡು ಬರುವುದು ವಿರಳ.

ಗುರು ಪರಂಪರೆ: ಕರಿಬಸವಾರ್ಯರು ತಮ್ಮ ಎಲ್ಲ ಕೃತಿಗಳಲ್ಲಿ ತಮ್ಮ ಗುರುಗಳಾದ ಚನ್ನವೀರೇಶ್ವರರನ್ನು ಸ್ಮರಿಸಿದ್ದಾರೆ. ಅವರನ್ನು ಚನ್ನವೀರ, ಚೆನ್ನವೀರಾಖ್ಯ, ಚನ್ನವೀರಾಚಾರ್ಯ, ಚನ್ನವೀರೇಶ, ಚನ್ನವೀರಯ್ಯ ಎಂಬ ಒಂದೇ ಹೆಸರಿನ ವಿವಿಧ ಮುದ್ರೆಗಳನ್ನು ಅಂಕಿತನಾಮವಾಗಿಟ್ಟುಕೊಂಡು ಗುರುವನ್ನು ಆರಾಧಿಸಿರುವುದು ಕಂಡುಬರುತ್ತದೆ.

"ಐನಿಲಯ ಶ್ರೀ ಚನ್ನವೀರ ಮಹೇಶ ಹಸ್ತವನೆ"

"ಚನ್ನವೀರೇಶ್ವನ ಸುಕವೀಂದ್ರ ಶಾಬಕನವಾಕ್ಯಮಿದೆಂದು"

ಕರಿಬಸವಾರ್ಯರು ತಮ್ಮ ಗುರುವಿನ ಪರಂಪರೆಯನ್ನು ತಮ್ಮ ಕೃತಿಯಾದ 'ಶ್ರೀ ಕುಮಾರ ವಿಜಯ ವಿಳಾಸಂ'ದಲ್ಲಿ ಸ್ಪಷ್ಟವಾಗಿ ವಿವರಣೆ ನೀಡಿದ್ದಾರೆ. ಗುರುಪರಂಪರೆಯ ಮೂಲ ಪುರುಷ "ಗುರುಲಿಂಗ ಮುನಿ" ಇವರು ಮೂಲತಃ ಆಂದ್ರ ಪ್ರದೇಶದ "ಧಾಮಗುಂಡ" ಎಂಬ ಕ್ಷೇತ್ರದವರು ಎಂದು ತಿಳಿದುಬರುತ್ತದೆ.

ಕ್ರಿ.ಶ. ೧೭೨೪ರಿಂದ ೧೭೪೮ರವರೆಗಿನ ಕಾಲಘಟ್ಟದಲ್ಲಿ ಹೈದ್ರಾಬಾದನಲ್ಲಿ ನಿಜಾಂ-ಉಲ್- ಮುಲ್ಕ- ಅಸಫ್ ಜಾಹಿ ಎಂಬ ನಿಜಾಂ ದೊರೆ ಆಳುತ್ತಿದ್ದನು. ಇವನು ಕಟ್ಟಾ ಸುನ್ನಿ ಪಂಥಿಯ ಮುಸಲ್ಮಾನನಾಗಿದ್ದ. ಇಸ್ಲಾಂ ಧಾರ್ಮಿಕ ಪ್ರಭುತ್ವದ ಸರಕಾರವನ್ನೂ ನಡೆಸುವ ಈತನ ಕಾಲದಲ್ಲಿ ಹಿಂದೂಗಳನ್ನು ಮತಾಂತರಿಸಲು ಅನೇಕ ದೌರ್ಜನ್ಯಗಳು ನಡೆದವು. ಅಲ್ಲದೆ, ವಿವಾಹ, ಅಧಿಕಾರ, ಜಾಗಿರು, ಜಮೀನು ವೊದಲಾದವುಗಳ ಬಂಧನದಿಂದ ಹಿಂದೂಗಳ ಆಸ್ತಿ ಪಾಸ್ತಿಗಳನ್ನು ವಶಪಡಿಸಿಕೊಳ್ಳಲಾಗುತ್ತಿತ್ತು. ಇಂಥ ಅಧಿಕಾರ ಭ್ರಷ್ಟತೆ ಮತ್ತು ಅದಕ್ಷತೆಯ ಆಡಳಿತದಿಂದ ರೋಸಿ ಹೋದ ಹಿಂದೂಗಳು ದಂಗೆ ಎದ್ದರು. ಕೆಲವರು ಅವರ ಉಪಟಳ ತಾಳಲಾರದೇ ತಮ್ಮ ಮೂಲ ನೆಲಯನ್ನು ಬಿಟ್ಟು ಬೇರೆ ಬೇರೆ ಕಡೆ ಹೋಗಿ ವಾಸಿಸತೊಡಗಿದರು. ಇಂಥ ಸಂದರ್ಭದಲ್ಲಿಯೇ ಆಂಧ್ರಪ್ರದೇಶದ ಸದಾಶಿವಪೇಟ ಹತ್ತಿರದ ಗ್ರಾಮದ ರೈತನಾದ ವೀರ ಸಂಗ್ರಾಮ ವಿಜಯೇಂದ್ರನೆಂಬುವವನು ನಿಜಾಂ ಅರಸರ ದುರಾಡಳಿತಕ್ಕೆ ಬೇಸತ್ತು ತನ್ನ ಮೂಲ ನೆಲೆಯನ್ನು ಬಿಟ್ಟು ಕರ್ನಾಟಕದ ಕಡೆಗೆ ಬಂದನು. ಅಂದಿನ ಬೀದರ ಜಿಲ್ಲೆಯ ಚಿಟಗುಪ್ಪಾ ತಾಲ್ಲೂಕಿನ ಸಮೀಪದ ಅರಣ್ಯದಲ್ಲಿ ಬಂದು ನೆಲೆಸಿದನು. ಈ ಪ್ರದೇಶವನ್ನು 'ದೇವಗಿರಿ' ಎಂಬ ಹೆಸರಿನಿಂದ ಕರೆಯಲಾಗುತ್ತದೆ.

ವೀರ ಸಂಗ್ರಾಮನು ದೇವಗಿರಿಯ ಬೆಟ್ಟದ ಮದ್ಯಭಾಗದಲ್ಲಿ ಅಲೆದಾಡುತ್ತಿರುವಾಗ ಒಂದು ದೇವಿ ಮಂದಿರ ಕಾಣಿಸಿಕೊಂಡಿತು. ದೈವಿ ಆರಾಧಕನಾದ ಸಂಗ್ರಾಮನು ವಾಸಿಸಲು ಇದೇ ಪ್ರಶಸ್ಥ ಸ್ಥಳವೆಂದು ಬಯಸಿ ಅಲ್ಲಿಯೇ ನೆಲೆಯೂರಿದನು. ದಿನಾಲು ದೇವಿಯ ಪೂಜೆಮಾಡಿ ತನ್ನ ಕಾರ್ಯಕ್ಕೆ ಅಣಿಯಾಗುತ್ತಿದ್ದನು. ಮುಸ್ಲಿಂ ಅರಸರ ವಿರುದ್ಧ ದಂಗೆಯೇಳುವುದು, ಹಿಂದೂಗಳ ಸಂಘಟನೆ ಮಾಡುವುದು ಅವನ ಕೆಲಸವಾಗಿತ್ತು. ಹೀಗಿರಲು ಕೆಲವೇ ದಿನಗಳಲ್ಲಿ ಅವನ ಸಂಘಟನೆಗೆ ಒಂದು ಶಕ್ತಿ ಬಂತು. ದೇವಿ ಪೂಜಾ ಫಲವೋ ಎಂಬಂತೆ ವೀರಸಂಗ್ರಾಮನು ೧೦೫ಗ್ರಾಮಗಳ ಅಧಿಪತಿಯಾದನು. ಇದನ್ನು ಕರಿಬಸವಾರ್ಯರು ತಮ್ಮ ಕಾವ್ಯದಲ್ಲಿ ಹೀಗೆ

ಉಲ್ಲೇಖಿಸಿದ್ದಾರೆ. "ದೇವಗಿರಿಧಾಮನುದ್ಯದ್ಬಾಹುದಂಡಂ ಪ್ರಜಾಪತಿ ನಿಧಿ ಜೀತ್ವರಂ ಪಂಚಾಶತ ಗ್ರಾಮಾಧಿಪತಿ ವೀರಸಂಗ್ರಾಮ ವಿಜೆಯೇಂದ್ರ ೧೦೫ ಗ್ರಾಮಗಳ ಅಧಿಪತಿಯಾಗಿ ವೈಭವದಿಂದ ಇರುತ್ತಿರಲು ತನ್ನ ಮನೆಯ ಗುರುಗಳನ್ನು ತಾನಿದ್ದ ಪ್ರದೇಶಕ್ಕೆ ಕರೆಯಿಸಿಕೊಳ್ಳಬೇಕೆಂದು ಇಚ್ಛಿಸಿದನು. ಧಾಮಗುಂಡಕ್ಕೆ ಹೋಗಿ ಗುರುಗಳನ್ನು ಕರೆದು ಕೊಂಡು ಅತ್ಯಂತ ಭಯ ಭಕ್ತಿಯಿಂದ ಗುರುವಿನ ಆದರಾತಿಥ್ಯ ಮಾಡಿದನು.

ಶಿಷ್ಯನ ಕೋರಿಕೆಯ ಮೇರೆಗೆ ಕೆಲವು ದಿನಗಳು ಇದ್ದು ಹೋಗಲು ಬಂದ ಗುರುಗಳಿಗೆ ದೇವಗಿರಿ ಬೆಟ್ಟದ ಪ್ರಶಸ್ಥವಾದ ಸ್ಥಳ, ದೇವಿ ಮಂದಿರ ನಿರ್ಜನವಾದ ಪ್ರದೇಶ ಅವರ ಮನಸನ್ನು ಕಟ್ಟಿಹಾಕಿತು. ಅದರ ಜೊತೆಗೆ ಸಂಗ್ರಾಮನು ಗುರುವಿನ ಸೇವಾ ಭಾಗ್ಯಕ್ಕೆ ಹಂಬಲಿಸುತ್ತಿದ್ದ. ಅಲ್ಲದೆ ಅಲ್ಲಿಯ ಜನರಿಗೆ ಧರ್ಮದ ಜಾಗೃತಿ ಮೂಡಿಸಬೇಕಿತ್ತು. ಈ ಎಲ್ಲ ಕಾರಣಗಳಿಂದ ಗುರುಲಿಂಗ ಮುನಿಗಳು ದೇವಗಿರಿಯಲ್ಲಿಯೇ ನೆಲೆಸಿದರು. ಸಂಗ್ರಾಮನು ತಾನಿದ್ದ ಸ್ಥಳದಲ್ಲಿಯೇ ಗುರುಗಳಿಗಾಗಿ ಒಂದು ಮಠವನ್ನೇ ಕಟ್ಟಿಸಿಕೊಟ್ಟನು. ಬಳಿಕ ಕೆಲವು ದಿನಗಳು ಕಳೆಯಲು ವೀರಸಂಗ್ರಾಮನ ಕನಸಿನಲ್ಲಿ ದೇವಿಯು ಪ್ರತ್ಯಕ್ಷಳಾಗಿ ದೇವಗಿರಿ ಬೆಟ್ಟದ ಕೆಳಗೆ ಹರಿಯುತ್ತಿರುವ ಕೊಳದ ಹತ್ತಿರದ ಹೊಲವೊಂದರಲ್ಲಿ " ನನ್ನ ಸ್ವಾಮಿಯಿದ್ದಾನೆ ನನ್ನ ಸ್ವಾಮಿಯ ಸನೀಹದೋಳ್ಪಿರಲಿಚ್ಚಿಸಿದ್ದೇನೆ ------- ವಿಧಿವತ್ ಗುರುವಾಜ್ಞೆಯಿಂ ಕುಳ್ಳಿರಿಸು ಎನಲ್" ಎಚ್ಚರವಾಗಿ ಸಂತೋಷದಿಂದ ಗುರುಗಳನ್ನು ಕಂಡು ತಾನು ಕಂಡ ಕನಸಿನ ವಿಚಾರವನ್ನು ಹೇಳಿದನು. ಗುರುಶಿಷ್ಯರು ಹೊಲದೊಳಗೆ ಹೋಗಿ ನೋಡಲು ಅಲ್ಲಿ ಒಂದು ದಿವ್ಯವಾದ ಶಿಲೆಯಿತ್ತು. ಗುರುಗಳು ದೇವಿಯ ಆಜ್ಞೆಯಾಗಿದೆ ಎಂದು ಭಕ್ತಿಯಿಂದ ಪೂಜಿಸಿ ಶ್ರೀ ಶಕೆ ೧೭೪೧ಪ್ರಮಾಧಿನಾಮ ಸಂವತ್ಸರ ಕಾರ್ತಿಕ ಬಹುಳ ಪಾಡ್ಯದ ದಿನದಂದು ಮೂರ್ತಿಯನ್ನು ಸ್ಥಾಪಿಸಿದರು. ಆ ದಿವ್ಯ ಮೂರ್ತಿಯೇ ಇಂದಿನ ಪ್ರಸಿದ್ಧ ಚಾಂಗ್ಲೇರಿಯ ವೀರಭದ್ರದೇವರು.

ಬಳಿಕ ಹಲುವು ದಿನಗಳು ಕಳೆದ ಮೇಲೆ ಗುರುಗಳ ಆಶೆಯ ಮೇರೆಗೆ "ದೇವಗಿರಿಯ ದುರ್ಗ ಸಾಮಿಪ್ಯದೊಳ್ 'ವೀರಭದ್ರ ಪುರ' ವೆಂಬ ಊರನ್ನು ರಚಿಸಿದನು . ಆ ಊರಿನ ಮಧ್ಯದಲ್ಲಿ ಒಂದು ಮಠವನ್ನು ಸ್ಥಾಪಿಸಿ ಗುರುಗಳಿಗೆ "ಸಕಳೋಪಚಾರಂಗಳಿಂ ಸಂತುಷ್ಟಪಡಿಸಿ ಸದ್ಭಕ್ತಿಯಿಂ ------ ಭೂಮಿಯ ಪಾಲಿಸುತೆ ಕೀರ್ತಿವನಿತಾಪರ ಪ್ರೀಯನೆನಿಸಿದನು ವಿಜಯೇಂದ್ರ, ಅಲ್ಲದೇ ತಾನು ಸಹ ದೇವಗಿರಿಯನ್ನು ಬಿಟ್ಟು ವೀರಭದ್ರಪುರಕ್ಕೆ ಬಂದನು. ಅಂದಿನ ಈ ವೀರಭದ್ರಪುರವೇ ಇಂದಿನ ಬೀದರ ಜಿಲ್ಲೆಯ ಚಾಂಗ್ಲೇರಿಗಳಲ್ಲಿ ವೀರಸಂಗ್ರಾಮನ ಮನೆ ಮತ್ತು ಅದರ ಪಕ್ಕದಲ್ಲಿ ಗುರುವಿಗಾಗಿ ಕಟ್ಟಿದ ಮಠವು ಇಂದಿಗೂ ನೋಡಲು ಸಿಗುತ್ತವೆ.

ಗುರುಲಿಂಗ ಮುನಿಗಳ ತರುವಾಯ ಈ ಪೀಠ ಪರಂಪರೆಯ ಉತ್ತರಾಧಿಕಾರಿಯಾಗಿ ಬಂದವರೇ "ಚೆನ್ನವೀರಾಖ್ಯರು" ಇವರೇ ಕವಿ ಕರಿಬಸವಾರ್ಯರ ಗುರುಗಳು. ತಮ್ಮ ಕಾವ್ಯದಲ್ಲಿ ಗುರುಗಳಾದ ಚನ್ನವೀರಾಖ್ಯರನ್ನು ಸ್ತುತಿಸಿದ್ದಾರೆ.

ಶ್ರೀ ವೀರಭದ್ರ ಪುರದೊಳ್ಪಳಿಕ ಶೋಭಿಸುವ
ದೇವ ಗುರುಲಿಂಗ ಯತಿಪುಂಗವನ ಹಸ್ತರಾ
ಜೀವಗರ್ಭಾಬ್ಧಿ ಚಿಂತಾಮಣಿಯೆನಿಸಿ ಜನಿಸಿ ಮೆರೆದನಾರ್ಯೋತ್ತಮಾಖ್ಯಂ
ಪಾವನ ಚರಿತ್ರನನುಪಮ ಸುಜನಮಿತ್ರನಾ
ರ್ಯ್ಯವರಧ್ಯಾನ ಪರತಂತ್ರನಪಗತ ಭಾವ
ಭಾವನುರಚರ ಚಕ್ರವರ್ತಿ ದಶದಿಗ್ಭರಿತ ಕೀರ್ತಿ ಘನಮೂರ್ತಿಯೆನಲು

---------ಮಹೇಶ್ವರ ಮತೋತ್ಸುಖ್ಯನ ಸಮಾನ ಲಿಂಗೈಕ್ಯನುತ್ತಮ
ಚೆನ್ನವೀರಾಖ್ಯನು

ಎಂದು ಗುರುವನ್ನು ಸ್ತುತಿಸಿದ್ದಾರೆ. ಚೆನ್ನವೀರಾಖ್ಯರು ಸೂಸೂತ್ರವಾಗಿ ಮಠದ ಅಧಿಕಾರವನ್ನು ವಹಿಸಿಕೊಂಡು ಅಂದಿನ ಕಾಲದಲ್ಲಿ ಮಠದಲ್ಲಿಯೇ ಶಾಲೆಯೊಂದನ್ನು ತೆರೆದು ಕನ್ನಡ ಸಂಸ್ಕೃತ ಭಾಷೆಗಳ ಮತ್ತು ವೀರಶೈವ ಸಾಹಿತ್ಯ ಮತ್ತು ಧರ್ಮವನ್ನು ಉಳಿಸಿ ಬೆಳೆಸಿದರು.

ಕೆಲದಿನಗಳ ಕಾಲ ಇವರು ವೀರಭದ್ರಪುರದಲ್ಲಿಯೇ ನೆಲೆಸಿ ಆನಂತರ ವೀರಸಂಗ್ರಾಮನ ವಂಶಜರ ಪ್ರಾರ್ಥನೆಯ ಮೇರೆಗೆ ಚೆನ್ನವೀರಾಖ್ಯರು ಚಿಟಗುಪ್ಪೆಯಲ್ಲಿ ಮಠವನ್ನು ಸ್ಥಾಪಿಸಿದರು. ಈ ಮಠವು ಈಗಲೂ ವಿರಾಜಮಾನವಾಗಿ ತೋರುತ್ತಲಿದೆ. ಈ ಮಠಕ್ಕೆ ಹಿರೇಮಠ, ದೇಶಮುಖರ ಮಠ, ಗಚ್ಚಿನ ಮಠ, ಅಯ್ಯಪ್ಪಸ್ವಾಮಿಮಠ ವೆಂದು ಕರೆಯಲಾಗುತ್ತದೆ.

ಇಂಥ ಪ್ರಾಚೀನ ಪರಂಪರೆಯ ಮಠದ ಇಂದಿನ ಶ್ರೀಗಳಾದ ಗುರುಲಿಂಗ ಶಿವಾಚಾರ್ಯರು ಮಠದ ಶ್ರೇಯೋಭಿವೃದ್ಧಿಗೆ ಹಗಲಿರಳು ಶ್ರಮಿಸುತ್ತಲಿದ್ದಾರೆ. ಪುರಾಣ ಪ್ರವಚನ, ಧರ್ಮೋಪದೇಶಗಳನ್ನು ಸದಾಕಾಲ ಈ ಮಠದಲ್ಲಿ ನಡೆಯುತ್ತಿರುತ್ತವೆ. ಮಠದ ವತಿಯಿಂದ ಶಾಲಾ ಕಾಲೇಜುಗಳನ್ನು ತೆರೆದು ಶಿಕ್ಷಣ ಕ್ಷೇತ್ರದ ಸೇವೆ ಮಾಡುತ್ತಲಿರುವುದು ಶ್ಲಾಘನೀಯವಾಗಿದೆ.

ಸಾಹಿತ್ತಿಕ ಸಾಧನೆ: ಕರಿಬಸವಾರ್ಯರು ತ್ರಿಭಾಷಾ ಕವಿಗಳು ಕನ್ನಡ ಸಂಸ್ಕೃತ ಮತ್ತು ತೆಲಗು ಭಾಷೆಗಳಲ್ಲಿ ಸಾಹಿತ್ಯವನ್ನು ರಚಿಸಿದ್ದಾರೆ. ಅವರ ಪ್ರತಿಭೆ ತ್ರಿಮುಖ

ಕವಿ, ಅನುಭಾವಿ ಹಾಗೂ ಜನಪದ ಕವಿಗಳಾಗಿ ಕನ್ನಡ ಸಾರಸ್ವತ ಲೋಕಕ್ಕೆ ಅನುಪಮ ಕೊಡುಗೆ ನೀಡಿದ್ದಾರೆ. ದೈವದತ್ತ ಪ್ರತಿಭೆ ಹಾಗೂ ಆಳವಾದ ಅಧ್ಯಯನದ ಫಲವಾಗಿ ಅದರಿಂದ ವಿವಿಧ ಪ್ರಕಾರದ ಕೃತಿಗಳು ರಚನೆಗೊಂಡಿವೆ. ತಮ್ಮ ಕಾಲದ ಹಾಗೂ ತಮಗಿಂತ ಪೂರ್ವದಲ್ಲಿದ್ದ ಕವಿಗಳು ಪ್ರಚಲಿತಗೊಳಿಸಿರುವ ಎಲ್ಲ ಛಂದೋರೂಪಗಳನ್ನು ಬಳಸಿಕೊಂಡು ಕೃತಿಗಳನ್ನು ರಚಿಸಿದ್ದಾರೆ. ದ್ವಿಪದಿ, ತ್ರಿಪದಿ, ಷಟ್ಪದಿ, ಕಂದ, ಅಷ್ಟಕ, ವೃತ್ತ, ಶತಕ, ರಗಳೆ, ಸ್ವರವಚನ ಮೊದಲಾದ ಬಂಧಗಳನ್ನು ತಮ್ಮ ವಿದ್ವತ್ಪೂರ್ಣ ಪಾಂಡಿತ್ಯಕ್ಕೆ ದುಡಿಸಿಕೊಂಡಿದ್ದಾರೆ. ಕರಿಬಸವಾರ್ಯರು ಬರೆದ ಸಮಗ್ರ ಸಾಹಿತ್ಯವನ್ನು ಈ ರೀತಿಯಾಗಿ ವಿಂಗಡಿಸಲಾಗಿದೆ.

೧) ಮಹಾಕಾವ್ಯ : ಶ್ರೀ ಕುಮಾರ ವಿಜಯ ವಿಳಾಸಂ

೨) ಸ್ವರವಚನಗಳು:

೩) ಸಂಕೀರ್ಣ ಸಾಹಿತ್ಯ

೧) ಸ್ತೋತ್ರಗಳು :-

೧) ಶಂಭುವಿನ ಕಂದ ಸ್ತೋತ್ರ ೨)ಕವೀಂದ್ರಸ್ತೋತ್ರ

೩) ಶಿವಪಾದಸ್ತೋತ್ರ ೪) ಶಿವಪ್ರಾರ್ಥನಾ ಶಾರದಾ ಸ್ತೋತ್ರ

೫) ರುದ್ರಮುನೀಂದ್ರ ಕಂದ ಸ್ತೋತ್ರ ೬) ಪಾಹಿಮಾಂ ಬಸವಸ್ತೋತ್ರ

೭) ಭೀಮಾಶಂಕರ ಸ್ತೋತ್ರ ೮) ಪಾದಸ್ತೋತ್ರ

೯) ಲಿಂಗಸ್ತೋತ್ರ ೧೦) ಬಸವರಾಜ ಸ್ತೋತ್ರ

೨) ಅಷ್ಟಕಗಳು :-

೧) ಪಾದಾಷ್ಟಕ ೨) ದೇವಿ ಅಷ್ಟಕ ೩) ಶಿವಾಷ್ಟಕ

೪) ಶ್ರೀ ಖಟ್ವಾಂಗ ದೇವರಾಷ್ಟಕ ೫) ಮಹಾದೇವ ಅಷ್ಟಕ

೬) ಕರಿಬಸವೇಶ್ವರ ಅಷ್ಟಕ ೭) ಮಹಾಲಿಂಗಾಷ್ಟಕ

೮) ಬಸವರಾಜ ದಯಾನಿಧಿ ಅಷ್ಟಕ

೯) ಬಸವ ಮಹಿಮಾಷ್ಟಕ ೧೦) ಬಸವಾಷ್ಟಕ

೩) ಭೋಗಲಿಂಗೇಶ್ವರ ಶತಕ

೪) ಪಾರ್ವತಿ ಪರಮೇಶ್ವರರ ಲಗ್ನದ ಪದಗಳು

೫) ಸಿರಿಯಾಳಾತ್ಮಜ ಚಿಲ್ಲಾಳನ ಪದಗಳು

೬) ಬಸವೇಶ್ವರ ಸ್ತೋತ್ರದ ಪರಿವರ್ಧಿನಿ

೭) ಬಸವೇಶ್ವರ ರಘಟಾಬಂಧ

೮) ಗುಣಸಂವಾದ ಭೋಧೆ

೯) ಸ್ತೋತ್ರರತ್ನಾಕರ ಸ್ತೋತ್ರಪರ ಗೀತೆಗಳು

೧೦) ನೀತಿರತ್ನಾಕರ – ನೀತಿಪರ ಗೀತೆಗಳು

೧೧) ಸಮುದಾ ಮಥನಾ ಲೀಲಾ

೧೨) ಅಮ್ಮವ್ವೆಯ ಕಥೆ.

ಶ್ರೀ ಕರಿಬಸವಾರ್ಯರು ಬರೆದ ಅನುಪಲಬ್ಧ ಕೃತಿಗಳು

೧) ಭೋಗಲಿಂಗೇಶ್ವರ ಪಾರಿಜಾತ ೨) ಪುಣ್ಯಕೋಟಿ ಗಾಯತ್ರಿ ಕಥೆ

೩) ಶಿವನಿಂದಕರ ಶಿಕ್ಷಿಸುವ ಪದ ೪) ಗೀತ ಪಂಚವಿಶಂತಿ

೫) ಶಿವಗಣ ಸಂಗೀತ ೬) ಚತುಷ್ಕಿ ಪಂಚವಿಶಂತಿ ೭) ಗಣರಗಳೆ

೮) ಶಿವರಾತ್ರಿ ಕಥೆ ೯) ರಾಜೇಶ್ವರ ಪುರಾಣ ೧೦) ಚೋಳರಾಜನ ಕಥೆ

೧೧) ಹರನಾಮದ ಪರಾಕ್ರಮ

ಹೀಗೆ ದೊರೆತಿರುವ ಒಟ್ಟು ಕೃತಿಗಳ ಆಧಾರದಿಂದ ಕರಿಬಸವಾರ್ಯರ ಕೃತಿಗಳನ್ನು ಉಲ್ಲೇಖಿಸಬಹುದು. ಇವುಗಳ ನಿರ್ದಿಷ್ಟ ಸಂಖ್ಯೆ ಹಾಗೂ ಹೆಸರುಗಳನ್ನು ಕವಿಯು ಎಲ್ಲಿಯೂ ಉಲ್ಲೇಖಿಸಿಲ್ಲ. ವೈವಿಧ್ಯಮಯವಾದ ಇವರ ಸಾಹಿತ್ಯವು ಕರ್ನಾಟಕ, ಆಂಧ್ರ, ಮಹಾರಾಷ್ಟ್ರ ಮೊದಲಾದ ಕಡೆಗಳಲ್ಲಿ ಹರಿದು ಹಂಚಿ ಹೋಗಿವೆ. ಇವರು ಬರೆದ ಪಾಹಿಮಾಂ ಶರಣು ಬಸವ ಎಂಬ ಬಸವಸ್ತುತಿ ಗೀತೆಯು ಮಹಾರಾಷ್ಟ್ರದ ಸೊಲ್ಲಾಪುರ ಜಿಲ್ಲೆಯ ಅಕ್ಕಲಕೋಟ ತಾಲೂಕಿನ ಮೈಂದರ್ಗಿ ಗ್ರಾಮದ ಶಿವಾನುಭವ ಸತ್ಸಂಗದಿಂದ ಮರಾಠಿ ಲಿಪಿಯಲ್ಲಿ ಪ್ರಕಟಿಸಲಾಗಿದೆ. ಅದು ಅವರ ಜನಪ್ರೀಯತೆಗೆ ಸಾಕ್ಷಿಯಾಗಿದೆ.

ಕರಿಬಸವಾರ್ಯರ **"ಶ್ರೀ ಕುಮಾರ ವಿಜಯ ವಿಳಾಸಂ"** ಮಹಾಕಾವ್ಯವು ಗುಲಬರ್ಗಾ

ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಿಂದ ೧೯೮೭ರಲ್ಲಿ ಪ್ರಕಟಣೆ ಕಂಡಿದೆ. ಇದನ್ನು ಡಾ॥ ಎಂ.ಜಿ.ಬಿರಾದಾರ, ಡಾ॥ ಎಮ್.ಎಸ್.ಲಠ್ಠೆ ಹಾಗೂ ಡಾ॥ ಸಂಗಮೇಶ ಸವದತ್ತಿಮಠ ಅವರು ಸಂಪಾದಿಸಿದ್ದಾರೆ.

ಇವರು ಬರೆದ ಸ್ವರವಚನಗಳು **"ಐನೆಲೆ ಕರಿಬಸವಾರ್ಯರ ಸ್ವರವಚನಾಂಜಲಿ"** ಎಂಬ ಹೆಸರಿನಿಂದ ಮಹಾದೇವಿ ಆರ್. ಹಿರೇಮಠ ರವರು ೨೫೦ ಕ್ಕಿಂತಲೂ ಹೆಚ್ಚು ಸ್ವರವಚನಗಳನ್ನು ಪ್ರಕಟಿಸಿದ್ದಾರೆ. ಅಲ್ಲದೆ ಪ್ರೊ ಶಿವರಾಜ ದೇವಪ್ಪ ಅವರ ಸಂಪಾದಕತ್ವದಲ್ಲಿಯೂ ಒಂದು ಸ್ವರವಚನಗಳ ಸಂಗ್ರಹ ಪ್ರಕಟಣೆ ಕಂಡಿದೆ.

ಕರಿಬಸವಾರ್ಯರು ಬರೆದ ಸ್ತೋತ್ರ ಸಾಹಿತ್ಯಗಳನ್ನು ಒಂದೆಡೆ ಕಲೆಹಾಕಿ, 'ಸ್ತೋತ್ರ ರತ್ನಾಕರ' ಎಂಬ ಶೀರ್ಷಿಕೆಯಡಿಯಲ್ಲಿ ಈ ಕೃತಿಯನ್ನು ಪ್ರಕಟಿಸಲಾಗುತ್ತಿದೆ. ಸಂಕೀರ್ಣ ಸಾಹಿತ್ಯ ಭಾಗದಲ್ಲಿ ಬರೆದ ಎಲ್ಲ ಈ ಕೃತಿಗಳು ಸೇರಿಕೊಂಡಿವೆ.

೧) **ಶ್ರೀ ಕುಮಾರ ವಿಜಯ ವಿಳಾಸಂ** : ಕರಿಬಸವಾರ್ಯರು ರಚಿಸಿದ ಕೃತಿಗಳಲ್ಲಿಯೇ ಅತ್ಯಂತ ಶ್ರೇಷ್ಠವಾದ ಬ್ರಹತ್ ಮತ್ತು ಮಹತ್ ಕಾವ್ಯವೆಂದರೆ, **'ಶ್ರೀ ಕುಮಾರ ವಿಜಯ ವಿಳಾಸಂ'** ಈ ಕಾವ್ಯವನ್ನು ಕ್ರಿ. ಶ. ೧೮೨೨ರಲ್ಲಿ ರಚನೆ ಮಾಡಿದ್ದಾರೆ. ಕವಿಭಾವ ಪರಿಪಕ್ವಗೊಂಡ ಹಂತದಲ್ಲಿ ರಚಿತವಾದ ಕೃತಿ ಇದಾಗಿದೆ. ಈ ಕಾವ್ಯಕ್ಕೆ ಮೂಲ ಆಕರವು ಸಂಸ್ಕೃತದ ಅಷ್ಟಾದಶ ಮಹಾಪುರಾಣಗಳಲ್ಲೊಂದಾದ 'ಸ್ಕಂದಪುರಾಣ' ಅದರಲ್ಲಿಯ 'ಶಂಕರ ಸಂಹಿತೆ'ಯ ಶಿವರಹಸ್ಯ ಖಾಂಡವನ್ನು ಆಧರಿಸಿದ್ದಾಗಿದೆ. ಕರಿಬಸವಾರ್ಯರು ಇದನ್ನು ಕನ್ನಡಕ್ಕೆ ತರುವಾಗ ೨೫ ಪ್ರಕರಣಗಳ ೩೫೮೩ ವಾರ್ಧಕ ಷಟ್ಪದಿಯಲ್ಲಿ ಸಂಗ್ರಹಾತ್ಮಕವಾಗಿ ಹಿಡಿದಿಟ್ಟಿದ್ದಾರೆ. ಕಥಾವಸ್ತುವನ್ನು ಮೂಲದಲ್ಲಿರುವಂತೆ ಯಥಾವತ್ತಾಗಿ ಅನುಸರಿಸದೇ ಔಚಿತ್ಯಪೂರ್ಣವಾಗಿ ತಮ್ಮ ಸ್ವಂತಿಕೆಯೊಂದಿಗೆ ಕನ್ನಡಕ್ಕೆ ತಂದಿದ್ದಾರೆ. ವಸ್ತುವಿನ ನಿರ್ಮಾಣದ ಬಗ್ಗೆ ಸ್ವಂತಿಕೆ ಇಲ್ಲದಿದ್ದರೂ ವಸ್ತುವಿನ ನಿರೂಪಣೆಯಲ್ಲಿ ಭಾವಾಭಿವ್ಯಕ್ತಿಗೊಳಿಸುವಲ್ಲಿ ಹಾಗೂ ರಸ ಪ್ರಾಚುರ್ಯವನ್ನುಂಟುಮಾಡುವಲ್ಲಿ ಕವಿಯ ಸ್ವಂತಿಕೆ ಇದೆ. ವೀರ, ಭಕ್ತಿ, ಶೃಂಗಾರ ರಸಗಳ ತ್ರಿವೇಣಿ ಸಂಗಮವಾದ ಈ ಕಾವ್ಯದ ಹರವು ವಾರ್ಧಕ ಷಟ್ಪದಿಯಲ್ಲಿದ್ದು , ಕಾವ್ಯಕ್ಕೆ ಗಾಂಭಿರ್ಯವನ್ನು ತಂದುಕೊಟ್ಟಿದೆ.

'ಶ್ರೀ ಕುಮಾರ ವಿಜಯ ವಿಳಾಸಂ' ಕಾವ್ಯ ರಚನೆಗೆ ತೆಲಗಿನ ಕೂಡೂರು ಬಾಲ ಸರಸ್ವತಿ ಬರೆದಿರುವ ಶಿವರಹಸ್ಯ (ಷಣ್ಮುಖವಿಜಯ) ಕೃತಿಯೇ ಮುಖ್ಯವಾಗಿ ಪ್ರೇರಣೆಯನ್ನು ನೀಡಿದೆ ಎಂದು ಕರಿಬಸವಾರ್ಯರು ತಮ್ಮ ಕಾವ್ಯದ ಆರಂಭದಲ್ಲಿ ಹೇಳಿಕೊಂಡಿದ್ದಾರೆ. ಒಮ್ಮೆ ಕವಿಯ ಗುರುಗಳಾದ ಚೆನ್ನವೀರೇಂದ್ರರು ಹಾಗೂ ಸ್ನೇಹಿತರು ಶ್ರೀಶೈಲಕ್ಕೆ ಹೋದಾಗ ಅಲ್ಲಿಯ ಸಾರಂಗಮಠದ ಸಿದ್ದೇಶ್ವರ ಸ್ವಾಮಿಗಳು ಕವಿ

ಕರಿಬಸವಾರ್ಯರನ್ನು ಸದ್ವಿನಯಪೂರ್ವಕವಾಗಿ ಸತ್ಕರಿಸಿ, ಬಾಲಸರಸ್ವತಿಯು ತೆಲಗಿನಲ್ಲಿ ರಚಿಸಿರುವ ಶಿವರಹಸ್ಯ ಕೃತಿಯ ಬಗ್ಗೆ ತಿಳಿಸಿ "ಮಂಜುಳ ಮಹಾಸೇನನ ಕಥಾಕೌತುಕದ ಕೃತಿಯು ಪಳಗನ್ನಡದೊಳು ತಿಳಿಗನ್ನಡದೊಳು ಕವಿಜನರಾರು ಉಸಿರಲಿಲ್ಲಂ ಇಳೆಯೊಳಿದು ಪೊಸತೆನಿಕುಮ್" ಅಂಥ ಕಾವ್ಯವನ್ನು ನೀನು ಕೂಡಾ ರಚಿಸು ಎಂದು ಹೇಳಿದರು. ಸದ್ಧೇಶ್ವರರ ಈ ಮಾತು ಅಂದಿನ ಕಾಲದ ಕನ್ನಡ ಸಾಹಿತ್ಯದಲ್ಲಿರುವ ಕೊರತೆಯನ್ನು ಸೂಚಿಸುವಂತಿತ್ತು. ಕಾರಣ ಕರಿಬಸವಾರ್ಯರು ಕೂಡ ಈ ಕೊರತೆಯನ್ನು ಮನಗಂಡು ಆ ದಿಶೆಯಲ್ಲಿ ಮಹಾದೇವ ಸುತನಾದ ಷಣ್ಮುಖನ ಸುಮಹಿಮಾ ಚಾರಿತ್ರ್ಯವನ್ನು ಮಹಾ ಅದ್ಭುತವಾಗಿ ರಚಿಸಿ ಕನ್ನಡ ಸಾಹಿತ್ಯದಲ್ಲಿರುವ ಕೊರತೆಯನ್ನು ತುಂಬಿದರು. ಈ ಸಾಧನೆ ಸಾರ್ವಕಾಲಿಕ ಮನ್ನಣೆ ಪಡೆಯುವಂಥದಾಗಿದೆ. ತಮ್ಮ ಸಮಕಾಲೀನ ಓದುಗರ, ಸಾಹಿತ್ಯ ಅಭಿಮಾನಿಗಳ ಅವಶ್ಯಕತೆಗಳನ್ನು ಗಮನಿಸಿ, ಪುರಾಣೋಕ್ತ ವಸ್ತುವೊಂದನ್ನು ಜನಪ್ರೀಯ ಪುರಾಣ ಮಾದರಿಯಲ್ಲಿಯೇ ಹೇಳಹೊರಟಿದ್ದು ಸಹೃದಯಿಗಳ ಬಗೆಗಿರುವ ಅವರ ಕಾಳಜಿಯು ವ್ಯಕ್ತವಾಗುತ್ತದೆ.

ಶ್ರೀ ಕುಮಾರ ವಿಜಯ ವಿಳಾಸಂ ಕಾವ್ಯದ ಮುಖ್ಯ ಆಕರ್ಷಣೆಯಂದರೆ, ಸಂಸ್ಕೃತ ಭೂಯಿಷ್ಟವಾದ ಭಾಷೆಯ ಬಳಕೆ, ಇದು ಕೇವಲ ಪಂಡಿತವರ್ಗದವರ ಕೃತಿಯಾಗಿ ನಿಲ್ಲುತ್ತದೆ. ಈ ಕಾವ್ಯವು ಬುದ್ಧಿಜೀವಿಗಳಿಗಾಗಿಯೇ ರಚಿತವಾದುದೆಂದು ಕವಿಗಳು ಕಾವ್ಯದ ಆರಂಭದಲ್ಲಿ ಮತ್ತು ಮುಕ್ತಾಯದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. "ಷಡಾಸ್ಯನ ಸುಮಹಿಮಾ ಚಾರಿತ್ರ್ಯಂ ಮಹಾದ್ಭುತಮೆನೆ ರಚಿಸಿದೆನೀ ಕಾವ್ಯಮತಿ ಭವ್ಯಂ ಪಂಡಿತರ್, ಚತುರರ್ ಸುಜನರಾಲಿಸಿ ಪಾಲಿಸುವದೆಮ್ಮ ಬಾಲಕನು ಪೇಳ್ದನೆಂದು" ಸದ್ವಿನಯ ಪೂರ್ವಕವಾಗಿ ವಿನಂತಿಸಿಕೊಂಡಿದ್ದಾರೆ. " ಭೂತದೋಳ್ ಖಿಲವಿದ್ವಜ್ಜನರು ಪ್ರೀತಿಯಿಂ ಪಠಿಸಿಯಾಲಿಸಿ ಮುಕ್ತರಹರು" ಎಂದು ಲೋಕೋಪಕಾರದ ಮಹಾತ್ವಾಕಾಂಕ್ಷೆಯನ್ನು ಪೂರೈಸಿದ್ದಾರೆ. ಅಲ್ಲಲ್ಲಿ ವ್ಯವಹಾರಿಕ ಶಬ್ದಗಳನ್ನು ಬಳಸಿ ಗ್ರಾಮೀಣ ಸಂಸ್ಕೃತಿಯ ಛಾಯೆಯನ್ನು ತಂದು, ಕನ್ನಡ ಸಂಸ್ಕೃತಗಳೆರಡರ ಮೇಲಿನ ತಮ್ಮ ಪ್ರಭುತ್ವವನ್ನು ಸಾಧಿಸಿ ತೋರಿಸಿದ್ದಾರೆ. ಸಂಸ್ಕೃತ ಸಾಹಿತ್ಯದ ಪರಿಸರದ ಬೆಳಕಿನಲ್ಲಿಯೇ ತಮ್ಮ ಪ್ರತಿಭೆಗೆ ಸಾಣೆ ಹಿಡಿದಿದ್ದಾರೆ.

ಒಟ್ಟಿನಲ್ಲಿ **'ಶ್ರೀ ಕುಮಾರ ವಿಜಯ ವಿಳಾಸಂ'** ಕಾವ್ಯದ ವರ್ಣನೆ, ಕಥಾ ಸಂವಿಧಾನ ಕೌಶಲ್ಯ, ಆಕರ ವಸ್ತು ಪರಿಕಲ್ಪನೆ, ವಸ್ತು ನಿರೂಪಣೆಯಲ್ಲಿ ನಾವಿನ್ಯತೆ, ಸನ್ನಿವೇಶ ಸಂಯೋಜನೆ, ಪಾತ್ರಸೃಷ್ಟಿ, ಅಪಾರವಾದ ನೂತನ ಶಬ್ದ ಸೃಷ್ಟಿ, ಸಂಭಾಷಣೆ, ಆಯಾ ಮಾತಿಗೆ ತಕ್ಕ ಹಾವಭಾವ ಮತ್ತು ಆ ದೃಶ್ಯದ ಹಿನ್ನೆಲೆಯ ಚಿತ್ರಣಗಳಿಂದ ದೃಶ್ಯ, ರೂಪಕವಾಗಿಸಬಲ್ಲ ನಾಟಕೀಯತೆ ಮೊದಲಾದವುಗಳು ಕಾವ್ಯದ ಯಶಸ್ಸಿಗೆ

ಕಾರಣವಾಗಿವೆ. ಸಂಸ್ಕೃತಿಯ ತಿರುಳಾಗಿ ಕನ್ನಡ ನಾಡು ನುಡಿಯನ್ನು ಎತ್ತರಿಸುವ ಕೃತಿಯಾಗಿದ್ದರೂ ಸಹ ಇಂದಿಗೂ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಸುಭದ್ರ ಸ್ಥಾನ ಮಾನ ಮನ್ನಣೆಗಳು ಲಭ್ಯವಾಗದೇ ಇರುವುದು ಒಂದು ಕೊರತೆಯೇ ಕಂಡು ಬರುತ್ತದೆ.

2) ಸ್ವರವಚನಗಳು :- ಶ್ರೀ ಕುಮಾರ ವಿಜಯ ವಿಳಾಸಂ ಮಹಾಕಾವ್ಯ ಬರೆದ ಕರಿಬಸವಾರ್ಯರು ಸ್ವರವಚನ ಸಾಹಿತ್ಯಕ್ಕೆ ಕೊಟ್ಟ ಕೊಡುಗೆ ಅಪಾರವಾದುದು. ಸ್ವರವಚನಗಳ ರಚನೆಯಲ್ಲಿ ಅವರು ಉನ್ನತ ಸಾಲಿನಲ್ಲಿ ನಿಲ್ಲುತ್ತಾರೆ. ಸುಮಾರು ೨೦೦ಕ್ಕಿಂತಲೂ ಹೆಚ್ಚು ಸ್ವರವಚನಗಳು ಬರೆದಿರುವರೆಂದು ಪ್ರತೀತಿ ಇದೆ. ಈಗ ಸದ್ಯ ಪ್ರಕಟವಾದ **'ಐನೆಲೆ ಕರಿಬಸವಾರ್ಯರ ಸ್ವರವಚನಾಂಜಲಿ'** ಎಂಬ ಸಂಪಾದಿತ ಕೃತಿಯಲ್ಲಿ ಸುಮಾರು ೨೫೦ರಷ್ಟು ಸ್ವರವಚನಗಳು ಪ್ರಕಟಣೆ ಕಂಡಿವೆ. ಸ್ವರವಚನಗಳು **'ಐನೆಲೆವಾಸ ಚನ್ನವೀರೇಶ'** ಎಂಬ ಅಂಕಿತವನ್ನಿಟ್ಟು ಬರೆದಿದ್ದಾರೆ. ವಸ್ತು, ಭಾಷೆ, ಕಾವ್ಯ, ಸತ್ವ ತಂತ್ರಗಳ ನಿಟ್ಟಿನಲ್ಲಿ ಪಂಡಿತರನ್ನು ತಲೆದೂಗಿಸುವಂಥವುಗಳಾಗಿವೆ. ಇವರ ಸ್ವರವಚನಗಳಲ್ಲಿ ವೀರಶೈವ ಧರ್ಮದ ತತ್ವಗಳ ಜೊತೆಗೆ ನೀತಿ ನಿರೂಪಣೆಗೆ ಶಾಸ್ತ್ರಬದ್ಧವಾಗಿ ಬಿತ್ತರಿಸಿರುವುದನ್ನು ಕಾಣುತ್ತೇವೆ. ವೀರಶೈವ ಧರ್ಮದ ತಾತ್ವಿಕ ತಳಹದಿಯನ್ನು ಗಟ್ಟಿಗೊಳಿಸಲು ಪ್ರಯತ್ನಿಸಿದ್ದಾರೆ. ತನ್ನದೇ ಆದ ವಿಶಿಷ್ಟ ವಿನ್ಯಾಸವನ್ನೊಳಗೊಂಡು ದೃಷ್ಟಾಂತ ಉಪಮೆ, ಸ್ವಭಾವೋಕ್ತಿ, ಪ್ರತಿಮೆ, ದ್ವಿರುಕ್ತಿ ಆಡು ನುಡಿ ಮೊದಲಾದವುಗಳ ಮೂಲಕ ವಿಷಯಗಳ ಸ್ಪಷ್ಟತೆಯನ್ನು ಪರಿಚಯಿಸುವಂಥವುಗಳಾಗಿವೆ. ಅಲ್ಲಲ್ಲಿ ಸಂಸ್ಕೃತ ಪದಗಳ ಪ್ರಯೋಗವನ್ನು ಕನ್ನಡದ ಆಡುಮಾತಿನ ದಾಟಿಯಲ್ಲಿ ಬಳಸಿರುವುದು ಕರಿಬಸವಾರ್ಯರ ಜಾಣ್ಮೆ ಮತ್ತು ಸ್ವರವಚನಗಳ ವಿಶೇಷತೆಯನ್ನಬಹುದು.

ಕರಿಬಸವಾರ್ಯರ ಈ ಸ್ವರವಚನಗಳಲ್ಲಿ ಆತ್ಮನಿವೇದನೆ, ಸ್ತುತಿ, ಸತಿಪತಿಭಾವ, ಸ್ವಧರ್ಮ ತತ್ವಸಿದ್ಧಾಂತ, ಯೋಗತತ್ವ, ಬೆಡಗು, ಲೋಕನೀತಿ, ಅಂತರಂಗ ಬಹಿರಂಗ ಶುದ್ಧಿ, ಸಂಸಾರ ನಶ್ವರತೆ, ಮಂಗಳಾರತಿ, ಮೊದಲಾದ ವಿಷಯುಗಳು ಅಭಿವ್ಯಕ್ತವಾಗಿರುವುದನ್ನು ಕಾಣಬಹುದು.

ಮಿಥ್ಯ ಭೋಗವನ್ನು ಗಳಿಸಿ ಸತ್ಯ ಮಾರ್ಗವನ್ನು ಬಿಟ್ಟ ಮನದ ಕುರಿತು
ಏನುಕುಖಕಂಡಿ ಮನವೆ ದುರ್ಗುಣದಿ
ಹಾನಿಯಾದ ಅಕಟ ಜಗಕೆ ಬಂದು ॥ ಪ॥

ನಿತ್ಯಮಾಗಿಹ ವಸ್ತುವ ಸಾಧಿಸಿದೆ
ಮಿಥ್ಯ ಭೋಗಗಳಿಗೆಳಸಿ ಬಳಸಿ
ಸತ್ಯ ಮಾರ್ಗವ ಹಿಡಿಯದೆ ದೋಷ ದು
ಷ್ಕೃತ್ಯದೊಳು ಸಿಲುಕುತಲಿ ಬಳಲಿ

ಏಕದೇವೋಪಾಸನೆ ಕುರಿತು ಅಂತ್ಯಂತ ಖಾರವಾಗಿ ಟೀಕಿಸಿದ್ದಾರೆ.

ಛೀ ಛೀ ಹೆಡ್ಡ ನೀ ಎಂತ ಶಿವಭಕ್ತ

ಕ್ರಿಯ್ಯಾ ಬಾಹ್ಯ ದೈವಂಗಳಿಗೇರಗುವೆ
ಕಟ್ಟಿದ ಲಿಂಗವ ನಡಿ ಮಾಡಿ ನೀನು
ನೆಟ್ಟ ಕಲ್ಲಿಗೆ ಹೋಗಿ ಬೀಳುವೆ
ನೆಟ್ಟ ಕಲ್ಲಿದು ನಿನ್ನ ದೈವವೆ

ಹೀಗೆ ಕರಿಬಸವಾರ್ಯರ ಸ್ವರವಚನಗಳು ನೀತಿ ಪಾಠದೊಂದಿಗೆ ರಸಾನಂದ ಮತ್ತು ಆಧ್ಯಾತ್ಮಿಕ ಜ್ಞಾನವನ್ನು ಒದಗಿಸುತ್ತದೆ. ಈ ಸ್ವರವಚನಗಳು ಸಾಧಕನಿಗೆ ಪರಮ ಪ್ರಯೋಜನೆಗಳಾಗವೆ. ಇವುಗಳನ್ನು ಪಠಸಿದ ಸಾಧಕನು ಪುನಿತನಾಗಿ ಅನುಭವೈಕ್ಯವನ್ನು ಪಡೆದುಕೊಂಡು ಪಾವನನಾಗುತ್ತಾನೆ. ಇತರರಿಗೆ ನೋವಾಗದಂತೆ ಬದುಕುವ ಕಲೆಯನ್ನು ಸಾಧಿಸಿಕೊಡುತ್ತವೆ. ಆದ್ದರಿಂದ ಕರಿಬಸವಾರ್ಯರ ಸ್ವರವಚನಗಳು ಮಾನವನ ಬಾಳಿಗೆ ದಾರಿದೀಪಗಳಾಗಿವೆ.

ಸ್ತೋತ್ರರತ್ನಾಕರ :– ಸ್ತೋತ್ರ ಸಾಹಿತ್ಯದ ಇತಿಹಾಸ ತುಂಬಾ ಪ್ರಾಚೀನವಾದುದು. ಇದರ ಮೂಲ ಸಂಸ್ಕೃತ ಸಾಹಿತ್ಯದಲ್ಲಿ ಕಾಣಬಹುದು. ಸಂಸ್ಕೃತ ಕವಿಗಳು ಸ್ತೋತ್ರಕ್ಕೆ ಸಂಬಂಧಿಸಿದ ಪ್ರತ್ಯೇಕವಾದ ಕೃತಿಗಳನ್ನು ಬರೆದಿರುವುದನ್ನು ಕಾಣಬಹುದು. ಅಲ್ಲದೆ ಕೆಲವು ಕವಿಗಳು ಸಾಂಪ್ರದಾಯಕವಾಗಿ ಕಾವ್ಯದ ಆರಂಭದಲ್ಲಿ ಮತ್ತು ಸಂದರ್ಭೋಚಿತವಾಗಿ ಪ್ರಾರ್ಥನಾ ರೂಪದ ಪದ್ಯಗಳನ್ನು ತಮ್ಮ ಕಾವ್ಯ ಕೃತಿಗಳಲ್ಲಿ ಬರೆದಿರುವರು. ಅವರ ಪ್ರಭಾವ ಮತ್ತು ಪ್ರೇರಣೆ ಕನ್ನಡ ಕವಿಗಳ ಮೇಲೂ ಆಗಿದೆ. ಆ ಮಾರ್ಗದಲ್ಲಿ ನಡೆದ ಅನೇಕ ಕನ್ನಡ ಕವಿಗಳೂ ಸಹ ತಮ್ಮ ಕಾವ್ಯದ ಆರಂಭ ಮತ್ತು ಸಂದರ್ಭೋಚಿತವಾಗಿ ಸ್ತೋತ್ರಪದ್ಯಗಳನ್ನು ಬರೆದಿದ್ದಾರೆ. ಭಕ್ತ ಮನವುಳ್ಳರಾದ ಕವಿಗಳಂತೂ ಭಕ್ತಿಯ ಪ್ರಸಂಗ ಬಂದಾಗ ವಿಶೇಷ ವಿಶೇಷವಾಗಿ ಸಾಲು ಸಾಲಾಗಿ ಸ್ತುತಿ ಪದ್ಯಗಳನ್ನು ಬರೆದಿರುವದನ್ನು ಕಾವ್ಯಗಳಲ್ಲಿ ಕಾಣುತ್ತೇವೆ. ಇಂಥ ಪದ್ಯಗಳು ಜನರನ್ನು ಭಕ್ತಿ ಭಾವದಲ್ಲಿ ಬಂಧಿಸಿ ತನ್ಮಯರನ್ನಾಗಿ ಮಾಡುವಲ್ಲಿ ಯಶಸ್ವಿಯಾಗಿವೆ.

ಹನ್ನೆರಡನೆ ಶತಮಾನದ ಶಿವಶರಣರು ತಮ್ಮ ವಚನಗಳಲ್ಲಿ ಸಾಮಾಜಿಕ ಮೌಲ್ಯಗಳನ್ನು, ಮಾನವ ಬಾಳಿನ ಮಹತ್ವವನ್ನು, ವೀರಶೈವ ಧರ್ಮದ ತಾತ್ವಿಕ ವಿಚಾರಗಳನ್ನು ನಿರೂಪಿಸಿದ್ದರೂ ಕೆಲವು ವಚನಗಳಲ್ಲಿ ಇಂಥ ಯಾವ ವಿಚಾರಗಳನ್ನು ಪ್ರಾಸ್ತಾಪಿಸದೆ ಕೇವಲ ದೇವರ ಸ್ತುತಿಯನ್ನು ಮಾಡುವ ರೀತಿಯಲ್ಲಿ ಅನೇಕ ವಚನಗಳನ್ನು ರಚಿಸಿರುವರು. ಅವು ಶುದ್ಧ ಸ್ತೋತ್ರಗಳಂತಿವೆ. ಬಸವಣ್ಣನವರ "ತಂದೆ ನೀನು ತಾಯಿ ನೀನು ಬಂಧು ನೀನು ಬಳಗನೀನು -----" ಎಂಬ ವಚನ

ಉದಾಹರಣೆಯಾಗಿ ನೋಡಬಹುದು. ಹೀಗಾಗಿ ವೀರಶೈವ ಸ್ತೋತ್ರ ಸಾಹಿತ್ಯವನ್ನು ನಾವು ಹನ್ನೆರಡನೆ ಶತಮಾನದಿಂದಲೂ ಗುರುತಿಸಬಹುದು. ಮುಂದೆ ಬಂದ ಅನೇಕ ವೀರಶೈವ ಕವಿಗಳು ದೈವಿ ಕೃಪೆಗಾಗಿ ಹಂಬಲಿಸುವ ಪ್ರಾಂಜಲವಾದ ಭಕ್ತಿಭಾವವನ್ನು ಬಿಂಬಿಸುವ ಸಾಹಿತ್ಯ ಸೃಷ್ಟಿಗೆ ಈ ಸ್ತೋತ್ರಗಳನ್ನೇ ಬಳಸಿಕೊಂಡರು ಸಂಸ್ಕೃತದ ವೃತ್ತಗಳನ್ನು ಮತ್ತು ದೇಶಿ ಛಂದೋಬಂಧಗಳನ್ನು ಬಳಸಿ ಸ್ತೋತ್ರಗಳನ್ನು ಪ್ರತ್ಯೇಕವಾಗಿ ಬರೆಯತೊಡಗಿದರು. ಮತ್ತು ಅಷ್ಟಕ, ಶತಕ, ತಾರಾವಳಿ, ಸ್ವರವಚನ, ತ್ರಿಪದಿ, ಷಟ್ಪದಿಗಳಲ್ಲಿ ಸ್ತುತಿಯನ್ನೆ ವಸ್ತುವನ್ನಾಗಿಸಿಕೊಂಡು ಬರೆಯತೊಡಗಿದರು. ಇಂಥ ಸ್ತೋತ್ರ; ಸಾಹಿತ್ಯಗಳ.

ಆರಂಭದಲ್ಲಿ ಸ್ತುತಿ ಹಾಗೂ ವರ್ಣನೆಗಳಿಗಾಗಿಯೇ ಮೀಸಲು ಎನ್ನುವಂತೆ ಸೃಷ್ಟಿಯಾಗಿರುವುದು ಕಂಡು ಬರುತ್ತದೆ. ಸ್ತೋತ್ರ ಸಾಹಿತ್ಯವು ಕನ್ನಡದಲ್ಲಿ ಹುಲಸಾಗಿ ಶ್ರೇಯಸ್ಸು ವೀರಶೈವ ಕವಿಗಳಿಗೆ ಸಲ್ಲುತ್ತದೆ. ವೀರಶೈವ ಸ್ತೋತ್ರ ಸಾಹಿತ್ಯದ ವಸ್ತು ಶಿವ ಮತ್ತು ಬಸವ ಶಿವನಿಗೆ ಸಂಬಂಧಿಸಿದ ದೇವತೆಗಳ ಕುಟುಂಬ ವರ್ಗ ಮತ್ತು ಬಸವಣ್ಣನಿಗೆ ಸಂಭಂಧಿಸಿದ ಶರಣರ ಮಹಿಮಾತಿಶಯಗಳ ವರ್ಣನೆ, ಅವರು ಮಾಡಿದ ಲೀಲೆ, ಅದ್ಭುತ ಕಾರ್ಯಗಳು ಹಾಗೂ ಶಿವ – ಶರಣರ ಕಾರುಣ್ಯಮಯ ಗುಣಗಳು, ಸ್ತೋತ್ರಗಳಲ್ಲಿ ಕೊಂಡಾಡಲ್ಪಟ್ಟಿರುತ್ತವೆ. ಇಂಥ ಸ್ತೋತ್ರ ಸಾಹಿತ್ಯಕ್ಕೆ ಕರಿಬಸವಾರ್ಯರ ಕೊಡುಗೆಯೂ ಅಪಾರವಾಗಿವೆ.

ಕರಿಬಸವಾರ್ಯರು ಬರೆದ ಅಷ್ಟಕಗಳು, ಸ್ತೋತ್ರಗಳು ಶತಕಗಳು, ಪಾರ್ವತಿ ಪರಮೇಶ್ವರರ ಲಗ್ನದ ಪದಗಳು ಮತ್ತು ಸ್ತುತಿಪರ ಗೀತೆಗಳು ಈ ಸ್ತೋತ್ರ ಸಾಹಿತ್ಯದ ಸಾಲಿಗೆ ಸೇರುತ್ತವೆ. ಅವು ಅವರ ಔಚಿತ್ಯ ಜ್ಞಾನಕ್ಕೂ ಮತ್ತು ಶ್ರೀಮಂತ ಪ್ರತಿಭೆಗೂ ಹಿಡಿದ ಕನ್ನಡಿಯಂತಿವೆ. ಗಾತ್ರದಲ್ಲಿ ಲಘು ವೆನಿಸಿದರೂ ವಸ್ತು ಮತ್ತು ಉದ್ದೇಶದಲ್ಲಿ ಲಘುವೆನ್ನುವಂತಿಲ್ಲ. ಅವೆಲ್ಲವು ಭಗವಂತನ ಕುರಿತಾದ ಕವಿಯ ಉತ್ಕಟ ಭಕ್ತಿಗೆ ವಿದರ್ಶನಗಳಾಗಿವೆ. ಅಲ್ಲದೆ ಕವಿಯ ಅನನ್ಯವಾದ ಶಿವಭಕ್ತಿಗೆ ಸಾಕ್ಷಿಯಾಗಿವೆ. ಕರಿಬಸವಾರ್ಯರ– ಭೋಗಲಿಂಗೇಶ್ವರ ಶತಕವು ೧೩೧ ವೃತ್ತಗಳಿಂದ ಕೂಡಿದ್ದು ತಮ್ಮ ಊರಿನ ಪೂರ್ವಕ್ಕೆ ಇರುವ ಉಮಾಚಲ ಬೆಟ್ಟದಲ್ಲಿ ನೆಲೆ ನಿಂತ ಭೋಗಲಿಂಗೇಶ್ವರನ ಕುರಿತಾಗಿ ಬರೆದ ಶತಕ ಇದಾಗಿದೆ. ಸಂಸ್ಕೃತ ಭೂಯಿಷ್ಟವಾದ ಮಾರ್ಗದಲ್ಲಿ ನಡೆದ ಕರಿಬಸವಾರ್ಯರು ಈ ಶತಕಗಳನ್ನು ಕೇವಲ ಖಾತ ಕರ್ನಾಟಕ ವೃತ್ತಗಳಲ್ಲದೆ. ಮಲ್ಲಿಕಾಮಾಲೆ, ತರಳ, ವನ ಮಂಜರಿ, ಅರ್ಕಮರೀಚಿ, ವಸಂತತಿಲಕ, ಶಾರ್ದೂಳಿನಾಮ ಮೊದಲಾದ ವೃತ್ತಗಳಲ್ಲಿ ಬರೆದಿದ್ದಾರೆ. ಹದಿನೆಂಟು ಪುರಾಣಗಳಲ್ಲಿ ಅಲ್ಲದೆ ಇನ್ನಿತರ ಕಾವ್ಯ ಕೃತಿಗಳಲ್ಲಿ ಉಲ್ಲೇಖವಾಗಿರುವ ಶಿವನ ಲೀಲೆಗಳನ್ನು ಈ ಕೃತಿಯಲ್ಲಿ ವರ್ಣಿಸಿದ್ದಾರೆ.

ಕವಿಗಳು ಪ್ರೌಢ ಭಾಷೆಯ ಉತ್ಕೃಷ್ಟ ಕಾವ್ಯಗಳೊಂದಿಗೆ ಜಾನಪದ ಶೈಲಿಯ ಗೀತೆಗಳನ್ನು ಕೂಡಾ ರಚಿಸಿದ್ದಾರೆ. ಮದುವೆಯ ಸಂದರ್ಭದಲ್ಲಿ ಹಾಡುವ ಸಂಪ್ರದಾಯದ ಹಾಡುಗಳ ಮಾದರಿಯಲ್ಲಿ ಇಪ್ಪತ್ತು ಹಾಡುಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಹದಿನಾರು ಹಾಡುಗಳು ಮಾತ್ರ ದೊರಕಿವೆ. ಶಿವ ಮತ್ತು ಪಾರ್ವತಿಯನ್ನು ವಧು- ವರರನ್ನಾಗಿಸಿ ಹಾಡುವ ಈ ಪದಗಳು ಹಾಡುತ್ತ ಹೋದರೆ ಮದುವೆಯ ಸನ್ನಿವೇಶವನ್ನೇ ಕಣ್ಣ ಮುಂದೆ ಕಟ್ಟುವಂತಿವೆ.

ಒರಳು ಕಲ್ಲು ಪೂಜಿಸುವ, ಬೀಗರನ್ನು ಎದುರುಗೊಳ್ಳವುದು, ಪಾರ್ವತಿ ಪರಮೇಶ್ವರರರಿಗೆ ಎಣ್ಣೆ ಹಚ್ಚುವುದು, ಸುಮಂಗಲಿಯರು ಪಾರ್ವತಿಯನ್ನು ಹಸೆಮಣೆಗೆ ಕರೆ ತರುವದು, ಶಾಶಿಹಾಸಿಗೆ ಹಾಕಿ ವಧುವರರನ್ನು ಹಸೆಮಣೆಗೆ ತರುವುದು. ಸತಿಪತಿಗೆ ಹೆಸರು ಕೇಳುವುದು, ಧಾರೆಯೆರೆಯುವದು, ಇತ್ಯಾದಿ ಸನ್ನಿವೇಶಗಳಿಗೆ ತಕ್ಕಂತೆ ಒಂದೊಂದು ಪದ್ಯವನ್ನು ರಚಿಸಿದ್ದಾರೆ. ಪದ್ಯಗಳ ಅಂತರಂಗ ಶಿವಪಾರ್ವತಿಯರ ಸ್ತೋತ್ರರೂಪವೇ ಆಗಿವೆ, ಸಂಪ್ರದಾಯದ ಹಾಡುಗಳಾದರೂ ಅವುಗಳಲ್ಲಿ ಆಧ್ಯಾತ್ಮದ ಹೊಳಹು ತಾತ್ವಿಕ ವಿಚಾರ ತುಂಬಿಕೊಂಡಿದೆ. ಇವು ಕರಿಬಸವಾರ್ಯರು ಜನಪದ ಸಾಹತ್ಯಕ್ಕೆ ಕೊಟ್ಟ ಅದ್ಭುತ ಕೊಡುಗೆಯಾಗಿವೆ.

'ಸಿರಿಯಾಳಾತ್ಮಜ ಚೀಲಾಳನ ಪದಗಳು' ಈ ಕೃತಿ ಗೀತರೂಪಕವಾಗಿದ್ದು ಭಕ್ತ ಸಿರಿಯಾಳ ಎಂಬ ಶಿವಭಕ್ತನ ಮಹಿಮೆಯನ್ನು ಪರಶಿವನು ಸಿರಿಯಾಳನ ಭಕ್ತಿ ಪರಿಕ್ಷೆಗೆ ಬಂದು ಮಗನಾದ ಚಿಲ್ಲಾಳನ ಶಿರವನ್ನೇ ಕತ್ತರಿಸಿ ಶಿವನಿಗೆ ಊಟ ಮಾಡಿಸಿದ ಭಕ್ತಿ ರಸ ಭರಿತವಾದ ಕಥೆಯನ್ನೂ ಕರಿಬಸವಾರ್ಯರು ೧೫ಹಾಡುಗಳಲ್ಲಿ ಹೆಣೆದಿದ್ದಾರೆ ಒಂದೊಂದು ಹಾಡಿಗೆ ಒಂದೊಂದು ಶಿರ್ಷಿಕೆಯನ್ನಿಟ್ಟು ಆಯಾ ಹಾಡಿಗೆ ರಾಗ ನಿದರ್ಶನವನ್ನು ಮಾಡಿದ್ದಾರೆ. ನಾಟಕೀಯವಾಗಿ ಈ ಹಾಡುಗಳು ರಚನೆಗೊಂಡಿವೆ.

ಕರಿಬಸವಾರ್ಯರು ಬರೆದ ಹತ್ತು ಅಷ್ಟಕಗಳು ನಮಗೆ ಉಪಲಬ್ಧವಾಗಿವೆ. ವೈವಿಧ್ಯತೆಗಳಿಂದ ಕೂಡಿದ ಅಷ್ಟಕಗಳು ಭಕ್ತಿ ಪ್ರತಿಪಾದನೆಯ ಮಾಧ್ಯಮದಂತಿವೆ. ಚಿಕ್ಕದರಲ್ಲಿಯೇ ಚೊಕ್ಕದಾಗಿ ಅಚ್ಚುಕಟ್ಟಾಗಿ ಆ ಕಾವ್ಯ ವಸ್ತುವಿನ ವ್ಯಕ್ತಿಯ ಸ್ಥಳ ಗುಣ ಸ್ವಭಾವಗಳನ್ನು ಭಕ್ತಿ ಪೂರ್ವಕವಾಗಿ ಸ್ತುತಿಸುವ ಈ ಅಷ್ಟಕಗಳು ನಿತ್ಯ ಪಾರಾಯಣಕ್ಕೆ ಯೋಗ್ಯವಾಗಿವೆ. ಇವರು ಬರೆದ 'ಶಿವಾಷ್ಟಕ'ಸಂಸ್ಕೃತದ ಉತ್ಸವ ವೃತ್ತದಲ್ಲಿ ಸಂಯೋಜನೆಗೊಂಡಿದೆ. ಅನುಪ್ರಾಸದಿಂದ ಕೂಡಿದ ಇದು ಯಮಕ ಚಿತ್ರಕವಿತ್ವ ಮೊದಲಾದವುಗಳಿಂದ ಓದುಗರನ್ನು ತಲೆದೂಗಿಸುವ ಗೇಯಗುಣವನ್ನು ಹೊಂದಿದೆ. ಇದರಂತೆ ದೇವಿಅಷ್ಟಕ, ಬಸವಾಷ್ಟಕ, ಮಹಾದೇವ ಅಷ್ಟಕ, ಕರಿಬಸವೇಶ್ವರ ಅಷ್ಟಕ, ಖಟ್ವಂಗದೇವರಾಷ್ಟಕ ಮೊದಲಾದವುಗಳು ಕೂಡಾ ಕರಿಬಸವಾರ್ಯರ ಪಾಂಡಿತ್ಯವನ್ನು

ಪ್ರದರ್ಶಿಸುವಂತಿವೆ. ಅವುಗಳು ಅಷ್ಟಕ ಸಾಹಿತ್ಯ ರಚಿಸಿದ ಕವಿಗಳ ಸಾಲಿನಲ್ಲಿ ಕರಿಬಸವಾರ್ಯರಿಗೆ ಮಹತ್ವದ ಸ್ಥಾನವನ್ನು ನೀಡುವಂಥವುಗಳಾಗಿವೆ. ಅವರು ಬರೆದ ಹತ್ತು ಸ್ತೋತ್ರಗಳು ಕೂಡ ವೈವಿಧ್ಯತೆಯಿಂದ ಕೂಡಿದ್ದವುಗಳಾಗಿವೆ. ಭಾಷೆಯ ದೃಷ್ಟಿಯಿಂದ ಸಂಸ್ಕೃತ ಭೂಯಿಷ್ಠವಾದ ಸ್ತೋತ್ರಗಳಿದ್ದರೆ ಕೆಲವು ತುಂಬಾ ಸರಳ ಶೈಲಿಯಲ್ಲಿ ಬರೆದವುಗಳಾಗಿವೆ. ಬಸವ ಪಾಹಿಮಾಂ ಸ್ತೋತ್ರವು ಹದಿನಾಲ್ಕು ಪದ್ಯವನ್ನೊಳಗೊಂಡಿದ್ದು ಬಸವಣ್ಣನವರ ಹನ್ನೊಂದು ಪವಾಡಗಳನ್ನು ಚಿತ್ರಿಸುತ್ತದೆ. 'ಕವೀಂದ್ರ ಸ್ತೋತ್ರ'ವು ೨೧ ವೃತ್ತಗಳಿಂದ ಕೂಡಿದ್ದು 'ತರಳ' ಲಯದಲ್ಲಿ ರಚಿತವಾಗಿವೆ. ಈ ಸ್ತೋತ್ರದಲ್ಲಿ ಕನ್ನಡ ಮತ್ತು ಸಂಸ್ಕೃತದ ಇಪ್ಪತ್ತೊಂದು ಕವಿಗಳನ್ನು ಮತ್ತು ಆ ಕವಿಗಳ ವಿಶೇಷತೆಯನ್ನು ಎತ್ತಿ ತೋರಿಸುತ್ತಾ ಸ್ತುತಿಸಿದ್ದಾರೆ.

ಹೀಗೆ ಕರಿಬಸವಾರ್ಯರು ಬರೆದ ಸ್ತೋತ್ರ ಅಷ್ಟಕ ಶತಕ ಹಾಗೂ ಸ್ತುತಿಪರ ಗೀತೆಗಳು ಶಿವ- ಶರಣರ ಕುರಿತಾದ ಮತ್ತು ತಮ್ಮ ಪ್ರದೇಶದ ಅನೇಕ ಪ್ರಸಿದ್ಧ ದೇವರುಗಳನ್ನು ಕುರಿತಾಗಿ ಬರೆದಂಥವುಗಳಾಗಿವೆ, ಅನೇಕ ಛಂದೋಬಂಧಗಳಲ್ಲಿ ಕಾವ್ಯ ಕೃತಿಗಳನ್ನು ಬರೆದು ಕನ್ನಡ ಸಾಹಿತ್ಯ – ವೀರಶೈವ ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸಿರುವ ಶ್ರೇಯಸ್ಸು ಕರಿಬಸವಾರ್ಯರಿಗೆ ಸಲ್ಲುತ್ತದೆ. ಅಂದಿನ ಕಾಲದ ಸಮಗ್ರ ಸಾಹಿತ್ಯವನ್ನು ಅವಲೋಕಿಸಿದ ಅವರು ಪಂಡಿತ ಮತ್ತು ಪಾಮರರೀರ್ವರಿಗೂ ಬೇಕಾದ ಸಾಹಿತ್ಯ ಸಾಮಗ್ರಿಯನ್ನು ಒದಗಿಸಿಕೊಟ್ಟು ಅತ್ಯುನ್ನತ ಶಿಖರವನ್ನೇರಿದ ಕವಿವರ್ಯರು ಎಂದು ಹೇಳಬಹುದು.

ಪರಿವಿಡಿ

ಅದ್ಯಾಯ ೧ ಭೋಗಲಿಂಗೇಶ್ವರ ಶತಕ ೧
ಅದ್ಯಾಯ ೨ ಪಾರ್ವತಿ ಪರಮೇಶ್ವರರ ಲಗ್ನದ ಪದಗಳು ೨೩
ಅದ್ಯಾಯ ೩ ಸಿರಿಯಾಳಾತ್ಮಜ ಚಿಲ್ಲಾಳನ ಪದಗಳು ೬೧
ಅದ್ಯಾಯ ೪ ಬಸವೇಶ್ವರ ಸ್ತೋತ್ರದ ಪರಿವರ್ಧಿನಿ ೮೩
ಅದ್ಯಾಯ ೫ ಬಸವೇಶ್ವರ ರಘಟಾಬಂಧ ೧೦೩
ಅದ್ಯಾಯ ೬ ಗುಣಸಂವಾದ ಭೋಧೆ ೧೨೧
ಅದ್ಯಾಯ ೭ ಅಷ್ಟಕಗಳು

೧) ಪಾದಾಷ್ಟಕ ೧೨೯
೨) ದೇವಿಅಷ್ಟಕ ೧೩೧
೩) ಶಿವಾಷ್ಟಕ ೧೩೩
೪) ಶ್ರೀ ಖಟ್ವಾಂಗ ದೇವರಾಷ್ಟಕ ೧೩೫
೫) ಮಹಾದೇವ ಅಷ್ಟಕ ೧೩೭
೬) ಕರಿಬಸವೇಶ್ವರ ಅಷ್ಟಕ ೧೩೯
೭) ಮಹಾಲಿಂಗಾಷ್ಟಕ ೧೪೧
೮) ಬಸವರಾಜ ದಯಾನಿಧಿ ಅಷ್ಟಕ ೧೪೩
೯) ಬಸವ ಮಹಿಮಾಷ್ಟಕ ೧೪೫
೧೦) ಬಸವಾಷ್ಟಕ ೧೪೭

ಅದ್ಯಾಯ – ೮ ಸ್ತೋತ್ರಗಳು

೧) ಶಂಭುವಿನ ಕಂದ ಸ್ತೋತ್ರ ೧೪೯
೨) ಕವೀಂದ್ರ ಸ್ತೋತ್ರ ೧೫೪

೩) ಶಿವಪಾದ ಸ್ತೋತ್ರ ೧೫೮

೪) ಶಿವಪ್ರಾರ್ಥನಾ ಶಾರದಾ ಸ್ತೋತ್ರ ೧೬೨

೫) ರುದ್ರ ಮುನಿಂದ್ರ ಕಂದ ಸ್ತೋತ್ರ ೧೬೬

೬) ಪಾಹಿಮಾಂ ಬಸವ ಸ್ತೋತ್ರ ೧೬೮

೭) ಭೀಮಾಶಂಕರ ಸ್ತೋತ್ರ ೧೭೦

೮) ಪಾದ ಸ್ತೋತ್ರ ೧೭೨

೯) ಲಿಂಗಸ್ತೋತ್ರ ೧೭೫

೧೦) ಬಸವರಾಜಸ್ತೋತ್ರ ೧೭೭

ಅದ್ಯಾಯ – ೯ ಸ್ತೊತ್ರ ರತ್ನಾಕರ

೧) ಶಿವಸ್ತೊತ್ರ ಗೀತೆಗಳು ೧೭೯

೨) ಶಕ್ತಿ ಸ್ತೊತ್ರ ಗೀತೆಗಳು ೨೩೩

೩) ಮಂಗಳಾರತಿ ಪದಗಳು ೨೪೬

ಅನುಬಂಧಗಳು – ೧

ಅನುಬಂಧಗಳು – ೨

ಅಧ್ಯಾಯ– ೧.
ಭೋಗಲಿಂಗೇಶ್ವರ ಶತಕ

ಶಾರ್ದೂಲ ವಿಕ್ರೀಡಿತ :

ಶ್ರೀ ಮದ್ಭಕ್ತಗಣಾಬ್ಧಿ ಸೋಮ ವಿಶ್ರುತ ಸ್ವಚ್ಛಂದ ಸರ್ವೋತ್ತಮ ।
ಸ್ತೋಮ ನೃತ್ಯಸುಗಾನ ಲೋಲ ಸಕಲಾಲಂಕಾರವಾಂಚ್ಛಾನ್ವಿತಾ ॥
ಹೈಮಕ್ಷಾಧರ ರಾಜಪುತ್ರೆ ಸರಸಾಸೊಲ್ಲುಂಠನಾಪೇಕ್ಷಿತ ।
ಸ್ವಾಮಿ ಶ್ರೀಗುರುದೇವಪಾಹಿ ಸಲವು ಶ್ರೀಭೋಗಲಿಂಗೇಶ್ವರಾ ॥ ॥ ೧ ॥

ನಾಕಾಧೀಶ ಸುಸಾರ ಸಾರ ವರದ ಪ್ರೋದ್ವಾಂಜ್ಯ ಟಾಮುಂಡಿತಾ ।
ಮಾಕಾಂತಾಮೃತ ಜಾತಜಾತ ದಿವಿಜಾಕೋಟಿರತಾಟಿತ್ವದಾ ॥
ಕಾಕೋಲಂ ಹಿಮಭಾನುಭಾನುದುಗ್ರಪಾಹಿ ಸ್ಫೂರ್ಜಿತಲಿಂಗ ಪ್ರಭೋ ॥
ಸಾಕಾರಾಜಿತರಾಜರಾಜ ಸುಹೃತ ಶ್ರೀಭೋಗಲಿಂಗೇಶ್ವರಾ ॥ ॥ ೨ ॥

ಉತ್ಪಲಮಾಲಾ :

ಶ್ರೀಮದಗೇಂದ್ರಧಾಮ ಪ್ರಮಥೇಂದ್ರ ಮುನೀಂದ್ರ ಸುಸೇವ್ಯಮಾನ ನಿಃ ।
ಕಾಮ ಪವಿತ್ರಚಿತ್ರ ತುಹಿನಾಕರಶೇಖರ ಪಂಕಜಾಸನಾ ।
ತಾಮರ ಸಾಕ್ಷರಿಂದ ಘನಪೂಜಿತರಾಜಿತ ಪಾದಪದ್ಮಸ ।
ತ್ರೇಮದಿಭವ್ಯನವ್ಯ ನುತಿಯಾಲಿಸು ಪಾಲಿಸು ಭೋಗಲಿಂಗವೇ ॥ ॥ ೩ ॥

ಶ್ರೀಕರದೇವದೇವ ದಿಶೆಪಾಲಕಪಾಲಕ ಭಕ್ತಭಕ್ತ ಸ ।
ತ್ಯಾಕರಕಾಲಕಾಲ ವಿಷಕಂಧರಕಂಧರ ಮಿತ್ರಪತ್ರ ಜಾ ॥
ತಾಕರಭೀಮಭೀಮ ಸುದಿಶಾಂಬರಶಾಂಬರ ಶತ್ರುಶತ್ರು ದು ॥
ರ್ಭೀಕರದಾವದಾವ ಪೊದೆದೀಕ್ಷಿಸುರಕ್ಷಿಸು ಭೋಗಲಿಂಗವೇ॥ ॥ ೪ ॥

ಚಂಪಕಮಾಲಾ :

ವುರುತರಗೋಪ ಗೋಪ ಗೋಪ ಧನುಮಾಧವ ಮಾಧವ ರಾಮರಾಮ ಕಂ ।
ಧರ ದಿವಿಜಾತ ಜಾತನುತತ್ರ್ಯಂಬಕ ತ್ರ್ಯೆಂಬಕ ದಾನದಾನವೋ ॥
ತ್ಕರ ಪರಭದ್ರಭದ್ರ ಶುಚಿರೂಪಕರೂಪಕ ಪದ್ಮಪದ್ಮಜಾ ।
ಪರಜಿತ ಸಾರಸಾರ ವರಪಾಲಿಸುಮಾಲಿಸು ಭೋಗಲಿಂಗವೇ॥ ॥ ೫ ॥

ಶಿವಶಿವ ನಿಮ್ಮ ದಿವ್ಯಪದಪೂಜಿಯೊಳಿರ್ಕೆಸಮಂತು ಮತ್ಕರಂ ।
ಭವಭವದಿಯ್ಯನಾಮನುತಿಯೊಳ್ನೆಲಸಿರ್ಕೆರಸಜ್ಞೆಶೈಲಜಾ ॥
ಧವಧವಲಾಂಗ ಕೀರ್ತನ ಸುಧಾರಸಪ್ರಾಶನ ಮಾಳ್ಕೆಮನ್ಮನಂ ।
ತವೆತವ ಮೂರ್ತಿಪೂರ್ತಿಮಮಲೋಚನ ನೋಡಲಿ ಭೋಗಲಿಂಗವೇ ॥ ೬ ॥

ಮಲ್ಲಿಕಾಮಾಲೆ :

ಜಾತರೂಪಗ ಚಾಪಚಾಪಲ ಹಸ್ತಹಸ್ತಜಿನಾಂಬರಾ ।
ಜಾತಜೈತ್ರಘ ಚಕ್ರಚಕ್ರಕರಾರ್ಚಿತಾಂಘ್ರಿಸರೋಜಕಂ ॥
ಜಾತಜಾತ ಗಿರೀಶರೇಶ ಸುಮಿತ್ರಮಿತ್ರ ಸುಧಾಪ್ರಭಾ ॥
ಜಾತವೇದ ತ್ರಿನೇತ್ರ ಪಾಲಯ ಭೋಗಲಿಂಗ ಕೃಪಾಂಬುಧೀ॥ ॥ ೭ ॥

ಅಂತಕಂತಕ ದರ್ಪದರ್ಪಕ ನಾಶನಾಶಭವಕ್ಷಪಾ ।
ಕಾಂತಕಾಂತ ಸಮಾಂಗಮಾಂಗಲ ತೇಜತೇಜ ಸಮಾನ್ವಿತಾ ॥
ನಂತಕಾಂತರಲಂಕೃತಂ ಕೃತಯೋಗಿಯೋಗಿ ಸನಿರ್ಮಲ ।
ಸ್ವಾಂತದಂತರದೀಪಪಾಲಯ ಭೋಗಲಿಂಗ ಕೃಪಾಂಬುಧೀ॥ ॥ ೮ ॥

ತರಳ :

ಗಿರಿಜೆನೇತ್ರ ಚಕೋರಕೌಮುದಿ ಮೇನಕಾತ್ಮಜೆ ರೂಪಕಾ ।
ಸರಮರಾಳ ಭವಾನಿಯಾನನ ಪದ್ಮಭಾಸ್ಕರ ಚಂಡಿಕಾ ॥
ಸರಸ ಮಾಧುರ ವಾಣಿ ನರ್ತಕಿನಾಟ್ಯರಂಗ ಗರಾಟ್ನುತಾ ।
ತರುಣನಂದನ ಚೈತ್ರಪಾಲಯ ಭೋಗಲಿಂಗ ಕೃಪಾಂಬುಧೀ॥ ॥ ೯ ॥

ಕರುಣಸಿಂಧು ಮದಿಯ್ಯ ದುರ್ಗುಣವಾರಿವಾಹ ಪ್ರಭಜಂನಾ ।
ಸ್ಫುರಿತನೂತ್ನ ಪ್ರಬಂಧ ಸತ್ಕವಿತಾ ಸುಮಾರ್ಗ್ಗದ ವಿಘ್ನಸಂ ॥
ಹರಿಸಿ ಪ್ರೌಢವಿತಾನ ಸಾಗರಚಂದ್ರನೆಂದೆನಿಪಂತೆ ಸ ।
ಚ್ಚರಿತ ಪಾಲಿಸು ಕೀರ್ತಿತಾವಕ ಭೋಗಲಿಂಗ ಕೃಪಾಂಬುಧೀ॥ ॥ ೧೦ ॥

ಚಂಪಕಮಾಲಾ :

ಸುರುಚಿರಗಾತ್ರಪಾತ್ರ ಪರಿಪಾಲನ ಶ್ರೀಗುರುಚಂನವೀರಣಾ ।
ರ್ಯ್ಯರು ಸಮವೇಕ್ಷಿಪಾಕ್ಷಿ ಘನ ಚಂಚಲಪೂರಿತ ಹರ್ಷವರ್ಷಮಂ ॥
ಗರಿಯೆ ಮದೀಯ್ಯ ನವ್ಯಕವಿತಾಂಕುರಮೊರ್ದಿಸಿ ಸದ್ರಸಂಗಳಿಂ ॥
ಭರಿತಫಲಾಳಿ ಪ್ರಾಜ್ಞಶುಕವೃಂದಕೆ ಸೌಖ್ಯವು ಭೋಗಲಿಂಗವೇ ॥ ॥ ೧೧ ॥

ಪರತರಸೋಮಭೀಮ ಕವಿಕೇಶವ ಭಾರವಿ ಕಾಳಿದಾಸ ಬಂ ।
ಧುರಕವಿ ಬಾಣ ಜಾಣಕವಿ ರಾಘವ ಮುಖ್ಯ ಸದಾಕವೀಂದ್ರರಾ ॥
ಚರಣಸರೋಜರಾಜಿ ಮಕರಂದ ಪರಾಗದಿಲುಬ್ಧನಾದ ಷ ।
ಟ್ಚರಣನು ನಾನು ನವ್ಯತರ ಕಾವ್ಯಮೊಡರ್ಚ್ಚುವೆ ಭೋಗಲಿಂಗವೇ॥ ॥ ೧೨ ॥

ಮತ್ತೇಭವಿಕ್ರೀಡಿತ :

ವನದಂತವ್ಯಯದಂತೆ ಸಾದುಸುಮನಸ್ತೋಮಕ್ಕೆ ಯೋಗ್ಯಂ ವಧೂ ।
ಸ್ತನದಂತೆಯ್ದೆ ಮುನೇಂದ್ರನಂತೆ ಸುಷಮಂ ಸದ್ವೃತ್ತಿಯುಕ್ತಂ ಸುಭೂ ॥
ಯಿನನಂ ತಂಬರದಂತೆ ನವ್ಯಕವಿಚೇತಾನಂದದಾಗರವೆಂ।
ದೆನೆ ಪೋಲ್ತಿರ್ಕ್ಕು ಭವತ್ಸುನಾಮ ಶತಕಂ ಶ್ರೀಭೋಗಲಿಂಗೇಶ್ವರಾ॥ ॥ ೧೩ ॥

ಕವಿತಾಸ್ತ್ರೀರಸಕಾಂತ ಕಾವ್ಯರಚನಾಲಂಕಾರ ನೀನೇಲಸ ।
ತ್ಕವಿತಾಂಬೋಧಿ ಸುಧಾಂಶುಕಾವ್ಯವರಚಿತ್ಕಾಸಾರ ಹಂಸೋತ್ತಮಾ ।
ಕವಿತಾಲಾಸ್ಯಕಿನೃತ್ಯರಂಗ ಕವಿಹೃತ್ಕಂಜಾತ ಖದ್ಯೋತ ಮ ।
ತ್ಕವಿತಾ ಭೂಮಿಗೆ ಬೀಜ ನೀನೆ ಸತತಂ ಶೀಭೋಗಲಿಂಗಶ್ವರಾ॥ ॥ ೧೪ ॥

ಶಬರಂ ತಾಮೃಗಯಾರ್ಥನಾಗಿ ವನದೊಳ್ ಕೋದಂಡದಿಂ ಬಾಣಮುಂ।
ಶಬಲಸ್ತೋಮದೊಳೆಚ್ಚಡಂಬು ನುಸುಳಲ್ ಕುಂದೇನು ತದ್ಬಾಣಕೇ ॥

ರುಭವಸ್ತುತ್ಯ ಭವತ್ಸುನಾಮನುತಿಯೊಳ್ ಸಲ್ಲಕ್ಷಣಂ ದಪ್ಪಿರಲ್ ।
ಪ್ರಭುವಿಂಗಲ್ಲದೆ ಭೃತ್ಯಗೂಣೆಯಹುದೇ ಶ್ರೀಭೋಗಲಿಂಗೇಶ್ವರಾ॥ ॥ ೧೫ ॥

ತರಳ :

ಲಲಿತಮಂಜುಲ ನೀಲಕಂಧರ ಸತ್ಕೃಪಾಮೃತವರ್ಷಿಸು ।
ತ್ತಲಸದಂತೆ ವಿಬಾಧಿಸುತ್ತಿಹರೋಗ ಗ್ರೀಷ್ಮ ನಿವಾರಿಸಿ ॥
ಅಲಘು ಮನ್ಮನವೆಂಬ ಚಾತಕ ಕೇಯ ಪೋಷಿಸಿನ್ನತ್ಯದಿಂ।
ನಲಿವಭಕ್ತಿ ಮಯೂರ ಮೀಕ್ಷಿಸು ಭೋಗಲಿಂಗ ಕೃಪಾಂಬುಧೀ॥ ॥ ೧೬ ॥

ಮತ್ತೇಭವಿಕ್ರೀಡಿತ :

ಪರಿತೋಷಾಮೃತ ಪೂರ್ಣವಾಗಿ ವಿಲಸತ್ಪುಂಣ್ಯಾಂಕ ಸದ್ವೃತ್ತಿಸುಂ ।
ದರ ಶ್ರದ್ಧಾಮಯವೆಂಬ ಧೇನುಮಯ ಸಚ್ಚೇತಾರ್ಭಕಂಗೆಯ್ದೆ ನೀಂ ॥
ಪೊರೆಯಲ್ಕೆಂದುರೆ ಕೊಟ್ಟು ಕಟ್ಟು ಪಶುಪ ಪ್ರೀತ್ಯರ್ಥನಿತ್ಯಂ ಭವ ।
ಚ್ಚರಣಾಂಭೋಜ ನವೀನ ಗೋಷ್ಠಿದೆಡೆಯೊಳ್ ಶ್ರೀಭೋಗಲಿಂಗೇಶ್ವರಾ॥ ೧೭ ॥

ವನಮಂಜರಿ :

ಪಾವಕರೇತನೆ ಶೋಭನರೂಪನೆ ಸಂಪದಂಗಳನೊಲ್ಲೆನಾಂ ।
ತಾವಕ ಪಾದಪಯೋಜವ ಕೀರ್ತಿಪೆನಾದ್ರಿಜಾಧವ ಶಾಶ್ವಿತಂ ॥
ಸೇವಕ ಭಕ್ತರಗಾರದ ಸೇವೆಯನಿತ್ತು ಪಾಲಿಸು ಸಂತತಂ ।
ದೇವ ಕದಂಬ ಪ್ರಕೀರ್ತಿತ ಭವ್ಯನೆ ಭೋಗಲಿಂಗ ಕೃಪಾಂಬುಧೀ ॥ ॥ ೧೮ ॥

ಮತ್ತೇಭವಿಕ್ರೀಡಿತ :

ಧೃತಿಯಿಂ ವ್ಯಾಧನರಣ್ಯದೊಳ್ಚರಿಸುತೀಶಕ್ಷೇತ್ರದೊಳ್ಕಾಮಿನೀ ।
ರತಿಯಿಂ ಭೋಗಿಸಲಾಗ ಪಂಚಮುಖದಿಂ ಪ್ರತ್ಯಕ್ಷಮಾಗುತ್ತಿರೆ ॥
ಶ್ರುತಿಗಳ್ನಾಚಲಮರ್ತ್ಯವೃಂದ ಪೊಗಳುತ್ತಾನಂದದಿಂದಿಟ್ಟರು ॥
ನ್ನತ ಭೋಗೇಶ್ವರನೆಂಬ ನಾಮ ನಿಮಗೆ ಶ್ರೀಭೋಗಲಿಂಗೇಶ್ವರಾ॥ ॥ ೧೯ ॥

ಜಲದಿಂಸ್ನಾನ ನವೀನ ವಸ್ತ್ರಭಶಿತಂ ಮಾಲೂರ ಪತ್ರಾಶಿತೋ ।
ತ್ಪಲ ಪುನ್ನಾಗಕದಂಬ ದೂರ್ವಬಕುಳಂ ಗಂಧಾಕ್ಷತೇ ಧೂಪದೀ॥

ಪಲಸಚ್ಚಾಮರತಾಲವೃಂತ ಮುಕುರಂ ಸಚ್ಛತ್ರ ಘಂಟಾ ಘನಂ ।
ಫಲನೈವೇದ್ಯ ಸುವೀಟಿಕಾ ಪ್ರಮುಖ ಭೋಗಾಧೀಶ ಭೋಗೇಶ್ವರಾ॥ ॥ ೨೦ ॥

ಚಂಪಕಮಾಲಾ :

ಪರಮತಗೋತ್ರ ವಜ್ರ ಪರವಾದಿ ಗಜಾಂಕುಶ ದುರ್ಜನಾಬ್ಧಿರ್ಭ ।
ಪರವೃತ ವರ್ಧಿಪಾಬ್ಧಿವಡಬಾನಲ ವೈಷ್ಣವರಣ್ಯದಾವದಲ್ ॥
ಪರಕುಲ ಪಂಕಭಾನು ಶಿವದೂಷಕ ವಾರಿದ ಚಂಡಮಾರುತಂ ।
ಹರಭವದೀಯ ನಾಮ ಶತಕಸ್ತವನೋರ್ಪಿಪೆ ಭೋಗಲಿಂಗವೇ॥ ॥ ೨೧ ॥

ಗಿರಿಗಳ ಶೈಯ್ಯನೆಂದು ಗಿರಿಜಾಂಘ್ವಯಮಿರ್ಕ್ಕುಮದೀಯ ಜಿಂಹೆತ ।
ದ್ಗಿರಿಗಳ ಗ್ರಾವಕಿಂತ ಸುಕಠೋರಮೆ ಭೂತಗಳಲ್ಲಿ ನಾಟ್ಯಮೇಂ ॥
ಪರಿಸರಿಮತ್ತು ದಿವ್ಯ ಹೃದಯಾಬ್ಜದ ಮಧ್ಯದಿ ನರ್ತ್ತಿಸುತ್ತ ಭಾ ।
ಸುರ ರಸನಾನಿವಾಸ ಮಿಗೆ ಮಾಡಿ ವಿರಾಜಿಸು ಭೋಗಲಿಂಗವೇ॥ ॥ ೨೨ ॥

ಮತ್ತೇಭವಿಕ್ರೀಡಿತ :

ಅನುಸಂಧಾನ ವಸಂತಕಾಲದಿ ಭವತ್ಸಂಬಂಧಮಾಗಿರ್ದ ಮ ।
ತ್ಸ್ವನಿತಾರಾಮದಿ ಪಾಪಜೀರ್ಣದಳ ಹೃತ್ಸದ್ಭಕ್ತಿ ಶಾಖಂಗಳಂ ॥
ಕೊನರ್ದುದ್ಯದ್ಗುಣಸಜ್ಜಕಂಗಳೊಗೆದು ಜ್ಞಾನಾಮೃತಾ ಮೋದ ದೋ ।
ಳಿನಿದಾಗಿರ್ಪ್ಪಮರಂದದಲ್ಲಿ ಚರಿಸ್ಯೆ ಭೃಂಗೇಶ ಭೋಗೇಶ್ವರಾ॥ ॥ ೨೩ ॥

ವಸನಂಚರ್ಮಕರೋಟಿ ಮಾಲೆಗಳದೊಳ್ದರ್ವೀಕರಾಲಂಕೃತಂ ।
ಅಶನಂಕ್ಷ್ವೇಳ ಮಹೇಕ್ಷವಾಹನಮಿರಲ್ ನಾಂ ಬೇಳ್ಪುದೇಂ ಕೊಟ್ಟಡೇ ॥
ವಶವಾಗಿರ್ಪ್ಪವೆ ವಿಶ್ವನಾಥ ತವಪಾದಂಭೋಜಸಂಸೇವೆಯಂ ।
ಯಸಗುತ್ತಿರ್ಪ್ಪ ಸುಭಕ್ತಿಯಿತ್ತು ಸಲಹು ಶ್ರೀಭೋಗಲಿಂಗೇಶ್ವರಾ॥ ॥ ೨೪ ॥

ಅರ್ಕ್ಕಮರೀಚಿ :

ಸದಮಲರೂಪ ನಿಮ್ಮ ಘನಂ ಪ್ರಸವೀಕ್ಷಿಸಲಾರನಮರೇಂದ್ರನೊಲ್ಬುಸ ।
ನ್ಮುದದೊಳುದಂದ ಶೂಕವರೇಣ್ಯನು ವರ್ಣಿಸಲಾರನು ಪುರಾರಿಯೇ ಭವ ॥
ತ್ಪದ ಶತಪತ್ರ ಪೂಜಿಸಲಾರರನೇಕ ಮುನೇಂದ್ರಸುಮನೌಘ ಮಾವಗಂ ।
ಕದಕದಿಸಿರ್ಪ್ಪ ಚಿತ್ತಮಿದೆಂತು ಪ್ರಕೀರ್ತಿಪುದೀಕ್ಷಿಪುದು ಭೋಗಲಿಂಗವೆ ॥ ೨೫ ॥

ತರಳ :

ಪರಮಶಂಕರ ಭೀಮಭರ್ಗ್ಗಗೆ ವಿಷ್ಣು ಪಾಸಟಿಯಂಬರಂ।
ಬರದಿಭಾಸ್ವಿತ ಮೋಘನಜ್ಞಗದಾಂಬಕಂಗೆ ಸಮಾನಮೇಂ ॥
ಚರಿಪ ಮೀಂಬುಳವಾದಿ ರುದ್ರನತರ್ಕ್ಯನೆಂಬುವದಾಡದೇ ।
ನರಕ ಭಾಜನವಾಗಿ ಸಾರ್ದರು ಭೋಗಲಿಂಗಕೃಪಾಂಬುಧೀ॥ ॥ ೨೬ ॥

ಮತ್ತೇಭವಿಕ್ರೀಡಿತ :

ಧರಣೀಸ್ಯಂದನ ಮಾವಗಾಯ್ತು ವನಜಾತಾರಾತಿ ಮಾರ್ತಂಡ ಪ್ರ ।
ಸ್ಫರಿತಸ್ಯಂದನದಂಗ ವೇದಹಯಗಳ್ ಕೋದಂಡ ಹೈಮಾಚಲಂ ॥
ಶರಧಿ ಕ್ಷಿಪ್ರಗಗೇಹಮಾವಗಿಹುದು ಶ್ರೀನಾಥಬಾಣಂ ವಿಯ ।
ಚ್ಚರಗ್ರಾಮತ್ರಯಮಾವನಿಂದ ವಿಹ್ರುತಂ ಶ್ರೀಭೋಗಲಿಂಗೇಶ್ವರಾ॥ ॥ ೨೭ ॥

ಚಂಪಕಮಾಲಾ :

ಪರಶಿವನಾದಿಶಕ್ತಿವಿನಿಯೋಗದ ಕಾಲದಿ ನಾಲ್ಕುರೂಪಮಂ ।
ಧರಿಸಿದಳಾಗ ಭೋಗದಿ ಭವಾನಿಯು ಕ್ರೋಧದಿ ಕಾಳಿನಾಮ ಸಂ॥
ಗರದೊಳು ದುರ್ಗ್ಗಿ ತಾನೆ ಪುರುಷಾಕೃತಿಯೊಳ್ವರವಿಷ್ಣುವಾದಳೆಂ ।
ದೊರೆದುದು ವೇದಸಾರ ನೆರೆ ಪದ್ಮಪುರಾಣದಿ ಭೋಗಲಿಂಗವೇ॥ ॥ ೨೮ ॥

ಮತ್ತೇಭವಿಕ್ರೀಡಿತ :

ವರನಾರಾಯಣನಾದಿಯಲ್ಲಿ ಸಲಿಲಾಕಾರಾಂತಿರಲ್ ಯೋನಿಸಾ ।
ಗರದೊಳ್ಶಂಕರ ತಂನ ವೀರ್ಯ್ಯಮಿರಿಸಲ್ ಹೇಮಾಕರಾಂಡೋದ್ಭವಂ ।
ತರದೊಳ್ಜಾತ ತದಾಂಡದಿಂದ ಲೊಗೆದರ್ ಕೋಟ್ಯಚ್ಯುತರ್ ಬ್ರಹ್ಮರೆಂ ।
ದುರೆಲೈಂಗ್ಯಾದಿ ಪುರಾಣದಲ್ಲಿ ನುಡಿಗುಂ ಶ್ರೀಭೋಗಲಿಂಗೇಶ್ವರಾ ॥ ೨೯ ॥

ಅಕಳಂಕಚ್ಯುತನೆಂಬರಾದಿಯಲಿ ತಾಂ ಪಾಠೀನಕೂರ್ಮಾದಯಾ।
ವಿಕಟಾಕೃತ್ಯಗಳಿಂದಜಾಂಡ ಮಥಿಸಲ್ ತದ್ಬಾಧೆಯಂ ಕೇಳ್ದು ತ್ರ್ಯಂ॥
ಬಕ ರುದ್ರಂಬಕ ರೂಪಿನಿಂದ ಹರಿಯಾಂತಾಕಾರ ಸಂಹಾರ ತಾ।
ರಕ ಪ್ರಧ್ವಂಸಿ ಪುರಾಣವೇದನುಡಿಗು ಶ್ರೀಭೋಗಲಿಂಗೇಶ್ವರಾ॥ ॥ ೩೦ ॥

ಅರವಿಂದಾಕ್ಷಕಿಟೆ ಸ್ವರೂಪದಳೆದೀ ಬ್ರಹ್ಮಾಂಡ ಮುದ್ಭೇದಿಸಲ್।
ಶರಜನ್ಮಸ್ವಯಶಕ್ತಿಯಿಂದೆ ಹತಿಸಲ್ಗಂಗಾತಟೆಲಿರ್ಪ್ಪ ಶೂ॥
ಕರರೋಹಸ್ಥಲ ತೀರ್ತ್ಥಸಾಕ್ಷಿ ಜಗದೋಳದ್ಯಾಪಿ ಪ್ರತ್ಯಕ್ಷದಿಂ।
ದಿರಲಾಸ್ಕಾಂದ ಪುರಾಣದೋಕ್ತಿ ಪ್ರಥೀತಂ ಶ್ರೀಭೋಗಲಿಂಗೇಶ್ವರಾ॥ ॥ ೩೧ ॥

ಖಗರಾಡ್ವಾಹ ನೃಸಿಂಹರೂಪದಳೆದಟ್ಟುತ್ತಂ ಹಿರಣ್ಯಕ್ಷನಾ ।
ತೆಗೆದಾರ್ದಂಗ ಪಳಂಚಿ ಸೀಳ್ದು ರುಧಿರಂ ತಾನೀಂಟ್ಟುತುನ್ಮತ್ತದಿಂ ॥
ಜಗಮಂ ಪೀಡಿಸಿ ವೀರಭದ್ರಶರಭಾಕಾರಾಂತು ಪಾಯ್ದೊತ್ತಿ ಬಲ್ ।
ಮೊಗಮಂ ಕ್ರುಂತಿಸಿ ಸಮ್ಮುರ್ಚಿ ತುಡುಕೆ ಶ್ರೀಭೋಗಲಿಂಗೇಶ್ವರಾ॥ ೩೨ ॥

ನರಸಿಂಹಂ ನಿಜ ಮೂರ್ಧ್ನಚರ್ಮಧರಿಸೆಂದತ್ಯಂತ ಕೊಂಡಾಡಿದಾ ।
ಶರಭಾಷ್ಟೋತರಮುಂಟು ಸಾಕ್ಷಿಜಗದೊಳ್ ಶ್ರೀಕಾಳಿಕಾಕಾಂಡ ನಂ ॥
ತರ ಋಗ್ವೇದ ಪ್ರಸಿದ್ಧಮಿರ್ಕ್ಕು ಹರಿಗೆ ಸ್ವಚ್ಛಂದಮಿಲ್ಲೆಂದಿಗೆ ।
ಹರ ನೀವಲ್ಲದೆ ದೈವಮುಂಟೆ ಧರೆಯೊಳ್ ಶ್ರೀಭೋಗಲಿಂಗೇಶ್ವರಾ ॥ ೩೩ ॥

ಶಾರ್ದೂಲವಿಕ್ರೀಡಿತ :

ಶ್ರೀದಾಮೋದರನಾಂಘ್ರಿಯಲ್ಲಿ ಜನನಂ ಮಂದಾಕಿನೀಗೆಂಬ ಸಂ ।
ವಾದಾರ್ಥರ್ ಯಮರಾಜನಾಳ್ವಪುರದೋಳೀಡಾದರಂತಿರ್ಕ್ಕೆಸ ॥
ವಾರ್ಧಾರೀಶ್ವರನಾದಿಶಕ್ತಿ ಹಿಮವತ್ಪುತ್ರೇಂದು ರಾಮಾಯಣಂ ।
ವೇದಾಂತಾದಿ ಧನಂಜಯಾಂತ ನುಡಿಗುಂ ಶ್ರೀಭೋಗಲಿಂಗೇಶ್ವರಾ॥ ೩೪ ॥

ಮತ್ತೇಭವಿಕ್ರೀಡಿತ :

ಶ್ರುತಿಸಿದ್ಧಾಂತ ಸುದೂರಸಾರ ಶಿವಸಚ್ಚಿಚ್ಛಕ್ತಿ ತಾರಾಪಥಾ ।
ವೃತ ಸಂಚಾರ ನಿಮಿತ್ಯದಿಂದನಿಸದಂ ಗಂಗಾಭಿದಾನಂ ಸದಾ ॥
ನುತ ಸರ್ವೇಶ್ವರನುತ್ತಮಾಂಗದೆಡೆಯೊಳ್ ವಿದ್ಯೋತಮಾಗಿರ್ದಳೆಂ ।
ದತಿ ಶ್ರೀಭೈರವಿಸೂಕ್ತೆಯುಂಟು ಧರೆಯೊಳ್ ಶ್ರೀಭೋಗಲಿಂಗೇಶ್ವರಾ॥ ೩೫ ॥

ಚಂಪಕಮಾಲಾ :

ವಿತತನಿರಾವಲಂಬ ಪರಮೇಶ್ವರನಂತ ಸಚಿತ್ರಭ್ರಾಂತದೋ ।
ಳತಿಶಯದಿಂದ ಗಂಗೆ ನೆರೆ ಜನ್ಮಿಸುತಂಬರ ಮಧ್ಯದೊಳ್ಮಹೋ ॥
ನ್ನತ ದಶಲಕ್ಷಯೋಜನ ವಿರಾಜಿಪಳೆಂದುರೆ ರುದ್ರಕೋಟಿ ಸ ।
ಹಿತೆಯೊಳು ಸತ್ಯಸೂಕ್ತಿಗಳು ಪೇಳ್ದುದನಾಲಿಸು ಭೋಗಲಿಂಗವೇ ॥ ೩೬ ॥

ಮತ್ತೇಭವಿಕ್ರೀಡಿತ :

ಸುರಜೇಷ್ಠ ಮೃಡಪಾದ ಪೂಜೆಗೆನುತಂ ಸೌವರ್ಣಭೃಂಗಾರದೊಳ್ ।
ಸುರಸಿಂಧೋದಕಪೂರಯಿತ್ವಗಮಿಸಲ್ ತದ್ವಾರ್ತ್ತದೊಳ್ವಿಷ್ಣು ಶ್ರೀ ।
ಚರಣಕ್ರುಂತನಗೆಯ್ಯೆ ತಜ್ಜಲಗಳಿಂ ವೈಕುಂಠಭಂಗಾದ ತ ।
ಚ್ಚರಣಾಗ್ರೋದ್ಭವಮಾದಳೆಂತು ವಚಿಸೈ ಶ್ರೀಭೋಗಲಿಂಗೇಶ್ವರಾ ॥ ೩೭ ॥

ಪರಮೇಷ್ಠಿಸ್ವಯ ಸತ್ಯಲೋಕಹಿತಕೀಶಾನಾರ್ಚ್ಚನುದ್ಯೋಗದೊಳ್ ।
ಸುರಗಂಗಾಸಲಿಲಾಸ್ತ್ರದಿಂದ ಹರಿಪಾದಸ್ತಂಭನಂಗೆಯ್ದನೆಂ ॥
ದರರೇ ಕೂರ್ಮ್ಮಪುರಾಣದೂಕ್ತೆ ನಿಜದಿಂ ಬ್ರಹ್ಮಾಂಡ ಪೌರಾಣದೋ ।
ಳಿರೆ ಶ್ರೀವೈಷ್ಣವ ಮೂಢರಾಡಲರಿಯರ್ ಶ್ರೀಭೋಗಲಿಂಗೇಶ್ವರಾ ॥ ೩೮ ॥

ಜಲಜಾತೆ ಕ್ಷಣಪೂರ್ವ್ವದಲ್ಲಿ ದಿತಿಜಾಸಂಹಾರ ಮಾಳ್ಪೇನಲಾ ।
ತುಲಬ್ರಹ್ಮಾಂಡ ಕಟಾಹ ಪಾದನಖದಿಂದುದ್ಭಿನ್ನರಂಧ್ರಾಗ್ರೆ ತ ॥
ದ್ಬಿಲದಿಂದೋದ್ಭವ ಮಾದಳಾಗ ಕುಟಿಲೆಂದೆಂಬಾಖ್ಯೆಶೈವಾಲಿನೀ ।
ಚಲಿಸುತ್ತಭ್ರ ತರಂಗಿಣೆಲ್ಲಿ ಬೆರೆದಳ್ ಶ್ರೀಭೋಗಲಿಂಗೇಶ್ವರಾ ॥ ೩೯ ॥

ಪುರರಥ್ಯಾಂಬು ಸುಸಾರಸಿಂಧು ಗತಿಯೊಳ್ ಸಂಪ್ರಾಪ್ಯಮಾಗುತ್ತ ತ ।
ತ್ಸರಿದಂಬೋನಿಧಿ ಕೂಡಿ ದೇವತತಿಯಿಂ ಸಂಸೇವ್ಯಮಾನಾದ ವಾ ॥
ಹರಿಪಾದಗ್ರದಿ ಪುಟ್ಟಿ ಬಂದ ಕುಟಿಲೇ ಮಂದಾಕಿನೀ ಸಾರ್ದಳೆಂ ।
ದರಿಯಮೂರ್ಖದುರಾತ್ಮವಿಪ್ರಕಟಾ ಶ್ರೀಭೋಗಲಿಂಗೇಶ್ವರಾ ॥ ೪೦ ॥

ಶಾರ್ದೂಲ ವಿಕ್ರೀಡಿತ :

ದೋಷಕ್ಲೇಶಜರಾಮಯಾದಿ ವಿಹ್ರುತೇ ಜನ್ಮಾಪಮೃತ್ಯುಂ ಹರೆ ।
ಶ್ರೀಶಬ್ರಂಹ್ಮಸುರೇಂದ್ರರಾತ್ಮ ನಿಜ ಬ್ರಂಹ್ಮಾಕಾರೆ ನೀವೆಂಬುದಂ ॥
ಕಾಶೀಕಾಂಡಗಳುಂಟು ಪೂರ್ವ್ವದಲಿ ಪೌರಾಣೋಕ್ತಿ ಸನ್ಮುಕ್ತರೂ ॥
ಭಾಸ್ವದ್ದೇವಸ್ರವಂತೆಯಿಂದ ಮನುಗಳ್ ಶ್ರೀಭೋಗಲಿಂಗೇಶ್ವರಾ ॥ ೪೧ ॥

ಮತ್ತೇಭವಿಕ್ರೀಡಿತ :

ಕ್ರತುಪ್ರಧ್ವಂಸಿತರಿಕ್ಷಕೇಶನೆನಿಸಲ್ ಗಂಗಾಧರಾಖ್ಯಂ ಸ್ವಸಂ ।
ಮತಪಕ್ಷರ್ ತ್ಯಜಿಸಿರ್ಕೆ ವಿಷ್ಣು ಪದಮೆಂದಾಕಾಶನಾಮಂ ಜಗಂ ॥
ನ್ನುತನ್ನೈ ಘಂಟಾಪ್ರಶಿದ್ಧಸಾದರ ವಿಶಲ್ವ್ಯಾಪ್ತಾ ಇತೀಧಾತುಯೆಂ ।
ದತಿ ವೈಯಾಕರಣೋಕ್ತಿ ವಿಷ್ಣು ಪದಿನಾಮಂ ಭೋಗಲಿಂಗೇಶ್ವರಾ ॥ ೪೨ ॥

ಖಲಭಸ್ಮಾಸುರ ದರ್ಪ್ಪದಿಂದಲಿರಲಾ ಪರ್ನ್ನೇಶಬ್ಬಟ್ವಿತಾಂ ।
ಲಲನಾರೂಪಮನಾಂತು ವಿಷ್ಣುಹತಿಸುತ್ತಾ ದೈತ್ಯನಂ ಮೋಹಿನೀ ॥
ಬಲವಾನದ್ಭುತ ಭೀರು ರುದ್ರನ ನೆರೆ ಶ್ರೀ ಭೈರವೋತ್ಪತ್ಯವೆಂ ।
ದಲಘುಸ್ಕಾಂದ ಪುರಾಣಸೂಕ್ತೆಯಿಹುದೈ ಶ್ರೀಭೋಗಲಿಂಗೇಶ್ವರಾ ॥ ೪೩ ॥

ಹರಿತಾಂ ನಾಲ್ಕು ಪುರಾಣದಿಂದ ದ್ರುಹಿಣದ್ವಂದ್ವಂಗಳಿಂದೊಂದರಿಂ ।
ದರವಿಂದೇಷ್ವಹಿರಣ್ಯರೇಕ ದಶಪೌರಾಣಂಗಳಿಂ ಚಂದ್ರಶೇ ॥
ಖರ ತಾಂ ಕೀರ್ತಿಸಿ ಕೊಂಡನೆಂದು ಲಸಿತ ಸ್ಕಾಂದಾದಿ ಸೂತೋಕ್ತಿಗಳ್ ।
ಧರೆಯೊಳ್ಶೋಭಿಸುತಿರ್ಕ್ಕು ನೋಡರಮಮಾ ಶ್ರೀಭೋಗಲಿಂಗೇಶ್ವರಾ ॥ ೪೪ ॥

ಶಾರ್ದೂಲವಿಕ್ರೀಡಿತ :

ಸೃಷ್ಟ್ಯಾರ್ಥಂ ಚತುರಾಸ್ಯಘೋರತಪಮುಂ ಪ್ರಾರಂಭಿಸಲ್ಭೂಮಿಗು ।
ತೃಷ್ಣಗ್ರಾಧಿಕಮಾಗೆ ದೇವತತಿಯಂ ಸಂತಾಪಿಸಲ್ ನಿರ್ಜರಾ ॥
ಜೆಷ್ಣಭ್ರೂದ್ವಯ ಮಧ್ಯದಿಂದಲೊಗೆದಂತಾನರ್ಧನಾರೀಶ್ವರಂ ।
ಜಿಷ್ಣೋಪೇಂದ್ರರ ಕಾಯ್ದು ಕಂಜಭವಗಿಷ್ಟಾರ್ಥಂದ ಭೋಗೇಶ್ವರಾ ॥ ೪೫ ॥

ಮತ್ತೇಭವಿಕ್ರೀಡಿತ :

ವದಗುತ್ತರ್ಧ ಬಲೇಶ್ವರಂಗೆ ಋಷಿಗಳ್ ಶ್ರೀದಾರುಕಾರಣ್ಯದೊಳ್ ।
ಬೆದರುತೇಗಮೊಡರ್ಚಲಾಗ ಮಖದಿಂ ವ್ಯಾಘ್ರಾಸುರಂ ಜನ್ಮಿಸೀ ॥
ಗದರುತ್ತೈತರಲೀಶನಾರ್ದು ಜಯಸಲ್ ತದ್ಚರ್ಮದಿಂ ಸರ್ಪ್ಪದೈ ।
ತ್ಯ ದಿಸಲ್ ಛೇಧಿಸಿದರ್ಧನಾರಿರಮಣ ಶ್ರೀಭೋಗಲಿಂಗೇಶ್ವರಾ ॥ ೪೬ ॥

ತೆರಳುತ್ತರ್ಧಬಲೇಶ ದಾರುವನದೊಳ್ ಶ್ರೀಕಾಂತನಂಜಾನಿಪಾ ।
ವರಯೋಗೇಂದ್ರರ ಪ್ರತ್ಯವಾಯಕಡಸೀ ತಜ್ಞಾಯರಂ ಭಂಗಿಸೀ ॥
ಬೆರೆಯಂತರ್ಜಿಸಿ ಬಂಧನೆಂದು ವಿಶ್ರುತಂ ಶ್ರೀಕಾಳಿಕಾಕಾಂಡದೋ ।
ಳರಿಯರ್ ಕೂರ್ಮಪುರಾಣಸೂತವಚನಂ ಶ್ರೀಭೋಗಲಿಂಗೇಶ್ವರಾ ॥ ೪೭ ॥

ವಿಧಿಭ್ರೂಮಧ್ಯದೊಳೀಶ ಪುಟ್ಟಿದದಕೇ ದೈತ್ಯಾರಿಗೇ ಪೌತ್ರನೆಂ ।
ದೊದರ್ದರ್ ವಿಪ್ರರಮೋಘ ಶರ್ವ್ವಗೆ ಹರಿ ಸ್ತ್ರೀಯೋನಿಕೂಡಿರ್ದನೆಂ ॥
ಬುದದಲ್ ಪದ್ಮಪುರಾಣ ವಾಕ್ಯ ನಿಜನೇತ್ರಂಭೋಜದಿಂ ಪೂಜೆ ಮಾ ।
ಡಿದ ನಾರಾಯಣನೆಂಬುದಾಡರಧಮರ್ ಶ್ರೀ ಭೋಗಲಿಂಗೇಶ್ವರಾ॥ ೪೮ ॥

ಅಜಬ್ರಹ್ಮಾಂಡ ಸಮಸ್ತ ವಿಶ್ವಕಧಿಕಾರಾನೆಂದು ವೆಚ್ಚುತ್ತಲಂ ।
ಬುಜನೇತ್ರಾದಿ ಸುರೌಘನಾಥನೆನಲಾ ಸರ್ವಜ್ಞ ವೇದಾನನಂ ॥
ತ್ಯಜಿಸುತ್ತೊಂದು ಶಿರಂ ಚಕರ್ತಬೆಸೆಯಂ ಸಂಹಾರನೆಂದಾವಗಂ ।
ನಿಜದಿಂ ಕೂರ್ಮಪುರಾಣದಲ್ಲಿ ನುಡಿಗುಂ ಶ್ರೀಭೋಗಲಿಂಗೇಶ್ವರಾ ॥ ೪೯॥

ಶತಜನ್ಮಂ ನಿಜಪುತ್ರರೂಪಿಗೆಳಸೀ ಬೆಂಗೊಂಡು ಬರ್ಪ್ಪಂನ್ಯಗಂ ।
ಶತಧರ್ಮಾದಿನಿಲಿಂಪ ಚಕ್ರಮಿಡುಕೆಂದುದ್ಘೋಷಿಸಲ್ ಕೇಳ್ದು ತಾಂ ॥
ಹುತಭುಗ್ರೇತಕರಂ ಕೆರಳ್ಚಿ ಶಿರಸಂ ಚಿಚ್ಛೇದನಂಗೆಯ್ದು ಸಂ ।
ಮತದಿಂ ಜಿಂಕರಿಪಂತೆ ತಾಳ್ದು ಮೆರದ ಶ್ರೀಭೋಗಲಿಂಗೇಶ್ವರಾ ॥ ೫೦ ॥

ಹರ ತಾಂ ಕಾಡಿನೊಳಿರ್ಪ್ಪನೆಂಬರಧಮರ್, ಪಂಕೇಜನಾಭಂ ಜಲಂ ।
ಧರ ದೈತ್ಯೇಂದ್ರನ ಪತ್ನಿವೃಂದಿಗೆಳಸುತ್ತಜ್ಞಾನದಿಂ ಸಾಧ್ವಿಯೊಳ್ ॥
ಬೆರೆಯಲ್ ಕಾಂತೆ ಕೃಶಾನು ಪೊಕ್ಕು ಮಡಿಯಲ್ ತನ್ನಾಮ ವೃಂದಾವನಂ ।
ನೆರೆ ಶೋಕಾರ್ಥದಿ ವಿಷ್ಣುಸೇರ್ದನಕಟ ಶ್ರೀಭೋಗಲಿಂಗೇಶ್ವರಾ ॥ ೫೧ ॥

ಜನನ ಮೃತ್ಯುವಿದೂರ ಭರ್ಗ್ಗ ಸಕಲ ಬ್ರಹ್ಮಾಂಡ ಸಂಹರ್ತ್ತದೊಳ್ ।
ವನಜಾನೇತ್ರ ವಿಧೇಂದ್ರಪೂಗ ದಹಿಸುತ್ತಾನಂದದಿಂ ಭಸ್ಮ ಭೋಂ ॥
ಕನೆ ತಾಳಿರ್ದ್ದ ಮಹೇಶನೆಂದು ರವಿ ಪೌರಾಣೋಕ್ತಿ ಬ್ರಹ್ಮಾಂಡ ಮ ।
ತ್ತನಿಶಂ ನೋಡೆ ಧರಾ ಶ್ಮಶಾನ ಮಹುದೈ ಶ್ರೀಭೋಗಲಿಂಗೇಶ್ವರಾ॥ ೫೨ ॥

ಚಂಪಕಮಾಲಾ :

ವನರುಹಜಾಂಡನೇಕ ನಿಜಲೋಚನಪಾವಕದಿಂದ ಭಸ್ಮಗೆ ।
ಯ್ದನುಮತಿಯಿಂದಲೋರ್ವ್ವ ನೆಡೆಯಾಡುವನದ್ಭುತ ರೂಪಮಾಂತು ತಾ ॥
ನನವರತಂ ಶ್ಮಶಾನ ಗೃಹಶಂಕರನೆಂಬುದಥರ್ವಣೋಕ್ತಿದಲ್ ।
ಜಿನುಗರ ವಾಕ್ಯಮೇನು ಶಿವನೆ ತ್ರಿಗುಣಾತ್ಮನು ಭೋಗಲಿಂಗವೇ ॥ ೫೩ ॥

ಮತ್ತೇಭವಿಕ್ರೀಡಿತ :

ಮುನಿದೂರ್ವ್ವಾಸನ ಶಾಪದಿಂದ ಮದವೆತ್ತಜ್ಞಾನದಿಂ ವ್ಯಾಸ ಶ್ರೀ ।
ಶನೆ ದೈವಂ ಪೆರತಿಲ್ಲವೆಂದು ಕರಗಳ್ ಪ್ರೋತ್ಥಾಪನಂಗೆಯ್ಯೆ ಶ್ರೀ ॥
ಘನೆ ನಂದೀಶ್ವರ ತೋಳ್ಗಳುತ್ತರಿಸಿ ಬೀಲಜ್ಯಾಕೃತಿಂ ವೆತ್ತಳಲ್ ।
ಧ್ವನಿಯಿಂ ಪೇಳ್ದನು ಬಿಂದು ಮಾಧವನೊಳು ಶ್ರೀಭೋಗಲಿಂಗೇಶ್ವರಾ॥ ೫೪ ॥

ಹರಿ ತಾನಾಲಿಸಿ ಬಾದರಾಯಣನೊಳಿಂತ್ಯಂದಂ ಜಗನ್ನಾಥನಾಂ ।
ಹರಮನ್ನಾಥನು ಕೀರ್ತಿಸೆಂದು ಬೆಸಸಲ್ ವಿಶ್ವೇಶನಂಕಾಶಿಯೊಳ್ ॥
ತುರಿಯಿಂ ಪ್ರಾರ್ಥಿಸಿಯುಗ್ಮಹಸ್ತಪಡೆದಂ ಪಾರಾಶರಾತ್ಮೋದ್ಭವಂ ।
ವರಕ್ರೌಂಚಾರಿಪುರಾಣಮೆಂದು ವಚ ಕಾಶೀಕಾಂಡ ಭೋಗೇಶ್ವರಾ ॥ ೫೫ ॥

ಕುಶಜಾತೋದರ ಪೂರ್ವ್ವದೇವನೊಳು ತಾಂ ಪೆಣ್ಣಾಗಿ ಕೂಡಿರ್ದು ಭೋ ।
ಗಿಸುತಾದೈತ್ಯನ ಕೊಂದು ಗರ್ಭಶಿಶುವಂಸಂ ತ್ಯಜಿಸುತ್ತೈತರಲ್ ॥
ಪೆಸರೊಪ್ಪೀ ಬಲಿಚಕ್ರವರ್ತಿಯಿರೆ ತದ್ವೈರತ್ವದಿಂ ಕೇಶವಂ ।
ರಸೆಯೊಳ್ಮೆಟ್ಟಿದ ವಾಮನಾಗಿ ತೆರಳ್ದಿ ಶ್ರೀಭೋಗಲಿಂಗೇಶ್ವರಾ ॥ ೫೬ ॥

ಶರಭೂತೋದ್ಭವ ಪಾಂಚಜನ್ಯಧರರುಂ ಪಾದಾರ್ಥದಿಂದೀಶನಾ ।
ಶಿರಸಾಂಘ್ರಿದ್ವಯ ಕಾಣ್ಬೆವೆಂಬ ಬೆಸೆಯಿಂ ಗೃಧ್ರೋವರಾಹಾಕೃತಿ ॥

ಧರಿಸುತ್ತೀರ್ವ್ವರು ಪ್ರೋತ್ವಪಾತನಿ ಮಮಜ್ಯಾಕಾಶಭೂಪ್ರಾಂತದೊಳ್ ।
ಚೆರಿಸುತ್ತೀಶನ ಕಾಣರೆಂಬುದು ನಿಜಂ ಋಗ್ವೇದ ಭೋಗೇಶ್ವರಾ॥ ॥ ೫೭ ॥

ಮೃಡದಿಕ್ಪಾಲರೊಳೋರ್ವ್ವ ವಿಷ್ಣುನಿಸದಂ ಭೂಮಧ್ಯದೋಳಿರ್ಪ್ಪನೆಂ ।
ದೊಡನೆಯ್ದೀ ಕೊರಚಾಡುತಿರ್ಪ್ಪರರರೇ ಭೂಪಾದನೈರುತ್ಯಕಾ ॥
ಷ್ವೆಡೆಯೀಶಾನ್ಯದಿಗೋತ್ತಮಾಂಗಧರಣೀ ಮಧ್ಯಂ ಭಗಸ್ಥಾನ ಮೆಂ ।
ದಡಸೀಕಾಸ್ಯಪಶಾಸ್ತ್ರಸೂಕ್ತಿ ಮೆರೆಗುಂ ಶ್ರೀಭೋಗಲಿಂಗೇಶ್ವರಾ॥ ॥ ೫೮ ॥

ಶಾರ್ದೂಲವಿಕ್ರೀಡಿತ :

ತದ್ಧಾತ್ರೀ ಶಿರಸಾಂತದಿಕ್ಕೆಯೊಂಳು ಶ್ರೀರುದ್ರೇಶನಿರ್ಪ್ಪಂ ಧರಾ ।
ಮಧ್ಯೇ ವಿಷ್ಣು ವಸುಂಧರಾಂಘ್ರಿತಳದೊಳ್ವಾಗೀಶನೆಂದೆಂಬುದಂ ॥
ವುದ್ಯತ್ಕಾಸ್ಯಪ ಶಿಲ್ಪಿಶಾಸ್ತ್ರರಸೆಯೊಳ್ಪ್ರಖ್ಯಾತಮಾಗಿರ್ಕ್ಕು ವೈ ।
ರುದ್ಧಾಬದ್ಧರ ವಾಕ್ಯಮೇನು ವಿಹಿತಂ ಶ್ರೀಭೋಗಲಿಂಗೇಶ್ವರಾ॥ ॥ ೫೯ ॥

ಮತ್ತೇಭವಿಕ್ರೀಡಿತ :

ಪದದಿಂ ನಾಭಿತಳಾಂತ ಬ್ರಹ್ಮಗಳಪರ್ಯಂತಂ ರಮಾವಲ್ಲಭಂ ।
ಮುದದಿಂ ಮೂರ್ಧ್ನಶಿಖಾಂತ ರುದ್ರಮಯ ನಿತ್ಯಂ ತಚ್ಛಿಖಾಗ್ರಾಂತರಂ ॥
ಸದನ ತ್ರೈಚತುರಾಂಗುಲಾಂತ ಶಿವರೂಪಂ ಸತ್ಯ ಪೂರ್ವೋಕ್ತ ಸ ॥
ಮ್ಮುದಿತಾನುಷ್ಟುಭ ಕಲ್ಪದಲ್ಲಿ ಪರಮ ಶ್ರೀಭೋಗಲಿಂಗೇಶ್ವರಾ॥ ॥ ೬೦ ॥

ಸಕಲ ಪ್ರಾಣಿಗಳುತ್ತಮಾಂಗ ಪರಬ್ರಹ್ಮಸ್ಥಾನ ಭ್ರೂಘ್ರಾಣ ಮ ।
ಧ್ಯಕಳಂಕ ಸ್ವರಲೋಕಸಂಧಿ ಶಿವನಿರ್ಪ್ಪಡುಂಬೊಂಲೆಂದೆಂಬುದಂ ॥
ಪ್ರಕಟಂ ಶಾಂಕರ ಸಂಹಿತೋಕ್ತಿ ಲಘುಜಾಬಾಲೋಪನೀಷತ್ತಿನೊಳ್ ।
ವಿಖಿಲಾತ್ಮರ್ ತಿಳಿದೆಯ್ದಿನೋಡರಕಟಾ ಶ್ರೀಭೋಗಲಿಂಗೇಶ್ವರಾ॥ ॥ ೬೧ ॥

ನಿರಘಂ ನಿರ್ಗುಣ ನಿರ್ವ್ವಿಕಾರನಚಲಂ ನಿರ್ದೇಹ ನಿರ್ಬೀಜ ಪು ।
ಷ್ಕರದೊಳ್ ಭ್ರಾಜಿಸು ವಿಂದ್ರಚಾಪ ಸದೃಘೋದ್ಯದ್ದರ್ಪಣಂತರ್ಗ್ಗತಾ ॥
ಕರದಂತಿರ್ಕ್ಕು ಸದಾಶಿವಂ ತ್ರಿಗುಣ ವೇದಾತೀತ ಚಿದ್ರೂಪ ಶಂ ।
ಕರನೆಂದೆಯ್ದಿಸುವಾತುಲಾಗಮ ವಚ ಶ್ರೀಭೋಗಲಿಂಗೇಶ್ವರಾ॥ ॥ ೬೨ ॥

ವಿಷಜಾಸದ್ಮೆಯ ವಲ್ಲಭಂ ಸಕಲ ಬ್ರಹ್ಮಾಂಡಾದಿನಾಥಾದೊಡೇ ।
ವಿಶದಾತ್ಮ ಭೃಗುಶಾಪದಿಂದ ದಶರೂಪಂ ತಾಳ್ದು ಪುಟ್ಟಿರ್ಪನೇ ॥
ಕಿಸುರಿಂದೆ ಭೃಗುವಿತ್ತ ಶಾಪದುಪ ಹೃತ್ತದ್ಬ್ರಂಹ್ಮ ತಾಳಿರ್ದಬಲ್ ।
ಬೆಸೆಯಂ ಮರ್ಧಿಸಲಿಲ್ಲವೇಕೆ ಭಳಿರೆ ಶ್ರೀಭೋಗಲಿಂಗೇಶ್ವರಾ॥ ॥ ೬೩ ॥

ಪುರಸಂಹಾರನ ವೀರ್ಯದಿಂದ ಹನುಮಾನ್ಪುಟ್ಟುತ್ತಲಾ ಶೌರಿಗೋ ।
ಸ್ಕರ ಸಂಸೇವಕನಾದನೆಂಬರಧಮರ್ ಗೋವಿಂದಕರ್ನಾರಿಗೋ ॥
ಸ್ಕರ ತಾಂ ಸಾರಥಿಯಾದ ಮೇಲೆ ಮಧುಜೀತ್ಕಾರ್ಥಂಗೆ ತಾಂ ಭೃತ್ಯನೇ ।
ವರ ಕಾಕುಸ್ಥನ ಕಾರ್ಯ್ಯಕಾಗಿ ನೆಗಳ್ದಂ ಶ್ರೀಭೋಗಲಿಂಗೇಶ್ವರಾ॥ ॥ ೬೪ ॥

ವೃಷಭಾರೂಢ ತದಂಜನೇಯನ ನವೀನಸ್ತೋತ್ರ ಸಂಗೀತ ಸ ।
ದ್ರಸ ಮಾಧೂರ್ಯ್ಯತೆ ಮಗ್ನನಾಗಿ ಪೆಗಲೋಳಾರೋಹಿಸಲ್ಕೊಡೆ ಸಂ ॥
ದೆಸ ವಾಸ್ಯಂ ಮಿಗೆ ವಕ್ರವಾಯ್ತು ಶಿವಸಾಲೋಕ್ಯಾರ್ಥಸೇರಿರ್ದನೆಂ ।
ದೊಸಿದುಂ ಪದ್ಮಪುರಾಣದಲ್ಲಿ ನುಡಿಗುಂ ಶ್ರೀ ಭೋಗಲಿಂಗೇಶ್ವರಾ ॥ ೬೫ ॥

ನಗಕೋದಂಡನ ಪಾದದಲ್ಲಿ ಹರಿನೇತ್ರಂ ಮಧ್ಯೆಸಿಂಹ್ವಾಜಿನಂ ।
ಮೊಗಮಾಲಾಂತದಿ ಕೂರ್ಮ ಮೂರ್ಧ್ನಕರದೊಳ್ ಕಂಕಾಳ ಶೂಲಾಗ್ರದೊಳ್ ॥
ಮಿಗೆ ಪ್ರೇತಂಝುಷಚರ್ಮಸ್ತಕದೊಳು ಪ್ರೋದ್ಯೋತಮೆಂದಾವಗಂ ।
ಪೊಗಳುತ್ತಿರ್ಪ್ಪುದು ಭೀಮಸೂಕ್ತಿಧರೆಯೊಳ್ ಶ್ರೀಭೋಗಲಿಂಗೇಶ್ವರಾ ॥ ೬೬ ॥

ಕ್ಷಿತಿಯೊಳ್ಮುದ್ರಿಸಿ ವಜ್ರಿ ವಜ್ರಮುರಭಿಚ್ಚಕ್ರಾಯುಧಂ ಪದ್ಮಭೂ ।
ಸ್ಥಿತ ಪದ್ಮಾಂಕಿತಮಿಲ್ಲ ಪೃಥ್ವಿಯೊಳು ತಾಂ ಲಿಂಗಾಂಕಿಂತಂ ಸರ್ವ್ವಶಾ ॥
ಶ್ರಿತದಿಂ ವ್ಯಾಕರಣೋಕ್ತಿ ಶಬ್ದಗಣದೊಳ್ ಸ್ತ್ರೀಲಿಂಗ ಪುಲ್ಲಿಂಗವೆಂ ।
ದತಿಶ್ರೇಯಾನ್ವಿತ ಬಾದರಾಯಣ ವಚಂ ಶ್ರೀಭೋಗಲಿಂಗೇಶ್ವರಾ ॥ ೬೭ ॥

ಹರಿಬ್ರಹ್ಮೇಂದ್ರರು ಕರ್ತರಾದಗಡೆ ಮರಲ್ ಸಂಕ್ಲೇಶಮೇಂ ಕಾರಣಂ ।
ಸಿರಿಯಾಣ್ಮಂಗೆ ದಶಾಂಗ ಪುಷ್ಕರ ಭವಂಗೇಕಾದಶೋತ್ಪಂನ ನಿ ॥
ರ್ಜರರಾಳ್ದಂಗೆ ಭಗಾಂಕ ವರ್ಷಧರಣೀರಾಜೇಂದ್ರ ರುದ್ಯದ್ಭಯಂ ।
ಪರಿಭಾವಾಬ್ಧಿಯೊಳಾಳುತಿರ್ಪ್ಪರಕಟಾ ಶ್ರೀಭೋಗಲಿಂಗೇಶ್ವರಾ॥ ॥ ೬೮ ॥

ಸ್ಮರನಂ ದ್ವಾದಶ ವೇಳ್ಯೆದಗ್ಧತರದಿಂ ವೇದಾಂಗ ವೇದಾಸ್ಯ ಸಂ ।
ಹರ ಪದ್ಮಾಧವ ಗರ್ವ್ವಚಂದ್ರಕರ ಸಂಹ್ನತ್ಯಂ ಸಮಂತೂತ್ಸವಂ ॥

ಗಿರಿಜಾಲಗ್ನವೆ ಪಂಚವಿಂಶತಿ ಲಸತ್ಸರ್ವೇಶನೆಂದಾಗಮೋ ।
ತ್ಕರದೊಳ್ ಶೋಭಿಸುತಿರ್ಕ್ಕು ನಿಮ್ಮ ಮಹಿಮಂ ಶ್ರೀಭೋಗಲಿಂಗೇಶ್ವರಾ ॥ ೭೯ ॥

ಶಿವನಂ ಬಿಟ್ಟು ವಿರಿಂಚಿ ವಿಷ್ಣುಸುರರಾಡ್ಗಾಂಧರ್ವ್ವ ಗೀರ್ವ್ವಾಣರಾ ।
ನಿವಹಂ ದಕ್ಷ ಬರಿಲ್ಚಿಯಜ್ಞ ರಚಿಸಿ ಶ್ರೀರುದ್ರ ಫಾಲಾಕ್ಷದಿಂ ॥
ಭವಿಸುತ್ತಾಸ್ಯ ಸಹಸ್ರದಿಂದ ಬೆರಚಲ್ ಭೂವ್ಯೋಮಕಂಪಿರ್ವ್ವವೋಲ್ ।
ಜವದುದ್ರೇಕದಿ ವೀರಭದ್ರ ತಳರ್ದಂ ಶ್ರೀಭೋಗಲಿಂಗೇಶ್ವರಾ॥ ॥ ೭೦ ॥

ಚಂಪಕ ಮಾಲಾ :

ಅಗಣಿತ ಕೋಟಿರುದ್ರಬಲ ಪಿಂತಿರಲೆಯ್ತರಲಾಗಯಾಗಕೇ ।
ಭಗರವಿನೇತ್ರ ವಹ್ನಿರಸನಾರವಿದಂತಜರಾಣಿಘ್ರಾಣ ಮಂ ॥
ಮಿಗೆ ಪ್ರತಿಭಿಂದ್ಯದಕ್ಷಮುಖಶಕ್ರಮುರಾಂತಕ ಹಸ್ತಮಸ್ತಕಂ ।
ಭಗಣಪಪಾತ ವೀರನುರೆ ಕೂಗಿದ ರೌದ್ರಕೆ ಭೋಗಲಿಂಗವೇ ॥ ೭೧ ॥

ಉತ್ಪಲ ಮಾಲಾ :

ದಕ್ಷಕನಾಶ ಹೋಮಜಿತಶೌರ್ಯ್ಯನಿಲಿಂ ಪರದಿವ್ಯಕಾಯಮಂ ।
ತಕ್ಷಕ ಧುರ್ಯಯುಕ್ತ ಘನಭಾವಿಕರೂಪಕ ಸಪ್ತಮಾತೃಕಾ ॥
ರಕ್ಷಕ ರುದ್ರನೆಂದು ಶ್ರುತಿಶೈವ ಪುರಾಣದ ವಾಯುಸಂಹಿತೆ ॥
ಪ್ರೇಕ್ಷಕ ರಾಗರೇಕೆ ಜಡಗಾವಿಲ ವಿಪ್ರರು ಭೋಗಲಿಂಗವೇ॥ ॥ ೭೨ ॥

ಮತ್ತೇಭವಿಕ್ರೀಡಿತ :

ಅಜ ತಾಂ ಶ್ರೀಶನ ಪುತ್ರನೆಂದು ನುಡಿವರ್ ಲೋಕೇಶನಿಂ ಜನ್ಮಧೋ ।
ಕ್ಷಜನಾಮಂ ಹರಿಗೇಕೆ ಬಂದಿತಕಟಾ ಶ್ರೀಕಾಸ್ಯಪಸ್ತ್ರೀಯೊಳಂ ॥
ಬುಜನಾಭಂ ತವೆಪುಟ್ಟಲಾಗ ಜಗದೋಳಿಂದ್ರಾನುಜಾಖ್ಯಂ ಸದಾ ।
ಸೃಜಿಸುತ್ತಿರ್ಪ್ಪ ಮುರಾರಿದೇವನಹನೆ ಶ್ರೀಭೋಗಲಿಂಗೇಶ್ವರಾ॥ ॥ ೭೩ ॥

ಫಣಿರಾಡ್ತಳ್ಪನ ಬಾಧಿಗಳ್ಕಿ ಪೊರಮಾರ್ದೆಳ್ತಂದು ಭ್ರಾಜಿತ್ತ್ವಿಯ ।
ನ್ಮಣಿಯೊಳ್ತಾಂಕ ವಚಾ ಸುರೇಂದ್ರ ಜನಿಸೀ ಕರ್ನಾಖ್ಯದಿಂದಿರ್ದ ಫ ॥

ಲ್ಗುಣನಾಗಿರ್ದು ಹರೀಂದ್ರಕೀಲ ನಗದೊಳ್ಗೌರೀಶನಿತ್ತಾಸ್ತ್ರದಿಂ ॥
ರಣದೊಳ್ಕರ್ನನ ಕೊಂದ ಪಾರ್ಥನರಿಯರ್ ಶ್ರೀಭೋಗಲಿಂಗೇಶ್ವರಾ ॥ ೭೪ ॥

ಚತುರಾಸ್ಯಂ ಹರಿನಾಭಿಪದ್ಮಭವನೆಂದೂರ್ವ್ವೀಸುರರ್ಪೇಳ್ವರ ।
ಚ್ಯುತ ತದ್ಬ್ರಂಹ್ಮನ ಘ್ರಾಣವೆಂಬ ಬಿಲದಿಂದುತ್ಪಂನ ಭೂದಾರದಾ ॥
ಕೃತಿಯಿಂ ದೈತ್ಯನ ಕೊಂದು ಕೊರ್ಬ್ಬಿ ಭುವನಂ ಸಂಹಾರಿಸಲ್ತಾರಕಾ ॥
ಹಿತನಿಂ ಸಂಹೃತಿಯೆಂದು ಪೇಳರಧಮರ್ ಶ್ರೀಭೋಗಲಿಂಗೇಶ್ವರಾ ॥ ೭೫ ॥

ವಿಧುಬ್ರಹ್ಮೇಂದ್ರರು ಗರ್ವ್ವದಿಂದ ಮಸಗುತ್ತಂನ್ಯೋನ್ಯ ಪೆರ್ಚ್ಚುತ್ತಲಿ ।
ರ್ಪುದು ತಾನೀಕ್ಷಿಸಿ ಯಕ್ಷರೂಪದಲಿ ಸರ್ವಜ್ಞತೃಣ ಸ್ಥಾಪಿಸಲ್ ॥
ಕದರಿಂಭಂಗಿತರೆಂಬುದಂ ತಲವ ಕಾರೋಕ್ತ್ಯೋಪನೀಷತ್ತಿನೋ ।
ಳುದಿತಂ ಶೈವ ಪುರಾಣದಲ್ಲಿಯುಪಮನ್ಯೋಕ್ತಿರ್ಕ್ಕ ಭೋಗೇಶ್ವರಾ ॥ ೭೬ ॥

ಭವಸಂಹಾರನುಪೇಂದ್ರನೆಂಬರಮಮಾ ಸೃಷ್ಟ್ಯಾತ್ಮಜಾತ ತ್ರಿಸಂ ।
ಭವನಾಗೀ ಕ್ಷಿತಿಯೊಳ್ವಿಸಾಕ್ಷಿಯಿರೆ ದತ್ತಾತ್ರೇಯನಾಗಿರ್ದುದಂ ॥
ತವೆ ಪಾರಾಶರ ಮತ್ಸ್ಯಗಂಧಿಗೆ ಹರಿ ವ್ಯಾಸಾಗಿ ಪುಟ್ಟಿರ್ದುದಂ ।
ಭುವಿಯೊಳ್ಕೇಶವನೆಂತು ಜನ್ಮರಹಿತಂ ಶ್ರೀಭೋಗಲಿಂಗೇಶ್ವರಾ ॥ ೭೭ ॥

ಬಲಿಪ್ರಧ್ವಂಸಿ ನಿರಾಕುಳಂ ನಿರಘನೆಂಬರ್ದೇವಕೀ ಗರ್ಭದಿಂ ।
ದೊಲಿದುದ್ಭಾವಿತನಾಗಿ ಗೊಲ್ಲರೆಡೆಯೊಳ್ತಾನಿರ್ದ ಕಂಸಾರಿಯಾ ॥
ಲಲನಾ ಪ್ರಂದಕಿರಾತಕೊಯ್ಯೆ ತೊಳಲ್ದುಚ್ಚಿಂತಾಗ್ನಿಗೀಡಾಗಿ ಬಲ್ ।
ಮಲೆಯೊಳ್ ಕೃಷ್ಣ ಪುಳಿಂದನಿಂದ ಮಡಿದಂ ಶ್ರೀಭೋಗಲಿಂಗೇಶ್ವರಾ ॥ ೭೮ ॥

ಋಷಿದೂರ್ವ್ವಾಸನಂ ಪಾದದಿಂದಲೊದೆಯಲ್ ಶ್ರೀವತ್ಸಲಾಂಛನ್ಯನೆಂ ।
ದೊಸಿದಾಖ್ಯಂ ಹರಿ ಮೇಘರೂಪ ಧರಿಸುತ್ತೀಶಂಗೆ ತೇರಾಗಿ ರಾ ॥
ಜಿಸುತಂ ಸಾಂಪ್ರತಸಾಂಬನೆಂಬ ಸುತನಂ ತಾಂಬೆತ್ತಮಾಪ್ರಿಯ್ಯನೆಂ ।
ತಸಮಾ ದೇವಕದಂಬನಾಥನಹನು ಶ್ರೀಭೋಗಲಿಂಗೇಶ್ವರಾ ॥ ೭೯ ॥

ಚಂಪಕಮಾಲಾ :

ತ್ರಿಪುರ ಪ್ರಹಾರಕೆಂದು ವಸುಧಾರಥ ಸಾರಥಿ ಬ್ರಹ್ಮತಾರಕೇ ।
ಟ್ರಪಸರಥಾಂಗಗೆಯ್ದು ಶಿವನೇರಲು ಪಾತಳಕರ್ಗ್ಗೆ ಶೌರಿತಾ ॥

ಸಪದಿ ಮಹೋಕ್ಷನಾಗಿ ರಥವಾಂತು ಮಗುಳ್ಳಿರವಾದ ಶ್ರದ್ಧೆಯಿಂ ।
ದುಪಮಿಸೆ ವಿಷ್ಣುವಿಂಗೆ ಸರಿಬರ್ಪ್ಪರೆ ನಾಕದಿ ಭೋಗಲಿಂಗವೇ ॥ ೮೦ ॥

ಮಧುವೈರೀಶನ ಶೂಲದಗ್ರದೊಳು ವಿಶ್ವಕ್ಸೇನನಾಗಿರ್ದುದಂ ।
ಮದದಿಂ ವಿಷ್ಣುವಿವಾದದಿಂದ ಶಿವನೊಳ್ ಮೊರ್ಕ್ಕಿರ್ಪ್ಪುದಂ ಕಾಣುತಂ ॥
ತಧೆವುತ್ತಾರ್ದುಕಲೇವರಂ ವೃಷಭನಾಲಂಕಾರ ಮಾಡಿರ್ಪ್ಪನೆಂ ।
ಬುದು ತಾವಾಡರನಷ್ಟ ವಿಪ್ರರಮಮಾ ಶ್ರೀಭೋಗಲಿಂಗೇಶ್ವರಾ ॥ ೮೧ ॥

ಮತ್ತೇಭವಿಕ್ರೀಡಿತ :

ಶಿವ ತಾನಲ್ಲದೆ ಬೇರೆ ದೈವಮಿರಲೂ ಸರ್ವ್ವೇಶನೆಂಬಾಖ್ಯ ಮೆಂ ।
ಭುವಿಪಾನಿಯ್ಯ ಹಿರಣ್ಯರೇತ ಪವನಾಕಾಶಾತ್ಮಜೈವಾತ್ರುಕಂ ॥
ರವಿ ಮುಖ್ಯಂ ಪರಿಪೂರ್ಣ್ಣಮಾಗಲದರಿಂದಷ್ಟಾಂಗನೆಂಬಾಹ್ವಯಂ ।
ನವಿಚಾರಾತ್ಮರು ಬಲ್ಲರಾಗಿ ತಿಳಿಯರ್ ಶ್ರೀಭೋಗಲಿಂಗೇಶ್ವರಾ ॥ ೮೨ ॥

ಕಡಲೊಳ್ಪುಟ್ಟಿದ ಪಾಂಚಜನ್ಯಮಣಿಯಂ ಪದ್ಮಾಲಯಾ ಚಾಪಕಾ ।
ರೊಡಲಂಗಾದವು ರಂಭೆಕುಂಭೆಸುಧೆಯಂ ಸಂತಾನಮಿಂದ್ರಂಗೆ ಪೊ ॥
ನ್ನೊಡಲಂಗೇ ಸುರಧೇನು ವೈದ್ಯಸುರೆಯಂ ದೈತ್ಯರ್ಗೆವಾಹರ್ಕಜೊ ।
ನ್ನೊಡಲಕ್ಷ್ವೇಳಮವೇಕೆ ಬಿಟ್ಟರುಸಿರೈ ಶ್ರೀಭೋಗಲಿಂಗೇಶ್ವರಾ ॥ ೮೩ ॥

ಗರಳಂ ಭಕ್ಷಿಸಿ ಭೀಮಾರಾಮತುತಿಯೊಳ್ ತಾನಿರ್ದನೆಂದೆಂಬುದಂ ।
ದುರಳಕ್ಷ್ಮಾಸುರರಾಡುತಿರ್ಪ್ಪರಕಟಾ ರಾಮಾಭಿದಾನಂ ಸದಾ ॥
ಹರಿಗೆಲ್ಲಿರ್ಪ್ಪುದು ವೇದಾಶಾಸ್ತ್ರದಶನ್ಯೆ ಘಂಟೋಕ್ತಿಯೊಳ್ಪೋರರೈ ॥
ಸ್ಥಿರದಿಂ ಪೂರ್ವ್ವದಿ ರಾಮನಾಮ ನಿಮಗೆ ಶ್ರೀಭೋಗಲಿಂಗೇಶ್ವರಾ ॥ ೮೪ ॥

ಭೃಗುಶಾಪಾನ್ವಿತನಾಗಿ ವಿಷ್ಣು ಜನಿಸೀರಾಮಾಹ್ವಯಂ ತಾಳುತಂ ।
ಮಿಗೆ ಲಂಕೇಶನಕೊಂದಪಾಪಮುಸುಕಲ್ಕೀಶೇಂದ್ರ ವೈದೇಹಿ ತಾಂ ॥
ನಗರಾಡ್ಸ್ಥಾಪನ ಪೂಜೆಯಿಂದ ಕಳೆದರ್ ಮೂರ್ಕೋಟಿಲಿಂಗೋಕಗಳ್ ।
ಜಗದೊಳ್ ಸ್ಥಾಪನಮುಂಟು ಸಾಕ್ಷಿನಿಸದಂ ಶ್ರೀಭೋಗಲಿಂಗೇಶ್ವರಾ ॥ ೮೫ ॥

ಜಿತಬಾಣಂಗೆ ಪುರಾಣ ಭಾಗವತದೊಳ್ ದೈತ್ಯೌಘ ಸಂಹಾರನೆಂ ।
ದತಿಪೌರುಷ್ಯವನಾಡು ತಿರ್ಪ್ಪರರರೇ ವೃಂದೇಶನಿಂ ವಿಷ್ಣು ಭಂ ॥
ಗಿತನಾದಂಬರ ಶಿಂಸುಮಾರ ಕಿಡಲೂ ದೈತ್ಯಾರಿಯಂ ಬಾಹ್ವಯಂ ।
ಕ್ಷಿತಿಯೊಳ್ ಕೃಚ್ಛಕೆ ವಾಸವಾಯಿತಕಟಾ ಶ್ರೀಭೋಗಲಿಂಗೇಶ್ವರಾ ॥ ೮೬ ॥

ಚಂಪಕಮಾಲಾ :

ಪರಮತವಾರ್ಧಿಚಂದ್ರ ಮುನಿಪಾಲದಧೀಚಿಯ ಕೂಡೆ ವಿಷ್ಣು ಶಂ ।
ಕರನಪವಾದಿಸುತ್ತ ಮಿಗೆಕೊರ್ಬ್ಬುತಲಿರ್ಪ್ಪುದ ಕಂಡು ತಂನ ಕೈ ॥
ಕಿರಿವೆರಳಗ್ರನಂತ ಹರಿರೂಪವ ತೋರಲು ನಾಣ್ಚಿನಿಂದಿರಲ್ ।
ಸುರನಿಕುರುಂಬ ಮೆಚ್ಚೆ ಮಹಿಮಾಂಬುಧಿ ಪೆರ್ಚ್ಚಿತು ಭೋಗಲಿಂಗವೇ॥ ೮೭ ॥

ಮತ್ತೇಭವಿಕ್ರೀಡಿತ :

ವಿಧಿವಿಶ್ವಂಭರರಾದಿಯಲ್ಲಿ ಶಿವನ ಶ್ರೀಪಾದ ಪದ್ಮಾರ್ಚನಂ ।
ಮುದದಿಂ ಮಾಡಲಭಿಷ್ಟಮಿಯ್ಯಲೆಮಳರ್ ನೈಜಾಖ್ಯಲಿಂಗಂಗಳ ॥
ಭ್ಯುದಯಾಢ್ಯಸ್ಥಲ ಶೇತು ಮಧ್ಯ ವರನಂದೀಕ್ಷೇತ್ರದಿ ಸ್ಥಾಪಿಸಿ ।
ರ್ಪ್ಪುದು ಪ್ರಖ್ಯಾತವಿಶೇಷವಾಗಿ ಧರೆಯೋಳದ್ಯಾಪಿ ಭೋಗೇಶ್ವರಾ ॥ ೮೮ ॥

ಮೃಡ ತಾಂ ವೀನಮರಾಳವಾಹರಳಿಕ ಭ್ರೂಮಧ್ಯಸಂಭೂತನೆಂ ।
ದೊಡೆ ವೇದೋಕ್ತಿಗೆ ಹಾನಿಯುಂಟೆ ಯುಗಭಾಷೋಚ್ಚಾರಣಂಗೆಯ್ದಡೇಂ ॥
ಅಡಸುತ್ತಿರ್ವ್ವರ ಭಕ್ತಿಗೊಲ್ದು ಶಿವತಾಂ ಪುಟ್ಟಿರ್ದನೆಂದಾಡಲು ।
ಜಡರೇಂ ಬಲ್ಲರು ವೇದವಾಕ್ಯಮಿರಲು ಶ್ರೀಭೋಗಲಿಂಗೇಶ್ವರಾ ॥ ೮೯ ॥

ಚಂಪಕಮಾಲಾ :

ಮದನವಿಪಕ್ಷನಿಂದ ಮಧುಸೂದನ ಪದ್ಮಜರಾದಿಯಲ್ಲಿ ತಾ ।
ವುದಿಸಿದರೆಂದು ಮಾಂದುಸಲೆ ರಾಜಿಪಥರ್ವ್ವಣ ವೇದವಾಕ್ಯಮೆಂ ॥
ಬುದು ತಿಳಿದಿರ್ದ್ದು ದೂಷಿಸುವ ವಿಪ್ರರವಿದ್ಯರ ಭಕ್ತಿಹೀನರಾ ।
ಸದೆವುತ ಕುಂಭಿಪಾಕಕೆಮನಿಕ್ಕದೆ ಮಾಣನುರೆ ಭೋಗಲಿಂಗವೇ ॥ ೯೦ ॥

ಮತ್ತೇಭವಿಕ್ರೀಡಿತ :

ಶಿವಲಿಂಗಾಚಿತಭಕ್ತ ಪುಂಗವರಿಗೆ ಕ್ಷೋಣಿಸುರರ್ ಶೂದ್ರರೆಂ ।
ಬುವದೇಂ ಕಾರುಣ ಶೂತಕಂಗಳಿಹವೇ ಲಿಂಗಾಂಗಭಾಜಾತ್ಮರೂ ॥
ರವಿವೈಶ್ವಾನರ ಮಾತರೀಶ್ವರಿಳೆಯೋಳಂತಂತೆ ನಿಃಕಲ್ಮಷರ್ ।
ಭವಭೀರ್ನಿರ್ಜಿತರೆಂದು ಗಾರುಡ ಪುರಾಣೋಕ್ತಿರ್ಕ್ಕುಭೋಗೇಶ್ವರಾ ॥ ೯೧ ॥

ಬಲಿಯಂ ಮರ್ಧಿಸಿ ಪಾತಳಕ್ಕೆ ತುಳಿದು ಬ್ರಹ್ಮಾಂಡ ಪರ್ಯಂತ ತಾಂ ।
ಬಳೆದೂರ್ಧಕ್ಕೆ ತ್ರಿವಿಕ್ರಮಾಖ್ಯದಲಿ ಲಕ್ಷ್ಮೀನಾಥ ಪೆರ್ಚ್ಚಲ್ಕೆ ಬೆಂ ॥
ನೆಲುವಂ ಸೀಳ್ದು ಪಿನಾಕಿತಾಳ್ದನಡೆ ಕಂಕಾಳಸ್ತ್ರೀವೆಂದೆಂಬುದಂ ।
ಲಲಿತಸ್ಕಾಂದ ಪುರಾಣ ಸೂಕ್ತಿ ಮೆರೆಗುಂ ಶ್ರೀಭೋಗಲಿಂಗೇಶ್ವರಾ ॥ ೯೨ ॥

ಹರನಂ ಪೂಜಿಸಿದಂಥ ಬಾಣನ ಕರಂಗಳ್ಪೋದವೆಂಬರ್ ಕ್ಷಿತೀ ।
ಸುರರು ಶ್ರೀಪತಿಬಾಣದೈತ್ಯನೊಡನೇ ಸಂಗ್ರಾಮದೊಳ್ಪೋಲ್ದು ತಾಂ ॥
ಪೊರ ಮಾರ್ದೀಶನ ಕೂರ್ತು ಪ್ರಾರ್ಥಿಸಲು ಶ್ರೀದುರ್ಗ್ಗಾಧಿಪಂ ಮೆಚ್ಚಿಸಾ ।
ಸಿರ ತೋಳ್ಗಳ್ ಹರಿಯಿಂದೆ ಸೀಳಿಸಿದನು ಶ್ರೀಭೋಗಲಿಂಗೇಶ್ವರಾ॥ ೯೩ ॥

ನಿಜನೇತ್ರಂಬುಜದಿಂದ ವಿಷ್ಣು ಶಿವನ ಶ್ರೀಪಾದಗಳ್ಪೂಜಿಸೀ ।
ಭಜಸೀರ್ಪಾತನೆ ಬಾಣ ರಾವಣ ಪ್ರಮುಖರ್ಪಾಸಟೆಂಬರ್ಪ್ಪರೇ ॥
ಕುಜನರ್ ಪೂರ್ವ್ವಸುರರ್ಗ್ಗೆ ಶರ್ವನೊಲಿದೂ ನಿತ್ಯತ್ವಮೇಂ ಕೊಟ್ಟನೇ ।
ದ್ವಿಜರ ಜ್ಞಾನದಿನಾಡಲೇನು ದಿಟವೇ ಶ್ರೀಭೋಗಲಿಂಗೇಶ್ವರಾ ॥ ॥ ೯೪ ॥

ನಳಕರ್ಣಂ ಶಿಬಿ ಚಕ್ರವರ್ತಿಬಲಿಗಳ ಕಂಸಾರಿಯಂ ಪೂಜಿಸಿ ।
ಫಲ ಕೈವಲ್ಯ ವಿಹೀನರಾದರಕಟಾ ಕೋದಂಡದಿಂ ಗ್ರಾಮದಿಂ ॥
ಸಲೆಕುತ್ತುತ್ತಪವರ್ಗ್ಗಮಾರ್ಗ್ಗ ಪಡೆದರ್ ಕಾತ್ಯಾಯನೀಪ್ರಿಯ್ಯನಿಂ ।
ದಿಳೆಯೊಳ್ಸಾಕ್ಷಿ ಮ್ರುಕಂಡ ಪುತ್ರನಿರನೇಂ ಶ್ರೀಭೋಗಲಿಂಗೇಶ್ವರಾ ॥ ೯೫ ॥

ಸುರಸಂದೋಹಸಭಾಧ್ಯ ಕಾಮಸುರಭೀ ಚಿಂತಾಮಣಿ ಗ್ರಾವ ಪು ।
ಷ್ಕರ ಮಾತಂಗ ಸುಪಾರಿಜಾತ ಸುರಪಂಗಿತ್ತಿರ್ದ್ದಡೇಂ ಭೀತೆಯಿಂ ॥
ಪಿರಿದಾಯಾಸದೋಳೋಡಿ ವಂಶತರುರೂಪಾಂತಿರ್ಪುದಂ ಕಾಣುತೀ ।
ಶ್ವರ ತಾಂ ರಕ್ಷಿಸಿ ಮೋಕ್ಷವಿತ್ತು ಮೆರದಂ ಶ್ರೀಭೋಗಲಿಂಗೇಶ್ವರಾ ॥ ೯೬ ॥

ಚಂಪಕ ಮಾಲಾ :

ಹರನ ಸುಶಕ್ತಿರೂಪ ಹರಿಯೆಂಬುದು ಜೈಮಿನಿವಾಕ್ಯಮುಂಟು ತೈ ।
ತ್ತಿರಿ ವರದೇವಿಸೂಕ್ತೆ ವಿಮಲಭ್ರಣಿ ಸೂಕ್ತಿಗಳುಂಟು ಪೂರ್ವ್ವದೊಳ್ ॥
ಹರಿಪ್ರಕೃತಿ ಸ್ವರೂಪ ಹರ ತಾಂ ಪುರುಷಾಕೃತಿಯೆಂದು ಕೌಂಚ ಸಂ ।
ಹರನ ಪುರಾಣದಲ್ಲಿ ಶಿವಪೇಳ್ದ ಮುರಾರಿಗೆ ಭೋಗಲಿಂಗವೇ ॥ ೯೭ ॥

ಮತ್ತೇಭವಿಕ್ರೀಡಿತ :

ಘನಬೃಂದಾರಕರತ್ತಣಿಂದಲಧಿಕಂ ಲೋಕೇಶ ತದ್ಬ್ರಂಹ್ಮನಿಂ ।
ವನಮಾಲ್ಯುತ್ಕಟ ತದ್ಗದಾಗ್ರಭವ ಪಂಕೇಜನ್ಮಜಾರತ್ತಣಿಂ ॥
ದನಘಾತ್ಮೇಶನೆ ಶ್ರೇಷ್ಠನೆಂದು ಶಿವಸಂಕಲ್ಪೋಪನೀಷತ್ತಿನೋ ।
ಳನಿಶಂ ಪೇಳ್ವುದು ದೇವ ನಿಮ್ಮಮಹಿಮಂಶ್ರೀಭೋಗೇಶ್ವರಾ ॥ ೯೮ ॥

ಅರವಿಂದೇಷ್ಟ ಸುಧಾಗಭಸ್ತಿಪವನಂ ವೈಶ್ವಾನರಂ ಮೃತ್ಯುಭೀ ।
ಕರ ರುದ್ರೇಶ್ವರನತ್ತಣಿಂದ ಭಯದಿಂ ಸಂಚಾರಿಪರ್ ಲೋಕದೊಳ್ ॥
ಗಿರಿಜಾನಾಥನೆ ಲೋಕನಾಥನು ಯಜುರ್ವೇದೋಕ್ತಿ ಸತ್ಯಂ ದಿವಾ ।
ಕರ ಪೌರಾಣದೊಳೆಂದು ಪೇಳ್ಗು ಸತತಂ ಶ್ರೀಭೋಗಲಿಂಗೇಶ್ವರಾ ॥ ೯೯ ॥

ಧರಣಿಸೈಕತಭಂಗಫೇನ ತ್ರಿಣರೇಣಾಪಾಗ್ನಿಗ್ರಾವಾದಿ ಭಾ ।
ಸುರ ಬ್ರಹ್ಮಾಂಡ ಸಮಸ್ತ ವಿಶ್ವಭುವನಂ ತಾಂ ವ್ಯಾಪ್ತಮಾಗಿರ್ಪ್ಪ ಶಂ ॥
ಕರನೆಂದೂಕ್ತಿಗಳಿರ್ಕ್ಕು ಭವ್ಯವರ ಛಾಂದೋಗ್ಯೋಪನೀಷತ್ತಿನೋ ।
ಳುರೆ ಶ್ರೀರುದ್ರದಿ ಭಟ್ಟ ಭಾಸ್ಕರ ವಚಂ ಶ್ರೀಭೋಗಲಿಂಗೇಶ್ವರಾ ॥ ೧೦೦ ॥

ವೃಷಭತ್ವಂ ಸುಹೃತಂ ಮೃದಂಗ ಬಲವದ್ಘೂದಾರ ಜಾಯತ್ವಮುಂ ।
ಯಿಷುಭೃತ್ಯತ್ವಮನಂತ ಕಾಲದಿಳುತಾನಿಂತ್ತಪ್ಪ ರೂಪಂಗಳಂ ॥
ಬಿಸಿಜಾಕ್ಷಂ ತಳೆದಿರ್ದು ಶರ್ವ್ವನಿಗೆ ಮೇಣಾರ್ಧಂಗನಾಗಿರ್ದುದಂ ।
ನಿಸದಂ ಸ್ಕಾಂದ ಪುರಾಣಶಾಸ್ತ್ರ ಶ್ರುತಿಯೋಳ್ ಶ್ರೀಭೋಗಲಿಂಗೇಶ್ವರಾ॥ ೧೦೧ ॥

ಶಿವಶರ್ವ್ವಾಣಿ ತ್ರಿಮೂರ್ತ್ತಿಗಳ್ಗೆ ನಿರುತಂ ತ್ರೈವೇದ ತ್ರೈವರ್ಣಕೇ ।
ಸವಿತಾಂಬಾಯೆನೆ ಸಾಕ್ಷಿಯುಂಟು ತವೆತತ್ಕಾರುಣ್ಯದಿಂ ಶೈಲ ಸಂ ॥
ಭವೆಯಂಬಾ ಹರ ತ್ರ್ಯಂಬಕಾದಿ ವೆಸರಿರ್ವ್ವರ್ಗ್ಗಿರ್ಕ್ಕು ಸತ್ಯೋಕ್ತಿಯಿಂ ।
ರವಿ ಪೌರಾಣಮಿರಲ್ಕೆ ಮೂಢರರಿಯರ್ ಶ್ರೀಭೋಗಲಿಂಗೇಶ್ವರಾ ॥೧೦೨ ॥

ಜನಿತಾಸೋಮ ರಸಾತಳಗ್ನಿಪವನಂಬೃಂದಾರ ಕದಾವಿರೋ ।
ಚನ ದೇವೇಂದ್ರ ಸಮಸ್ತ ಬುದ್ಧಿವಿತತ ಶ್ರೀವಿಷ್ಣು ಮುಖ್ಯರ್ಗೆ ಸಂ ॥
ಜನನಕ್ಕೀಶ್ವರ ಕಾರಣಾದನೆನುತಂ ಋಗ್ವೇದ ವಾಕ್ಯಂ ವಿದು ।
ರ್ಜನ ವೈಕಾರಿಗಳೇನು ಬಲ್ಲರಿರವಂ ಶ್ರೀಭೋಗಲಿಂಗೇಶ್ವರಾ ॥ ೧೦೩ ॥

ಸ್ಫುರಿತಾಸ್ವಪ್ನ ಋಷೀಂದ್ರ ಪಿತೃವಿಬುಧರ್ ತಾವಿಲ್ಲವಾಪೂರ್ವ್ವತ ।
ತ್ಪರ ಬ್ರಹ್ಮಂ ಮಿಗೆ ಭಾತಿಯೆಂದು ನುಡಿಗುಂ ಬ್ರಹ್ಮೋಪನೀಷತ್ತಿನೊಳ್ ॥
ಸುರಜೇಷ್ಟಚ್ಯುತಹೋಕ್ಷ ಪಾಂಬರ ಚಲಾಮಿಲ್ಲೆಂದು ಜಾಬಾಲಮಿ ।
ರ್ಕುರೆ ವೈಭ್ರಾಜಿಪನದ್ವಿತಿಯ್ಯ ಶಿವನು ಶ್ರೀಭೋಗಲಿಂಗೇಶ್ವರಾ ॥ ೧೦೪ ॥

ದ್ವಿಜದರ್ಭಾಸನದಲ್ಲಿ ನಾಡೆ ಕುಳಿತೂ ಗಾಯತ್ರಿ ಮಂತ್ರಾನಿಶಂ
ಪ್ರ ಜಪಂ ಮಾಡುತ ದಿವ್ಯ ತತ್ವಮಯನಾಗಿರ್ದಂನೆಗಂ ದೇವತ ॥
ವ್ರಜ ಸಂಸೇವಿತ ಭರ್ಗ್ಗನಾಮ ಜಪಿಸಲ್ವೇಳ್ಕೆಂದು ವೇದೋಕ್ತಿಗಳ್ ।
ನಿಜಮಾದಿತ್ಯ ಪುರಾಣದಲ್ಲಿ ತಿಳಿಯರ್ ಶ್ರೀಭೋಗಲಿಂಗೇಶ್ವರಾ ॥ ೧೦೫ ॥

ವರದೂರ್ವ್ವಾಸವಿರಿಂಚಿ ಕೌಶಿಕ ಮೃಕಂಡಾತ್ಮೋದ್ಭವಂ ಬಾಣನಂ ।
ತರದೋಳತ್ರಿದಧೀಚಿ ರಾಮ ಹರಿ ಶಕ್ತಿಂ ಗೌತಮಂ ಕಣ್ವ ಭಾ ॥
ಸುರ ದೇವೇಂದ್ರ ಸುರಾರ್ಯ್ಯ ಶುಕ್ರ ಪ್ರಮುಖರ್ ನಿತ್ಯಂ ಮಹಾದೇವನಾ ।
ಚರಣಾಬ್ಜಾರ್ಚಿಪ ದಿವ್ಯ ಪಾಶುಪತಿಗಳ್ ಶ್ರೀಭೋಗಲಿಂಗೇಶ್ವರಾ ॥ ೧೦೬ ॥

ಮೆರೆವೇಕಾದಶ ಪಾತಿವ್ರತ್ಯರಮಲ ಶ್ರೀಕಂಠನ ಪ್ರಾಂಗಣಂ ।
ತರ ಶ್ರದ್ಧಾಯುಗತರಾಗಿ ಬಂದು ಗುಡಿಸುತ್ತೀಶಾಂಘ್ರಿಯಂ ಕೀರ್ತ್ತಿಸಿ ॥
ಸ್ಥಿರಕೈವಲ್ಯದಗಾರ ಸಾರ್ದರವರಿಂಗಾಪಾರ್ಸಟಿರ್ಪ್ಪರ್ ಸದಾ ।
ಪರಸುತ್ತಿಪ್ಪರು ಮೇಶಶೌರಿ ವಿಧಿ ನಾಕೇಂದ್ರರ್ಗ್ಗೆ ಭೋಗೇಶ್ವರಾ ॥ ೧೦೭ ॥

ಶಾರ್ದೂಲವಿಕ್ರೀಡಿತ :

ಶಾದೋದ್ಭೂತ ಸುಮಿತ್ರ ಚಂದ್ರವಲಯ ಸ್ಫೂರ್ಜತ್ಸಮೀರೆಷ್ಟಗಂ ।
ಗಾದಿಸ್ಥಂಡಿಲ ಕುಂಭಮಸ್ತಕ ಸುಸಾಲಗ್ರಾಮ ಸಂತ್ಯಜ್ಯಲಿಂ ॥
ಗಾಧಿಷ್ಠಾನ ವಿಶೇಷಮೆಂದು ತಿಳಿದು ಬ್ರಹ್ಮಾದಿದೇವೌಘನಿ ।
ರ್ಭೇದಾಧ್ಯಕ್ಷಯ ನಿಂತು ಪೂಜಿಸಿದರ್ರೈ ಶ್ರೀಭೋಗಲಿಂಗೇಶ್ವರಾ ॥ ೧೦೮ ॥

ಚಂಪಕ ಮಾಲಾ :

ಶತಧ್ರುತಿ ದಿವ್ಯ ತೇಜ ಸುಶಿಲಾಮಯಲಿಂಗವನಿಂದ್ರನೀಲ ಲಿಂ ।
ಗತುಳ ಸುರಾರಿ ರತ್ನಮಯ ಲಿಂಗವನಿಂದ್ರ ಸುವರ್ಣಲಿಂಗರೈ ॥
ಪತಿತಿಮಿರಾರಿ ತಾಮ್ರಮಯ ಚಂದ್ರಮಶುಕ್ತಿಜಲಿಂಗ ವಿಶ್ವದೇ ।
ವತೆಗಳು ಕಾಷ್ಠಲಿಂಗ ಮಿಗೆ ಪೂಜಿಸುತ್ತಿರ್ಪ್ಪರು ಭೋಗಲಿಂಗವೇ॥ ೧೦೯ ॥

ಶ್ವಶನ ನವೀನ ಪಿತ್ತಮಯಲಿಂಗವ ಮೃಣ್ಮಯವಶ್ವಿನಿ ವ್ರಜಂ ।
ವಸುಗಳುಕಾಂಸ್ಯಲಿಂಗ ಬಹುವರ್ನದಲಿಂಗವ ರುಕ್ಷಮಂಡಲಂ ॥
ಶಶಿಜಮಣಿ ಪ್ರಭಾಸಮಯಲಿಂಗವನ ಸ್ಫಟಿಕಾಭವಾರಿರಾ ।
ಡೆಸಗುವರಾಗ್ನಿಯಂನಮಯಲಿಂಗ ಸದಾರ್ಚ್ಚನ ಭೋಗಲಿಂಗವೇ ॥ ೧೧೦ ॥

ಮತ್ತೇಭವಿಕ್ರೀಡಿತ :

ಅಸುರಾಚಾರ್ಯ್ಯ ಸುಲೋಹಲಿಂಗದಿಕ್ಷಣಂ ಮಾಣಿಕ್ಯ ಲಿಂಗಾರ್ಚ್ಚನಂ।
ವಸುಧಾಪುತ್ರಪ್ರವಾಳಲಿಂಗ ರವಿಜಾತಂ ತಾಮ್ರಲಿಂಗಂ ತವೇ॥
ಕುಸುಮ ಬ್ರಾಜಿತಲಿಂಗ ಸಪ್ತರುಷಿಗಳ್ ವಾಶಿಷ್ಟಸದ್ಭಕ್ತಿಯಿಂ।
ಕುಶಲಿಂಗಾರ್ಚನ ಮಾಳ್ಪರಿಂತು ಸತತಂ ಶ್ರೀಭೊಗಲಿಂಗೇಶ್ವರಾ ॥ ೧೧೧ ॥

ಪ್ರವರಸ್ಥಾಣು ಸುನಾಮಲಿಂಗ ಮುನಿಮಾರ್ಕಂಡೇಯ ಶ್ರೀಶಾಲ್ಮಸಂ ।
ಭವತಾಂ ನವ್ಯಪ್ರಸೂನುಲಿಂಗ ಭುಜಗೆಟ್ಟಂ ಘಾತ ಸದ್ವಿದ್ರುಮ ॥
ಚ್ಛವಿಲಿಂಗೆಯ್ದೆ ಸನುತ್ಕುನೂರ ಪ್ರಮುಖರ್ ಶ್ರದ್ಧಾಪ್ರಯುಕ್ತಂ ಸದಾ ।
ಶಿವಲಿಂಗಾರ್ಚನಮಿಂತು ಮಾಳ್ವರನಘರ್ ಶ್ರೀಭೋಗಲಿಂಗೇಶ್ವರಾ ॥೧೧೨ ॥

ಚಂಪಕ ಮಾಲಾ :

ತ್ರಪುಮಯಲಿಂಗಪೂಜಿಯು ಪಿಶಾಚರಯೋಮಯಲಿಂಗ ದೈತ್ಯವ ।
ಗ್ರ್ಗಪಚಿತ ದಿವ್ಯಗುಂಹ್ಯಕರಜಾಲಕ ಭಾಸತ್ರಿಲೋಹಲಿಂಗಮಂ ॥
ಸುಪವಿರುಚಿ ಸ್ವರೂಪ ಶಿವಲಿಂಗವ ಮಾತ್ರುಗಳರ್ಚ್ಚಿಪರ್ ಸರಿ ।
ಸ್ರುಪವರಜಿಂಹ್ವೆಯಿಂದ ಮಿಗೆ ವರ್ನ್ನಿಸಲಾರನು ಭೋಗಲಿಂಗವೇ ॥ ೧೧೩ ॥

ಮತ್ತೇಭವಿಕ್ರೀಡಿತ :

ಸ್ಥಿರಲಕ್ಷ್ಮೀವರ ಭಾರತೀ ಘನಶಚೀ ಚೌಷಷ್ಟಿಯೋಗಿಣ್ಯರೋ ।
ತ್ಕರ ಮಂ ಮಾತುರರೆಯ್ದೆ ಪೂಜಿಪರು ನಾನಾಕಾರ ಲಿಂಗಂಗಳೆಂ ॥
ದುರೆ ಪೌರಾಣದಿ ವಾತುಲಾದಿ ಶಿವಸಿದ್ಧಾಂತಂಗಳೊಳ್ ಪೇಳ್ವುದೆಂ ।
ದರಿಯರ್ ಚಾರ್ವಾಕಜೈನ ವಿಪ್ರರಧಮರ್ ಶೀಭೋಗಲಿಂಗೇಶ್ವರಾ ॥ ೧೧೪ ॥

ಶಾರ್ದೂಲವಿಕ್ರೀಡಿತ :

ಪೃಥ್ವೀಪೀಠತರಿಕ್ಷ ಲಿಂಗವಪುವೆಂದಾ ಮ್ನಾಯದೊಳ್ ಸರ್ವ್ವ ಭೂ ।
ಸತ್ವಂಗದ್ರುಢಗಂಧಿಲಿಂಗಮಯ ತದ್ಭೂಮ್ಯಾದಿ ಪಂಚಾಕ್ರುತೀ ॥
ತತ್ವಂಗಳ್ ಶಿವಲಿಂಗರೂಪ ಧರಣೀಧಾನ್ಯಂಗಳಂ ಲಿಂಗರೂ ।
ಪತ್ವಂ ಸದ್ಯಮಿವಿರ್ಕ್ಕುನೋಡರಧಮರ್ ಶ್ರೀಭೋಗಲಿಂಗೇಶ್ವರಾ ॥ ೧೧೫ ॥

ಚಂಪಕ ಮಾಲಾ :

ವಿನುತಚರಾಚರಂಗಳು ಮಹೇಶನೊಳುನ್ಮಿಳಿತಷ್ಟಮೂರ್ತಿಯಿಂ ।
ಜನಿಸಿದವೆಂದು ಧೂರ್ತರಿದನಾಡರು ವೇಶಿಯು ಪುತ್ರ ತಂನಯ ॥
ಜನಕನ ನಾಮಮೆಂತು ನೆರೆಪೇಳನು ತತ್ಸುತನಂತೆ ವಿಶ್ವಸಂ ।
ಜನಿತನ ನಾಮ ಬಿಟ್ಟು ಪರರಂಪ್ಪಯ ಪೇಳ್ವರು ಭೋಗಲಿಂಗವೇ ॥ ೧೧೬ ॥

ಮತ್ತೇಭವಿಕ್ರೀಡಿತ :

ಭವದಿಯ್ಯಾಂಘ್ರಿಸರೋಜ ಪೂಜಿಕ ಮಹಾಪಾಪಂಗಳಂ ಮಾಡೆ ಪುಂ ।
ಣ್ಯವನಕ್ಕುಂ ಶಿವಭಕ್ತಿಹೀನ ಶ್ರುತಿ ಸನ್ಮಾರ್ಗ್ಗಂಗಳಿಂ ಪುಣ್ಯವೈ ॥
ಭವದಿಂ ಮಾಡಲನಂತೆ ಪಾಪಮಿದಕೇದಲ್ಸಾಕ್ಷಿ ಚಂಡೇಶ ಕೃ ।
ತ್ಸವಿತ ದ್ರೋಹಮುದಕ್ಷಯಾಗಮಿಹುದ್ಯೆ ಶ್ರೀಭೋಗಲಿಂಗೇಶ್ವರಾ ॥ ೧೧೭ ॥

ಭವನಿರ್ಮ್ಮಾಂಘ್ರಿ ಪಯೋಜ ಸೇವಕ ಸದಾ ಭೂಲೋಕದೊಳಿರ್ದಡೇಂ ।
ಶಿವಲೋಕಸ್ಥನು ಭಕ್ತಿಹೀನಸುರಲೋಕ ಸ್ಥಾನನಾಗಿರ್ದಡೇಂ ॥
ಭುವಿ ಜೀವಾತ್ಮನು ಸಾಕ್ಷಿಯಂದರಿದಕೆ ಶ್ರೀಚಾರಮಂ ಶಕ್ರನುಂ ।
ಟವಿಚಾರರ್ಕ್ಕಳು ಬಲ್ಲರೇನು ಮಹಿಮಂ ಶ್ರೀಭೋಗಲಿಂಗೇಶ್ವರಾ ॥ ೧೧೮ ॥

ಶಿವಭಕ್ತಾಬ್ಧಿಸುಧಾಕರಂ ಸುಜನಹಂ ಸರ್ವ್ಯೋಹ ಪದ್ಮಾಕರಂ ।
ಶಿವಲಿಂಗಾಂಶಜನೌಘ ದಿವ್ಯದಳ ಚೂತಾರಾಮಚೈತ್ರಂ ಸದಾ ॥
ಶಿವಪೂಜಾರತರಂಗ ತಾಂ ರಸಿಕರಾಲಂಕಾರಮಾಗಿರ್ಕು ಪ್ರೋ ।
ತ್ಸವ ಸೌಖ್ಯಂ ಭವದಿಯ್ಯನಾಮ ಶತಕಂ ಶ್ರೀಭೋಗಲಿಂಗೇಶ್ವರಾ ॥ ೧೧೯ ॥

ಜರತಾಗಿರ್ಪ್ಪ ವೃಷೇಂದ್ರ ವಾಹನ ತವ ಶ್ರೋತ್ರಂಗಳೊಳ್ಕುಂಡಲೀ ।
ಶ್ವರಿರಿರ್ಪ್ಪರ್ ಹಿಮಶೈಲರಾಜ ತಿಳಿದಿರ್ದೇಂ ಗೊಟ್ಟನಾ ಪುತ್ರಿಯಂ ॥
ನೆರೆನಾಂ ಪೇಳ್ವೆಮದಿಯ್ಯ ನವ್ಯಮನವೆಂಬುಕ್ಷಾಧಿರುಹ್ಯಾಗಿ ಸ ।
ತ್ವರದಿಂ ಮಾವಗೆ ಪ್ರೀತಿ ಬರ್ಕೆನುತಿ ತಾಳ್ಕರ್ನಕ್ಕೆ ಭೋಗೇಶ್ವರಾ ॥ ೧೨೦ ॥

ಶಿವನೇ ನಿಮ್ಮ ವಿನೋದಕೋಸುಗ ಲಸದ್ವಿಶ್ವಂಗಳಂ ನಿರ್ಮ್ಮಿಸು ।
ತ್ತವನೀ ವ್ಯೋಮ ಚರಾಚರಂಗಳೊಳಗೆ ಸ್ತ್ರೀಪುಂಸರೂಪಂಗಳು ॥
ತ್ತುವಮಂ ಕಂಡು ಕಪರ್ಧಿನರ್ತ್ತಿಸುವನೆಂಬರ್ ಪ್ರೌಢರಾನಂದ ಮ ।
ತ್ಕವಿತಾ ಸ್ತೋತ್ರ ವಿಲಾಸಮಲ್ತೆ ನಿಮಗೆ ಶ್ರೀಭೋಗಲಿಂಗೇಶ್ವರಾ ॥ ೧೨೧ ॥

ಸುರಂಗಕೇಸರ :

ಪರಮತ ರಂಭಕುಂಭಿಕುಕವೇಂದ್ರ ಚಕ್ರ ಭೂ ।
ಧರ ಶತಕೋಟಿ ಧೂರ್ತಜನ ಜಿಂಪ್ವೆ ಶಸ್ತ್ರ ತಾಂ ॥
ಹರ ಮತಸಿಂಧು ಚಂದ್ರಗುರು ಚಂನವೀರಣಾ ।
ರ್ಯ್ಯರ ಕರಕಂಜಜಾತ ಕವಿ ಭೋಗಲಿಂಗವೇ॥ ॥ ೧೨೨ ॥

ಚಂಪಕ ಮಾಲಾ :

ಶಿವನಮಹಾತ್ವಮೆಯ್ದೆ ವಿನಯೋಕ್ತಿಗಳಿಂದತಿ ಕೀರ್ತನಾರ್ಥದಿಂ ।
ದ ವಿರಳ ಭೋಗಲಿಂಗ ಶತಕಂ ರಚಿಸಿರ್ದನಾವನೆಂದಡೇ ॥
ಕವಿಗಳ ಭೃತ್ಯ ಪೂರ್ವಕವಿಶ್ರೇಷ್ಠರ ಸೇವಕ ಪುತ್ರನಾದ ಸ ।
ತ್ಕವಿ ಬಸವೇಶ ದಿವ್ಯ ಸುಚಿರೈನೆಲೆಧಾಮನು ಭೋಗಲಿಂಗವೇ ॥ ೧೨೩ ॥

ಮತ್ತೇಭವಿಕ್ರೀಡಿತ :

ರವಿಯಂ ಕಾಣುತ ಪದ್ಮಪತ್ರ ವಿಕಚಂ ನೀಲೋತ್ಪಲಂ ರುಕ್ಷರಾ ।
ಟ್ಟವಿಯಂ ಮೇಘವಿತಾನ ಕಂಡು ನಲಿಗುಂ ಚಾದೇಗ ಮೇಣ್ಕೇಕಿಯಂ ॥

ಭವ ನಿಮ್ಮಾಂಘ್ರಿವನೇಜ ವೀಕ್ಷಿಸಿಸದಾಮಚ್ಚೇತ ವಕ್ರಾಂಗ ವೈ ।
ಭವದಿಂ ನರ್ತ್ತಿಸುತಿರ್ಕ್ಕು ಪಕ್ಷವಲರ್ಚಿ ಶ್ರೀಭೋಗಲಿಂಗೇಶ್ವರಾ ॥ ೧೨೪ ॥

ವರಭೋಗೇಶ್ವರ ನಿಮ್ಮ ನಾಮನುತಿಸಲ್ಬೇಕೆಂಬ ಸಂವ್ಯಾಜದಿಂ ।
ದುರೆ ಶ್ರದ್ಧಾಯುತನಾಗಿ ನವ್ಯ ಶತಕಂಗೆಯ್ದಿರ್ದೆ ನೀ ಸ್ತೋತ್ರ ಭಾ ॥
ಸ್ಕರ ಶೀತಾಕರರಿರ್ಪ್ಪರಿರ್ಪ್ಪ ಪರಿಯಾಂತಂ ವ್ಯಾಪಿಸಿರ್ಕ್ಕೇ ಸದಾ ।
ದರದಿಂ ಕೇಳ್ವರಿಗಿಷ್ಟಮಾಗಿ ಧರೆಯೋಳ್ ಶ್ರೀಭೋಗಲಿಂಗೇಶ್ವರಾ ॥ ೧೨೫ ॥

ವಸಂತತಿಲಕ :

ದೇವಾದಿದೇವ ತವಪಾದ ಪಯೋಜ ಪೂಜಾ ।
ಸೇವಾತಿಭಕ್ತಿ ಸಲೆದೇಹಿಪುರಾರಿಯೇ ಮ ॥
ದ್ಭಾವಾಧಿಕಾರ ಭವದೂರ ಬಿಲೇಶಯೇಂದ್ರ ।
ಗ್ರೈವೇಯುಕ ಧೃತಸದಾಜಯ ಭೋಗಲಿಂಗಾ॥ ॥ ೧೨೬ ॥

ಶಾರ್ದೂಳಿನಾಮ :

ಸಕಲಭುವನಪಾಲ ವ್ಯಾಲ ಪಾಲಂ ಗಿರೀಶ ।
ಪ್ರಕಲಿತ ನಗ ಪುತ್ರೀ ಚೇತನಾಂಭೋಜ ಪತ್ರಂ ॥
ವಿಕಸಿತಸವಿತ ಪ್ರಖ್ಯಾತ ಪಾಲಾಕ್ಷ ಶಂಭೋ ।
ಕಕುಭವಸನ ಭ್ರಾಜೇತ್ಪಾಹಿಮಾ ಭೋಗಲಿಂಗಾ ॥ ॥ ೧೨೭ ॥

ವಸಂತ ತಿಲಕ :

ದೋಷಾಪಹರ್ತ್ತಮಲ ಹೃತ್ಸುಜನಾಭಿರಾಮ ।
ಕ್ಲೇಶಾಮಯಾದಿ ಭಯ ಛಿಂದ್ಯ ವಿಧೂತ ಶುಂಭ ॥
ದ್ವೇಷಾಧಿನಾಥ ಜಗದೀಶ ಮಹೇಶ ಶ್ರೀವಿ ।
ಶ್ವೇಶಾದಿ ರುದ್ರಸತತಂ ಜಯ ಭೋಗಲಿಂಗಾ ॥ ॥ ೧೨೮ ॥

ಮತ್ತೇಭವಿಕ್ರೀಡಿತ :

ನುತಸಲ್ಲಕ್ಷಣ ಸಾದು ವೃತ್ತಸಕಲಾಲಂಕಾರ ಸದ್ವರ್ಣ ಸಂ ।
ಯುತ ಸದ್ಭಿಸ್ತವದಿ ಷ್ಣೃಯರ್ಥಕಲೆಯಂ ಸವ್ಯಕ್ತಭಾಷಾವಿರಾ ॥

ಜಿತ ಸೌಭಾಗ್ಯಗಣಾಢ್ಯ ಮಾನಕವಿತಾ ಕನ್ಯಾಂ ಭವಾನೀಘತೇ ।
ಸತತಂ ಪೂರ್ಣವಿಲಾಸದಿಂದೆ ರಮಿಸ್ಯೆ ಶ್ರೀಭೋಗಲಿಂಗೇಶ್ವರಾ ॥ ೧೨೯ ॥

ನಭಕೇಶಾಯ ನಮೋ ನಮೋದುರಿತ ಸಂಹಾರಾಯ ತಾರಾಯ ಚಾ ।
ರುಭವಾರ್ಯ್ಯಾಯ ನಮೋ ನಮೋ ವಿಮಲ ಶ್ರೀ ಸೋಮಾಯ ಭೀಮಾಯ
ಚಾ ॥
ಅಭಿರಾಮಾಯ ನಮೋ ನಮೋ ವಿನುತ ಸೌಭಾಗ್ಯಾಯ ತೇ ।
ಶುಭರೂಪಾಯ ನಮೋ ನಮೋ ನವರತಂ ಶ್ರೀಭೋಗಲಿಂಗೇಶ್ವರಾ॥ ೧೩೦ ॥

ಶಾರ್ದೂಲವಿಕ್ರೀಡಿತ :

ಶ್ರೀಶರ್ವ್ವಾಯ ನಮೋ ನಮೋ ಗರಳಶಾಙ್ಗ್ರೀವಾಯದೇವಾಯ ಚಾ ।
ಈಶಾನಾಯ ನಮೋ ನಮೋ ಮಮತು ಸಂಸರ್ಗ್ಗಾಯ ಭರ್ಗ್ಗಾಯ ತೇ ॥
ವೈಶದ್ಯಾಯ ನಮೋ ನಮೋ ವರದ ಶ್ರೀರುದ್ರಾಯ ಭದ್ರಾಯ ಚಾ ।
ಕ್ಲೇಶಘ್ನಾಯ ನಮೋ ನಮೋ ನವರತಂ ಶ್ರೀಭೋಗಲಿಂಗೇಶ್ವರಾ ॥
॥ ೧೩೧ ॥

ಇತಿ ಶ್ರೀಭೋಗಲಿಂಗೇಶ್ವರ ಶತಕಂ ಸಂಪೂರ್ಣ ಮಂಗಳ ಮಹಾ
ಶ್ರೀ ಶ್ರೀ ಶ್ರೀ ....

◆

ಅದ್ಯಾಯ – ೨.

ಪಾರ್ವತಿ ಪರಮೇಶ್ವರರ ಲಗ್ನದ ಪದಗಳು

೧ .ಪಾರ್ವತಿ ಪರಮೇಶ್ವರರ

ಲಗ್ನಕ್ಕೆ ದೇವತಾ ಸ್ತ್ರೀಯರು ಬರುವ ಪದ

ಇಂದ್ರನ ಸತಿ ಶಚಿದೇವಿಯರು । ಚಂದ್ರನ ಪತಿ ರೋಹಿಣಿಯರು ।
ಇಂದ್ರವರ ಜಾನಸತಿ ಲಕ್ಷ್ಮಿಯರು । ಶೋಭಾನವೆ ॥
ಇಂದ್ರವರ ಜಾನಸತಿ ಲಕ್ಷ್ಮಿಯರು ಬಂದಾರು।
ಚಂದ್ರಶೇಖರನ ಮದುವೆಗೆ ಶೋಭಾನವೇ॥ ॥ ಪ ॥

ವರ ಪುಣ್ಯಶಾಲಿಯರು । ವರಪ್ರತಿಮಬಾಲಿಯರು ।
ವರ ದಾಸಿ ಗೌರಿ ವೃತದವರು । ಶೋಭಾನವೆ ॥
ವರದಾಸಿ ಗೌರು ವೃತದವರು ಬಂದಾರು ।
ಪರತರ ಶಿವನ ಮದುವೇಗೆ ॥ ಶೋಭಾನವೆ ॥ ॥ ೧ ॥

ಮದಗಜದ ನುಡಿಯವರು । ಮಧುರದ ಸವಿನುಡಿಯವರು।
ಹದಿನಾರು ವರುಷದ ಹರೆಯದವರು । ಶೋಭಾನವೇ ॥
ಹದಿನಾರು ವರುಷದ ಹರೆಯದವರು ಬಂದಾರು।
ಸದಮಲ ಮೃಡನ ಮದವೀಗಿ ಶೋಭಾನವೆ ॥ ॥ ೨ ॥

ಯಳೆ ಹರೆಯದ ಕೋಮಲ ಗಾತ್ರೆಯರು ।
ಗಿಳಿ ನುಡಿ ಘನ ಮಿಂಚಿನ ನೇತ್ರೆರು ।
ಸೆಳೆ ನಡುವಿನ ಸಾರ ಸುಗುಣಿಯರು ॥ಶೋಭಾನವೆ ॥
ಸೆಳೆ ನಡುವಿನ ಸಾರ ಸುಗುಣಿಯರು ಬಂದಾರು
ಯೆಳದೇರ ಶಿವನ ಮದುವೀಗಿ ॥ ಶೋಭಾನವೆ ॥ ॥ ೩ ॥

ಆಲಿ ಪಲದ ಮುಡಿಯವರು । ಆಲತ್ತಿಗೆಯಿಟ್ಟಡಿಯವರು।
ಕಲಕಂಠರವದ ಕಾಮಿನಿಯವರು ಶೋಭಾನವೇ ॥
ಕಲಕಂಠರವದ ಕಾಮಿನಿಯವರು ಬಂದಾರು ।

ಅಲಕಾಲೋಚನನ ಮದುವೀಗೆ ಶೋಭಾನವೇ ॥ ॥ ೪ ॥
ಸಾರಚಿರ್ರೈನಿಲಯ ಪುರದ ವರ ಚನ್ನವೀರೇಶ್ವರನು ।
ಪರುಷದಿ ಓಲಗಕೆ ಬರುತಿರಲು ಶೋಭಾನವೇ ॥
ಪರುಷದಿ ಓಲಗಕೆ ವೀರೇಶ ಬಂದಾರು ।
ಹರನ ಪರಶಿವನ ಮದುವೀಗಿ ಶೋಭಾನವೇ ॥ ॥ ೫ ॥

೨. ಪರಶಿವನಿಗೆ ಎಣ್ಣೆ ಹಚ್ಚುವ ಪದ

ಶ್ರೀ ಗುರು ದೇವನಿಗೆ । ಶ್ರೀ ಗಣೇಶನ ಪಿತಗೆ
ಶ್ರೀ ಗೌರಿ ರಮಣನಿಗೆ ನೀವು ಹಚ್ಚೀರಿ ನೈಯ್ಯಣ್ಣೆ ॥ ದ್ರು ॥

ಶ್ರೀ ಗೌರಿ ರಮಣನಿಗೆ ಬೇಗನೆ ಸುರಗಿಯ ಸುತ್ತುತಲಿ
ರಾಗದಿ ನಲಿದು ಪಾಡುತಲಿ । ನೀವು ಹಚ್ಚೀರಿ ನೈಯಣ್ಣೆ ॥ ಪ ॥

ರನ್ನದ ಗಿಣಿಲೋಳು । ಮನ್ನೆ ತೈಲವ ನೀಡಿ ।
ಚಿನ್ನಾದ ಗಣಿ ಪಿಡಿದು । ನಿವು ಹಚ್ಚೀರಿ ನೈಯಣ್ಣೆ ॥
ಚಿನ್ನಾವ ಗಣಿಪಿಡಿದು । ಪನ್ನಿರಗಳ ನಿಲಿಸಿ ।
ಕನ್ನೆರೈವರು ಬಂದು । ನಿವು ಹಚ್ಚೀರಿ ನೈಯಣ್ಣೆ ॥ ॥ ೧ ॥

ಕಳಸ ಕನ್ನಡಿಯಿಂದೆ । ತಳಿರ ತೋರಣದಿಂದೆ ।
ಹೊಳೆವ ಮಂಟಪದೊಳು । ನಿವು ಹಚ್ಚೀರಿ ನೈಯಣ್ಣೆ ॥
ಹೊಳೆವ ಮಂಟಪದೊಳು ಎಳೆಯ ಜೆವ್ವನದವರು ।
ಚಳವೆಟ್ಟದರನಳಿಯನಿಗೆ । ನಿವು ಹಚ್ಚೀರಿ ನೈಯಣ್ಣೆ ॥ ॥ ೨ ॥

ಮುತ್ತು ಮಾಣಿಕ ವಜ್ರ । ಕೆತ್ತಿಸಿದ ಮಣಿಹಾಕಿ ।
ಮುತ್ತಿನಾರತಿ ತುಂಬಿರಿಸಿ । ನಿವು ಹಚ್ಚೀರಿ ನೈಯಣ್ಣೆ ॥
ಮುತ್ತಿನಾರತಿ ತುಂಬಿ । ಸುತ್ತೀದ ಸುರಗಿಯಲಿ ।
ಮುತ್ತೈದೆರೈವರೆಲ್ಲ । ನಿವು ಹಚ್ಚೀರಿ ನೈಯಣ್ಣೆ ॥ । ೩ ॥

ತೋರ ಮುತ್ತಿನ ಚಂದ್ರ । ಹಾರ ಹೈಗಲ್ಹಾಕಿ ।
ದೋರೆ ಕಂಕಣ ಕೈಯ್ಯವರೆ । ನಿವು ಹಚ್ಚೀರಿ ನೈಯಣ್ಣೆ ॥
ದೋರೆ ಕಂಕಣ ಕೈಯ್ಯ । ನಾರೆರೆಲ್ಲರು ನೆರೆದು ॥
ಮಾರಾರಿ ಮೂಲ ಮೂರುತಿಗೆ । ನಿವು ಹಚ್ಚೀರಿ ನೈಯಣ್ಣೆ ॥ ॥ ೪ ॥

ಅರಸೀನ ಎಣ್ಣೆಯನು । ಧರಿಸಿ ಸರ್ವಾಂಗಕ್ಕೆ
ವರಸಿ ಪನ್ನೀರು ಮಜ್ಜನಕೆ । ನಿವು ಹಚ್ಚೀರಿ ನೈಯಣ್ಣೆ
ಬೆರಸಿದ ಪನ್ನೀರು ಯೆರೆವುತ್ತೈನಿಲಯ ।
ಗುರಚೆನ್ನ ವೀರನಡಿಮುಡಿಗೆ । ನಿವು ಹಚ್ಚೀರಿ ನೈಯಣ್ಣೆ ॥ ೫ ॥

೩. ಗಿರಿರಾಜನ ಮನಿಯೋಳು ಗಿರಿಜಾದೇವಿಗೆ ಎಣ್ಣೆ ಹಚ್ಚುವ ಪದ

ಸ್ಯೆಲದಿ ಸತಿಯೋಳು । ಸಹವಾಗಿ ಗಣಿಯನು
ತ್ಯೆಲ ಬಟ್ಟಲ ಪಿಡಿದು ।
ಶ್ಯೆಲಾಧಿ ರಾಜನ ಮಗಳೆ ಗೌರಮ್ಮನಿಗೆ ಯಂಣ್ಣಿಯರಸ ಬನ್ನಿರೆ ॥ ಪ ॥

ಆದಿಯಾನಾದಿಯಂದತ್ತತ್ತ ಮಿರಿದ । ನಾದ ಮೂರುತಿ ಶಿವನೆ
ಭೇದಿಸಿಯಾರ್ದಾಂಗಿಯಾದ ಗೌರಮ್ಮಗ ಯಂಣ್ಣಿಯರಿಸ ಬನ್ನಿರಿ ॥ ೧ ॥

ಲೋಕೇಶನ ಪ್ರಿಯ್ಯ । ಸುರರ್ಪಾಂಗನೆಯರು । ವೆಂಕಟನ ಸತಿಯೇ ।
ಯೇಕದಶಾ ಪತಿವೃತೆಯರು ಗೌರಮ್ಮಗ ಯಂಣ್ಣಿವೆರೆಯ ಬಂನಿರೆ ॥ ೨ ॥

ಮ್ಯೆನಾಕನರಸಿಯೇ । ಮನುಗಳ ಸತಿಯರೇ । ಭೇನನ ಮಡದಿಯರೇ ।
ರ್‍ಯೆನಯಕನ ವಲ್ಲಭೆಯಾದ ಗೌರಂಗಮ್ಮಗ ಯಂಣ್ಣಿಯರೆಸ ಬನ್ನಿರೆ ॥ ೩ ॥

ಸರ್ವಮಂಗಳದಾಯಕಿ । ಲೋಕನಾಯಕಿ । ಸರ್ವಭುವನ ಜನನಿ ।
ಜ್ಯರ್ಮ್ಯ ಮಂಗಳಯೆಂಬ ಹೆಸರುಳ್ಳ । ಗೌರಂಗಮ್ಮಗ್ಗ ಯಂಣ್ಣಿಯೆರಿಸಬನ್ನಿರೆ ॥ ೪ ॥

ಸಂನ್ನುತ್ಯೆನಿಲಯ । ಚನ್ನವೀರೇಶನ ಮನುಣ್ಯಾ ಮಾನಿನಿಗೆ ।
ಚಂನಾಗಿ ದಿವಿಜಾಂಗನಿಯೇ ಗೌರಂಮ್ಮಗೆ ಯಂಣ್ಣಿಯರಿಸ ಬನ್ನಿರೆ ॥ ೫ ॥

೪. ವರಳ ಕಲ್ಲೂ ಪೂಜಿಸಿ ಪಾಡುವ ಪದ

ಶ್ರೀ ಗಣಪತಿ ನಾಮಾ ಬ್ಯಾಗದಲಿ ನೆನೆವುತ್ತ ।
ಯೋಗಿನಿಯರೊನಕಿ ಪಿಡಿದಾರೋ ಸುವ್ವಿ ॥
ಯೋಗಿನಿಯರೊನಕಿ ಪಿಡಿದು ಪೂಜಿಸುತಲಿ ।
ರಾಗದಿ ಶಿವನ ಪಾಡಿದರು ಸುವ್ವಿ ॥ ॥ ಪ ॥

ತರಳಾಕ್ಷಿಯೇರು ದುಂಬೆಗುರುಳೆ ಭಾಮಿನಿಯೇರು ।
ಅರಳ ಕುಂಕುಮ ಗಂಧವರಸೀನ ಸುವ್ವಿ ॥
ಅರಳ ಕುಂಕುಮ ಗಂಧವರಸೀನ ಧರಿಸುತ್ತ ।
ವರಳ ಕಲ್ಲಿನ ಪೂಜೆ ಮಾಡಿದರೂ ಸುವ್ವಿ॥ ॥ ೧ ॥

ಅಡಕೆ ಕೊಬ್ಬರಿ ವೀಳ್ಯಾ । ದೆಡೆ ಬಾಳೆಹಂಣ್ಣು ನೆನೆ ।
ಗಡಲಿ ನಿಂಬೆಯ ಹಂಣ್ಣು ಖರ್ಜೂರಿ ಸುವ್ವಿ ॥
ಗಡಲಿ ನಿಂಬೆಯ ಪಂಣ್ಣು ಖರ್ಜೂರಗಳ ನಿಟ್ಟು ।
ಮಡದೇರು ಪೂಜೆಯ ಮಾಡಿದರು ಸುವ್ವಿ ॥ ॥ ೨ ॥

ಚಿಕ್ಕ ಪ್ರಾಯದವರು । ಚೆಕ್ಕಂದವಾಡುತ್ತ ।
ಅಕ್ಕಿಗಳಿಗೆಯೊರೆಯಿಕ್ಕುತ್ತ । ಸುವ್ವಿ ॥
ಅಕ್ಕಿಗಳಿಗೆಯೊರೆಯಿಕ್ಕುತ ಬಾಲೇರು ।
ಮುಕ್ಕಣ್ಣ ಶಿವನ ಪಾಡಿದರು ಸುವಿ ॥ ॥ ೩ ॥

ವಬ್ಬರೊಬ್ಬರು ತಮ್ಮ । ಕೊಬ್ಬು ಹರೆಯದ ಭರದ ।
ಮಬ್ಬಿಲಿಯರೆಗಂಣ್ಣು ತೆರೆಯುತ್ತ ಸುವ್ವಿ ॥
ಮಬ್ಬಿಲಿಯರೆಗಣ್ಣು ತೆರೆವುತ್ತ ಥಳಿಸುತ್ತ ।
ಸಬ್ಬ ಮಂಗಳೆಯರು ಪಾಡಿದರು ಸುವಿ ॥ ॥ ೪ ॥

ವಲವೃತ್ತಲೀ ಒಲದ ಮೊಲೆ ಮುಚ್ಚಿ ತೆರವುತ್ತ ।
ಸಲೆ ಪಲ್ಲಿನ ಕಾಂತಿ ಸೂಸೂತ್ತ ॥ ಸುವ್ವಿ ॥
ಸಲೆ ಪಲ್ಲಿನ ಕಾಂತಿ ಸೂಸುತ್ತ ಥಳಿಸುತ್ತ ।
ಮಲಹರ ಶಿವನ ಪಾಡಿದರು ಸುವ್ವಿ ॥ ॥ ೫ ॥

ಕೋಗಿಲ ಸ್ವರವೆತ್ತಿ ಬಾಗಿ ಪಾಡುವವರ ।
ಸೋಗೆ ಮಡಿಯು ಓಂದೆ ತೂಗುತ್ತ ಸುವ್ವಿ ॥
ಸೋಗೆ ಮುಡಿಯ ಓಂದೆ ತೂಗುತ್ತ ಥಳಿಸುತ್ತ ।
ಶ್ರೀಗೌರಿ ದೇವಿಯ ಪಾಡಿದರು ಸುವ್ವಿ ॥ ॥ ೬ ॥

ಅಚ್ಚಮಲ್ಲಿಗೆ ದಂಡೆ । ಹಚ್ಚಿದರಸೀನ ಗಂಧ ।
ಹೊಚ್ಚಿದ ಶೆರಗಿನೊಳಡಗುತೆ ಸುವ್ವಿ ।
ಹೊಚ್ಚಿದ ಶೆರಗಿನೊಳಡಗೀದ ಹರದೇರು
ನಚ್ಚಿ ಶಂಕರನ ಪಾಡಿದರು ಸುವ್ವಿ ॥ ॥ ೭ ॥

ಸಾರ ಕುಂಕುಮ ತಿಲಕ । ಗೀರ ಗಂಧವ ನಿಟ್ಟು ।
ವಾರೆ ನೋಟದಿ ನೋಡಿ ನಗುವುತ್ತ । ಸುವ್ವಿ
ವಾರಿ ನೋಟದಿ ನೋಡಿ ನಗುವುತ್ತ ಥಳಿಸುತ್ತ ।
ನಾರಿ ಪಾರ್ವತಿಯುಳ ಪಾಡಿದರು ಸುವ್ವಿ ॥ ॥ ೮ ॥

ಧನ್ನೇರು ರೂಪ ಸಂಪನ್ನೇರು ಪತಿ ಭಕ್ತಿ
ಕನ್ನೇರು ವರಳಕ್ಕಿ ಥಳಿಸುತ್ತ ಸುವ್ವಿ ॥
ಕನ್ನೇರು ವರಳಕ್ಕಿ ಥಳಿಸುತ್ತಲೈನೆಲೆಯ ।
ಚನ್ನವೀರೇಶನ ಪಾಡಿದರು ಸುವ್ವಿ ॥ ॥ ೯ ॥

೫. ಗೋಧಿ ಕಲ್ಲು ಪೂಜಿಸುವ ಪದ

ಸುವ್ವಿ ಶ್ರೀ ಗೌರೀಶಾ । ಸುವಿಶ್ರೀ ಭೃಂಗೀಶಾ ।
ಸುವ್ವಿ ಶ್ರೀನಂದೀಶಾ । ಚಂಡೇಶಾ ಸುವ್ವಯ್ಯ ॥
ಸುವ್ವಿ ಶ್ರೀನಂದೀಶಾ । ಚಂಡೇಶ ಪಾಲಿಪುದು ।
ಸುವ್ವಿ ಶ್ರೀ ಚನ್ನವೀರೇಶ ಸುವ್ವಯ್ಯ ॥ ದೃ ॥

ಗೋಧಿಯ ಕಲ್ಲಿಗೆ । ಆದಿ ರುದ್ರನೇ ಕೀಲು ।
ನಾದ ಕಳೇ ಬಿಂದುವಂದಾಗಿ ಸುವ್ವಯ್ಯ ॥
ನಾದಕಳೆ ಬಿಂದುವಂದಾಗಿ ಬೀಸುತ್ತ ।
ಆದಿ ಪ್ರಮಥೇಶನ ಪಾಡಿದರು ಸುವ್ವಯ ॥ ॥ ೧ ॥

ಶಿವನೆಂಬಕ್ಷರವೆರಡು । ನವಕಲ್ಲುಗಳ ನಡಸಿ ।
ಅವಿರಳ ಜ್ಯೋತಿ ಗುಂಜೀಯ ಸುವ್ವಯ್ಯ ॥
ಅವಿರಳ ಜ್ಯೋತಿ ಗುಂಜಿ ಬಲಿದು ಹಿಡಿದು ।
ಭವವೆಂಬ ಧ್ಯಾನ ಬೀಸಿದರು ಸುವ್ವಯ್ಯ ॥ ॥ ೨ ॥

ಹುಟ್ಟಾದ ಹೊಂದಾದ । ಬಟ್ಟೆಯ ಬಯಸುತ್ತೇ ।
ನಟ್ಟಿರ್ದ ಕೀಲನೋಡುತ್ತೆ ಸುವ್ವ ಯ್ಯ ॥
ನಟ್ಟಿರ್ದ ಕೀಲವ ನೋಡಿ ಮುಕ್ಕು ಬಿಡುತೆ ।
ದಿಟ್ಟಿಯ ತಿರುವಿ ಬೀಸಿದರು ಸುವ್ವಯ್ಯ ॥ ॥ ೩ ॥

ನಾಶಿಕಾಗ್ರದಿ ಹೊಳೆದು ಸೂಸುವ ಮುತ್ತಿನ ।
ಭಾಸುರ ಪ್ರಭೆಯೊಳಡಗುತ ಸುವ್ವಯ್ಯ ॥
ಭಾಸುರ ಪ್ರಭೆಯೊಳಡಗಿ ಗೋದಿಯಕಲ್ಲು ।
ಬೀಸುತ್ತ ಶಿವನ ನೆನೆದಾರು ಸುವ್ವಯ್ಯ ॥ ॥ ೪ ॥

ಕರ ಮನ ನೋಟುಗಳ । ಬೆರಸುತಲ್ಯೆನೆಲೆಯ ।
ಗುರುಚನ್ನವೀರನ ಸ್ತುತಿಯೋಳು ಸುವ್ವಯ್ಯ ॥
ಗುರುಚನ್ನವೀರನ ಸ್ತುತಿಯೋಳ್ಯೈಕ್ಯವಾಗಿ ।
ತಿರುಹುವ ಕಲ್ಲ ನಿಲಿಸಿದರು ಸುವ್ವಯ್ಯ ॥ ॥ ೫ ॥

೬. ಗಿರಿರಾಜ ಮೇನಕಾ ಧಾರಿಯರದು ಶಾಶೆ ತಳಿವ ಪದ

ವನಿತೆ ಶ್ರೀ ಗೌರಿ । ಮನಸಿಜಾರಿಯ ಭಜಿಸಿ ।
ಘನತಪವ ಮಾಡಿ ಮೆಚ್ಚಿಸಿದಳು । ಶೋಭಾನವೆ ॥
ಘನತಪವ ಮಾಡಿ ಮೆಚ್ಚಿಸಿ ಪರಮೇಶ್ವರನ ।
ಮನದನ್ಯಳಾಗಿ ಮೆರೆದಾಳು ಶೋಭನಾವೆ ॥ ॥ ಧ್ರು ॥

ಮುನಿಶಿಲಾದನ । ತನಯ ನಂದೀಶ್ವರನ ।
ವಿನಯಾದಿ ಲಗ್ನ ಮಂಟಪದೊಳು ॥ ಶೊ ॥
ವಿನಯಾದಿ ಲಗ್ನ ಮಂಟಪದೊಳು ಮಿಂದು ।
ಮುನಿಗಣ ನಿರ್ಜರರ ಕರಸಿದನೂ ॥ ಶೋ ॥ ॥ ೧ ॥

ಗರುಡವಾಹನರರು । ವರಹಂಸವಾಹನವರು ।
ಕರಿವಾಹನರವರು ಸುರ ಪ್ರಮಥರು ॥ ಶೋ ॥
ಕರಿವಾಹನದವರು । ಸುರಪ್ರಮಥರೆಲ್ಲಾರು ।
ನೆರೆದಾರು ಶಿವನ ಸನ್ನಿಧಿಯೊಳು ॥ ಶೋ ॥ ॥ ೨ ॥

ಹಸಿಯ ಮೈಲಿರುವ ಯಸೆವ ಮದುಮಕ್ಕಳ ।
ರಸಕಾಂತಿ ರೂಪ ಬಣ್ಣಿಸಲಿಕ್ಕೆ ॥ ಶೋ ॥
ರಸಕಾಂತಿ ರೂಪ ಬಣ್ಣಿಸಲಾನಂತನ ।
ರಸನೆಗಳಿಂದ ನುತಿಸಲಳವೇ ॥ ಶೋ ॥ ॥ ೩ ॥

ಗಿರಿರಾಜ ತನ್ನ ಅರಸಿ ಮೇನಕಿ ದೇವಿ ।
ಶೆರಗೀಗೆ ಶೆರಗ ಗಂಟನಿಕ್ಕಿ ॥ ಶೊ ॥
ಶೆರಗೀಗೆ ಶೆರಗ ಗಂಟಿಕ್ಕಿ ಬಂದೆರಗಿ
ಹರನಿಗೆ ಧಾರೆ ಯರಿದರು ॥ ಶೋ ॥ ೪ ॥

ಸಾರಿದವು ಕಹಳೆ । ಬೀರಿದವು ಕೊಂಬುಗಳು ॥
ಭೇರಿನೌಬಾಜಿ ವಾದ್ಯದಿಂದ ॥ ಶೊ ॥
ಭೇರಿ ನೌಬಾಜಿ ವಾದ್ಯದಬ್ಬರದಿಂದ ।
ಧಾರುಣಿ ಕುಲಗಿಗಳದುರಿದಾವು ॥ ಶೋ ॥ ॥ ೫ ॥

ಗರುಡಕಿನ್ನರರು । ತುರಗ ಮುಖಿ ತುಂಬಗರು ॥
ಭರದಿ ಮೇಳೈಸಿ ಹಾಡುತಿರಲು ॥ ಶೋ ॥
ಭರದಿ ಮೇಳೈಸಿ ಪಾಡಿದರಬ್ಬರದಿಂದೆ ।
ಸುರರು ಪೂಮಳೆ ಸುರಿಸಿದರು ॥ ಶೋ ॥ ॥ ೬ ॥

ಮೀರಿತು ವೈಭವವುಕ್ಕೆರಿತು ಮೋಹದ ಶರಧಿ ॥
ಬೀರಿತು ಪ್ರತಾಪ ಪ್ರಮಥರಿಗೆ ॥ ಶೋ ॥
ಬೀರಿತು ಪ್ರತಾಪ ಪುಮಥರಿಗೆ ಮಂಗಳವ ।
ಸೇರಿತು ಶ್ವೇತಿಂದ್ರ ನರಮನಿಗೆ ॥ ಶೋ ॥ ॥ ೭ ॥

ಲಲನೇರು ಕುಲಕೆ ತಲೆರನ್ನವೆನಿಸುವ
ಲಲಿತಾಂಗಿ ಗೌರೀಶ್ವರನೀಗೆ ॥ ಶೋ॥
ಲಲಿತಾಂಗಿ ಗೌರೀಶ್ವರನೀಗೆ ಶಾಶೆಯ ತಳೆದು ।
ವಲಿದು ವಂದಿಸುತ ನುತಿಸಿದರು ॥ ಶೋ ॥ ॥ ೮ ॥

ಗಿರಿಜಾ ಶೈಲದೊಳು । ಮೆರೆವುತೆ ತ್ರೈನಿಲಯವಾಸ ।
ಗುರುಚನ್ನ ವೀರೇಶ್ವರನಿಗೆ ॥ ಶೋ ॥
ಗುರುಚನ್ನ ವೀರೇಶ್ವರಗ ಧಾರಿಯನೆರದು ।
ಗಿರಿರಾಜನೆರಗೀ ತೆರಳಿದರು ॥ ಶೋ॥ ॥ ೯ ॥

೭. ಶಿವನ ಲಗ್ನ ಮಾಡುವವಕೆ ಹಿಮಾಚಲಕ್ಕೆ ನಿಬ್ಬಣ ಬಂದ ಪದ

ಶ್ರೀ ಸಾಂಬ ಶಿವನ ಲಗ್ನದಾ ಸಭೆಯವರ್ಣಿಸಲಿಕ್ಕೆ ।
ಸಾಸಿರ ಸಿರವನುಳ್ಳ ಶೇಷ । ಶೋಭಾನವೇ ॥
ಸಾಸಿರ ಸಿರವನುಳ್ಳ । ಶೇಷ ರಾಜನವೆರಡು ।
ಸಾಸಿರ ನಾಲಿಗಿಗಳವಲ್ಲ ಶೋಭಾನವೇ ॥ ॥ ದ್ರು ॥

ಮೂವತ್ತು ಮೂರು ಕೋಟಿ । ದೇವತೆಗಳ ಸಭೆಯು ।
ಭಾವಿಸೆಯಂಬತ್ತೆಂಟು ಕೋಟಿ । ಶೋಭಾನವೇ ॥
ಭಾವಿಸೆಯಂಬತ್ತೆಂಟು ಕೋಟಿ । ಮುನಿಗಳ ಗಣವು ।
ತೀವಿತ್ತು ಶಿವನ ಲಗ್ನದೊಳಗೆ । ಶೊಭಾನವೇ॥ ॥ ೧ ॥

ಧೀರದೈತ್ಯಯರಅರುವತ್ತಾರು ಕೋಟಿಯು ಮತ್ತೆ ।
ಸಾರಯಕ್ಷರು ಅತ್ರಕೋಟಿ । ಶೊಭಾನವೇ ॥
ಸಾರಯಕ್ಷರು ಅತ್ರಾಕೋಟಿ ನೆರೆದಾರು ಗಂಗಾ ।
ಧಾರ ಶಂಕರನ ಮದುವೀಗೆ । ಶೋಭಾನವೇ ॥ ॥ ೨ ॥

ಸಾವೀರ ತಲಿಯವರು । ಸಾವೀರ ಕಂಣಿನವರು ।
ಸಾವಿರ ಬಾಯಿ ಕೈಯ್ಯ ಕಾಲು । ಶೊಭಾನವೇ ॥
ಸಾವಿರ ಬಾಯಿ ಕೈಯ್ಯ ಕಾಲವರು ಬಂದಾರು ।
ದೇವ ಶಂಕರನ ಲಗ್ನ ಸಭೆಗೇ । ಶೋಭಾನವೇ ॥ ॥ ೩ ॥

ತಲೆಯಧರ್ಮದವರು ಭುಜದಿ । ತಲಿಯದಲಿ ತಲೀಯವರು ।
ತಲಿಯುಳ್ಳಂಗೈಯ್ಯದವರು ಪಾದ । ಶೊಭಾನವೇ ॥
ತಲೆಯುಳ್ಳಂಗೈಯ್ಯ ಪಾದ । ತಲೆಯವರು ನೆರೆದಾರು ।
ತಲೆವೊಡು ಪಿಡಿದಾತನ ಬಳಿಗೆ । ಶೋಭಾನವೇ ॥ ॥ ೪ ॥

ಕರಿಮುಖ ಕಪಿಯ ಮುಖ । ತುರಗಯರಳಿಯ ಮುಖ ।
ಶರಭ ಸಿಂಹನ ಮುಖದವರು । ಶೋಭಾನವೇ ॥
ಶರಭ ಶಿಂವ್ಹನಮುಖ ಕರಡಿ ಹುಲಿ ಮುಖದವರು ।
ನೆರೆದಾರು ಶಿವನ ಮದುವೀಗೆ । ಶೋಭಾನವೇ ॥ ॥ ೫ ॥

ಮೈಯ್ಯಲ್ಲ ಕಂಣವರಗ್ನಿ । ಕೈಯ್ಯವರಗ್ನಿಯಂತ ।
ಮೈಯ್ಯವರು ರೋಮ ಕೋಟಿಲಿಂಗಾ । ಶೊಭಾನವೇ ॥
ಮೈಯ್ಯವರು ರೋಮ ಕೋಟಿಲಿಂಗದವರೈತಂದಾರು ।
ಮೈಯಿಲ್ಲದವನ ವೈರಿಬಳಿಗೆ । ಶೊಭಾನವೇ ॥ ॥ ೬ ॥

ಪರ್ವತವ ತಾಳಿದವರು । ಪರ್ವತವಾ ಹೋಳಿದವರು ।
ಸರ್ವಭಕ್ಷಕನ ತಿಲಕದವರು । ಶೊಭಾನವೇ ॥
ಸರ್ವಭಕ್ಷಕನ ತಿಲಕನಿಟ್ಟವರು ಬಂದಾರು ।
ಶರ್ವಾಣೇಶ್ವರನ ಮದುವೇಗೆ ॥ ಶೊಭಾನವೇ ॥ ॥ ೭ ॥

ರವಿರಥವ ನಿಲಿಸಿದವರು । ರವಿ ಹಲ್ಲು ಮುರಿದವರು ।
ರವಿಯ ಬೆನ್ನಲಿ ಕಟ್ಟಿಕೊಂಡು । ಶೊಭಾನವೇ ॥
ರವಿಯ ಬೆನ್ನಲಿ ಕಟ್ಟಿಕೊಂಡು ರಣಗೆಲಿದವರು ।
ಶಿವನ ಸನ್ನಿಧಿಲಿ ನೆರೆದಾರು । ಶೊಭಾನವೇ ॥ ॥ ೮ ॥

ಗಣಿತವಿಲ್ಲದ ಪ್ರಮಥ । ಗಣವೆಲ್ಲಾ ನೆರೆದಿತ್ತು ।
ಆಣಿಮಾದಿ ಸಿದ್ಧಿಗಳು ತೃಣವೂ । ಶೊಭಾನವೇ ॥
ಆಣಿಮಾದಿ ಸಿದ್ಧಿಗಳು ತೃಣ ಮಾಡಿ ಬಂದಾರು ।
ತ್ರಿಣಿಯಾನ ಲಗ್ನ ಮಂಟಪಕ್ಕೆ । ಶೊಭಾನವೇ ॥ ॥ ೯ ॥

ಯಿಂತು ರಾಜಿಸುವ ದೇವ ಸಂತತಿಯಭರಕೆ ಭೂಮಿ ।
ಕಾಂತೆ ತಲ್ಲಣಿಸಿ ನಡನಡಗಿತ್ತು । ಶೊಭಾನವೇ ॥
ಕಾಂತೆ ತಲ್ಲಣಿಸಿ ನಡುಗೆ । ಅಂತಕನ ದೆಸೆಯ ಭೂಮಿ ।
ಆಂತರಿಸಿ ಮೇಲಕ್ಕೇಳುತಿರಲು । ಶೊಭಾನವೇ ॥ ॥ ೧೦ ॥

ಆಗೆ ಪರಮೇಶ್ವರ ತಲಿಯ । ದೂಗುತ್ತಲಿ ಕೈಯ್ಯ ಬೆರಳು ।
ಮೂಗಿಗೆವಿಟ್ಟು ವಿಶ್ವಕರ್ಮಾ । ಶೊಭಾನವೇ ॥
ಮೂಗಿಗೆವಿಟ್ಟು ವಿಶ್ವಕರ್ಮನಾ ನೋಡಿದಾರೆ ।
ಬ್ಯಾಗೆ ಬಂದೆರಗಿ ಬೆಸಸೆನಲು । ಶೊಭಾನವೇ ॥ ॥ ೧೧ ॥

ವುತ್ತರದ ಭೂಮಿಯಿಳಿದು । ಅತ್ತ ದಕ್ಷಿಣದ ಭೂಮಿ ।
ಮತ್ತೆಯೆದ್ದಿತು ವಿಶ್ವಬ್ರಂಹ್ಮಾ । ಶೊಭಾನವೇ ॥
ಮತ್ತಯೆದ್ದಿತು ವಿಶ್ವಬ್ರಂಹ್ಮಾ ನೀನಗಸ್ತ್ಯಾನ ।
ಹತ್ತೀಗೆ ಹೋಗುಯೆನಲು ಕೇಳಿ । ಶೊಭಾನವೇ ॥ ॥ ೧೨ ॥

ತುರಗವನೇರಿಕೊಂಡು । ಭರದಿಂದ ಹೋಗಿ ಮನಿಗೆ ।
ಯೆರಗಿ ಕೈಮುಗಿದು ನಿಂದು ಪೇಳ್ದಾ । ಶೊಭಾನವೇ ॥
ಯೆರಗಿ ಕೈಮುಗಿದು ಪೇಳ್ದಾ । ಧರಣಿ ಕುಸಿಯಿತ್ತು ದೇವಾ ।
ಹರನ ನಿಬ್ಬಿಣದ ವಜ್ಜೆಯಿಂದಾ । ಶೊಭಾನವೇ॥ ॥ ೧೩ ॥

ನೀನು ಲಗ್ನಕ್ಕೆ ಬರಲು । ಹಾನಿಯಾಗುವುದು ಲೋಕಾ ।
ಮಾನೀತ ನಿಮ್ಮ ಸ್ಥಲವ ಬಿಟ್ಟು । ಶೊಭಾನವೇ ॥
ಮಾನೀತ ನಿಂಮ್ಮ ಸ್ಥಲವ ಬಿಟ್ಟರುತ್ತರದ ಭೂಮಿ ।
ತಾನೆ ಯಿಳಿಯಿತ್ತು ಪಾತಾಳಕ್ಕೆ । ಶೊಭಾನವೇ ॥ ॥ ೧೪ ॥

ನಿಮ್ಮ ಬಹುಮಾನದ ವೀಳ್ಯಾ । ನಿಮ್ಮಲ್ಲಿಗೆ ಬಾಹೂದೆನಲು ।
ತಮ್ಮ ತಾಣದೊಳು ಮುನಿಕುಳಿತ । ಶೊಭಾನವೇ ॥
ತಮ್ಮ ತಾಣದೊಳು ಮುನಿ ಕುಳಿತರೇ ಭೂಮಿಯಲ್ಲ ।
ಗಂಮ್ಮನೆ ಸಮನವಾಯಿತ್ತಲ್ಲ । ಶೊಭಾನವೇ ॥ ॥ ೧೫ ॥

ಆಶ್ಚರ್ಯ ಮಾಗಿ ಬಂದು । ನಿಶ್ಚಯದಿ ಶಿವಗೆ ಪೇಳೇ ।
ಹೆಚ್ಚಿನರೂಪ ಮುನಿಯಗಸ್ತ್ಯ । ಶೊಭಾನವೇ ॥
ಹೆಚ್ಚಿನ ರೂಪ ಮುನಿಯಗಸ್ತ್ಯಗೆ ಬ್ರಹ್ಮ ಸುರವ ।
ಅಚ್ಯುತರೆಲ್ಲ ಕೊಂಡಾಡಿದರು । ಶೊಭಾನವೇ ॥ ॥ ೧೬ ॥

ಸುರಚಿರೈನಿಲಯ ಪುರಿಯ । ವರ ಚನ್ನವೀರೇಶ್ವರನೂ ।
ಹರುಷದಿವಾಲಗದೊಳಿರುತಿರಲು । ಶೊಭಾನವೇ ॥
ಹರುಷದಿವಾಲಗದೊಳಿರುತಿರಲು ಶಾಸಿಗೆ ಬಂದು ।
ನೆರೆದು ನಿಬ್ಬಣವ ಕೂಡುತಿರಲು ॥ ಶೊಭಾನವೇ ॥ ॥ ೧೭ ॥

೮. ಶಾಶಿ ಇಡುವುದಕ್ಕೆ ದೇವತೆಗಳ ಮತ್ತು ಮುನಿಗಳ ಸ್ತ್ರೀಯರನ್ನು ಕರೆಯುವ ಪದ

ಶ್ರೀಗುರು ಮೃಡಗಣ ಕುಲವೇದ್ಯನು । ಯೋಗಿಸುರ ನಿಕರಾ ಬೇದ್ಯನು ।
ಆಗಮ ನಿಗಮಾರ್ಥಕಾಸಾದ್ಯನು । ಶೊಭಾನವೇ ॥
ಆಗಮ ನಿಗಮಾರ್ಥಕಾಸಾದ್ಯನನುಪಮ ಮಹಿಮನು ।
ಶ್ರೀಗೌರಿ ಲಗ್ನವಾದ ಶಿವನೂ ॥ ಶೊಭಾನವೇ ॥ ॥ ದೃ ॥

ರಾಜೀವಾಕ್ಷೆಂದ್ರರು ಕೋಟಿಯ । ರಾಜೀವಜಾತರು ಕೊಟಿಯು
ರಾಜಿತ ನಂತಕೋಟಿ ಗಣವ । ಶೊಭಾನವೇ ॥
ರಾಜಿತನಂತ ಕೋಟಿ ಗಣ ಪ್ರಮಥರ ಸಭೆಯೊಳು ।
ರಾಜಶೇಖರನು ಕುಳಿತಿಹನು । ಶೊಭಾನವೇ ॥ ॥ ೧ ॥

ಯೆಕದಶಕೋಟಿ ರುದ್ರರು । ಯೇಕಾಷ್ಟಭೈರವ ರಾಜರು ।
ಯೆಕೆಂದು ದ್ವಾದಶಾದಿತ್ಯಯರು ॥ ಶೊಭಾನವೇ ॥
ಯೆಕೆಂದು ದ್ವಾದಶಾದಿತ್ಯರ ಸಭೆಯೊಳಗೆ ।
ಯೆಕದೇವನು ಕುಳಿತಿಹನು ॥ ಶೊಭಾನವೇ ॥ ॥ ೨ ॥

ಅಚ್ಚಮುತ್ತೈದೆರೈವರೇ । ಹೆಚ್ಚಿನ ಮುನಿಗಣ ಕುಲಸತಿಯರೇ
ಬಚ್ಚ ಪರಿಪೂರ್ಣ ಪತಿ ಭಕ್ತಿಯರೇ ॥ ಶೊಭಾನವೇ ॥
ಬಚ್ಚ ಪರಿಪೂರ್ಣ ಪತಿ ಭಕ್ತಿಯರೆ ಗೌರೀಶ್ವರನಿಗೆ ।
ನಿಚ್ಚಲದಿ ಶಾಶಿಯಯಿಡರೆಮ್ಮ ॥ ಶೊಭಾನವೇ ॥ ॥ ೩ ॥

ಕುಂಭಜಸತಿ ಲೋಪಾಮುದ್ರಿಯೆ । ಶಂಭಭೃಗುಸತಿ ಸತ್ಯವತಿಯೆ
ಶಂಬರ ಮೃಕಂಡನ ಸತಿ ಹೇರಂಭಾ ॥ ಶೊಭಾನವೇ ॥
ಶಂಬರ ಮೃಕಂಡನ ಸತಿ ಹೇರಂಭಾದೇವಿಯೇ ।
ಶಂಭುವಿಗೆ ಶಾಸಿಯಿಡರೆಂಮ್ಮಾ ॥ ಶೊಭಾನವೇ ॥ ॥ ೪ ॥

ಭೂತಿಯೆ ಅನುಸೂಯಾ ದೇವಿಯೆ ಖ್ಯಾತಿಯರುಂದತಿಅನಲಾಯಿಯೇ ।
ಪತಿ ಹೋತ್ರಾಣಿ ಸಂಭೂತಿಯೆ ॥ ಶೊಭಾನವೇ ॥
ಪತಿ ಹೋತ್ರಾಣಿ ಸಂಭೂತಿಯೆ ವೈಯತಿಯರೆ ।
ಭೂತೇಶಗೆ ಶಾಶಿಯಿಡರೆಂಮ್ಮ ॥ ಶೊಭಾನವೇ ॥ ॥ ೫ ॥

ಯಿಂದ್ರಾಣಿ ಭಾರತಿ ಲಕ್ಷ್ಮಿಯೇ । ಚಂದ್ರಾಣಿಯೆ ಚಾಯಾದೇವಿಯೆ ।
ಯಿಂದ್ರಾರಿ ತಾತನ ಸತಿ ಧಿತಿಯರೆ । ಶೊಭಾನವೇ ॥
ಯಿಂದ್ರಾರಿ ತಾತನ ಸತಿಯರೆ ಹದಿಯವ್ವನೆಯರು ನೀವೆ ।
ಸಾಂದ್ರಗ ಶಾಶಿಯನಿಡರೆಮ್ಮ ॥ ಶೊಭಾನವೇ ॥ ॥ ೬ ॥

ಶ್ರೀ ಧರ್ಮದೇವತಾ ಸತಿಯರೆ । ಆದಕ್ಷನ ಸತಿ ವೈರಾಣಿರೆ
ಶ್ರೀ ದಾಪ್ಸರ ವಿದ್ಯಾಧರ ಸ್ತ್ರೀಯರೆ ॥ ಶೊಭಾನವೇ ॥
ಶ್ರೀ ದಾಪ್ಸರ ವಿದ್ಯಾದರ ಸ್ತ್ರೀಯರೆ । ಪರಮೇಶ್ವರನಿಗೆ ।
ನಾದರದಿ ಶಾಶಿಯ ನಿಡರೆಂಮ್ಮ ॥ ಶೊಭಾನವೇ ॥ ॥ ೭ ॥

ಘನ ಪ್ರಮಥನಾಯಕನೆನಿಸುವ । ಮುನಿಸಾರ್ವಭೌಮನೆನಿಸುವ
ಅನಘ ನಂದೀಶನ ಸತಿಯರೆ । ಶೊಭಾನವೇ ॥
ಅನಘ ನಂದೀಶನ ಸತಿ ಯಶೋದೇವಿಯರೇ ।
ಅನುನಯದಿ ಶಾಶ್ತ್ರಿಯಿಡರೆಂಮ್ಮ ॥ ಶೊಭಾನವೇ ॥ ॥ ೮ ॥

ಗಿರಿಜಾಚಲ ಪರ್ವತದೆಡೆಯೊಳು । ಪರಿಶೋಧಿಸುವ್ವೆನೆಲೆ ಪುರದೊಳು ।
ಸ್ಥಿರರಾಜ ಪಟ್ಟವರ ವೈಭವದ ॥ ಶೊಭಾನವೇ ॥
ಸ್ಥಿರರಾಜ ಪಟ್ಟವರ ವೈಭವದ ಚೆನ್ನವೀರೇಶಗೆ ।
ಕರಮುಗಿದು ಶಾಶೆಯಿಡರೆಮ್ಮ ॥ ಶೋಭಾನವೇ ॥ ॥ ೯ ॥

೯. ಶಾಶಿ ಹಾಸಿಗೆ ಹಾಕಿ ಪಾರ್ವತಿ ಪರಮೇಶ್ವರರನ್ನು ಹಸೆಗೆ ಕರೆಯುವ ಪದ

ಶ್ರೀ ಪಾರ್ವತಿನಾಥನೆ ಬಾ । ಗೋಪತಿ ಜ್ಯಾಮಾತನೆ ಬಾ
ಕಪಾಲಿ ದಿವ್ಯರೂಪ ಬಾ । ಯತಿ ವೃದ್ಧೀಪ ಬಾ
ದ್ರುತ ಕಲಾಪ ಬಾ । ಅತಿ ಪ್ರತಾಪ ಬಾಯೆಂದು ಹಸಿಗೆ ಕರೆದಾರೆ
॥ ಶೊಭಾನವೇ ॥

ನೂತನ ಬಾಲಕಿಯೆ ಬಾ । ಮಾತಿನ ಮತಿವಂತಿಯೆ ಬಾ ।
ಚಾತುರಿಯೆ ಬಾ । ಗಿರಿಜಾತೆ ಬಾ
ಶಿವ ಸಂಪ್ರೀತೆ ಬಾ । ಬಹು ವಿಖ್ಯಾತೆ ಬಾ
ಭುವನ ಮಾತೆ ಬಾರೆಂದು ಹಸಿಗೆ ಕರೆದಾರೆ ॥ ಶೊಭಾನವೇ ॥ ॥ ೧ ॥

ಮಾರನ ಮದಹರನೆ ಬಾ । ನಿರಜ ಪರಧರನೆ ಬಾ ।
ಸಾರ ಸಂವಿಗಾರ ಧೀರ ಬಾ । ಗುಣ ಗಂಭೀರ ಬಾ ।
ಕರುಣಾಕರ ಬಾ । ಲೋಕಾಧಾರ ಬಾಯೆಂದು ಹಸಿಗೆ ಕರೆದಾರೆ
॥ ಶೊಭಾನವೇ ॥ ॥ ೨ ॥

ಜಾಣೆ ಬಾ । ಪನ್ನಂಗ ಸತಿಯೇ । ವೇಣಿ ಬಾ ।
ವೇಣಿ ಬಾ । ಮಂಜುಳ ಮಧುರಾ ವಾಣಿ ಬಾ । ಕ
ಲ್ಯಾಣಿ ಬಾ । ಸುಗುಣ ಶ್ರೇಣಿ ಬಾ । ಪಲ್ಲವ
ಪಾಣಿ ಬಾ । ಭವನ ರಾಣಿ ಬಾಯೆಂದು ಹಸಿಗೆ ಕರೆದರೊ
॥ ಶೊಭಾನವೇ ॥ ॥ ೩ ॥

ವಾಸ ವಂದಿತನೆ ಬಾ । ಭಾಸುರ ಧಮಾಂಗನೆ ಬಾ ।
ಈಶನೆ ಬಾ । ಸರ್ವೇಶನೆ ಬಾ
ದುರಿತ ವಿನಾಶನೆ ಬಾ । ಶಿವ ಮಾಹೇಶ ಬಾ । ಶ್ರೀ
ಗಿರಿಜೇಶ ಬಾ । ಬಾಯೆಂದು ಹಾಸಿಗೆಗೆ ಕರೆದಾರೆ
॥ ಶೊಭಾನವೇ ॥ ॥ ೪ ॥

ಮಿತ್ರಿಯೆ ಬಾ । ಸಾಗರ ಗುಣ ।
ವಿತ್ರಿಯೆ ಬಾ । ಸೊಬಗಿನ ಮಂಗಳ ।
ಗಾತ್ರೆ ಬಾ । ಗೌರಿವಿಚಿತ್ರೆ ಬಾ । ಮೇನಕಿ
ಪುತ್ರೆಯೆ ಬಾ । ಕುಂಜಯ ನೇತ್ರಿ ಬಾ । ಮೃಡ ಕ
ಳಾತ್ರೆ ಬಾಯೆಂದು ಹಾಸಿಗೆ ಕರೆದಾರೆ ॥ ಶೊಭಾನವೇ ॥ ॥ ೬ ॥

ತಾಂಡವಲೀಲಾಧರನೆ ಬಾ । ತುಂಡ ಮಾಲಾ ಧರನೆ ಬಾ ।
ಕಾಂಡ ಭವಾಕ್ಷ ಕಾಂಡ ಬಾ । ಗಿರಿ ಕೋದಂಡ ಬಾ ।
ವರದಾ ಖಂಡ ಬಾ । ಘನ ಪ್ರಚೆಂಡ ಬಾ
ಬಾಯೆಂದು ಹಸೆಗೆ ಕರೆದಾರೆ ॥ ಶೊಭಾನವೇ ॥ ॥ ೭ ॥

ಬಾಲೆ ಬಾ ಯೋಗಿನಿ ಸ್ತ್ರೀಯ್ಯರ । ಲೋಲೆ ಬಾ ಕಾಮಕಸ್ತೂರಿ
ವಾಲೆ ಬಾ ಪಂಚಮಾಲೆ ಬಾ । ಸುರಸತಿ ಜ್ಯಾಲೆ ಬಾ
ಪಾಲನ ಶೀಲೆ ಬಾ । ಹರನಾ ಲೀಲೆ ಬಾ ।
ಬಾಯೆಂದು ಹಸೆಗೆ ಕರೆದಾರೇ ॥ ಶೊಭಾನವೇ ॥ ॥ ೮ ॥

ಸುಂದರ ಸುಕುಮಾರನೆ ಬಾ । ವಂದನದ್ಯೆನಿಲಯನೆ ಬಾ ।
ಬಂಧೂಧರನೆ ಬಾ । ವರಗಣೇಂದ್ರ ಬಾ ।
ಸದ್ಗುಣ ಸಾಂದ್ರ ಬಾ । ಮುನಿಕುಲಚೆಂದ್ರ ಬಾ
ಚೆನ್ನ ವೀರೇಂದ್ರ ಬಾರೆಂದು ಹಸೆಗೆ ಕರದಾರೆ ॥ ಶೊಭಾನವೇ ॥ ॥ ೯ ॥

೧೦. ಮದುಮಗಳನ್ನು ಶ್ರಿಂಗರಿಸಿ ಮದುಮಗನ ಎಡದಲ್ಲಿ ಕೂಡ್ರಿಸಿ ಹಾಡುವ ಪದ

ಭಾಮಿನಿ ಗಜರಾಜ ಗಾಮಿನಿ ಗಿರಿಜಾದೇವಿ ।
ಶಾಮಲಾಂಗಿಯು ಶರ್ವಾಣಿ ಶೋಭಾನವೇ ॥
ಶಾಮಲಾಂಗಿಯು ಶರ್ವಾಣಿ ಶಂಕರನ ।
ವಾಮಭಾಗದಲಿ ಶೋಭಿಸಿದಳು ॥ ಶೊಭಾನವೇ ॥ ॥ ದ್ರು ॥

ಶ್ವೇತಾಂಬರನುಟ್ಟು ಜಾತಾಕುಂಚುಕಿ ತೊಟ್ಟು ।
ನೂತನ ಮಾಣಿಕದ ಹಣಿಚಾಬೊಟ್ಟು ॥ ಶೊಭಾನವೇ ॥
ನೂತನ ಮಾಣಿಕದ ಹಣಿಚಾಬೊಟ್ಟಿಟ್ಟು ಗಿರಿ ।
ಜಾತೆ ಮೃಡನ ಎಡದಿ ಶೋಭಿಸಿದಳು ॥ ಶೊಭಾನವೇ ॥ ॥ ೧ ॥

ಕಂಠೀರವಗಮನಿ । ಕಂಠಸೂತ್ರವ ತಾಳಿ ।
ಘಂಟಿಮುತ್ತಿನಾಬಾಳ್ಯಾ ಝುಮಿಕಿ ॥ ಶೊಭಾನವೇ ॥
ಘಂಟಿಮುತ್ತಿನಾಬ್ಯಾಳ್ಯಾ ಝುಮಕಿಟ್ಟು ಶ್ರೀ ।
ಕಂಠನೆಡದಲಿ ಶೋಭಿಸಿದಳು ॥ ಶೊಭಾನವೇ ॥ ॥ ೨ ॥

ತೋರ ಮೌಕ್ತಿಕದ ಹಾರ ಪೆಟ್ಟಿಗಿ ಸುರಗಿ ।
ದೋರೆ ಕಂಕಣ ಗೀರಬಳಿಯು ॥ ಶೊಭಾನವೇ ॥
ದೋರೆ ಕಂಕಣ ಗೀರಬಳಿ ವಂಕಿಗಳು
ನಾರಿ ಗೌರಿಟ್ಟು ಶೋಭಿಸಿದಳು ॥ ಶೊಭಾನವೇ ॥ ॥ ೩ ॥

ಹರದಿಯ ನಡುವೀಗೆ । ಹರದಿಕ್ಕಿದೋಡ್ಯಾಣ ।
ಕಿರಿಮುತ್ತಿನ ದಂಡಿ ರ್‍ಯಾಕಟೀಯ ॥ ಶೊಭಾನವೇ ॥
ಕಿರಿ ಮುತ್ತಿನ ದಂಡಿ ರ್‍ಯಾಕಟಿ ಚೌರಿಯನಿಟ್ಟು ।
ಹರನಯಡದಲಿ ಶೋಭಿಸಿದಳು । ॥ ಶೊಭಾನವೇ ॥ ॥ ೪ ॥

ಭಾಸುರ ಸುಪ್ರಭೇಯ । ಸೂಸೂವನವ ಮೌಕ್ತಿಕದ ।
ನಾಸಿಕಕಾಭರಣ ಕಾಂತಿಯಿಂದೆ । ಶೋಭಾನವೇ ॥
ನಾಶಿಕಕಾಭರಣಾ ಕಾಂತಿಯಿಂದಲಿ ಗೌರಿ ।
ಈಶನೆಡದಲಿ ಶೋಭಿಸಿದಳು ॥ ಶೊಭಾನವೇ ॥ ॥ ೫ ॥

ಇಂದ್ರನೀಲಕವಿ । ಸಾಂದ್ರವಜ್ರದಿ ಖಚಿತ ।
ರುಂದ್ರ ಮಾಣಿಕ್ಯದುಂಗುರುಗಳಾ । ಶೋಭಾನವೇ ॥
ರುಂದ್ರ ಮಾಣಿಕ್ಯದ । ಉಂಗುರಗಳನಿಟ್ಟು ।
ಚಂದ್ರ ಧರನೆಡದಿ ಶೋಭಿಸಿದಳು ॥ ಶೊಭಾನವೇ ॥ ॥ ೬ ॥

ಕಾಲಂದಿಗಿ ಕಡಗ । ಕೀಲಿನ ರುಳಿ ಗೆಜ್ಜಿಗಳು ।
ಕಾಲುಂಗರ ಪಿಲ್ಲ್ಯಾ ಮಿಂಚು ಮೀನು । ಶೋಭಾನವೇ ॥
ಕಾಲುಂಗರ ಪಿಲ್ಲ್ಯಾ ಮಿಂಚು ಮೀನುಗಳಿಟ್ಟು ।
ಕಾಲಹರನೆಡದೀ ಶೋಭಿಸಿದಳು ॥ ಶೊಭಾನವೇ ॥ ॥ ೭ ॥

ನವರತ್ನಗಳಿಂದ । ಕವಿದ ಕಾಂಚನಮಯದಾ ।
ರವಿಯಂತೆ ಹೊಳೆವ ಭಾಸಿಂಗವನು । ಶೋಭಾನವೇ ॥
ರವಿಯಂತೆ ಹೊಳೆವ ಭಾಶಿಂಗವನೆ ಧರಿಸಿ ।
ಶಿವನಯಡದಲೀ ಶೋಭಿಸಿದಳು ॥ ಶೊಭಾನವೇ ॥ ॥ ೮ ॥

ಪರತರ್ರೈನಿಲಯ । ಪರಮಾನಂದದ ಧೋರಿಯ ।
ಗುರುಚನ್ನ ವೀರೇಶ್ವರನೈಶ್ವರ್ಯ । ಶೋಭಾನವೇ ॥
ಗುರುಚನ್ನ ವೀರೇಶ್ವರನೈಶ್ವರ್ಯವನೆಲ್ಲ ।
ಶೆರೆಗೊಂಡೂ ಗೌರಿ ಶೋಭಿಸಿದಳು ॥ ಶೊಭಾನವೇ ॥ ॥ ೯ ॥

೧೧. ಸಮಸ್ತ ದೇವತಾ ಸ್ತ್ರೀಯರು ಪಾಡುವ ಪದ

ಶೋಭಾನ ರೂಪಳೇ । ಶೋಭಾನ ಕಳೆವರೆಯೇ । ಭವಾನಿಯೆ ಬಾರೆ
ಆಭರಣಾಂಕಿತೆ । ಗೋಭವಕರ ಮ್ರುಗ । ಶಾಬಕಲೋಚನೆ ಬಾರೆ
ಶ್ರೀಭಾಷಾನ್ವಿತೆ । ನೀಭರದಲಿ ಮ। ತ್ತೇನಿಭಗಮನಿಯೇ ಬಾರೆ
ಮಾಭಾರತಿ ಶಚಿ । ಗೋಬಾಲಿಯರೊಳು । ಶೋಭಿಸುತಿರುವ ಗೌರಿ ಪಾರ್ವತಿ
ನೀ ಬಾ ಬಾ ಯೆಂದು ಹಾಸಿಗೆ ಕರದಾರೆ । ಶೋಭಾನವೇ ॥ ದ್ರು ॥

ಶಂಕರ ಪ್ರೀಯಳೆ । ಕಂಕಣಗೈಯ್ಯಳೆ ಪಂಕಜ ಮುಖಿಯಳೆ ಬಾರೆ ।
ಕುಂಕುಮ ನೊಸಲಳೆ । ರಾಂಕವವಸನಳೆ । ರಿಂಕದ ಮೊಲೆಯಳೆ ಬಾರೆ ।
ಕಿಂಕಿಣಿನೂಪುರೆ । ಯಂಕಿತ ಭಾಪುರೆ । ಬಿಂಕದ ಭಾಮಿನಿ ಬಾರೆ ।
ಶಂಕಗೊರಳೆಯಾಲಂಕೆಯಾತಿಶ । ಶಾಂಕನ ಪ್ರಭೆಯಳೆ ।
ಶಾಮಲಗಾತ್ರೆ ಶಾಕಾಂಬರಿ ಬಾಯೆಂದು ಹಾಸಿಗೆ ಕರೆದಾರೆ ॥ ೧ ॥

ಬಡನಡು ಬಳುಕುತ । ತೊಡೆಗಳು ಝುಳಕುತ । ಬೆಡಗಿನ ಭಾವದಿ ಬಾರೆ ।
ಮುಡಿ ಅಲ್ಲಾಡುತ । ಕಡುಸರಸಾಡುತ । ನಡೆವಯ್ಯಾರದಿ ಬಾರೆ
ನುಡಿನಗಿ ಸೂಸೂತ । ಯಡಗೈ ಬೀಸುತ । ಸಡಗರದಲಿ ನೀಬಾರೆ ।
ಅಡಿಮಿಡುತಲಿ । ಝಂಪಿಸುತಲಿ ಸ್ತ್ರೀಯರ । ಪಡಿಯೊಳು ನೀ ನಲಿನಲಿವುತ ಶಿವನ
ಮಡದಿ ನೀ ಬಾರೆಂದು ಹಾಸಿಗೆ ಕರದಾರೆ ॥ ಶೊಭಾನವೇ ॥ ॥ ೨ ॥

ಮೇನಕಿ ಪುತ್ರಿಯೆ । ಮಾನಿತಗಾತ್ರಿಯೆ । ಮೇನಾಂಬಕಿಯಳೆ ಬಾರೆ ।
ಜ್ಞಾನವಿಲಿಯಳೆ । ಗಾನಸುಪ್ರಿಯಳೆ। ಸಾನುರಾಗದಲಿ ಬಾರೆ ॥
ಮಿನಾಕರಗುಣೆ ಶ್ರೀ ನಾರಿಮಣೆ । ಮಾನನಿಧಿಯೇ ನೀ ಬಾರೆ ।
ಭಾನವರತ್ನವಿ । ತಾನವ ಮಂಟಪಕೆ । ನೀ ನೊಲಿದು ಮಹಾದೇವಿಯೀಶನಾ ।
ಮಾನಿನಿ ಬಾಯೆಂದು ಹಸಿಗೆ ಕರದಾರೆ ॥ ಶೊಭಾನವೇ ॥ ॥ ೩ ॥

ಯಸವರಿಸಿನ ಹಿಮರಸ ಕಸ್ತುರಿಯ ನೊಸಲಿಗೆಧರಿಸುವೆವು ಬಾರೆ ।
ಕೆಸರಮಲ್ಲಿಗೆಯ । ಕುಸುಮದಾ ದಂಡೆಯ । ಸು ಶಿರಕೆ ಕಟ್ಟುವೆ ಬಾರೆ ।
ಹೊಸ ಹರೆಯದ ಕಳೆ । ರಸತುಳಕುತ ಮೇಲ್ । ಮುಸುಕಿನ ಬಾಲಕಿ ಬಾರೆ ।
ನಸುನಗುತಲಿ ಝೋಂಪಿಸುತಲಿ ರಮ್ಯದಿ ಮಿನುಗುವ ಕಂಪಿನ । ರನ್ನದ
ಮುತ್ತಿನ ॥ ಹಾಸಿಗೆಯೇಳೆಂದೆಲ್ಲ ಕರೆದಾರೆ ॥ ಶೊಭಾನವೇ ॥ ॥ ೪ ॥

ಕುಂದ ಸುದಂತಿಯೆ । ಬಂಧುರಕಾಂತಿಯೆ । ಮಂದಗತಿಯಳೆ ಬಾರೆ ।
ಮಾಂದಳಿರಾಕರೆ । ಮಂದಾರಕರೆ । ಚಂದುಟಿಯಳೆ ನೀ ಬಾರೆ ।
ಬಾಂದಳವರ್ನಿಯೆ । ಅಂದದ ಪರ್ನಿಯೆ । ಯಿಂದಿಂದಿರಕಚೆಬಾರೆ ।
ಸುಂದರೈನೆಲೆಯ । ಮಂದಿರ ಚನ್ನವೀ। ರೇಂದ್ರ ಮನೋರಮ ಹೈಮಾವತಿಗಿರಿ ।
ನಂದನಿ ಬಾಯೆಂದು ಹಾಸಿಗೆ ಕರೆದಾರೆ ॥ ಶೊಭಾನವೇ ॥ ॥ ೫ ॥

೧೨. ಅರಸಿಣ ಹಚ್ಚುವ ಪದ

ಚಿತ್ರದಿ ರಾಜಿಸುವ । ಚಿತ್ರಮಂಟಪದೊಳು ।
ರತ್ನದ ಹಸಿಗೆ ಕರತಂದರು ॥ ಶೋಭಾನವೆ ।
ರತ್ನದ ಹಸಿಗೆ ಕರತಂದು ಕುಳ್ಳಿರಿಸಿ
ಮಿತ್ರೆರು ಗೌರಿಗೆರೆದಾರು ॥ ಶೋಭಾನವೆ ॥ ॥ ದ್ರು ॥

ನಿರುಪಮ ನಿರ್ಗುಣ ನಿರುಘ ನಿಂರ್ನಾಮನಾ ।
ಕರವಿಡಿದು ಗೌರಿ ಬಳಿಯಲಿ ॥ ಶೋಭಾನವೆ ॥
ಕರವಿಡಿದು ಗೌರಿ ಬಳಿಯಲಿ ನಿ ತಂದಾರೆ ।
ಗಿರಿರಾಜನಳಿಯ ನೆನಸಿದ ಶಿವನು ॥ ಶೋಭಾನವೆ ॥ ॥ ೧ ॥

ವರಭಸಿತವಿಟ್ಟು । ವರನಾ ಸರ್ವಾಂಗಕೆ ।
ಅರಸಿನ ಶ್ರೀಗಂಧ ಧರಸಿದಳಮ್ಮಾ ॥ ಶೋಭಾನವೆ ॥
ಅರಸಿನ ಶ್ರೀಗಂಧ ಧರಸಿಳಾ ಗಿರಿಜೆ ।
ಭರದಿಂದೆಯೆದ್ದು ಕರಮುಗಿದಾಳು ॥ ಶೋಭಾನವೆ ॥ ॥ ೨ ॥

ತೊಡಿಯ ಮೇಲೆ ಕುಳಿತು । ತೊಡಗಿ ವಸ್ತ್ರವ ಬಿಡಿಸಿ
ಕಡುಬಾಗಿ ಮುಗುಳ ನಗಿಮೊಗದಲಿ ॥ ಶೋಭಾನವೆ ॥
ಕಡುಬಾಗಿ ಮುಗುಳ ನಗಿಮೊಗದಲಿ ಶ್ರೀಗೌರಿ
ವಡಿಯಗುಪಚರಿಸ ತೊಡಗಿದಳು ॥ ಶೋಭಾನವೆ ॥ ॥ ೩ ॥

ಅರಸನ ಕೈವಿಡಿದು ಅರಸಿಣ ಪೂಸುತಲಿ
ಸರಸದಿ ಮುಖಕೆ ಮುಟ್ಟಿಸಿದಳು ॥ ಶೋಭಾನವೆ ॥
ಸರಸದಿ ಮುಖಕೆ ಮುಟ್ಟಿಸುತ ನಗುನಗುತ
ವಿರಸವಿಲ್ಲದೆ ರಂಜಿಸಿದಳು ॥ ಶೋಭಾನವೆ ॥ ॥ ೪ ॥

ಉರಿಯಗಣ್ಣಿನ ಶಕೆಗೆ । ಪರಿಹಾರವೆನುತಾ ಶಿವಗೆ
ತರುಣಿ ಗಂಧದ ತಿಲಕಿಟ್ಟಾಳು ॥ ಶೋಭಾನವೆ ॥
ತರುಣಿ ಗಂಧದ ತಿಲಕಿಟ್ಟು ಮಂದಾರ
ಧರಳೆ ಮಾಲೆಗಳ ಧರಸಿದಳೂ ॥ ಶೋಭಾನವೆ ॥ ೫ ॥

ಕೊರಳಿಗೆ ಕಸ್ತೂರಿ । ಸಿರಕೆ ತುರಾಯವನು
ಧರಿಸುವದಕೆ ಗೌರಿ ಅನುಮಾನಿಸುತ ॥ ಶೋಭಾನವೆ ॥
ಧರಿಸುವದಕೆ ಗೌರಿ ಅನುಮನಸಿ ಪುರುಷಾನ ।
ದರಹಸಿತ ಮುಖದಿ ನಿಟ್ಟಿಸಿದಳು ॥ ಶೋಭಾನವೆ ॥ ॥ ೬ ॥

ವಡಿಯನ ವಸ್ತ್ರಂಗಳ । ತೊಡಿಸಿ ಅರಸಿನ ಗಂಧ ।
ಅಡಿಗಳಿಗೆ ಧರಿಸಿ ನಮಿಸುತಲಿ ॥ ಶೋಭಾನವೆ ॥
ಅಡಿಗಳಿಗೆ ಧರಿಸಿ ನಿಮಿಸುತಾರತಿಯೆತ್ತಿ
ಪಿಡಿದು ಬೆಳಗೂತ ಕೊಂಡಾಡಿದಳು ॥ ಶೋಭಾನವೆ ॥ ॥ ೭ ॥

ದೇವಸ್ತ್ರೀಯರು । ತೀವಿ ಶಾಶೀಯನಿಕ್ಕಿ
ದೇವಿ ದೇವರಿಗೆ ವಂದಿಸಿದರು ॥ ಶೋಭಾನವೆ ॥
ದೇವಿ ದೇವರಿಗೆ ವಂದಿಸಿ ಪುಷ್ಪಾಂಜಲಿಯಾ ।
ಭಾವ ಭಕ್ತಿಯಲಿ ಸುರಿದಾರು ॥ ಶೋಭಾನವೆ ॥ ॥ ೮ ॥

ಪ್ರಣುತ್ಯೆನೆಲೆ ವಾಸ । ತ್ರಿಣಿಯ ಚಂನ್ನವಿರೇಶ ।
ಗಣ ಸಾಕ್ಷಿ ಯೋಗಿಶ್ವರಿಯ ಕಯ್ಯ ॥ ಶೋಭಾನವೆ ॥
ಗಣ ಸಾಕ್ಷಿ ಯೋಗಿಶ್ವರಿಯ ಕೈಪಿಡಿದಾನು
ಅಣಿಮಾದಿ ಸಿದ್ಧಿಗಳರಸಾದಾನು ॥ ಶೋಭಾನವೆ ॥ ॥ ೯ ॥

೧೨. ಗಂಧ ಹಚ್ಚುವ ಪದ

ಶ್ರೀತು ಹಿಮಾಚಲನಾಥನ ವರನೇ ।
ಶ್ರೀತಾಕರ ಶತಕೋಟಿಯಾಕರನೆ ।
ನೂತನ ಪ್ರಾಯದ ಸಾರಕೋವಿದನೆ ॥
ಜಾತ ವೈಭವದ ಸಭೆಯೊಳಗೊಪ್ಪುವ
ಚಾತುರನೆ ಹಸೆಗೆ ದಯಮಾಡೋ ॥ ಶೋಭಾನವೆ ॥ ॥ ೧ ॥

ಕೋಮಲ ಪ್ರಾಯದ ಕಾಮಿನಿ ಮಣಿಯೆ ।
ಶಾಮಲ ಕಾಂತಿಯೆ ಶೋಭನ ಖಣಿಯೆ ।
ಹೇಮಾಲಂಕರೆ ಹಂಸನ ಗತಿಯೆ ॥
ಹೈಮಾವತಿ ಪರಮೇಶನ ಸತಿಯೆ ।
ಭಾಮಿನಿ ಹಸೆಗೆ ದಯಮಾಡೆ ॥ ಶೋಭಾನವೆ ॥ ॥ ೨ ॥

ಗಿರಿಜಾದೇವಿಯ ಪ್ರಾಣನೆ ಬಾಬಾ ।
ಕರಪಲ್ಲಿನ ನಸುಜಾಣನೆ ಬಾಬಾ ।
ಹರೆಯದ ಮಬ್ಬಿನ ಗರುವನೆ ಬಾಬಾ ॥
ಪುರುಷರ ಕುಲಕೆ ಗುರವೇ ನೀ ಬಾಬಾ ।
ಪುರಹರನೆ ಹಸೆಗೆ ದಯಮಾಡೊ ॥ ಶೋಭಾನವೆ ॥ ॥ ೩ ॥

ಸರ್ವಮುದಾಂಕುರ ವರ್ದನೆ ಬಾಬಾ ।
ಪೂರ್ವಮರಮದ ಮರ್ದನೆ ಬಾಬಾ ।
ದರ್ವಿಕರ ಮುದ್ರಾಕರೆ ಬಾಬಾ ॥
ಸರ್ವಸ್ತ್ರೀಯರ ಕುಲಶೇಖರೆ ಬಾಬಾ ।
ಪಾರ್ವತಿಯೆ ಹಸೆಗೆ ದಯವಾಗೆ ॥ ಶೋಭಾನವೆ ॥ ॥ ೪ ॥

ಮದನ ಕೋಟಿ ಲಾವಣ್ಯನೆ ಬಾರಾ ।
ಸದಮಲ ಸುಗುಣಾ ಗುಣ್ಯನೆ ಬಾರಾ ।

ಸದನಕೆ ವಪ್ಪುವ ಸೋಮನೆ ಬಾರ ॥
ವದನದ ಕಾಂತಿಯ ವಾಮನೆ ಬಾರಾ ।
ಪದುಳನೆ ಹಸೆಗೆ ದಯಮಾಡು ॥ ಶೋಭಾನವೆ ॥ ॥ ೫ ॥

ಹೆಂಣ್ಣೆರಳೆಯ ಪಡಿಗಂಣಳೆ ಬಾರೆ ।
ಗಿಂಣಿಲ ಮೊಲೆ ನಡು ಸಂಣಳೆ ಬಾರೆ ।
ನುಂಣನ ಕದಪಿನ ನಾರೆ ನೀ ಬಾರೆ ॥
ಬಂಣ್ಣಿಪ ಸರಚಂದ್ರ ಹಾರೆ ನೀ ಬಾರೆ ।
ಪುಂಣ್ಯ ಸ್ತ್ರೀ ಹಸೆಗೆ ದಯವಾಗೆ ॥ ಶೋಭಾನವೆ ॥ ॥ ೬ ॥

ಗುರುಚನ್ನವೀರೇಶ್ವರ ಸುಗಣೇಂದ್ರ ಬಾರಾ ।
ಗುರುತರ್ರೈನಿಲಯ ಪುರ ರಾಜೇಂದ್ರ ಬಾರಾ ।
ಗಿರಿಜಾ ಮುಖ ಪಂಕಜ ದಿನಕರನೆ ಬಾರಾ ॥
ವರದಾಭಯ ಕರಕರುಣಾ ಕರನೆ ಬಾರಾ ।
ಪರಮನೆ ಹಸೆಗೆ ದಯಮಾಡು ॥ ಶೋಭಾನವೆ ॥ ॥ ೭ ॥

೧೪. ಶಾಶಿಯಾದ ಮೇಲೆ ಹಸೆಯಿಂದ ಯೇಳೆಂಬುವ ಪದ

ಶ್ರೀಕಂಠನ ಲಗ್ನ ವಿಭವದಿ ಬಂದು ।
ಯೇಕಾದಶಾ ಪತಿವ್ರತೆಯರು ನಿಂದು ।
ಶ್ರೀಕರ ಶುಭಕರುಣಾಕರನೆಳೆಂದು ।
ಲೋಕೇಶಗೆರಗಿ ಕರೆದಾರೆ ॥ ಶೋಭಾನವೆ ॥ ॥ ಪ ॥

ಶ್ರೀಶನ ಪ್ರಿಯ ಮಹೇಶನೆ ಬಾರೊ ।
ದೋಶ ವಿನಾಶ ಗೌರಿಶನೆ ಬಾರೊ ।
ಆಶಾಂಬರ ಪ್ರಮಥೆಶ ಬಾಯೆಂದು ।
ಈಶಾನಿಗೆರಗಿ ಕರದಾರೊ ॥ ಶೋಭಾನವೆ ॥ ॥ ೧ ॥

ಮೇನಕ ದೇವಿಯ ಪುತ್ರೆ ನೀ ಬಾರೆ ।
ದಾನವ ದಿವಿಜಿತೆ ಸುಮಿತ್ರೆ ನೀ ಬಾರೆ ।
ಗೊನಾರಿಯರ ವಿತಾನದೊಳುಪ್ಪುವ
ಮಾನಿನಿಯೇಳೆಂದು ಕರದಾರೆ ॥ ಶೋಭಾನವೆ ॥ ॥ ೨ ॥

ಸರ್ವಮಂಗಳೆಯ ಮನೊರಮ ಬಾರಾ ।
ಸರ್ವಯೋಗಿಗಳ ಮನೋಧಾಮ ಬಾರಾ ।
ಗಿರ್ವಾಣಾರಿಯ ಗರ್ವಶಮನನೆಂದು ।
ಶರ್ವಾನಿಗೆರಗಿ ಕರದಾರೆ ॥ ಶೋಭಾನವೆ ॥ ॥ ೩ ॥

ಗಿರಿರಾಜ ವಂಶೋದ್ಧಾರೆ ನೀ ಬಾರೆ ।
ಹರಿರಾಜ ಗಮನೆ ಶೃಂಗಾರೆ ನೀ ಬಾರೆ ।
ಪುರಹರ ನಡೆದಲಿ ಪರಿಶೋಭಿಸುತಿಹ ।
ಗಿರಿಸುತೆಯೆಳೆಂದು ಕರೆದಾರೆ ॥ ಶೋಭಾನವೆ ॥ ॥ ೪ ॥

ಚತುರ್ದಶ ಭುವನವಿ ಪಾಲನೆ ಬಾರ ।
ದಿತಿ ನಂದನ ಮಾಲನೆ ಬಾರ ।
ಚತುರಾನನ ಹರಿಶತಮುಖ ವರನೆಂದು ।
ಶಿತಕಂಠಗೆರಗಿ ಕರದಾರೆ ॥ ಶೋಭಾನವೆ ॥ ॥ ೫ ॥

ಅತುಳ ಶ್ರೀರುದ್ರನಾರ್ಧಂಗಿಯೆ ಬಾರೆ ।
ಅತಸೀಕುಸುಮ ನಿಲಾಂಗೆ ನೀ ಬಾರೆ ।
ಯತಿಗಳ ಸತಿಯರ ತತಿಯೊಳೊಪ್ಪುವ ಹರ ।
ಸತಿಯೇ ಯೇಳೆಂದು ಕರಾದರೆ ॥ ಶೋಭಾನವೆ ॥ ॥ ೬ ॥

ಶತಕೋಟಿ ಸೂರ್ಯ ಪ್ರಕಾಶನೆ ಬಾರೊ ।
ಶತಕೋಟಿ ರುಚಿದಂತಕಾಶನೆ ಬಾರೊ ।
ಪತಿ ವ್ರತಿಯರು ಪುರ ಮಥನನೆ ಯೇಳೆಂದು ।
ಶಿತಕಂಠನಿಗೆರಗಿ ಕರಾದಾರೆ ॥ ಶೋಭಾನವೆ ॥ ॥ ೭ ॥

ವಿಂದ್ಯಾಶೈಲ ನಿವಾಸಿನಿ ಬಾರೆ ।
ಮಂದಾಸ್ಮಿತ ವಿಲಾಸಿನಿ ಬಾರೆ ।
ಕುಂದರದನೆ ಕಂಬು ಕುಂಧರೆ ಗಿರಿವರ ।
ನಂದನಿ ಯೇಳೆಂದು ಕರೆದಾರೆ ॥ ಶೋಭಾನವೆ ॥ ॥ ೮ ॥

ಪರತರ್ಯೆನೆಲೆಯ ಪುರೇಂದ್ರನೆ ಬಾರೋ ।
ಪರಮ ಶ್ರೀ ಚನ್ನವೀರೇಂದ್ರನೆ ಬಾರೋ ।
ಹರವಿಧಿಸುರ ಪರಸಿ ರವಿಯೋಳೊಪ್ಪುವ
ಹರಸಿ ಯೇಳೆಂದು ಕರೆದಾರೆ ॥ ಶೋಭಾನವೆ ॥ ॥ ೯ ॥

೧೫. ಸತಿಪತಿಯರ ಹೆಸರ ಕೇಳುವ ಪದ

ಕುಸುಮಗಂಧೆರು ದೇವ ಸತಿಯರು ಬಂದು ।
ಕುಸುಮ ಕೈಯೊಳು ಪಿಡಿಯುತ ಮುಂದ ನಿಂದು ।
ನಸುನಗುತಲಿ ಸತಿ ಹೆಸರ್ಥೇಳೆನುತಲಿ ।
ಅಸಮಾಕ್ಷಗ್ಯೆರಗಿ ನುಡಿದಾರೆ ॥ ಶೋಭಾನವೆ ॥ ॥ ಧೃ ॥

ಮೂರು ಮೂರ್ತಿಗಳಿಗೆ ಮೂಲ ಪುರುಷನೆ
ಮೂರಾರು ಮೀರಿದ ಮುನಿಗಳರಸನೆ ।
ಸಾರಸುಂದರ ನಿಂನ್ನ ನಾರಿಯ ನಾಮವ ।
ಧೀರನೆ ಹೇಳಾ ನನ ಮುಂದೆ ॥ ಶೋಭಾನವೆ ॥ ॥ ೧ ॥

ಚಂಡ ಮುಂಡಾರಿ ಕಲ್ಯಾಣಿ ಕುಮಾರಿ ।
ಕುಂಡಲ ಭೂಷಣ ಮಂಡಿತ ಗೌರಿ ।
ಚಂಡ ಪ್ರಚಂಡ ನಿಂನ್ನ ಗಂಡನ ಹೆಸರವ ।
ಚಂಡಿಕೇ ಪೇಳೆ ನನ ಮುಂದೆ ॥ ಶೋಭಾನವೆ ॥ ॥ ೨ ॥

ವಿಕ್ರಮ ವಿಜಯ ಪರಾಕ್ರಮ ನೀನೆ ।
ಶಕ್ರಜ ಶರಪ ಸೌಮ್ಯಕ್ರಮ ನೀನೆ ।
ಶುಕ್ರವಂದಿತ ಸರ್ವಕ್ರಮವಿದ ಗಣ ।
ಚಕ್ರೇಶ ಪೇಳಾ ನನಮುಂದೆ ॥ ಶೋಭಾನವೆ ॥ ॥ ೩ ॥

ತಣ್ಣದಿರನ ಪೊಲ್ವ ಮೊಗದ ಭಾಮಿನಿಯೇ ।
ನುಣ್ಣದ ಪಳೆ ಬಾಲಹಂಸ ಗಾಮಿನಿಯೆ ॥
ನುಣ್ಣಳೆವುತ ನಿನ್ನಾಣ್ಮನ ನಾಮವ ।
ಪೆಣ್ಣುಲಮಣಿ ಪೇಳೆ ನನ ಮುಂದೆ ॥ ಶೋಭಾನವೆ ॥ ॥ ೪ ॥

ಗೋಪತಿ ಗಮನನೆ ಗೋಪತಿ ಶೇಖರನೆ ।
ಗೋಪತಿ ಶಿರಹರ ಗೋಪಸಾಕಾರನೆ ।
ಗೋಪತಿ ಸುರಹರ ಗೋಪುತ್ರಿಯ ನಾಮ ।
ಗೋಪತಿ ಹೇಳಾ ನನ ಮುಂದೆ ॥ ಶೋಭಾನವೆ ॥ ॥ ೫ ॥

ಗೋಮಿನಿ ಸರಸ್ವತಿ ಶಚಿದೇವಿ ನಮಿತೆ ।
ಕೋಮಲಾಂಗಿಯೆ ದುಷ್ಟ ದುರ್ಗತಿ ಶಮಿತೆ ।
ಪ್ರೇಮದಿ ಸಾಸಿರ ನಾಮದೊಳೊಂದನು ।
ನೇಮಿಸಿ ಪೇಳೆ ನನ ಮುಂದೆ ॥ ಶೋಭಾನವೆ ॥ ॥ ೬ ॥

ದುರುಳ ದೈತ್ಯರ ಕೊಂದ ದುರ್ಜಯಿ ನೀನೆ ।
ಅರಳ ಬಾಣನ ಸುಟ್ಟ ಅನುಘ ನೀನೆ ।
ಗರಳ ಕಂಧರ ನಿಂನ್ನ ತರುಣಿಯ ನಾಮವ ।
ಮರಳೇ ನೀ ಹೇಳಾ ನನ ಮುಂದೆ ॥ ಶೋಭಾನವೆ॥ ॥ ೭ ॥

ಮುದ್ದು ಮುಖವನೆತ್ತಿ ಮೆಲ್ಲನೆ ಹೇಳೆ ।
ಸದ್ದಿಗೆ ಕೇಳ ಬಾರದು ಮತ್ತೆ ನೀ ಹೇಳೆ ।
ಶುದ್ಧನ ಭವನ ಪ್ರಸಿದ್ಧನ ನಾಮವ
ಮದ್ದರಿಸಿ ಹೇಳೆ ನನ ಮುಂದೆ ॥ ಶೋಭಾನವೆ ॥ ॥ ೮ ॥

ಅನುಪಮೈನೆಲೆಯ ಪೂರೇಶನು ನೀನೆ ।
ಘನಗುರು ಚಂನ್ನವಿರೇಶನು ನೀನೆ ।
ಅನವರತಂ ಮೃತವನುತಿಯ ನಾಮವ ।
ಅನುಕರಿಸಿ ಹೇಳಾ ನನ ಮುಂದೆ ॥ ಶೋಭಾನವೆ ॥ ॥ ೯ ॥

೧೬. ಲಗ್ನವಾದ ಮ್ಯಾಲೆ ಸಕಲ ಸ್ತ್ರೀಯರು ಆರತಿ ಬ್ಯೆಳಗುವ ಪದ

ಶ್ರೀ ಭಾರತಿರುಂದತಿ ಸಚಿಯರೆ ।
ಶೋಭಾಕರ ನಿರ್ಜರ ಸತಿಯರೆ ।
ಗೌರಿ ಭಾಸ್ಕರ ಜೀವಕವಿ ಸತಿಯರೆ
ಗ್ಲೌಭಾಸ್ಕರ ಜೀವಕವಿ ಸತಿಯರೆ । ಪರಮೇಶ್ವರಗೆ
ಶೋಭಾನದಾರತಿಯ ಬ್ಯೆಳಗಿರೆ ॥ ಶೋಭಾನವೇ ॥ ॥ ದ್ರ ॥

ವಾರಿಜ ಕಟ್ಮಲ ನಿಭಕುಚಯರೆ
ವಾರಿಜ ಮಧುನಿಭಕಚಯರೆ ।
ವಾರಿಜ ಕುಲ ವ್ಯೆರಿ ವದನಿಯರೆ ।
ವಾರಿಜ ಕುಲ ವ್ಯೆರಿ ವದನೆಯರೆ । ಶಿವಶಂಕರಗೆ
ವಾರಿಜ ದಾರತಿಯ ಬ್ಯೆಳಗಿರೆ ॥ ಶೋಭಾನವೆ ॥ ॥ ೧ ॥

ತಾರಾ ರತ್ನಾಂಚಿತ ಮಾಲೇರೆ ।
ತಾರಾಭರಣಾನ್ವಿತ ಬಾಲೇರೆ ।
ತಾರಾಕಾರಿಯಾ ರಥ ಶಿಖಿಯರೆ ।
ತಾರಾಕಾರಿಯ ರಥ ಶಿಖಿಯರೆ । ಗೌರೀಶ್ವರಗೆ
ತಾರಕದಾರತಿಯ ಬ್ಯೆಳಗೀರೆ ॥ ಶೋಭಾನವೇ ॥ ॥ ೨ ॥

ಘನಸಾರ ಸಾದ್ರುಶ ನೆತ್ರೇರೆ ।
ಘನಸಾರ ಭ್ರಾಜಿತ ಗಾತ್ರೇರೆ ।
ಘನಸಾರ ಹಂಸ ಗಮನಿಯರೇ
ಘನಸಾರ ಹಂಸ ಗಮನಿಯರೆ । ಶ್ರೀರುದ್ರನಿಗೆ ।
ಘನಸಾರ ದಾರತಿಯ ಬೆಳಗೀರೆ॥ ಶೋಭಾನವೇ ॥ ॥ ೩ ॥

ಮೃಗಮದ ದ್ಯುತಿಮೃಗ ವರಕಟಿಯರೆ ।
ಮೃಗರೋಮ ವಿರಚಿತ ಪಟಿಯರೆ
ಮೃಗಶಾಬಕ ನಯನಿಯರೆ
ಮೃಗಶಾಬಕ ನಯನಿಯರೇ । ಉಮೇಶಪುರುಷಗೆ
ಮೃಗದಾರತಿಯನು ಬೈಳಗೀರೆ ॥ ಶೋಭಾನವೇ ॥ ॥ ೪ ॥

ಮಂಗಳಕರ ಮಂಜುಳ ಮತಿಯರೆ ।
ಮಂಗಳ ಜನಯಿತ್ರಿ ದ್ಯುತಿಯರೆ ।
ಮಂಗಳ ಶುಭ ಸೌಮ್ಯದ್ಯೆನಿಲಯರೆ ।
ಮಂಗಳ ಶುಭ ಸೌಮ್ಯದ್ಯೆನಿಲಯರೆ । ಚಂನ್ನವಿರೇಶಗೆ
ಮಂಗಳಾರತಿಯ ಬೈಳಗೀರೆ ॥ ಶೋಭಾನವೇ ॥ ॥ ೫ ॥

♦

ಅದ್ಯಾಯ – ೩.

ಸಿರಿಯಾಳತ್ಮಜ ಚಿಲ್ಲಾಳನ ಪದಗಳು

೧. ಸಿರಿಯಾಳ ಸೆಟ್ಟಿಯು ಚೆಂಗುಳಾದೇವಿ ಚಿಲ್ಲಾಳನ ಶಿರ ಕೋರಿದ ಪದ (ಧುಮಾಳಿ)

ರಾಗ :– ಯಮನ ತಾಳ :– ಧಿನ್ ಧಿನ್ ಧಾತಿ

ಬಂದನು ಶಂಕರ ಕಂಚಿಯ ಪುರಕೆ
ಸಂದ ಭಕ್ತರ ಭಾವ ನೊಡಲಿಕ್ಕೆ
ನಂದನದೊಳು ನಿಂದು ನಿರೀಕ್ಷಿಸುತಲಿಸರಕ್ಕೆ । ॥ ಪ ॥

ಕಿಸಲಯಚ್ಯುತ ಖರ್ಜುರಬಾಳಿ
ಅಸಗೆ ಪಲಸು ಪೂಗ ರಸದಾಳೀ ।
ಯಶೆವ ನಾರಂಗು । ತೆಂಗುದ್ರಾಕ್ಷಾಳೀ
ಬಿಸಜಾಕರಗಳು ನೋಡುತಲಿ । ॥ ೧ ॥

ಬಕುಳ ಬಂಧು ಕಳರ್ನಿಕಾರಾ
ವಿಕಶಿತ ಮಾಲತಿ ಮಂದಾರ
ಪ್ರಕಟಿತ ಮಲ್ಲಿಕಾ ಕರವೀರಾ
ನಿಕಟದೆ ಚರಿಸುತ ಪುರಹರಾ ॥ ೨ ॥

ಸುಲಲಿತ ಸುಕರಾಜ ಹಂಸಾಳೀ
ಕಲಕಲ ಕೊಕಿಲ ಭ್ರಮರಾಳೀ
ವಿಲಶಿತ ಕೇಕಿವೃಂದ ಕೇಳಿ
ಗಳಮಿಗೇ ನೋಡುತ ವೃಷವಾಳಿ । ॥ ೩ ॥

ಸುರಮುನಿಯೊಡನೇ ಮಾತಾಡುತ್ತೆ
ಸುರಚಿರತರುಗಳ ನೋಡುತ್ತೆ
ವರಖಗ ಚಿತ್ಕಾರವಾಲಿಸುತ್ತೆ ॥
ಅರಗಿಣಿ ಪ್ರಾಣವ ಪಾಲಿಸುತ್ತೆ ॥ ॥ ೪ ॥

ಅನುಪಮ ಕಾಂಚೀ ಪಟ್ಟಣವನು
ಅನುರಾಗದಲಿ ನೋಡುತ ತಾನು
ಅನಿಶ್ಯೆನೆಲೆಪುರ ಮಂದಿರನು
ಘನಗುರು ಚೆನ್ನವೀರೇಶ್ವರನು । ॥ ೫ ॥

೨. ಶಿವನು ಬಿಕ್ಷಕೆ ಬಂದ ಮುನಿರೂಪದಿಂದ

ರಾಗ : –ತಿಲಾಂಗ ತಾಳ : – ತ್ರಿತಾಳ

ಶಿವನು ಬಿಕ್ಷಕೆ ಬಂದ ಮುನಿರೂಪಿನಿಂದ
ಶಿವಭಕ್ತ ಸಿರಿಯಾಳ ಶೆಟ್ಟಿಯ ಮನೆಗೆ । ॥ ಪ ॥

ಅಳಕಾಮರವತಿಗಿಂದ ಲಧಿಕ ಕಾಂಚಿಯೊಳು ।
ವಳಪೊಕ್ಕು ಪುರದ ವಿಸ್ತರವ ನೋಡುತಲೀ । ॥ ೧ ॥

ಸಾಲು ಬೀದಿಗಳು ವಿಶಾಲ ಸೋಧಗಳು
ನೀಲ ಮಾಣಿಕ ಖಚಿತ । ನಿಲಯ ನೋಡುತಲೀ ॥ ೨ ॥

ಕನ್ನಕ ಭೀತ್ತಿಗಳು ಸಜ್ಜನರ ವೃತ್ತಿಗಳು
ಮನಕೆ ಮಂಜುಳವಾದ । ಮನೆಯ ನೋಡುತಲಿ ॥ ೩ ॥

ವಾರಣ ರಥಪದ ವಾಜಿ ಹಿಂಡುಗಳು ।
ತೋರಣದಿಂದೆಶೆವ ದ್ವಾರ ನೋಡುತಲಿ ॥ ॥ ೪ ॥

ಕೊಡು ನೀಡು ದ್ಯಾನದೊಳಿಡು ಚಿತ್ತ ಚಿಂತೇ
ಬಿಡು ಬೇಡುಯೆಂದೆಂಬ ನುಡಿಯ ಕೇಳುತಲೀ ॥ ॥ ೫ ॥

ಕಹಳೆ ತಮ್ಮಟ ಭೇರೀ ಕಂಸಾಳ ಜಗಳೇ ।
ಬಹಳ ಪಟುವಾದ್ಯದಬ್ಬರವ ಕೇಳುತಲೀ ॥ ॥ ೬ ॥

ವಿನುತ್ಯೆನೆಲೆ ಗುರುಚೆನ್ನವೀರೇಶ ತಾನು ।
ಅರ್ನಘ ಶ್ರೀಯಾಳನ ಮನೆಯ ಕೇಳುತಲೀ। ॥ ೭ ॥

೩. ಬೇಡೆನ್ನ ಗುರುನಾಥ ನೀಡುವೆವು ನಿಮಗೆ

ರಾಗ : ತಿಲಾಂಗ

ಬೇಡೆನ್ನ ಗುರುನಾಥ
ಬೇಡು ಮುನಿನಾಥ
ನೀಡುವೆವು ನಿಮಗೇ
ನಿರ್ವತನದೊಳೀಗೇ ॥ ಪ ॥

ಧನಕನಕ ರಜತ ವಾಹನ ವೃಂದಾನವವಸನ
ಘನರತ್ನ । ನಿಚಯ ನೂತನ ಗ್ರಹ
ತನಯ ವನಿತೆ ಮೊದಲಾದ ಸಕಲೈಶ್ವರ್ಯದೊಳು ನಿಮ್ಮ ।
ಮನಕೆ ಬೇಕಾದ ವಸ್ತುಗಳ ನೀ ಕ್ಷಣಕೇ ॥ ೧ ॥

ಈ ಷಣತ್ರಯಗಳು ಸ್ಥಿರವೇ ಫಲವೆತ್ತಿ
ಘೋಶಿಸುವ ಬಿರಿದಿನ ಕಹಳೆಯ ಸ್ವರದೀ
ದೊಹರ ನಿಮ್ಮಡಿಯ ದೊರಕೊಂಡು ಮನಕೆ ಸಂ
ತೋಷವಾಯಿತು । ಧನ್ಯನಾದೆ ನೀಕ್ಷಣಕೇ ॥ ೨ ॥

ಹಿಂದೆ ಮಾಡಿದ ಸುಕೃತವಿಂದಿಗುದಿಶಿತ್ತಮಮಾ
ತಂದೆ ಶ್ರೀಗುರು ಚನ್ನವೀರೇಶ ನೀನೇ
ವಂದ್ಯನೈನಿಲಯ ಪುರದಿಂದಲೈ
ತಂದು ನೀವಿಂದೆಮ್ಮನುದ್ಧರಿಸಂಭ್ರಂದಿರೀಕ್ಷಣಕೆ ॥ ೩ ॥

೪. ಕೇಳು ಕೇಳು ಶ್ರೀಯಾಳ ತಂದೇ

ರಾಗ : ನಂದ

ಕೇಳು ಕೇಳೋ ಶ್ರೀಯಾಳ ತಂದೇ ।
ಬಾಳು ಬಾಳೊ ಲೋಕ ವಿಖ್ಯಾತ ॥ ಪ ॥

ದೇಶ ದೇಶದೊಳು ನಿನ್ನ ಕೀರ್ತಿ
ಪೊಸರಿಶಿದೇ ಕೇಳಿದೆ ವಾರ್ತಿ ॥ ॥ ೧ ॥

ಕೆಟ್ಟ ರೋಗದಿ ಬಳಲುತ ನಾನು ।
ಕಷ್ಟ ಬಡುತಲೀ ತಿರುಗಿ ದೇನು ॥ ೨ ॥

ಬಡಗಲಾದಿಶದೊಳೊಬ್ಬ ವೈದ್ಯ ।
ನುಡಿದನೇಂಚಿಕೆಳ್ ಚೋದ್ಯ ॥ ॥ ೩ ॥

ನರ ಮಾಂಸವನುಂಡರೇ
ಪರಿಹಾರವಾದಿತೆಂದನವನ್ ಸಾರಾ । ॥ ೪ ॥

ಕಾಳಿ ಸಾರಲೂ ಶ್ರೀಯಾಳ ತಂದೆ ।
ಕೇಳಿದೈನ್ಯದಿ ಬೇಡಲು ಬಂದೆ ॥ ೫ ॥

ನಿನ್ನ ಸುತನ ಕೊರದು ಮಾಂಸವ ।
ಚನ್ನಾಗಿಯೋ ಭಕ್ತ ವತಂಸಾ ॥ ೬ ॥

ಉಹಿಸದ ರುಜೆ ದಿಟ್ಟುಳಿಗಾಗಿ ।
ದೇಹಿಯಂದೆನೆಲೆ ತ್ಯಾಗೀ ॥ ॥ ೭ ॥

ಲೋಕದುಪಕಾರಿಯಾಗಿರುವವನು ।
ಶೋಕ ಭಾದೆಗಳನು ನೋಡನು ॥ ॥ ೮ ॥

ಸೂತೈನಿಲಯ ಚನ್ನವೀರೇಶಾ ।
ವೋತು ಕರುಣೀಸುವ ನಿನಗೀಶಾ ॥ ॥ ೯ ॥

೫. ಶಿವನೇ ಸಾಲಿಗೆ ಹೋಗಿ ಚಿಲ್ಲಾಳನ ಕರೆದ ಪದ

ರಾಗ : ಪಹಾಡಿ

ಬಾರೋ ಬಾ ಚಿಲ್ಲಾಳ । ಬಾರಪ್ಪ ಚಿಲ್ಲಾಳ
ಬಾರಯ್ಯ ಬಾರೋ ಬಾರಾ ॥
ಹಾರೈಸಿಕೊಂಡು ನಿನ್ನ । ಆರೈವುದಕೆ ಬಂದೆ
ಶಿರಾಳ ಬಾರೋ ಬಾರಾ ॥ ಪ ॥

ಮೇಲೋದೇಶದಿಂದೊಬ್ಬ ಖೂಳ ಮುನಿವರನು ।
ಕೇಳುತ ನಿಮ್ಮಮನಿಗೆ ಬಂದನು ।
ಹೇಳಲೇನವ ನಿನ್ನ ಶೀಳಿ ನೀಡೆನಲೊ
ಶಿರಿಯಾಳ ನೀಡುವೇನೆಂದನು ॥ ॥ ೧ ॥

ಕೇಳಿ ಕಳವಳಿಸಿ ನಾ । ನಾಲೋಚಿಸುತ್ತ ಬಂದೇ
ಸಾಲಿ ಹುಡುಕುತಲಿ ಬಂದೆನು
ಬಾಲಕ ನಿನಗೆ ನಾ ಪೇಳಲಿಕೆ ಬಂದೇ
ನೀನೇಳು ನಮ್ಮ ಮಠಕೇ ಬಾರೊ ॥ ೨ ॥

ರಕ್ಕಸಿಯು ನಿಮ್ಮವ್ವ ।
ಅಕ್ಕರದಿ ನಿನ್ನ ಕೊಂದಿಕ್ಕುವಳು । ಮಾಂಸ ಮುನಿಗೆ
ಅಕಟಕಟ ಹಡದ ಮಕ್ಕಳನ್ನು ಕೊಲ್ಲುವುದು
ದಿಕ್ಕಿನೊಳಗರಿಯೇ ಮಗನೇ ॥ ೩ ॥

ತೋಯ ನಿಧಿ ಮರಿದರೆ
ವಾಯು ಪಥ ಜಾರಿದರೆ
ತಾಯ ತನ್ನ ಶಿಸುವ ಕೊಂದರೆ
ಕಾಯುವರಾರಿನ್ನು ।
ಬಾ ಯೇಳು ಹೋಪನು ನಡಿ ನಡೀ । ॥ ೪ ॥

ಪಾಪಿಗಳಿಗಿಂತಪ್ಪ ರೂಪುಳ ಬಾಲಕನ
ಕಾಪಾಡಿ ತಾ ಕೊಡುವರೇ ।
ಯೇ ಪುತ್ರ ಬಾ ನಿನ್ನ ನಾ ಪಾಲಿಸುವೆನು
ಕುಲದೀಪ ಚಿಲ್ಲಾಳ ಬಾರಾ ॥ ೫ ॥

ರಂಭಿಸುತ ನಿನ್ನ ಮೊಗ ಚುಂಬಿಸುವರಾರು
ನಿನ್ನಂಬರೊಡವೀಗಳಾರಿಗೇ
ಕುಂಭಿನಿಯೊಳಗುಳವಿ ಕೊಂಬುವರು ದಾರು
ನಿನ್ನಂಬ ಹಗೇಯಾದ ಮೇಲೇ ॥ ೬ ॥

ಉನ್ನತೈನಿಲಯ ಗುರು ಚೆನ್ನವೀರೇಶ್ವರನು
ತನ್ನ ಭಕ್ತರ ಮರೆಯನು
ನಿನ್ನ ಕೊರಿವದು ಸುಡಲೀ
ನಿನ್ನಾಣೇ ಹೋಪನು ನಡಿನಡಿ ಚೆನ್ನ ಚಿಲ್ಲಾಳನೆ ಬಾರಾ ಬಾರೋ॥ ೭ ॥

೬. ಚೆಂಗುಳಾದೇವಿಯು ಸಾಲಿಯಿಂದ ಮಗನ ಕರೆತಂದು ನುಡಿದ ಪದ

ರಾಗ–ಕಾಫಿ

ಕೇಳಲೆ ಮೋಹದ ಕಂದಾ
ಚೀಲಾಳನೇ ನೀ ಮುದದಿಂದಾ ನೀನು ಕೇಳಾ ॥ ಪ ॥

ಯತಿಯೋರ್ವನು ತಾ ಬಂದು ಕೇ
ಳುತ ನಮ್ಮನಿಯೊಳು ನಿಂದು ।
ಸುತನ ಮಾಂಸ ಬೇಕೆಂದು ಬಹು
ಹಿತದಿ ಬೇಡಿದ ನಿಂದು ॥ ನೀನುಕೇಳಾ ॥ ॥ ೧ ॥

ಸಂತತ ಬರಿದಿನ ಕಾಳೀ ಭೂ
ಪ್ರಾಂತದಿ ಸಾರಲೂ ಕಾಳೀ
ಕಾಂತನ ರೂಪನು ಕೇಳಿ । ಬಂದ
ಸಂತಸ ಮನದೋಳು ತಾಳಿ ॥ ನೀನು ಕೇಳಾ ॥ ॥ ೨ ॥

ಪರರ ಸುತರು ಬೇಡೆಂದಾ । ನಿಮ್ಮ
ತರುಳನ ಕರಿತಾರೆಂದಾ
ಕೊರೆದು ಮಾಂಸವ ನೀಡೆಂದಾ । ನಿನ
ಗರಪುವೆನಿದರಂದಾ ॥ ನೀನು ಕೇಳಾ ॥ ॥ ೩ ॥

ಹೆತ್ತವರೆ ಹಿತದಿಂದಾ । ಮಗ
ನೊತ್ತಿ ಹಿಡಿದು ಕೈಯಿಂದಾ
ಕುತ್ತಿಗಿ ಕೊಯ್ಯುವ ಮುಂದಾ
ಸುತನತ್ತರೇ ವಲ್ಲೆಂದಾ ॥ ನೀನುಕೇಳಾ ॥ ॥ ೪ ॥

ಪರಮೈನೆಲೆಯ ಮಂದಿರನು ಶ್ರೀ
ಗುರು ಚೆನ್ನವೀರೇಶ್ವರನು
ಪುರವ ನೋಡ ತೆರಳಿದನು ನಿನ್ನ
ಕರ ತಂದಿದು ತಿಳುಪಿದೆನು ॥ ನೀನು ಕೇಳಾ ॥ ॥ ೫ ॥

೭. ತಾಯಿಗೆ ಚಿಲ್ಲಾಳನು ನುಡಿದ ಪದ

ರಾಗ :- ಹಮುರಾ ತಾಳ :- ತ್ರಿತಾಳ

ಮಾತೆ ಚೆಂಗುಳಿ ಕೇಳೆ ಬಹು
ಮಾತ್ಯೆತಕೇ ಸಾಕೇಳೆ ತಾಯಿ ಕೇಳೇ ॥ ಪ ॥

ಹಿಂದಿನ ಸುಕೃತದಿಂದಾ । ಬಾ
ಲೆಂದು ಧರನು ತಾ ಬಂದಾ ।
ಸಂದೇಹ ಬೇಡಿದರಿಂದಾ । ಫಲ
ಸಂದಿಶಿತ್ತೆಮಗೇ ಮುಂದಾ । ತಾಯ ಕೇಳೇ ॥ ೧ ॥

ರೋಗದಿ ಮಡಿವರೆ ವ್ಯರ್ಥ । ಶಿವ
ಯೋಗಿಯ ಬಾಯಿಗೆ ತುತ್ತಾ ।
ನಾಗುವ ಪದಕ್ಕಿದೆ ಗೊತ್ತಾ । ಆ
ರೋಗಣಿಗಾಯಿತು ಹೊತ್ತಾ ॥ ನೀನ ಕೇಳಾ ॥ ॥ ೨ ॥

ಅಂಗದ ಗುಣಗಳು ಕಳಿಯೇ । ಯ
ನ್ನಂಗವು ನಿರ್ಮಲ ತೊಳಿಯೇ
ತುಂಗ ಭಸಿತ ನೀ ತಳಿಯೇ ನೀ
ಮಂಗಳ ಹೃದಯದಿ ತಿಳಿಯೇ ॥ ನೀನು ಕೇಳಾ ॥ ॥ ೩ ॥

ತಡ ಮಾಡುವ ಗುಣ ಬೇಡೇ । ಯೆನ್ನ
ವಡಲ ಕೊರೆದು ಹೊಸ ಬಾಡೆ
ಶೆಡೆಯದೆ ಅಡಗಿಯ ಮಾಡೆ । ಬಂದ
ಒಡೆಯನಿಗೆಡೆಯ ಮಾಡೆ ॥ ನೀನು ಕೇಳಾ ॥ ॥ ೪ ॥

ಸನ್ನುತ್ಯೈನಿಲಯ ವರನೇ । ಗುರು
ಚೆನ್ನ ವೀರೇಶ್ವರನೇ
ನಿನ್ನ ಮನಕೆ ಮೆಚ್ಚುವವನೇ ನೋ
ಡೆನ್ನ ಬಯಸಿ ಬಂದಿಹನೇ। ತಾಯಿಕೇಳಾ ॥ ॥ ೫ ॥

೮. ಚೆಂಗುಳಾದೇವಿಯು ಮಗನ ಇರಿದು ಕೊರೆದ ಪದ

ರಾಗ – ಸೋಹನಿ

ಬಾಲೆ ಚೆಂಗುಳಿ ಬಂದಾಳೊ । ತನ್ನ
ಬಾಲ ಚಿಲ್ಲಾಳಗೆರೆದಾಳು ॥ ಪ ॥

ಮಗನ ಮೈ ದ್ರವವ ವರಸಿದಾಳೊ । ತಾನು
ಮೀಗೇ ಧೂಪದ ಹೊಗೆಯ ಇರಿಸಿದಾಳೂ ॥ ೧ ॥

ಅಂಗಜಗೆ ಘನವರಿಸಿದಾಳೂ ।
ಸರ್ವಾಂಗಕ್ಕೆ ವಿಭೂತಿ ಧರಿಸಿದಾಳೋ ॥ ೨ ॥

ಮುದ್ದು ಮುಖವ ನೋಡಿದಳು । ಆಕೇ
ಮುದ್ದಿಸುತ ಮುಂಡಾಡಿದಳು । ॥ ೩ ॥
ಮುಂಚೆ ಸುರಗಿಯ ಪಿಡಿದಳು । ಸುತಗೆ
ಪಾಂಚಾಕ್ಷರ ಪಠಿಶೆಂದಳು ॥ ॥ ೪ ॥

ಪತಿ ಶ್ರೀಯಾಳನ ಕರೆದಾಳೋ ಆಕೆ
ಸುತನ ತುಡುತುಡು ಕೆಂದಳು ॥ ೫ ॥

ಸಂದ ಪ್ರಮಥರ ನೆನೆದಾಳೊ । ತನ್ನ
ನಂದನನ ಶಿರವರಿದಾಳು ॥ ॥ ೬ ॥

ನಾಥ ಚೆನ್ನವೀರೇಶ್ವರನೋಳ್ । ಕೂಡೀ
ಪೂತ್ಯೆನೆಲೆ ಶಿರಿಗೊಂಡಳು ॥ ೭ ॥

೯. ಚಿಲ್ಲಾಳನ ಮಸ್ತಕ ಕೊಯ್ಯಲು ತ್ರಿಲೋಕವೆಲ್ಲ ಬೆರಗಾದ ಪದವೂ

ಬಾಲೆ ಚೆಂಗುಳಿ ತನ್ನ ।
ಬಾಲಕನ ಕೊರದಾಳೋ ।
ಮೂಲೋಕ ಅದ್ಭುತ ಕಡಲೋಳು ।
ತೇಲು ಮುಳುಗೇಳುತಿರೆ ॥ ॥ ಪ ॥

ನಾಗಲೋಕವು ಬೆರಗಾಗಿ ಕೀರ್ತಿಸುತ್ತಿರೇ
ನಾಗಕನ್ಯಯರು ತಲೆಯ ತೂಗಿ ಬಹು ಮೆಚ್ಚುತ್ತಿರೇ ॥ ॥ ೧ ॥

ಮನುಜಲೋಕದೊಳಿರ್ದ ವನಿತೆರೆಲ್ಲರು ಕೇಳಿ
ತನುವು ಮರದು ತಮ್ಮ ಮನದಿ ಮರಗುತ್ತಿರೇ॥ ॥ ೨ ॥

ದೇವಲೋಕದ ಜನರು ದೇವಮಾರ್ಗದಿ ನಿಂತು ।
ದೇವಸ್ತ್ರೀಯರು ತಮ್ಮ ಭಾವದೊಳು ಬಳಲುತ್ತಿರೇ ॥ ॥ ೩ ॥

ಮೇಘವಾಹನವೇರೀ ಪೋಗುವ ವಿದ್ಯಾಧರಿಯರು
ರಾಗ ಕೇಳುತಾ ಖೇದ ಬೇಗೆಯು ನಡಿರುತ್ತೆ ॥ ॥ ೪ ॥

ಖೇಚರ ಸ್ತ್ರೀಯರು ಕೇಳಿ । ಪ್ರಚುರ ಸಂತಾಪಿಸುತ್ತೇ ।
ಅಚಲಚಾಪನೆಯಿಂತು ರಚಿಪರೆ ಯೆನುತೇ ॥ ॥ ೫ ॥

ಸಕಲ ಮುನಿಸ್ತ್ರಿಯರು । ಬಾಲಕನ ರಕ್ಷಿಸುವವರು ।
ಅಕಟಕಟಾ ಇನ್ನಾರೆಂದು ವಿಕಳದಿಂದಳಲುತ್ತಿರೇ ॥ ॥ ೬ ॥

ನಂದಿಕೇಶ್ವರ ಮುಖ್ಯ ಮಂದ ಪ್ರಮಥರು ನಮಗೆ ।
ಸಂದನೆನುತ ಶರಣ ವೃಂದವು ನಲಿಯುತ್ತಿರೇ ॥ ॥ ೭ ॥

ಭಾವೆ ಚೆಂಗುಳಿ ಮಗನ । ಭಾವಿಸಿ ಕೊಯ್ಯುವಾಗ ।
ದೇವಿ ಪಾರ್ವತಿ ಬಂದು ಜೀವ ಕೊಂಡೊಯ್ಯುತ್ತಿರೇ ॥ ॥ ೮ ॥

ಕ್ಷತಿಯೊಳ್ಳೈನಿಲಯ ಪುರ ಪತಿ ಚೆನ್ನವೀರೇಶನು ।
ಸುತನ ಧೈರ್ಯಕ್ಕೆ ತಾನದ್ಭುತದಿ ಕೊಂಡಾಡುತ್ತಿರೇ ॥ ॥ ೯ ॥

೧೦. ಶಿವನು ತಲೆಯು ಕುಟ್ಟೆನಲು ತಲೆಯ ಹಿಡಿದು ನುಡಿದ ಪದ

ರಾಗ = ಮಾಂಡ   ತಾಳ–ಜಂಪತಾಳ ತ್ರಿತಾಳ

ಚಿಲ್ಲಾಳ ಬಾರೋ ಕಂದ ಸತ್ಯಶೀಲ
ಮಾಧವಕ್ಕೆಮ್ಮ ಕಂದಾ ॥ ॥ ಪ ॥

ಬಳಲಿಕೆಯು ನಮಗಿಲ್ಲ ತಮ್ಮ ಮುಂದೆ
ಬಳಗ ನೀ ಮರೆಯದಿರು ತಮ್ಮ ॥ ॥ ೧ ॥

ಸುತನೆ ನಿನ್ನಂಗವ ಬಾಡಿ ಬಯಸಿ
ಯತಿ ಬಂದನೆಂದು ನಾ ಬಾಡೇ ॥ ॥ ೨ ॥

ಮರುಗಿದರೆ ತಾಯಲ್ಲವಣೂ ಮುಕ್ತಿ
ಮರಕೆಕಾತಿರುವ ತನುವಣ ॥ ॥ ೩ ॥

ಅಂಗ ಮಾಂಸವನೊಲ್ಲ ಶಿವಪಾಕಾ । ಉತ್ತು
ಮಾಂಗ ಮಾಂಸ ಮಾಳ್ಪೆ ಪಾಕಾ ॥ ॥ ೪ ॥

ಮುನಿಗಾಗಿ ಕೊಂದೆನೆಲೇ ತಂದೇ । ಕೇಳು
ತನಯ ತಲೆ ಕುಟ್ಟುಲಯೀ ತಂದೇ ॥ ॥ ೫ ॥

ಅಕಟಾ ಹಸಿದನು ದೇಶಿಕೇಂದ್ರಾ । ನಿನ್ನ
ಮುಖವು ದಾರಿಪೇದಾರ ಕೇಂದ್ರಾ ॥ ॥ ೬ ॥

ಸಾರದ್ವೈನಿಲಯನ ಸ್ತೊತ್ರಕಾ । ಚೆನ್ನ
ವೀರೇಶ ನೊಲಿವಾ ನೆಲೆ ಸ್ತೊತ್ರಕಾ ॥ ॥ ೭ ॥

೧೧. ತಲೆಯ ಕುಟ್ಟುತ್ತಿರುವ ಪದ

ರಾಗ – ಬೈರವಿ

ಕುಟ್ಟಿದಳೋ ಮಗನ ತಲೆಯ
ಕುಟ್ಟಿದಳೋ ಮಗನ ತಲೇಯ
ಧಿಟ್ಟ ಚಂಗುಳಾ ದೇವಿ ॥
ಶಿಷ್ಟ ಶರಣರ ನೆನೆದು ಕುಟ್ಟಿದಳು ತಲೆಯ ॥ ॥ ಪ ॥

ಚಂದನ ಸುಗಂಧಿಯಳು । ಮುನಿ ಪುಂಗವನಿಗೆರಗೀ ॥
ಚಂದ್ರಧರನಾ ಸ್ತುತಿಸುತ್ತಾ ।
ಚಂದನದ ವನಿಕೆಯಲೀ
ಛಂದದಲೀ ಪಾಡುತಲೀ ॥ ಕುಟ್ಟಿದಳೋ ॥ ॥ ೧ ॥

ನೆಟ್ಟನಲುಗುವ ಕರಳುಗಳ
ಬಿಟ್ಟು ಕಂಗಳ ಬಿಗಿದು
ಬಟ್ಟ ಮೊಗಕರದಿಪಿಡಿದು
ನಿಟ್ಟಿಸಳಾ ಕಂಗಳೆಯು
ನಿಟ್ಟಿಸುತ ಲಾಲಿಸುತ ॥ ಕುಟ್ಟಿದಳೋ ॥ ॥ ೨ ॥

ಬಾಲಕನ ತಲೆಯ ಪಿಡಿದಾಲೋಚಿಸುತ । ನಿನ್ನ
ನಿಲುವಿಕೆಯು ಕೊಂಡಾಡುತ್ತ ।
ಮೂಲೋಕದೊಳು ನಿನ್ನ
ಹೋಲಿಕೆಯು ಇಲ್ಲೆಂದು ॥ ಕುಟ್ಟಿದಳೋ ॥ ॥ ೩ ॥

ನಾರಿ ಚೆಂಗುಳಿ ಮಗನ
ಮೋರೆ ಕೈಯ ಹಿಡಿದು ।
ಶೇರಾಳ ಕೇಳೆಂಬುತಾ
ಮೂರಾರಿ ರೂಪನಿಗೇ
ಸಾರ ಸವಿಯಾಗೆಂದು ॥ ಕುಟ್ಟಿದಳೋ ॥ ॥ ೪ ॥

ಆರರಿಯದ ಭವನ ।
ಸಾರ ಮೋಕ್ಷದ ಮನೆಯು
ಸೂರೆ ಮಾಡಿದೆ ಯೆಂಬುತಾ ॥
ಸಾರದೈನಿಲಯ ಚೆನ್ನ
ವೀರೇಶಗೊಸ್ಕರ ಕುಟ್ಟಿದಳೂ ॥ ತಾಯಿ ಮಗನಾ ॥ ॥ ೫ ॥

೧೨. ಶ್ರೀಯಾಳ ಚಂಗುಳಿ ಮಗನ ಬಾಣಸವ ಮಾಡಿ ಶಂಕರನಿಗೆಡೆಯ ಮಾಡಲು ಶಿವನು ಮನವ ನೋಡಲು ಚಿಲ್ಲಾಳಗೇ ಕರಿಯೆಂದ ಪದ

ರಾಗ–ಮದ್ಯಮಾವತೀ

ಬಾಲೆ ಚೆಂಗುಳಿ ನಿನ್ನ ।
ಬಾಲ ನಿಲ್ಲದ ಊಟ ॥
ನಾಲಿಗೆಗೆ ಸವಿಯಹುದೇ ।
ನಾಲಿಕನಯನೇ ॥ ಪ ॥

ಮಕ್ಕಳಿಲ್ಲದ ಮನೆಯ
ಹೊಕ್ಕನ್ನು ಕೊಂಡರೇ
ಸಕ್ಕರೆ ಹೊರತಂದು
ವಕ್ಕಾಣುಸುವರೇ ॥ ೧ ॥

ನೂತನ ಪಾತಕಗಳೇತಕೆ ನಿನ್ನ । ತನು
ಜಾತನಿಲ್ಲದೂಟಮಾತೇ ಕೇಳ್ಮಾತೇ ॥ ॥ ೨ ॥

ಸುತನೊಬ್ಬ ನಿಹನೆಂದು ಹಿತ ನಿನ್ನೊಳಿಲ್ಲೇ ।
ಗತಿಗೆಟ್ಟುಂಡರೆ ಸಾಮ್ಯವ್ರತಿಗಳೂ ನಗರೇ ॥ ॥ ೩ ॥

ವ್ಯೊಯ್ಯನೆ ನಿನ್ನರಸ । ಪ್ರಿಯದಿಂದುಂಬುದಕ್ಕೆ
ಕೈಯ್ಯನೆಂತಾಡುವದೋ ಅಯ್ಯೊ ಮಗನಿಲ್ಲದೇ ॥ ೪ ॥

ಚಿನ್ನನಿಲ್ಲದಲುಂಬುದ ನ್ಯಾಯ ಜಗದೊಳು ।
ನಿನ್ನೆದಿಗೆ ಸರಿ ಇಲ್ಲೆ ಇನ್ನೂ ನಾನೊಲ್ಲೆ ॥ ೫ ॥

ಮುನಿ ಮೃಕಂಡ ಶಿಲಾದರ್ ತನುಜರ ಬಯಸುತ
ಘನ ತಪವನೆಸಗಿದರೆಂ ಮನುಜರಂತಿರಲೇ ಬೇಕೋ ॥ ॥ ೬ ॥

ವರದೈನೆಲೆವರ ಮಹೇಶ್ವರ ಚನ್ನವೀರೇಶ
ನುರೆ ನಂಬಿಯಂಬುದಕೆ । ತರುಳನ ಕರಿಯೇ ॥ ॥ ೭ ॥

೧೩. ಚೆಂಗುಳಾದೇವಿ ಚಿಲ್ಲಾಳನ ಕರಿದ ಪದ

ರಾಗ – ಜೋಗಿ

ಬಾರೋ ಚಿಲ್ಲಾಳನೆ ಬಾರೋ ದಯಾಳನೇ ।
ಬಾರೋ ಭಕ್ತರ ಮುನಿಯಾಳ ನೀನೇ ಕಂದಾ ॥ ॥ ಪ ॥

ಸುತನಿಲ್ಲದೂಟವು ಹಿತವಾಗದೆನುತಲೀ।
ಯತಿರಾಯನುಣ್ಣದೆ ಕುಳಿತಿಹನು ಕಂದಾ ॥
ಕ್ಷತಿಯೊಳು ನಿನ್ನಂಥಾ ಸುತರುಂಟೆ ನೀನಮ್ಮ ।
ವೃತವನ್ನು ಧರಿಸಿದ ಬಾಲಾ ಬಾರಾ ॥ ॥ ೧ ॥

ತಾಯಿ ತಂದಿಗಳೆನ್ನ ಮಾಯವಿಲ್ಲದೇ ಮುನಿಗೇ।
ಕಾಯ ಕೊರದಾರೆಂದು ಮುನಿದಿಯಾ ಕಂದಾ ॥
ತಾಯಿ ನಾ ಕರೆದಾರೇಯೇ ಯಮ್ಮ ಬಾಹೆನೆಂದು।
ವೋ ಯನ್ನಲಾಗದೇ ಯನ್ನೊಡನೇ ॥ ॥ ೨ ॥

ಯೇಕ ಪುತ್ರನ ಕೊಂದು ಶೋಕ ಮಾಡಳುಯೆಂದು ।
ಲೋಕವಾಡುವದೆಂಧ್ದು ಅಂಜೆ ನಾನು ಕಂದಾ ॥
ಬೇಕಾಗಿದ್ದರೆ ನೀನೂ ನಾ ಕರೆದಾರೆ ಬಾರೋ ।
ಲೋಕದ ಹಂಗಿನೊಳಿಲ್ಲ ನಾನು ॥ ॥ ೩ ॥

ಹಿಂದಿನ ಪುಣ್ಯವೇ ಕಂದಾನ ರೂಪು ತಾಳೀ।
ಬಂದೆನ್ನ ಬಸುರೊಳು ಜನ್ಮಿಸಿದೇ ಕಂದಾ ॥
ಕೊಂದೆನೆಂಬುವ ದುಃಖದಂದುಗದೊಳಗಾಗೀ ।
ನೊಂದವಳಲ್ಲ ನೀ ಬಾರೋ ಬಾರಾ ॥ ॥ ೪ ॥

ಮುನಿರಾಯ ಕರಿಯನೇ ನಿನಗೇ ನಾ ಕರಿವೆನು ।
ಯನ್ನ ಮನಸಿನ ಮೋಹವು । ಶಿವನೇ ಬಲ್ಲಾ ಕಂದಾ ॥
ಮನೆಯಾತನೊಡಗೂಡೀ ಘನರುಷಿ ಕುಳಿತಾನೇ।
ತನುಜ ನೀನಿಲ್ಲದೇ ಉಣ್ಣೆವೆಂದೂ ॥ ॥ ೫ ॥

ಬಾರೆನ್ನ ಮೋಕ್ಷದಾಗಾರಕ್ಕೆ ಕಳಸುವೇ ।
ಬಾರೆನ್ನ ಭಕ್ತಿ ಧೃಮಕೇಪಲವೇ ಕಂದಾ ॥
ಬಾರೆನ್ನ ಜನಕನೇ । ಬಾರಣ್ಣ ಬಾಲನೇ ।
ಬಾರೆನ್ನ ಭಾಗ್ಯದ ಸಾಗರವೇ ॥ ॥ ೬ ॥

ವರಕಂಚಿ ಪುರದಿಂದಾ ತೆರಳಿ ಕೈಲಾಸದ ।
ಶಿರಿಯ ಸೂರ್ಯ್ಯಾಡಿದ ಮಗನೇ ಬಾರಾ ಕಂದ ॥
ಸುರಚಿರೈನೆಲೆ ವಾಸ । ಗುರುಚೆನ್ನವೀರೇಶ ।
ಬರುಹ ಹಾರೈಸುತ ಕುಳಿತಿಹನು ಬಾರೋ ಕಂದಾ ॥ ॥ ೭ ॥

೧೪. ಚೆಂಗುಳಾದೇವಿ ಕರಿಯಲು ಮಗನ ಹೈಮಾವತಿ ಪೋಗೆನ್ನಲು ನುಡಿದ ಪದ

ಕೇಳಮ್ಮ ಜಗದ ಜನಯಿತ್ರಿ
ಮರಳಿ ಭೂಲೋಕನೊಲ್ಲೆ ಗಿರಿಪುತ್ರೇ ॥ ॥ ಪ ॥

ಯೇ ಭವಾನಿಯೇ ಕೇಳೆ ಸೊಲ್ಲೆ । ತಿರುಗಿ
ನಾ ಭೂಮಿ ಭೋಗಂಗಳೊಲ್ಲೇ ॥ ॥ ೧ ॥

ನಾಕ ಸುರಭಿಯು ತೋರಿದ ಬಳಿಕೇ । ಮರ್ತ್ಯ
ದಾಕಳ ಹಂಬಲಿನ್ಯಾತಕ್ಕೆ ॥ ೨ ॥
ಅಳಕಾಪುರಿಯೊಳಗಿರ್ದ । ಜನರೇ ಭೂಮಿ
ಯೊಳ್ ಬೆಳೆದ ಧಾನ್ಯ ಬಯಸುತ್ತಿಹರು ॥ ॥ ೩ ॥

ಭೋಗಾವತಿಯೊಳಿರ್ದವಂಗೇ ಕ್ಷಿರ
ಸಾಗರವ್ಯಾಕೇ ಹಸು ತೃಷೆಯಾಕೇ ॥ ॥ ೪ ॥

ಜಗದಾಂಬಾ ನೀನೇ ಇರಲಿಕ್ಕೆ
ಜಗದೊಳಗಿನ ಜನನೀಯೆನಗೇಕೇ ॥ ೫ ॥

ಯೇ ಗಿರಿಜೆ ನಿನ್ನ ಅಭಯ ಪ್ರಾಣವಿಟ್ಟು
ಪೋಗೆನಲು ಪೋಪೆ ರುದಾಣಿಯೇ ॥ ೬ ॥

ಶ್ರೀಕರ್ಕೈನಿಲಯ ಗುರುನಾಥ
ಉಣ್ಣದೇಕೇ ಕುಳಿತ ಚನ್ನವೀರೇಶ ॥ ೭ ॥

೧೫. ಗೌರಿಯ ನಿರೂಪದಿಂದಾ ತಿರುಗಿ ಕಂಚಿಗೆ ಬಂದು ಜನನಿ ಜನಕ ಸರ್ವರೂ ಕೈಲಾಸಕ್ಕೆ ಹೋದ ಪದ

ರಾಗ– ಮಾದ್ಯಮಾವತಿ

ಬಂದ ಚಿಲ್ಲಾಳನು ।
ಬಂದ ಸುಶೀಲನು
ಬಂದ ಶ್ರೀಯಾಳನ ಬಾಲ ತಾನೂ । ಕೇಳಿ ಬಂದ ॥ ॥ ಪ ॥

ಚಿಲ್ಲಾಳನಂಗವ ಶೀಳಿದಾಕ್ಷಣದೊಳು ।
ಲೋಲ ಕೈಲಾಸದ ಸಭೆಯೊಳಗೇ
ಬಾಲ ಪಾರ್ವತಿ ತೊಡೆಯ! । ಮೇಲೆ ಕೂಡಲು ನೋಡೀ
ವೋಲಗವಾಶ್ಚರ್ಯವಾಗುತ್ತಿರೇ ॥ ೧ ॥

ಶಿತಕಂಠಮಾಡಿದ ಕೃತಕ ತಿಳಿದು ಗಿರಿಜೇ
ಹಿತದಿ ಚಿಲ್ಲಾಳಗೇ ಪೇಳಿದಳು ।
ಕ್ಷತಿಯೋಳು ನಿಮ್ಮಮ್ಮ ! ವೃತಕೆಂದು ಕರಿದಾಳೋ
ಸುತನೇ ನೀ ಹೋಗೆಂದು ಕಳುಹಿದಳೋ ॥ ॥ ೨ ॥

ಮದನಾರಿ ಮಡದಿಯ ।
ಪದಕೆ ವಂದಿಸಿ ಹೊರಟ! ಮುದದಿ ಶ್ರೀ ಕಾಂಚಿಯ ಮಂಡಲಕೇ ।
ಮೊದಲ ರೂಪಿನೊಳೊಂದು! ಬದಲಿಲ್ಲ ನೋಡಿರೇ
ಇದು ಏನು ಕೌತುಕ ಶಿವನೇ ಬಲ್ಲ ॥ ॥ ೩ ॥

ಬಾಲದುಡಿಗೆ ಕಂಠಮಾಲೆ ವಡ್ಯಾಣ ವಂಕೀ
ಹಾಲಗಡಗ ಗೆಜ್ಜೆ ಘಿಲ್ ಘಿಲ್ ಏನುತೇ
ಮೇಲುಗಿರಿಯ ಬಿಟ್ಟು । ಚಿಲ್ಲಾಳ ಬರುತಿರೆ
ಬಾಲ ಸೂರ್ಯನು ಭೂಮಿಗಿಳಿವಂತೆ ॥ ೪ ॥

ಆಕೆ ಚೆಂಗುಳಿ ತನ್ನ ಸುತನ ಕರೆ ಕರೆದು
ಸಾಕಾಗಿ ಸೊರಗೀ ಬಾಯಾರುತ್ತಿರೆ
ಯಾಕಮ್ಮ ಕರಿಯುವ ವ್ಯಾಕುಲವೇನೆಂದು ।
ಆ ಕುವರ ಅಮ್ಮನ ಮೇಲೆಬೀಳೇ ॥ ೫ ॥

ಬಾಲ ಬರಲು ಮೇಲೆ ಹಾಲತೊರಿಯೇ ತಾಯೀ
ಮೇಲೆ ಶೆರಗ ಮುಚ್ಚಿ ಯಪ್ಪುತ್ತಿರೇ ।
ಪೇಳಲೆನ್ನಳವಲ್ಲಾ ವೋಣುಯಜನ ಕಂಡು ।
ಆಡಿದರದ್ಭತ ಕಡಲೊಳಗೇ ॥ ೬ ॥

ಶಿರಿಯಾಳ ಚೆಂಗುಳಿ ತರುಳನ ಸಹ ಪೋಗೀ
ಯರಗಲು ಶಂಕರ ಮೆಚ್ಚಿದನು
ಹರಿವಿಧಿ ಮುನಿಗಣ ವರರು ಘೇ ಯೆನುತಿರೇ ।
ಸುರರು ಪೂವಿನ ಮಳೇ ಸುರಿವುತಿದೆ ॥ ೭ ॥

ಕಂಚಿ ಪಟ್ಟಣ ಸಹ ಪಂಚಮುಖನು ವೈದಾ ।
ಮಿಂಚುವ ಕೈವಲ್ಯ ಪರ್ವತಕೆ ।
ಮುಂಚೆ ಚೆಂಗುಳಿ ಕೈಯ್ಯ । ಕಂಚೆ ರುದ್ರಾಣಿ ಪಿಡಿದು
ವಂಚನವಿಲ್ಲದೇ ಪೊಗಳಿದಳು ॥ ೮ ॥

ಸುಂದರೈನೆಲೆಪುರ ಮಂದಿರ ಚೆನ್ನವೀ ।
ರೇಂದ್ರ ನೋಲಗವೆಲ್ಲ ಪೊಂಗುತಿರೇ
ಸಂದ ಶರಣರೊಳಾನಂದ ಭಕ್ತಿಯ ತೋರೀ
ಅಂದು ಶ್ರೀಯಾಳಗೇ ॥ ೯ ॥

♦

ಅಧ್ಯಾಯ –೪
ಬಸವೇಶ್ವರ ಸ್ತೋತ್ರದ ಪರಿವರ್ಧಿನಿ

ಶ್ರೀ ಧರ ವರ ನಿಜ ಮಂದಿರ ಶಂಕರ
ಶ್ರೀ ಧರ ಸಂಭವಭವನದಿತಿಜ ವರ
ಶ್ರೀ ಧರ ಸುರ ಕಿನ್ನರ ಖೇಚರ ತುಂಬುರ ನತ ಮೃದು ಚರಣ
ಶ್ರೀ ಧರನನುಪಮ ದಯಾನಿಧಿ ಕೃತಸ್ಮರ
ಶ್ರೀ ಧರದಿಂ ಸಂಹರ ಕರುಣಾಕರ
ಶ್ರೀ ಧರ ಪರಮಾನಂದನೆ ಶ್ರೀ ಬಸವೇಶ್ವರ ಮಾಂ ಪಾಹಿ

ಟೀಕು :– ಶ್ರೀಧರ ವರ ನಿಜ ಮಂದಿರ:– ಶ್ರೀಧರ = ಪರ್ವತ: ವರ= ಶ್ರೇಷ್ಠಮಾದ ಮಹಾ ಮೇರುವೆ; ಮಂದಿರ= ಮನೆಯಾಗಿರುವಂಥ: ಶಂಕರ:– ಶಂ= ಸುಖವನ್ನು: ಕರ= ಉಂಟುಮಾಡುವಂಥ; ಶ್ರೀಧರ ಸಂಭವಭವ:– ಶ್ರಿಧರ= ಉದಕದಲ್ಲಿ; ಸಂಭವ= ಹುಟ್ಟಿದಂಥ ಕಮಲದಲ್ಲಿ; ಭವ= ಉದ್ಭವಿಸಿದ ಬ್ರಹ್ಮನು; ಅದಿತಿ= ಅದಿತಿಯೆಂಬ ಸ್ತ್ರೀಯಲ್ಲಿ; ಜ= ಜನಿಸಿದ ದೇವತಿಗಳಿಗೆ; ವರ= ಒಡೆಯನಾದ ದೇವೇಂದ್ರನು; ಶ್ರೀಧರ= ವಿಷ್ಣು: ಸುರ= ಸರರು; ಕಿನ್ನರರು, ಖೇಚರರು, ತುಂಬುರರು ಮುಖ್ಯ ಇಂತಿವರಿಂದೆ; ನತ= ನಮಸ್ಕರಿಸಿಕೊಳ್ಳಲ್ಪಟ್ಟಂಥ, ಮೃದುತರ ಚರಣ; ಶ್ರೀಧರ= ಕಮಲವನ್ನುಳ್ಳಂಥ; ಅನುಪಮದಯಾನಿಧಿ= ದೊಡ್ಡಿತ್ತಮಾದ ದಮಂಗಳಿಗೆ ಸ್ಥಾನಮಾದಂಥ; ಸ್ಮರ= ಮನ್ಮಥನ; ಶ್ರೀಧರದಿಂ= ಉಗ್ರಕೋಪದಿಂ ಸಂಹಾರವನ್ನು ; ಕೃತ = ಮಾಡಿದಂಥ ; ಶ್ರೀಧರ= ಪರಮೇಶ್ವರನೆ, ಪರಬ್ರಹ್ಮಾನಂದ ಪೂರಿತಮಾದ ; ಶ್ರೀ = ಪರಮೈಶ್ವರ್ಯನೆನಿಪ ಬಸವೇಶ್ವರನೆ;! ಮಾಂ = ಎನ್ನನು; ಪಾಹಿ= ಪಾಲಿಸು. ॥ ೧ ॥

ಅಮೃತಸಂಭವಸಖಿ ಸಂಕಾಶಂ
ಅಮೃತಜನ ಶರನಸುವ ವಿನಾಶಂ
ಅಮೃತ ಬಾಂಧವನ ವೈರಿಯ ಕುಲಕತಿ ಭೀಮಂ ಘನ ಮಹಿಮಂ
ಅಮೃತ ವದನನಲ ಭೂಷಿತಗಗನ
ಅಮೃತಂ ಭಕ್ತ ಹೃದಯಾಬ್ಜ ಸುಯಿನಂ
ಅಮೃತ ನಿಕುರುಂಬಾರ್ಚಿತ ಶ್ರೀ ಬಸವೇಶ್ವರ ಮಾಂ ಪಾಹಿ

ಟೀಕು:– ಅಮೃತ ಸಂಭವ :– ಅಮೃತ = ಉದಕದಲ್ಲಿ ; ಸಂಭವ = ಜನಿಸಿದ ಕಮಲಕ್ಕೆ ; ಸಖಿ ಸಂಕಾಶಂ = ಸಖನಾದ ಸೂರ್ಯನ ಪ್ರಕಶನಾದಂಥ ; ಶರನ = ಬಾಣವುಳ್ಳ, ಮನ್ಮಥನ, ಅಸುವನ್ನು ವಿನಾಶನವ ಮಾಡಿದಂಥ ; ಅಮೃತ ಬಾಂಧವನ ವೈರಿ ; ಅಮೃತ = ಕುಮುದಕ್ಕೆ ; ಬಾಂಧವ = ಗೆಳೆಯನಾದ ಚಂದ್ರಂಗೆ ; ವೈರಿಯಾದ ರಾಹುವಿನ ಕುಲದ ರಾಕ್ಷಸರಿಗೆ ಭೀಮ ಭಯಂಕರ ಸ್ವರೂಪನಾದ ಘನತರ ಮಹಿಮನೆ ; ಅಮೃತವದನನಲಭೂಪಿತ ; ಅಮೃತವದನ = ಆನೆಯ ಮುಖದ ವಿಘ್ನೇಶ್ವರನಿಗೆ ; ಅನಲ ಭೂ= ಷಣ್ಮುಖನಿಗೆ ; ಪಿತ = ತಂದೆಯಾದಂಥ ; ಗಗನಾಮೃತ = ಆಕಾಶಕೇಶನಾದಂಥ ; ಭಕ್ತ ಹೃದಯಾಬ್ಜ ಸುಯಿನಂ = ಲೇಸಾದ ಭಕ್ತರ ಹೃದಯವೆಂಬ ಕಮಲಕ್ಕೆ ; ಇನ = ಸೂರ್ಯನಾದಂಥ ; ಅಮೃತನಿಕುರುಂಬಾರ್ಚಿತ = ಮುನಿಗಳ ಸಮೂಹದಿಂದರ್ಚಿಸಿಕೊಳ್ಳಲುನ್ನತವಾದ, ಶ್ರೀ ಬಸವೇಶ್ವರನೆ, ಮಾಂ = ಎನ್ನನು; ಪಾಹಿ = ರಕ್ಷಿಸು. ॥ ೨ ॥

ಕಮಲಜ ಲಪನಾಂಬುಜ ಸಪ್ತಾಶ್ವಂ
ಕಮಲಜ ವಪುದಹನ ಸುದಿವಶ್ವತೇ
ಕಮಲಜ ಸ್ವಶನ ಸಖಾಂಬಕ ಸತ್ಯಶರಣನುತಜನ ದಿವಿಜ
ಕಮಲಜಭವ ಮದ ಕಮಲ ಮೃಗೇಂದ್ರ
ಕಮಲಜ ಮಧು ಪರ ಬಲಪರ ನತಪದ
ಕಮಲಜವನು ಕೀರ್ತಿಪೆನ್ನೈ ಶ್ರೀ ಬಸವೇಶ್ವರ ಮಾಂ ಪಾಹಿ,

ಟೀಕು:– ಕಮಲಜ ಲಪನಾಂಬುಜ :– ಕಮಲ = ಹಿಮವತ್ಪರ್ವತದಲ್ಲಿ ; ಜ= ಜನಿಸಿದ ಪಾರ್ವತಿದೇವಿಯ ; ಲಪನಾಂಬುಜ = ಮುಖವೆಂಬ ಕಮಲಕ್ಕೆ ; ಸಪ್ತಾಶ್ವಂ = ಸೂರ್ಯನಾದಂಥ; ಕಮಲಜ ವಪುದಹನ : ಕಮಲ = ಲಕ್ಷ್ಮಿ ; [ಕಮಲ ಸ್ತ್ರೀ ಹರಿಪ್ರಿಯ: ಇತ್ಯಮರ:] ಆ ಲಕ್ಷ್ಮಿಯಲ್ಲಿ; ಜ = ಜನಿಸಿದ ಮದನನು; ವಪುದಹನ = ಶರೀರವನ್ನು ದಹಿಸಿದಂಥ ; ಸುದಿವಶ್ವತೇ = ಅತಿ ಪ್ರಕಾಶ ಮಾನವಾದ ಸೂರ್ಯ; ಕಮಲಜ = ಚಂದ್ರ ; ಸ್ವಶನಸಖ = ಅಗ್ನಿಯ ; ಅಂಬಕ = ಈ ಮೂರು ನೇತ್ರವನುಳ್ಳಂಥ; ಸತ್ಯ ಶರಣರಿಗೆಯು, ಸುತ್ತಿಸುವ ಜನರಿಗೆಯು; ದಿವಿಜ ಕಮಲಜ = ಕಲ್ಪವೃಕ್ಷನಾದಂಥ; ಭವಮದಕಮಲ ಮೃಗೇಂದ್ರ:– ಭವಮದ = ಘೋರ ಜನ್ಮವೆಂಬ : ಕಮಲ = ಮದ್ದಾನೆಗಳಿಗೆ ; ಮೃಗೇಂದ್ರ = ಸಿಂಹನಾದಂಥ ಕಮಲಜ = ಬ್ರಹ್ಮ ; ಮಧುಪರ = ವಿಷ್ಣು ; ಬಲಪರ = ದೇವೆಂದ್ರನು; ನತ = ನಮಸ್ಕರಿಸಿ ಕೊಳ್ಳಲ್ಪಟ್ಟ ; ಪದ= ಪಾದ ; ಕಮಲ = ಉದಕದಲ್ಲಿ ; ಜ = ಜನಿಸಿದ ಕಮಲವು ; ಅಂಥ ಪಾದ ಕಮಲವನ್ನು ಕೀರ್ತಿಸಿಕೊಂಡಾಡುವೆಯೆಲೆ ಶ್ರೀ ಬಸವೇಶ್ವರನೆ; ಮಾಂ = ಎನ್ನನು ; ಪಾಹಿ = ಪಾಲಿಸು ॥ ೩ ॥

ಅಜಕಂ ಶಕಲಂ ಧೃತಕರ ಪತ್ರಂ
ಅಜಜಿನ ವಸನಲಂಕಾರ ಗಾತ್ರಂ

ಅಜ ಶಿರಸ ಭೂ ದುಃಖರ್ಮ ಧರಿತ್ರಿ ಹಲ ನಿಜ ಭಕ್ತಾಬ್ಧಿ
ಅಜ ನಿರುಪಮ ಸದ ಸದ್ಗುಣ ಸಾಂದ್ರಂ
ಅಜನಮೃತರ ಭೂಷಣಯೆನಗಂ
ಅಜದಾಲಯದಲ್ಲಿರಿಸುತೆ ಶ್ರೀ ಬಸವೇಶ್ವರ ಮಾಂ ಪಾಹಿ

ಟೀಕು:– ಅಜಕಂ ಶಕಲಂ :– ಅಜ = ಬ್ರಹ್ಮನ ; ಕಂ = ಮಸ್ತಕದ; ಶಕಲಂ = ಅರ್ಧವನ್ನು; ಧೃತಕರ ಪತ್ರಂ = ಧರಿಸಿದ ಕರದಳವನ್ನುಳ್ಳಂಥ, ಬ್ರಹ್ಮ ಕಪಾಲವನ್ನು ಹಿಡಿದನೆಂಬರ್ಥ ; ಅಜಜಿನ;– ಅಜ = ಗಜದೈತ್ಯನ ; ಅಜಿನ = ಚರ್ಮವನ್ನು; ವಸನಲಂಕಾರಗಾತ್ರಂ = ಹೊದಕೆಯ ಮಾಡಿ ಅಲಂಕಾರಮಾದ ದೇಹವನ್ನುಳ್ಳಂಥ; ಅಜ ಶಿರಸಭೂ = ಆಕಾಶದಿಂದತ್ತ ಜಡೆಗಳನ್ನುಳ್ಳಂಥ ; ದುಖ್ಖರ್ಮ ಧರಿತ್ರಿ = ದುಃಖ್ಖರ್ಮವೆಂಬ ಭೂಮಿಗೆ ; ಹಲ = ನೇಗಿಲನಾದಂಥ ; ನಿಜಭಕ್ತ= ಸಹಜ ಭಕ್ತನೆಂಬ; ಅಬ್ಧಿ = ಸಮುದ್ರಕೆ ; ಅಜ = ಚಂದ್ರನಾದಂಥ ; ನಿರುಪಮ = ಉಮಾತೀತನಾದಂಥ ಸದ= ಎಲ್ಲ ಕಾಲದಲ್ಲಿ ; ಸದ್ಗುಣವೇ; ಸಾಂದ್ರ = ದಟ್ಟನಾದಂಥ ; ಅಜ = ಸೂರ್ಯ; ಅಮೃತಕರ = ಚಂದ್ರರಿಂದ ಪ್ರಕಾಶಿಸಿ ತೋರುವ ದೇವನೆಯೆನಗೆ ; ಅಜದಾಲಯ = ಮುಕ್ತಿಯೆಂಬ ಮನೆಯಲ್ಲಿರಿಸಿ, ಎಲೆ ಶ್ರೀ ಬಸವೇಶ್ವರನೆ, ಮಾಂ = ಎನ್ನನು; ಪಾಹಿ = ಪಾಲಿಸು. ॥ ೪ ॥

ಖಗ ತನುಭವ ದ್ರುಮ ಕಟಕ ಕುಠಾರರು
ಖಗ ತನು ಹತ ಶಶಧರ ಕಂಧರ ಹರ
ಖಗ ಕಚ ಶತ ಮುಖ ಕಕುಭ ನಿರ್ಮಲ ಛದ ಭವ ಛೇದ
ಖಗ ವರ ಧ್ವಜ ಘರ್ಮಜನಜ ವಿನುತ
ಖಗಪುರ ಕೃಪೀಟಯೋನಾಕ್ಷದಿಂ ಹತನಗ
ಖಗದೊಳು ರಾಜಿಸುತಿರುವನೆ ಶ್ರೀ ಬಸವೇಶ್ವರ ಮಾಂ ಪಾಹಿ

ಟೀಕು :– ಖಗತನುಭವದ್ರುಮ :– ಖಗ = ಸೂರ್ಯನ ; ತನುಭವ = ಮಗನಾದ ಯಮನೆಂಬ; ದ್ರುಮ= ವೃಕ್ಷಕೆ ; ಕಟಕ ಕಡಿಯುವುದಕ್ಕೆ ; ಕುಠಾರ = ಕೊಡಲಿಯಾದಂಥ ; ರುಖಗತನುಹತ :– ರು= ಕಮಲ (ಖಕಾರಂ ಪದ್ಮಹಿಮಯೊ ಇತ್ತ್ಯೇಕಾಕ್ಷರ) ಆ ಕಮಲದ ಖಗ = ಬಾಣವನ್ನುಳ್ಳ ಮಾರನ ತನುವನ್ನು ಹತವ ಮಾಡಿದಂಥ ; ಶಶಧರ ಕಂಧರ :– ಶಶಧರ = ಚಂದ್ರ ; ಕಂ= ಸೂರ್ಯನು; (ಮೂರುತರ್ಕ್ಕಾಗ್ನಿಕಂ ನಾಮ : ಇತಿ ನಾನಾರ್ಥ) ಅಂಥ ಚಂದ್ರ ಸೂರ್ಯರ ಧರಿಸಿ ಮೆರೆವ ಹರನೆ ; ಖಗಕಚ = ಆಕಾಶದಿಂದತ್ತ ಕೇಶಗಳನ್ನುಳ್ಳಂಥ ; ಶತಮುಖ ಮುಖ್ಯ = ಇಂದ್ರ ದಿಕ್ಕು, ಪೂರ್ವದಿಕ್ಕು ಮೊದಲಾದ ಎಂಟು ದಿಗಂಗಳೆ ನಿರ್ಮಲವಾದ ; ಛದ = ಅಂಬರವ ಮಾಡಿದಂಥ ; ಭವಛೇದ = ದುರಿತ ದೋಷಂಗಳ ಸಂಹರಿಸಿದಂಥ ; ಖಗವರಧ್ವಜ :– ಖಗ = ಪಕ್ಷಿಗಳಿಗೆ ; ವರ = ಒಡೆಯನಾದ ಗರುಡನ; ಧ್ವಜ = ಠಕ್ಕೆಯಾಗುಳ್ಳಂಥ

ವಿಷ್ಣು ; ಘರ್ಮಜ = ಇಂದ್ರ ; ಅಜ :– ಅ = ವಿಷ್ಣುವಿನಲ್ಲಿ ; ಜ = ಜನಿಸಿದ ಬ್ರಹ್ಮರಿಂದ ; ವಿನುತ = ನುತಿಸಿಕೊಳ್ಳುವಂಥಾತನೆ ; ಖಗಪುರ :– ಖಗ = ಆಕಾಶದಲ್ಲಿರುವ ; ಪುರ = ತ್ರಿಪುರಂಗಳು ಕೃಪೀಟಯೋನಾಕ್ಷದಿ ಹತ = ಅಗ್ನಿ ನೇತ್ರದಿಂದ ಸಂಹರಿಸಿದಂಥ ; ನಗಖಗರಾಜಿತ :– ನಗ = ಮಹಾ ಮೇರುವಿನ ; ಖಗ = ಮನೆಯಲ್ಲಿ ; ರಾಜಿಸಿ ತೋರುವಂಥ ಶ್ರೀ ಬಸವೇಶ್ವರನೇ ; ಮಾಂ = ಎನ್ನನು ; ಪಾಹಿ = ರಕಿಸು. ॥ ೫ ॥

ಗೋಪತಿಭವನಂ ಗೋಜ ಗೋಹರನೆ
ಗೋಪತಿಯನುಜಾತರಭುಷಣನೆ
ಗೋಪತಿಕ್ರತು ಭುಜ ಮನು ಮುನಿ ಪ್ರಮಥಗಣಂ ಪರಿವೃಢ ಶಂಭು
ಗೋಪತಿಗೋಭೃತಿ ಪದ ಗೋಸಂಭವ
ಗೋಪತಿ ರವಿಹವಿ ಗೋ ಗೋಜನುಧವ
ಗೋಪತಿಗಮನನೆ ಗೋಪತಿ ಶ್ರೀ ಬಸವೇಶ್ವರ ಮಾಂ ಪಾಹಿ

ಟೀಕು:– ಗೋಪತಿಭವನ :– ಗೋಪತಿ = ಗಿರಿಗಳಿಗೆ ಪತಿಯಾದ ಹಿಮಾದ್ರಿಯಲ್ಲಿ ; ಭವನ = ಮನೆಯಾಗುಳ್ಳಂಥ ; ಗೋಜ :– ಗೋ = ಉದಕದಲ್ಲಿ ; ಜ = ಹುಟ್ಟಿದ ಕಮಲ; ಗೋಹರ :– ಗೋ = ಬಾಣವನ್ನುಳ್ಳಂಥ ಮನ್ಮಥನ ; ಹರ = ಸಂಹರಿಸಿ ಬಿಟ್ಟಂಥ ; ಗೋಪತಿಯನುಜಾತ :– ಗೋಪತಿ = ಪಕ್ಷಿಗಳಿಗೆ ಪತಿಯಾದ ಗರುಡನ ; ಅನುಜಾತ = ತಮ್ಮ; ರಭೂಷಣನೆ = ಸರ್ಪಂಗಳ ಭೂಷಣವ ಮಾಡಿದಂಥ; ಗೋಪತಿ;–ಗೋ = ದೇವತೆಗಳಿಗೆ ; ಪತಿ = ಪತಿಯಾದ ಇಂದ್ರನು ; ಕ್ರತುಭುಜ = ಅಮರರು; ಮನು = ಹದಿನಾಲ್ಕು ಮನುಗಳು ; ಮುನಿ = ಮುನಿಗಳು ; ಪ್ರಮಥರು ಮೊದಲಾದ ; ಗಣ = ಸಮೂಹಗಳಿಗೆ ; ಪರಿವೃಢ = ಪೋಷಣವ ಮಾಡುವ ಒಡೆಯನಾದಂಥ ; ಶಂಭು = ಸುಖಂ (ಅಸ್ಮಾದ್ಭವತೀತ ಶಂಭು) ಗೋಪತಿ ಗೋಭೃತ್ :' ಗೋಪತಿ = ಯದುಕುಲೇಂದ್ರನಾದ ಕೃಷ್ಣನ; ಗೋಭೃತ್ = ನಯನವನ್ನು ಧರಿಸಿದ; ಪದಗೋಸಂಭವ:– ಪದ = ಪಾದ ; ಗೋ = ಉದಕದಲ್ಲಿ ; ಸಂಭವ = ಉದ್ಭವಿಸಿದ ಕಮಲವು; ವಿಷ್ಣುವಿನ ನೇತ್ರ ಕಮಲವ ಧರಿಸಿದ ಪಾದ ಕಮಲವೆಂಬರ್ಥ; ಗೋಪತಿ = ನಕ್ಷತ್ರಂಗಳಿಗೊಡೆಯ ನಾದ ಚಂದ್ರ; ರವಿ = ಸೂರ್ಯ; ಹವಿ = ಅಗ್ನಿಯ ; ಗೋ = ನಯನಂಗಳು ; ಚಂದ್ರ, ಸೂರ್ಯಾಗ್ನಿಯೆಂಬ ಮೂರು ನೇತ್ರಗಳನ್ನುಳ್ಳಂಥಾತನೆಂಬರ್ಥ ; ಗೋಜನುಧವ :– ಗೋ = ಗಿರಿಯಲ್ಲಿ ; ಜನುಧವ = ಜನಿಸಿದ ಗಿರಿಜಾದೇವಿಗೆ ಪತಿಯಾದಂಥ ; ಗೋಪತಿ ಗಮನ; ಗೋವುಗಳಿಗೆ ಪತಿಯಾದ ವೃಷಭನಿಂದ ಗಮಿಸುತಿರುವಂಥ; ಗೋಪತಿ = ಬ್ರಹ್ಮ, ವಿಷ್ಣು, ದೇವೇಂದ್ರ, ದೇವಸುರರೆಂಬ ಪಶುಗಳಿಗೆ ಪತಿಯಾದ ಎಲೆ ಶ್ರೀ ಬಸವೇಶ್ವರನೆ ; ಮಾಂ = ಎನ್ನನು ; ಪಾಹಿ = ಪಾಲಿಸು. ॥ ೬ ॥

ಹರಿಜೀಮೂತಧವ ಭ್ರಾಜಿತನೆ
ಹರಿಜೀಮೂತ ಪವನ ಪರಾಕ್ರಮ
ಹರಿಜೀಮೂತ ಜಿಚ್ಛುರ ಜೇಷ್ಠಮರಭಿರ್ವಂದಿತ ಮುಖವಗೆಯ
ಹರಿಹರಿ ಕೋಟಿ ಪ್ರಕಾಶಂ ಭಜಕರ
ಹರಿ ಹರಿ ಹರಿ ಪ್ರಧ್ವಂಸನ ಹರ ಕೃಪ
ಹರಿ ಹರಿಪತಿ ಸುಬಾಂಧವ ಶ್ರೀ ಬಸವೇಶ್ವರ ಮಾಂಪಾಹಿ

ಟೀಕು :– ಹರಿಜೀಮೂತಧವ ಭ್ರಾಜಿತನೆ :– ಹರಿ = ಸುವರ್ಣದ ; ಜೀಮೂತ= ಪರ್ವತದಲ್ಲಿ ; ಧವ = ನಿಜ ಮಂದಿರದಲ್ಲಿ ; ಭ್ರಾಜಿತ = ಪ್ರಕಾಶ ಮಾನವಾಗಿ ಒಪ್ಪುವಂಥ ; ಹರಿಜೀಮೂತ ಪವನ ;– ಹರಿ=ಕಾಲನೆಂಬ ; ಜೀಮೂತ = ಮೇಘಕ್ಕೆ ; ಪವನ = ಚಂಡಮಾರುತನಾದ ; ಪರಾಕ್ರಮ ಪುರುಷನೆ ; ಹರಿ ಜೀಮೂತ ಜಿಚ್ಛುರ ಜೇಷ್ಠ ಮರಭಿವಂದ್ಯ :– ಹರಿ = ನಾರಾಯಣ; ಜಿತ್ = ದೇವೇಂದ್ರ ; ಸುರ ಜೇಷ್ಠ = ಬ್ರಹ್ಮ ; ಅಮರಭಿ= ದೇವ ಸುರರು ಮುಖ್ಯರಾದವರಿಂದ; ವಂದಿತ = ವಂದಿಸಿಕೊಳ್ಳಲ್ಪಟ್ಟಂಥ ; ಮುಖ ವಗೆಯ = ಯಾಗಕ್ಕೆ ಶತ್ರುವಾದಂಥ ; ಹರಿಹರಿ ಕೋಟಿ ಪ್ರಕಾಶ :– ಹರಿ = ಚಂದ್ರ; ಹರಿ = ಸೂರ್ಯ ; ಕೋಟಿ ಪ್ರಕಾಶ = ಕೋಟಿ ಪ್ರಭೆಯಿಂದ ತೊರುವಂಥ ; ಭಜಕರ ಹರಿ = ಭಜಿಸುವ ಭಕ್ತನೆಂಬ ಸಮುದ್ರಕೆ ; ಹರಿ ಹರಿ :– ಹರಿ = ಶುಭ್ರವಾದ ಹರಿ = ಕಿರಣವನುಳ್ಳ ಚಂದ್ರನೆ; ಪ್ರಧ್ವಂಸನ ಹರ = ವೈರಿಗಳಿಕ್ಕಿದ ಬಂಧನಂಗಳ ಪರಿಹರಿಸುವಂಥ; ಕೃಪಹರಿ = ಕೃಪಾಸಾಗರನಾದಂಥ ; ಪರಿಪತಿಸುಬಾಂಧವ :– ಹರಿ = ಶೋಕಕ್ಕೆ; ಪತಿ = ಅಧಿಪತಿಯಾದ ಕುಬೇರನಿಗೆ ; ಸುಬಾಂಧವ = ಒಳ್ಳೆಯ ಮಿತ್ರತ್ವವನುಳ್ಳಂಥ ಎಲೆ ಶ್ರೀ ಬಸವೇಶ್ವರನೇ ; ಮಾಂ = ಎನ್ನನು ; ಪಾಹಿ= ಪಾಲಿಸು ॥ ೭ ॥

ಹಂಸಜ ಹರ ಶ್ರುತಿ ಹಂಸ ತುಷಾರ
ಹಂಸ ಜಟಾ ಮಂಡಿತ ಕ್ಷಮ ಪಯ ಶಿಖಿ
ಹಂಸ ಸ್ವಶನನಭ ಹಂಸ ತಪನ ವಮರಾಜಿತ ಪುರ ಮಥನ
ಹಂಸಜನದಟ ವಿನಾಶ ದ್ವಿಪಕಜಿನ
ಹಂಸಾಂಬರ ತ್ರಯ ಹಂಸಂಧಕರಿಪು
ಹಂಸ ಮನೋರಥ ಫಲದಂ ಶ್ರೀ ಬಸವೇಶ್ವರ ಮಾಂ ಪಾಹಿ

ಟೀಕು:– ಹಂಸಜಹರ :– ಹಂಸ = ವಿಷ್ಣುವಿನಲ್ಲಿ ; ಜ = ಹುಟ್ಟಿದ ಕಾಮನ ; ಹರ = ಸಂಹರಿಸಿದಂಥ ; ಶೃತಿಹಂಸ = ನಿಗಮಂಗಳೆ ತುರಂಗನಾದಂಥ ; ತುಷಾರ ಹಂಸ = ಹೇಮಕಿರಣನಾದ ಚಂದ್ರನ ; ಜಟಾಮಂಡಿತ = ಜಟಾಮಕುಟಾಗ್ರದಲ್ಲಿ ಧರಿಸಿವೊಪ್ಪುತ್ತಿರುವಂಥ; ಕ್ಷಮ = ಭೂಮಿ ; ಪಯ = ಉದಕ ;ಶಿಖಿ = ಅಗ್ನಿ ; ಹಂಸ = ಚಂದ್ರ ; ಸ್ವಶನ = ವಾಯು ;

ನಭ = ಆಕಾಶ ; ಹಂಸ = ಆತ್ಮ ; ತಪನ = ಸೂರ್ಯ ; ವಪು = ಈಯೆಂಟಂಗದಿಂದ ; ರಾಜಿತ = ರಾಜಿಸುವ ಅಷ್ಟಮೂರ್ತಿಯಾದಂಥ ; ಪುರಮಥನ = ತ್ರಿಪುರ ಮರ್ದನನಾದಂಥ ; ಹಂಸಜನದಟ ವಿನಾಶ :– ಹಂಸ = ಸೂರ್ಯನಿಂದ; ಜ–ಜನಿಸಿದ ಯಮನ ಗರ್ವದ ಸೊಕ್ಕು : ವಿನಾಶ = ನಾಶನವ ಮಾಡಿದಂಥ ; ದ್ವಿಪಕಜಿನ :– ದ್ವಿಪಕ = ವ್ಯಾಘ್ರದೈತ್ಯನ ; ಅಜಿನ = ಚರ್ಮವನ್ನು ; ಹಂಸ= ನಿರ್ಮಲವಾದ ; ಅಂಬರ = ಹೊದಕೆಯಾಗುಳ್ಳಂಥ ; ತ್ರಯಹಂಸ = ಮೂರು ಕಣ್ಣುಗಳನ್ನುಳ್ಳಂಥ ; ಅಂಧಕರಿಪು = ಅಂಧಕಸುರನಿಗೆ ವೈರಿಯಾದಂಥ ; ಹಂಸ ಮನೋರಥ ಫಲದ; :– ಹಂಸ = ಮತಿಜನಂಗಳ ; ಮನೋರಥ = ಬಯಸಿದಂಥ; ಫಲ = ಫಲಗಳನ್ನು, ದ= ಕೊಡುವಂಥ ಎಲೆ ಶ್ರೀ ಬಸವೇಶ್ವರನೆ ಮಾಂ= ಎನ್ನನು; ಪಾಹಿ= ಪಾಲಿಸು. ॥ ೮ ॥

ಪದ್ಮಜ ಶಿರ ಶಯ ಪಾವಕರೇತಂ
ಪದ್ಮ ವಿಭೋಕ್ಷಂ ಧೃತ ಚರಣಂ ಸಲೆ
ಪದ್ಮವರ ಕುಂಡಲ ಕಂಕಣ ಕಟಿಸೂತ್ರಂ ಶುಚಿಗಾತ್ರಂ
ಪದ್ಮ ಸುಮಿತ್ರಾಂಕಿತ ಫಣಿಯಾತನಂ
ಪದ್ಮ ಸುರದ್ವಿಷವಂಶ ವಿಹಾಯಸಿ
ಪದ್ಮಂಕಂ ಜಟ ಮಂಡನ ಶ್ರೀ ಬಸವೇಶ್ವ ಮಾಂ ಪಾಹಿ

ಟೀಕು:– ಪದ್ಮಜ ಶಿರಶಯು :– ಪದ್ಮಜಶಿರ = ಬ್ರಹ್ಮನ ಶಿರಸ್ಸು ಹಿಡಿದ ; ಶಯ = ಹಸ್ತವನುಳ್ಳಂಥ ; ಪಾವಕರೇತ = ಅಗ್ನಿಯ ಇಂದ್ರಿಯನುಳ್ಳಂಥ ; ಪದ್ಮವಿಭೋಕ್ಷಂ ಧೃತ ಚರಣ:– ಪದ್ಮ = ಲಕ್ಷ್ಮಿದೇವಿಗೆ; ವಿಭು = ಪ್ರಿಯನಾದ ವಿಷ್ಣುವಿನ; ಅಕ್ಷಂ= ನಯನವನ್ನು ; ಧೃತಚರಣ = ಧರಿಸಲ್ಪಟ್ಟ ಚರಣವನುಳ್ಳಂಥ ಪದ್ಮವರ :– ಪದ್ಮ = ಶೇಷಂಗಳಿಗೆ ; ವರ = ಶ್ರೇಷ್ಠರಾದವರನ್ನು ; ಕರ್ಣಕುಂಡಲ; ಕಂಕಣ, ಕಟಿಸೂತ್ರವ ಮಾಡಿ [illegible] ಧರಿಸಿರುವಂಥ ; ಶುಚಿಗಾತ್ರಂ = ಶುಚಿ = ಬಿಳುಪಾದ; ಗಾತ್ರಂ – ದೇಹವನುಳ್ಳಂಥ ಪದ್ಮಸುಮಿತ್ರಾಂಕುತ :– ಪದ್ಮ = ನೈದಿಲೆಗೆ; ಸುಮಿತ್ರ = ಉತ್ತಮ ಗೆಳೆಯನಾದ ಚಂದ್ರನ ಅರಳೆಲೆ ಮಾಡಿ ಹಣೆಯಲ್ಲಿ ; ಅಂಕಿತ = ಕುರುಡಾಗಿಯುಳ್ಳಂಥಾತನೆ ; ಪದ್ಮಸುರದ್ವಿಷವಂಶ = ರಾಕ್ಷಸರ ಗರ್ವದ ಸಮೂಹಕ್ಕೆ ಅತಿಧೀರನಾದಂಥ ; ವಿಹಾಯಿಸಿ = ಆಕಾಶದಿಂದತ್ತಲಿರುವ ಜಡೆಗಳ ಮುಕುಟದಲ್ಲಿ ; ಪದ್ಮ = ಪ್ರಕಾಶಮಾನವಾದ ಸರ್ಪನ ಸುತ್ತಿ ; ಮಂಡನ = ಅಲಂಕಾರದಿಂದ ; ಅಂಕ = ಕುರುಹಾಗಿಯುಳ್ಳಂಥ ಎಲೆ ಶ್ರೀ ಬಸವೇಶ್ವರನೆ ; ಮಾಂ = ಎನ್ನನು ; ಪಾಹಿ = ಪಾಲಿಸು.

॥ ೯ ॥

ಬಾಣಶನಂ ಗರ ಗಳ ಖದ್ಯೋತಂ
ಬಾಣ ಧನಂಜಯಕರನಾ ಘಮಗ
ಬಾಣನೆ ಗೋಮಿನಿಧವ ವಿಧಿ ದಿತಿಸುತ ಹತನತ ಚರಣಾಬ್ಜ

ಬಾಣಂ ಬಾಣಂ ಪರಮೃಡ ಸಹಸ್ರ
ಬಾಣ ಸ್ತುತ ವಿಧು ಬಾಣಕರ್ಾಕ್ಷಘ
ಬಾಣ ವಿರೋಚನ ದೇವನೆ ಶ್ರೀ ಬಸವೇಶ್ವರ ಮಾಂ ಪಾಹಿ

ಟೀಕು :– ಬಾಣಶನಂಗರಗಳ :– ಬಾಣಶನ = ವಾಯುವನ್ನೆ ಅಶನವಾದ ಶೇಷನ ; ಗರ= ವಿಷದ ಗಳ =ಕೊರಳನುಳ್ಳಂಥ ; ಖದ್ಯೋತ ಬಾಣ :– ಖದ್ಯೋತ = ಗಗನ ; ಬಾಣ =ಕೇಶನಾದಂಥ ;ಧನಂಜಯಕರ = ಉರಿಹಸ್ತವನುಳ್ಳಂಥ ; ಅಘಮಗ :– ಅಘ = ಪಾಪವೆಂಬ ; ಅಗ = ಗಿರಿಗಳಿಗೆ ; ಬಾಣ= ಸಿಡಿಲು ವಜ್ರನಾದಂಥ ; ಗೋಮಿನಿಧವ :– ಗೋಮಿನಿ = ಲಕ್ಷ್ಮಿಗೆ ; ಧವ = ಪ್ರಿಯನಾದಂಥ ವಿಷ್ಣು ; ವಿಧಿ = ಬ್ರಹ್ಮ ; ದಿತಿಸುತ =ದಿತಿಯೆಂಬ ಸ್ತ್ರೀಗೆ ಸುತರಾದ ರಾಕ್ಷಸರ ; ಹತ = ಹತವ ಮಾಡಿದ ದೇವೇಂದ್ರರಿಂದ ; ನತ = ನಮಸ್ಕರಿಸಿಕೊಳ್ಳಲ್ಪಟ್ಟ ; ಚರಣಾಬ್ಜ = ಪಾದ ಕಮಲಗಳನುಳ್ಳಂಥ ; ಬಾಣಂ ಬಾಣಂ ಪರ:– ಬಾಣಂ = ಕಮಲವನ್ನು ; ಬಾಣಂ = ಬಾಣಂಗಳ ಮಾಡಿದ ಮದನಂಗೆ ; ಪರ = ವೈರಿಯಾದಂಥ ; ಸಹಸ್ರಬಾಣಸ್ತುತ = ಸಾವಿರಬಾಣ ಕರಗಳನುಳ್ಳ ಬಾಣಾಸುರನಿಂದ ಪೂಜಿಸಿಕೊಳ್ಳಲ್ಪಟ್ಟ ; ಮೃಡನೆ ವಿಧು ಬಾಣಕರ್ಾಕ್ಷ :– ವಿಧು – ಚಂದ್ರ ; ಬಾಣ = ಅಗ್ನಿ ಅರ್ಕ = ಸೂರ್ಯ ಅಕ್ಷ = ಕಣ್ಣುಗಳನುಳ್ಳಂಥ ; ಅಘಬಾಣ ವಿರೋಚನ :– ಅಘ = ದೋಷವೆಂಬ ; ಬಾಣ = ಕತ್ತಲೆಗೆ ; ವಿರೋಚನ = ಸೂರ್ಯನಾದಂಥ ; ದೇವನೆ = ಸ್ವತಂತ್ರನಾದಯೆಲೆ ಶ್ರೀ ಬಸವೇಶ್ವರನೇ ; ಮಾಂ = ಎನ್ನನು; ಪಾಹಿ = ಪಾಲಿಸು. ॥ ೧೦ ॥

ವನಭವ ಮಿತ್ರನ ತನುಜಾಂತಕನೆ
ವನನಿಧಿಜಪಜ ಗರ್ವ ವಿನಶನ
ವನಭುಕ್ಷತಿ ಕಂಕಣ ಮಣಿಬಂಧೆ ಫಣಿ ಫಣಾ ಕೇಯೂರ
ವನ ಪತಿ ಕುಮಾರ ವನಮುಖಜ ಜನಕನೆ
ವನ ವನಸಖ ಜಗದಾಂಬಕನಾಂಬಕ
ವನಧರ ಪದವನ ಸ್ತುತಿಸುವೆ ಶ್ರೀ ಬಸವೇಶ್ವರ ಮಾಂ ಪಾಹಿ

ಟೀಕು:– ವನಭವ ಮಿತ್ರ :– ವನ = ಉದಕದಲ್ಲಿ ; ಭವ = ಉದ್ಭವಿಸಿದ ಕಮಲಕ್ಕೆ ಮಿತ್ರ = ಮಿತ್ರನಾದ ಸೂರ್ಯನ ; ತನುಜಾಂತಕ :– ತನುಜ = ಮಗನಾದ ಯಮನಿಗೆ; ಅಂತಕ = ವೈರಿಯಾದಂಥ ; ವನನಿಧಿಜಪ :– ವನನಿಧಿ = ಸಮುದ್ರದಲ್ಲಿ ; ಜ = ಹುಟ್ಟಿದ ಲಕ್ಷ್ಮಿಗೆ ; ಪ = ಅಧಿಪತಿಯಾದ ವಿಷ್ಣುವಿನ ; ಅಜಗರ್ವ ವಿನಾಶನ = ಬ್ರಹ್ಮನ ಗರ್ವಂಗಳ ಮುರಿದಂಥ ; ವನಭುಕ್ಷತಿ ಕಂಕಣ = ವಾಯುವನ್ನು ಭುಂಜಿಸುವ ಶೇಷನ ಕಂಕಣವನ್ನು ; ಮಣಿಬಂಧೆ = ಮುಂಗೈಗಳಲ್ಲಿ ಧರಿಸಿದಂಥ ; ಫಣಿ ಫಣಾ ಕೇಯೂರ :– ಫಣಿ = ಶೇಷನ ; ಫಣಾ = ಹೆಡೆಗಳಿಂದೊಪ್ಪುವ ಕೇಯೂರಲಂಕಾರನಾದಂಥ ; ವನಪತಿ = ಗಜಮುಖದ ವಿಘ್ನೇಶ್ವರನಿಗೆ ;

ಜನಕ = ತಂದೆಯಾದಂಥ ; ವನ = ಚಂದ್ರ; ವನಸಖ = ಅಗ್ನಿ ; ಜಗದಂಬಕ = ಸೂರ್ಯನ, ಅಂಬಕ = ನೇತ್ರಗಳನುಳ್ಳಂಥ ; ವನಧರ = ಆಕಾಶಗಂಗೆಯ ಧರಿಸಿದಂಥ, ದೇವನೆ ನಿಮ್ಮಯ ಪದವನ = ಪಾದಕಮಲವನ್ನು ಸ್ತುತಿಸುವೆಯೆಲೆ ಶ್ರೀ ಬಸವೇಶ್ವರನೇ, ಮಾಂ = ಎನ್ನನು ; ಪಾಹಿ = ಪಾಲಿಸು. ॥ ೧೧ ॥

ಪುಂಡರೀಕಕಂ ಭೃತ, ಶಿತಿಗಳ ವೃಕ್ಷ
ಪುಂಡರೀಕ ಶುಚಿ ಕಲೇವರ ಪದ್ಮಜ
ಪುಂಡರೀಕ ವಾಹನ ದುಗ್ಧಾಬ್ಧಿ ಶಯನ ಸುಮನಸ ಪ್ರಣುತಂ
ಪುಂಡರೀಕ ರಿಪುಧರ ಸದ ಸ್ತುತಿ ಪರ
ಪುಂಡರೀಕ ಗತಿ ಪ್ರದ ಖಲ ಭೀಮ ಸು
ಪುಂಡರೀಕ ಶುಭ ವಿವರ ಶ್ರೀ ಬಸವೇಶ್ವರ ಮಾಂ ಪಾಹಿ

ಟೀಕು :– ಪುಂಡರೀಕ ಕಂ ಭೃತ್ :– ಪುಂಡರೀಕ = ಬ್ರಹ್ಮನ ; ಕಂ = ಶಿರಕಪಾಲವನ್ನು ; ಭೃತ್ = ಧರಿಸಿದಂಥ ; ಶಿತಿಗಳ = ಕರಿಕಂಠನೆ ; ವೃಷಪುಂಡರೀಕ= ವೃಷಭಧ್ವಜವನುಳ್ಳಂಥ ; ಶುಚಿಕಲೇವರ = ಧವಳ ಶರೀರವನುಳ್ಳಂಥ ; ಪದ್ಮಜ = ಬ್ರಹ್ಮ ; ಪುಂಡರೀಕವಾಹನ = ಐರಾವತಿಯನೇರಿ ಮೆರೆವ ಇಂದ್ರ ; ದುಗ್ಧಾಬ್ಧಿಶಯನ = ಹಾಲಿನ ಸಮುದ್ರವೆ ಹಾಸಿಕೆಯಾಗುಳ್ಳ ವಿಷ್ಣು; ಸುಮನಸ ದೇವತೆಗಳು ಮುಖ್ಯ ಇವರಿಂದ ; ಪ್ರಣುತ = ಪೂಜಿಸಿಕೊಳ್ಳಲು ಯೋಗ್ಯನಾದಂಥ; ಪುಂಡರೀಕ = ಕಪ್ಪೆಯ ; ರಿಪುಧರ = ವೈರಿಯಾದ ಸರ್ಪಂಗಳ ಧರಿಸಿದಂಥ ; ಸದ = ಸದಾವಕಾಲದಲ್ಲಿ ; ಸ್ತುತಿಸುತಿರುವ ಶರಣರಿಗೆ ; ಪುಂಡರೀಕ = ಕಲ್ಪವೃಕ್ಷನಾದಂಥ ; ಗತಿಪ್ರದ = ಸದ್ಗತಿಯ ಕೊಡುವಂಥಾತನೆ; ಖಲಭೀಮ = ದುರ್ಜನರಿಗೆ ಭಯಂಕರ ಸ್ವರೂಪನಾದಂಥ; ಸುಪುಂಡರೀಕ = ಲೇಸಾಗಿ ಇರುವ ಮಹಾಶ್ರೇಷ್ಠನೆ; ಶುಭ ವಿವರ = ಪಾರ್ವತಿದೇವಿಯರಸನಾದಂಥಯೆಲೆ ಶ್ರೀ ಬಸವೇಶ್ವರನೆ ; ಮಾಂ = ಎನ್ನನು ; ಪಾಹಿ = ರಕ್ಷಿಸು. ॥ ೧೨ ॥

ಸೋಮಸುಮಿತ್ರ ಮಹೋತ್ಪಲ ಮಿತ್ರ
ಸೋಮ ಗೋಗೋ ಜನ್ಮರ್ಧವಿಗ್ರಹ
ಸೋಮ ಪರಾಶಜ ಕುಂಭಜ ಗೌತಮ ಹೃದ್ಗುಹೆ ಸಂಚರಿತ
ಸೋಮ ಸುಮಿತ್ರನೆ ಫಣಿ ವಿಷಗ್ರೀವ
ಸೋಮ ತಿಮಿರ ದುರ್ಘಟ್ಟ ಸಂಹಸ್ರಾಂಶು
ಸೋಮಭಿದಾನನೆ ಸತತಂ ಶ್ರೀ ಬಸವೇಶ್ವರ ಮಾಂ ಪಾಹಿ

ಟೀಕು:– ಸೋಮಸುಮಿತ್ರ :– ಸೋಮ = ವಾಯುವಿಗೆ : ಸುಮಿತ್ರ = ಒಳ್ಳಿಹ ಗೆಣೆಯನಾದ ಅಗ್ನಿಯು; ಮಹೋತ್ಪಲಮಿತ್ರ = ಕಮಲಂಗಳಿಗೆ ಮಿತ್ರನಾದ ಸೂರ್ಯ; ಸೋಮ = ಚಂದ್ರರೆಂಬ; ಗೋ = ನಯನವನುಳ್ಳಂಥ ; ಗೋಜನ್ಮ= ಪರ್ವತದಲ್ಲಿ ಜನಿಸಿದ ಗಿರಿಜಾದೇವಿಯು ; ಅರ್ಧವಿಗ್ರಹ = ಅರ್ಧಾಂಗನಾದಂಥ ; ಸೋಮ = ಸೋಮಮುನಿ ; ಪರಾಶಜ = ವ್ಯಾಸಮುನಿ ; ಕುಂಭಜ = ಅಗಸ್ತ್ಯ ಮುನಿ, ಗೌತಮ ಮೊದಲಾದ ಮುನಿಗಳ ಹೃದ್ಗುಹೆದೊಳಗೆ ಸಂಚರಿಸುವಾತನೆ; ಸೋಮ ಸುಮಿತ್ರ :– ಸೋಮ = ಕುಬೇರನಿಗೆ ; ಸುಮಿತ್ರ = ಅತಿಮಿತ್ರನಾದಂಥ ; ವಿಷಗ್ರೀವ = ಕಾಳಕೂಟ ವಿಷವನ್ನು ತಳೆದ ಕಂಠವನ್ನುಳ್ಳಂಥ ಸೋಮತಿಮಿರ = ಕಾಲನೆಂಬ ಕತ್ತಲೆಗೆ; ದುರ್ಘಟ ಸಹಸ್ರಾಂಶು ಪ್ರಚಂಡಮಾದ ಸೂರ್ಯನಾದಂಥ ; ಸೋಮಭಿದಾನ = ಸೋಮನೆಂಬ ನಾಮವನ್ನುಳ್ಳಂಥಾತನೆ ಸತತ ಎಲೆ ಶ್ರೀ ಬಸವೇಶ್ವರನೆ, ಮಾಂ = ಎನ್ನನು, ಪಾಹಿ = ಪಾಲಿಸು.

॥ ೧೩ ॥

ಶಿವ ಮನೋಹರ ಭೂತೇಶ ಕೇಶವ
ಶಿವಪತಿ ನಗಭಿತ್ಸುರ ಮುನಿ ವಂದಿತ
ಶಿವಶಿಲೀಮುಖ ಖಪುರಪುರ ಜ್ವಲದೃಗ್ದಿಂದುರುಪಿದಮೀಶ
ಶಿವರಥನಂಗ ಸರೋವರ ದಾವ
ಶಿವಧರ ಕಲ್ಮಷ ಕುಜ ಕುದ್ದಾಲನೆ
ಶಿವದಾಲಯದಲ್ಲಿರಿಸುತ ಶ್ರೀ ಬಸವೇಶ್ವರ ಮಾಂ ಪಾಹಿ

ಟೀಕು:– ಶಿವ ಮನೋಹರ ಭೂತೇಶ = ಪಾರ್ವತಿ ದೇವಿಗೆ ಮನೋಹರನಾದ ಭೂತೇಶ್ವರನೇ ; ಕೇಶವ = ನಾರಾಯಣ ; ಶಿವಪತಿ = ಸರಸ್ವತಿಗೆ ಪತಿಯಾದ ಬ್ರಹ್ಮ ; ನಗಭಿತ್ಸುರ ಮುನಿ = ಸುರರಾಜ, ಸುರಮುನಿಗಳು ಮೊದಲಾದ ಇವರಿಂದ, ವಂದಿತ = ವಂದಿಸಿಕೊಳ್ಳಲ್ಪಟ್ಟಂಥಾತನೆ; ಶಿವಶಿಲೀಮುಖ :– ಶಿವ = ಹೇಮಾದ್ರಿಯೆ ; ಶಿಲೀಮುಖ = ಬಿಲ್ಲಾಗಿವುಳ್ಳಂಥ; ಖಪುರಪುರ :– ಖ = ಆಕಾಶದಲ್ಲಿರುವ = ಪುರಮೂರು ; ಪುರ = ಪಟ್ಟಣಗಳನ್ನು ; ಜ್ವಲದೃಗ್ದಿಂದುರುಪಿದಮೀಶ = ಅಗ್ನಿ ನೇತ್ರದಿಂದುರುಪಿದಂಥ ಈಶ್ವರನೆ ; ಶಿವರಥನಂಗಸರೋವರ = ಗಿಳಿಯ ರಥವನುಳ್ಳ ಮನ್ಮಥನಂಗವೆಂಬ ಕಾನನಕ್ಕೆ; ದಾವ = ಕಾಡ್ಗಿಚ್ಚುನಾದಂಥ ; ಶಿವಧರ = ಫಣಿರಾಜನ ಧರಿಸಿದಂಥ; ಕಲ್ಮಷಕುಜ ಕುದ್ದಾಲ :– ಕಲ್ಮಷ=ಕ್ರೂರ ಕರ್ಮವೆಂಬ ; ಕುಜ = ವೃಕ್ಷಂಗಳ ಬೇರು ಕಿತ್ತು ಕೆಡಮುವುದಕ್ಕೆ ; ಕುದ್ದಲ = ಗುದ್ದಲಿಯಾದಂಥ ; ಶಿವದಾಲಯ = ಪರಮಸುಖವೆಂಬ ಮನೆಯಲ್ಲಿರಿಸಿ ಯೆಲೆ ಶ್ರೀ ಬಸವೇಶ್ವರನೆ; ಮಾಂ = ಎನ್ನನು ; ಪಾಹಿ = ರಕ್ಷಿಸು. ॥ ೧೪ ॥

ದ್ವಿಜಪತಿಧ್ವಜ ಶತಧರ್ಮ ಭುನುತ ಪ
ದ್ವಿಜಪತಿ ಖರ ಶಿಖೆ ಮರುತ್ಸಖ ಲೋಚನ

ದ್ವಿಜಪತಿ ಸರ್ವಾಭರಣನೆ ಶ್ರೀ ವೃಷಭಾಂಕ ಗರಂಕಗಳ
ದ್ವಿಜಕಳಜೂಟಂ ಕಲದೌತಗ ನಿಜ
ದ್ವಿಜ ಭಾಡ್ಮೃಡ ಹರಿಣಂಗಮಮೇಕ
ದ್ವಿಜ ಶರಜನ್ಮ ಜನಕನೆ ಶ್ರೀ ಬಸವೇಶ್ವರ ಮಾಂ ಪಾಹಿ

ಟೀಕು:– ದ್ವಿಜ ಪತಿಧ್ವಜ :–ದ್ವಿಜ = ಪಕ್ಷಿಗಳು [ಶಕುಂತಿ : ಶಕುನ ದ್ವಿಜ ; ಇತ್ಯಮರ ಕೋಶ] ಆ ಪಕ್ಷಿಗಳಿಗೆ ; ಪತಿ = ಪತಿಯಾದ ಗರುಡನ ; ಧ್ವಜ = ಪತಾಕೆಯುಳ್ಳ ವಿಷ್ಣು ; ಶತಧರ್ಮ = ದೇವೇಂದ್ರ ; ಭೂನುತ = ಆ ಬ್ರಹ್ಮನಿಂದ ನುತಿಸಿಕೊಳ್ಳುವಂಥ ; ಪತ್ = ಪಾದಗಳನುಳ್ಳಂಥ ; ದ್ವಿಜಪತಿ = ನಕ್ಷತ್ರಂಗಳಿಗೆ ಪತಿಯಾದ ಚಂದ್ರ ; ಖರಶಿಖಿ = ಕ್ರೂರತರಮಾದ ಕಿರಣಗಳನುಳ್ಳ ಸೂರ್ಯ ; ಮರುತ್ಸಖಿಲೋಚನ = ಅಗ್ನಿ ಲೋಚನಗಳನುಳ್ಳಂಥ ; ದ್ವಿಜಪತಿ ಸರ್ವಾಭರಣ = ಶೇಷಾಧಿಪತಿಗಳಾಭರಣವ ಮಾಡಿದಂಥ ; ಶ್ರೀ = ಐಶ್ವರ್ಯಕನಾದ ; ವೃಷಭಾಂಕ = ಠಕ್ಕೆಯನ್ನು ಕುರುಹಾಗುಳ್ಳಂಥ ; ಗರಂಕಗಳಂ :– ಗರ = ವಿಷವನ್ನು ; ಅಂಶ = ಕುರುಹವ ; ಗಳಕೊರಳನುಳ್ಳಂಥ ; ದ್ವಿಜಕಳಾಜೂಟ = ಚಂದ್ರನ ಕಾಂತಿ ಕಿರಣಂಗಳ ಜಟಾ ಜೂಟದಲಿ ವೊಪ್ಪಲ್ಪಟ್ಟಂಥ ; ಕಲದೌತಗ = ರಜತಾಚಲದಲ್ಲಿ ; ನಿಜ = ಶಾಶ್ವತವಾದ ; ದ್ವಿಜ = ಮನೆಯಲ್ಲಿ ; ಭಾಡ್ = ಒಪ್ಪುತ್ತಿರುವಂಥ ; ಮೃಡನೆ, ಹರಿಣಂಗಮೆಯ ಕಾಯನಾದಂಥ ; ಏಕದ್ವಿಜ = ಏಕದಂತನಾದ ವಿನಾಯಕ [ದಂತ ವಿಪ್ರಂಡಜೋದ್ವಿಜಯೆಂದು ನಾನಾರ್ಥ] ಶರಜನ್ಮ = ಶರವಣಯೆಂಬ ನದಿಯಲ್ಲಿ ಜನಿಸಿದ ಷಣ್ಮುಖನಿಗೆ ; ಜನಕ = ತಂದೆಯಾದಂಥ (ವಿಘ್ನೇಶ್ವರನಿಗೆ, ಷಣ್ಮುಖನಿಗೆ ತಂದೆಯೆಂಬರ್ಥ) ಎಲೆ ಶ್ರೀ ಬಸವೇಶ್ವರನೆ ಮಾಂ = ಎನ್ನನು; ಪಾಹಿ = ಪಾಲಿಸು. ॥ ೧೫ ॥

ಅಮೃತಕರ ಪರ ಸಂಹರ ಭವರುಜ
ಅಮೃತಕರ ದುರಿತಾಂಬುಧಿ ಕುಂಭಜ
ಅಮೃತಕರನಾಂತಕ ಗಮನಾತ್ಮಭವಂಗ ಘನಾಲಘುಗ
ಅಮೃತಕರನುಮೆ ಹೃದ್ಕುಮುದ ಕೋರಕ
ಅಮೃತಕರ ನಿರ್ಜರ ನಿಕರಂದಯ
ಅಮೃತಕರನೆನ್ನಾಳ್ದನೆ ಶ್ರೀ ಬಸವೇಶ್ವರ ಮಾಂ ಪಾಹಿ

ಟೀಕು :– ಅಮೃತಕರ = ದೇವತೆಗಳಿಗೆ ; ಪರ = ಶತ್ರುವಾದ ರಾಕ್ಷಸರುಗಳನ್ನು; ಸಂಹರ = ಸಂಹರಿಸಿದಂಥ ; ಭವರುಜ = ಸಂಸಾರವೆಂಬ ರೋಗಕ್ಕೆ ; ಅಮೃತಕರ = ವೈದ್ಯನಾದಂಥ ; ದುರಿತಾಂಬುಧಿ = ದುರಿತಂಗಳೆಂಬ ಸಮುದ್ರಕೆ ; ಕುಂಭಜ = ಅಗಸ್ತ್ಯಮುನಿಯಾದಂಥ ; ಅಮೃತಕರನಾಂತಕ :– ಅಮೃತಕರ = ಸರ್ಪಂಗಳಿಗೆ ;

ಅಂತಕ = ವೈರಿಯಾದ ಗರುಡನಿಂದ ; ಗಮನ = ನಡೆವುತಿರ್ದ ವಿಷ್ಣುವಿನ ; ಆತ್ಮಭವ = ಮಗನಾದ ಕಾಮನಂಗವೆಂಬ ; ಘನ = ಮೇಘಗೆ; ಲಘುಗ = ವಾಯುಸ್ವರೂಪನಾದಂಥ; ಅಮೃತಕರ = ಅಕ್ಷಯ ಪದವೆ ಕರವುಂಟು ಮಾಡುವ ; ಉಮೆ ಹೃದ್ಕುಮುದ ಕೋರಕ :– ಉಮೆ = ಭವಾನಿಯ ; ಹೃತ್ಕುಮುದ = ಹೃದಯವೆಂಬ ನೈದಿಲೆಯ ; ಕೋರಕ = ಮೊಗ್ಗೆಯ ಮುಖಕೆ; ಅಮೃತಕರ = ಚಂದ್ರಮನಾದಂಥ ; ನಿರ್ಜರ ನಿಕರ ದಯಾಮೃತಕರ = ದೇವ ದೇವತೆಗಳ ಸಮೂಹಕೆ ದಯಾಸಾಗರನಾದಂಥ, ಪರಮೇಶ್ವರನೆ ಯೇನ್ನಾಳ್ದಯೆಲೆ ಶ್ರೀ ಬಸವೇಶ್ವರನೆ, ಮಾಂ = ಎನ್ನನು ; ಪಾಹಿ = ಪಾಲಿಸು. ॥ ೧೬ ॥

ಸಾರಂಗಾತ್ಮ ಭೂ ಧವೋದಧಿ ಸಂಭವೆ
ಸಾರಂಗಗ ಜಿತ್ಪ್ರಣುತ ಪದಾಂಬುಜ
ಸಾರಂಗ ಶ್ರುತಧರ ಮುನಿಸಂಕುಳ ಸಾರಂಗದ ತೆರೆಗೆ
ಸಾರಂಗನಘ ಸುಭಕ್ತ ಮನಾಬ್ಧಿಗೆ
ಸಾರಂಗಾದ್ರಿ ಪನಳಿಯ ಗಿರೀಶಂ
ಸಾರಂಗಜಿನಂ ಚೇಲನೆ ಶ್ರೀ ಬಸವೇಶ್ವರ ಮಾಂ ಪಾಹಿ

ಟೀಕು :– ಸಾರಂಗ = ಪರ್ವತಕೆ ; ಆತ್ಮಭೂ = ಮಗಳಾದ ಪಾರ್ವತಿ ದೇವಿಗೆ; ಧವ = ವಲ್ಲಭನಾದಂಥ; ಉದಧಿ ಸಂಭವೆ = ಸಮುದ್ರದಲ್ಲಿ ಹುಟ್ಟಿದ ಲಕ್ಷ್ಮೀದೇವಿಗೆ; ಸಾರಂಗ = ಮನೋಹರನಾದ ವಿಷ್ಣು ; ಅಗಜಿತ್ = ಅಮರೇಂದ್ರ ಮೊದಲಾದವರಿಂದ ಪ್ರಣುತ = ಅರ್ಚಿಸಿಕೊಳ್ಳಲ್ಪಟ್ಟ ; ಪದಾಂಬುಜ = ಪದಕಮಲನುಳ್ಳಂಥ ಸಾರಂಗ ಶ್ರತಧರ ; ಸಾರಂಗ = ಕಣ್ಣೆ; ಶೃತ = ಕಿವಿಯಾಗುಳ್ಳ ಶೇಷ ; [ಗೋಕರ್ಣೊ ಕಂಚುಕಿ ಹರಿಯೊಂದು ಅಮರ ನಿಘಂಟು] ಅಂಥ ಶೇಷನ, ಧರ= ಧರಿಸಿದಂಥ; ಮುನಿಸಂಕುಳ = ಮುನಿ ಜನಂಗಳ ಸಂದಣಿಗೆಳೆಂಬ ; ಸಾರಂಗದ ತೆರಗೆ = ಮೇಘದ ತೆರೆಗಳಿಗೆ; ಸಾರಂಗ = ಚಾತಕವಕ್ಕಿಯಾದಂಥ; ಅನಘಸುಭಕ್ತ = ಪಾಪವಿಲ್ಲದಂಥ ಒಳ್ಳೆ ಭಕ್ತರ ; ಮನಾಬ್ಧಿ = ಮನಸುವೆಂಬ ಸಮುದ್ರಕೆ; ಸಾರಂಗ = ಚಂದ್ರನಾದಂಥ; ಅದ್ರಿಪನಳಿಯ = ಗಿರಿರಾಜನಿಗೆ ಅಳಿಯನಾದಂಥ ; ಗಿರೀಶ = ಗಿರಿಗಳಿಗೊಡೆಯನೆ; ಸಾರಂಗಜಿನಚೇಲ :– ಸಾರಂಗ = ಆನೆಯ ; ಅಜಿನ = ತೊವಲವನ್ನು ; ಚೇಲ = ಹೊದಕೆಯಾಗುಳ್ಳಂಥ ಯೆಽ ಶ್ರೀ ಬಸವೇಶ್ವರನೆ ; ಮಾಂ = ಎನ್ನನು ; ಪಾಹಿ ರಕ್ಷಿಸು. ॥ ೧೭ ॥

ಧರ್ಮಜನಾಶ್ರಯ ಕಮಲಾಸನ ಶತ
ಧರ್ಮಸ್ವಭೂ ಮುಕುಟ ಘಟಿತಾಂಘ್ರಿಗೋ
ಧರ್ಮ ಪುರಾಂತಕ ಪಾರ್ಥಗೆ ಕೃಪೆಯದಿ ಪಾಶುಪತಾಸ್ತ್ರಮುದ
ಧರ್ಮಗಳಂ ಡಮರುಗಶಯ ಶಿಲೋಚ್ಚಯ
ಧರ್ಮಾಸ್ಯ ಸರೋಸಂಭವ ಭ್ರಮರಂ
ಧರ್ಮದ್ವಿಟ್ಧರ್ಮಾಂಕಿತ ಶ್ರೀ ಬಸವೇಶ್ವರ ಮಾಂ ಪಾಹಿ

ಟೀಕು:– ಧರ್ಮಜನಾಶ್ರಯ = ಪುಣ್ಯ ಜನಂಗಳಿಗೆ ಸದಾಶ್ರಯಯಾಗುಳ್ಳಂಥ ; ಕಮಲಾಸನ = ಬ್ರಹ್ಮನ ; ಶತಧರ್ಮ = ದೇವೇಂದ್ರನ ; ಸ್ವಭೂ = ವಿಷ್ಣು ಮುಖ್ಯರಾದವರ; ಮುಕುಟಘಟಿತಾಂಘ್ರಿ = ಕಿರೀಟಂಗಳ ಸಂದಣಿಯಿಂದ ನಮಿಸಿಕೊಳ್ಳಲ್ಪಟ್ಟ ಪಾದಗಳನುಳ್ಳಂಥ ; ಗೋಧರ್ಮ = ಪರ್ವತವೆ ಬಿಲ್ಲಾಗುಳ್ಳಂಥ ; ಪುರಾಂತಕ = ತ್ರಿಪುರಾಂತಕನಾದಂಥ; ಪಾರ್ಥ = ಅರ್ಜುನ [ಧನಂಜಯರ್ಜನ ಪಾರ್ಥ ಇತ್ಯಮರ] ಅಂಥ ಅರ್ಜುನನಿಗೆ ಪಾಶುಪತಾಸ್ತ್ರವ ಕೃಪೆಯಿಂದ ಕೊಟ್ಟಂಥ ; ಧಮಗಳಂ = ವಿಷಕೊರಳನುಳ್ಳಂಥ; ಡಮರುಗ ಶಯ = ಡಮರುಗ ಹಿಡಿದ ಹಸ್ತವನುಳ್ಳಂಥ; ಶಿಲೋಚ್ಚಯ = ಹಿಮವತ್ಪರ್ವತದಲ್ಲಿ ; ಧರ್ಮ = ಉದ್ಭವಿಸಿದ ಗಿರಿಜಾದೇವಿಯ ; ಆಸ್ಯಸರೋಸಂಭವ = ಮುಖವೆಂಬ ಕಮಲಕ್ಕೆ ; ಬ್ರಮರನಾದಂಥ ; ಧರ್ಮದ್ವಿಟ್ :– ಧರ್ಮ = ಯಮರಾಜಗೆ ; ದ್ವಿಟ್ = ಶತ್ರುವಾದಂಥ ; ಧರ್ಮಾಂಕಿತ = ಧರ್ಮನೆಂಬ ನಾಮವನುಳ್ಳಂಥ ಯೆಲೆ ಶ್ರೀ ಬಸವೇಶ್ವರನೆ, ಮಾಂ = ಎನ್ನನು ; ಪಾಹಿ = ರಕ್ಷಿಸು ॥ ೧೮ ॥

ಅಭ್ರಶ್ರವಣಗರ ಘಸ್ಮರ ಘಸ್ಮರ
ಅಭ್ರಪರ್ಣ ಸಾರಂಗ ಸಾರಂಗ
ಅಭ್ರಚರನಲ ಸುನೇತ್ರ ನೇತ್ರ ಕಾರ್ಮುಕ ಭಕ್ತಜನ
ಅಭ್ರಶಿಖಿಯ ವಪು ಶಕ್ರ ಶಕ್ರ
ಅಭ್ರಭೃತ್ಪದ ಕಮಲ ಕಮಲ
ಅಭ್ರಗ ಕೋಟಿ ಪ್ರಕಾಶನೆ ಶ್ರೀ ಬಸವೇಶ್ವರ ಮಾಂ ಪಾಹಿ

ಟೀಕು :– ಅಭ್ರಶ್ರವಣ :– ಅಭ್ರ= ಕಣ್ಣೆ ; ಶ್ರವಣ = ಕರ್ಣವನುಳ್ಳ ಶೇಷನ; ಗರ = ವಿಷವನ್ನು ; ಘಸ್ಮರ = ಭಕ್ಷಿಸಿದಂಥ; [ಭಕ್ಷಕೋ ಘಸ್ಮರೋದ್ಮರ ಇತ್ಯ ಮರಸಿಂಹ] ಘಸ್ಮರ = ಸರ್ಪನೋಪಾದಿಯಲ್ಲಿ ; ಅಭ್ರ = ವೇಣೀತುರುಬನುಳ್ಳಂಥ; ಅಪರ್ಣ = ಪಾರ್ವತಿ ದೇವಿಗೆ ; ಸಾರಂಗ = ಮನೋಹರನಾದಂಥ ; ಸಾರಂಗ = ಚಂದ್ರ ಅಭ್ರಚರ = ಸೂರ್ಯ ; ಅನಲ = ಅಗ್ನಿಯ ; ಸುನೇತ್ರ = ಲೇಸಾದ ಮೂರು ನಯನಗಳನುಳ್ಳಂಥ ; ನೇತ್ರ ಕಾರ್ಮುಕ = ಹೇಮಾದ್ರಿಯೆ ಬಿಲ್ಲಾಗುಳ್ಳಂಥ ; ಭಕ್ತಜನಭ್ರ = ಸಾಧು ಭಕ್ತರೆಂಬ ಮೇಘಕ್ಕೆ ; ಶಿಖಿ = ನವಿಲನಾದಂಥ; ವಪುಶಕ್ರ ; ವಪು = ದೇಹವೆಲ್ಲ; ಶಕ್ರ = ಬಿಳುಪು ವರ್ಣನಾದಂಥ ; ಶಕ್ರ = ವಿಷ್ಣುವಿನ ; ಅಭ್ರಭೃತ್ :– ಅಭ್ರ = ನಯನವನ್ನು ; ಭೃತ್ = ಧರಿಸಿದ ; ಪದಕಮಲ = ಪಾದಕಮಲನುಳ್ಳಂಥ ; ಕಮಲ = ಚಂದ್ರ ; ಅಭ್ರಗ ;– ಅಭ್ರ = ಆಕಾಶದಲ್ಲಿ ; ಗ = ನಡೆವುತಿರ್ದ ಸೂರ್ಯನ ; ಕೋಟಿ ಪ್ರಕಾಶವನುಳ್ಳಂಥ ಯೆಲೆ ಶ್ರೀ ಬಸವೇಶ್ವರನೆ ಮಾಂ = ಎನ್ನನ್ನು ; ಪಾಹಿ = ಪಾಲಿಸು. ॥ ೧೯ ॥

ಪುಷ್ಕರಧಿಜ ಭೃತ್ ವೃಜಿನಂ ವೃಜಿನಂ
ಪುಷ್ಕರ ಬಲಿಸುರ ಕುಮುದಂ ಕುಮುದಂ
ಪುಷ್ಕರ ಬಾಂಧವ ಭೂಷಣ ಭೂಷಣ ತನುಭವದಹನಭವ
ಪುಷ್ಕರ ಕುಂತಲ ರಾಮಂ ರಾಮಂ
ಪುಷ್ಕರ ಹರಿಹರ ಮರುತಂ ಮರುತಂ
ಪುಷ್ಕರ ಶೂಲಾಯುಧಕರ ಶ್ರೀ ಬಸವೇಶ್ವರ ಮಾಂ ಪಾಹಿ

ಟೀಕು:– ಪುಷ್ಕರಧಿಜ ಭೃತ್ :– ಪುಷ್ಕರಧಿ = ಸಮುದ್ರದಲ್ಲಿ ; ಜ = ಜನಿಸಿದ ಚಂದ್ರನ ; ಭೃತ್ = ಧರಿಸಿದಂಥ ; ವೃಜಿನ = ದುಃಖ್ಕರ್ಮವೆಂಬ ; ವೃಜಿನ = ರೋಗಕೆ ; ಪುಷ್ಕರ = ವೈದ್ಯನಾದಂಥ ; ಬಲಿಸುರ ಕುಮುದಂ :– ಬಲಿ = ಸತ್ಯ ಸಜ್ಜನರಿಗೆ ; ಸುರಕುಮುದ = ಕಲ್ಪವೃಕ್ಷನಾದಂಥ ; ಕುಮುದಂ = ಚಂದ್ರನನ್ನು ; ಪುಷ್ಕರ ಬಾಂಧವ ಭೂಷಣ = ತಾವರೆಯ ಗೆಳೆಯನಾದ ಸೂರ್ಯನನ್ನು ಕಿರೀಟದ ಕೊನೆಗೆ ಅನರ್ಘ್ಯ ಮಾದ ಮಾಣಿಕ್ಯದಿಂದ ಭೂಷಿತನಾದಂಥ ; ಭೂಷಣ ತನುಭವ ದಹನ = ಸೂರ‍್ಯನ ಮಗನಾದ ಯಮಧರ್ಮನ ದಹನವ ಮಾಡಿದಂಥ ; ಅಭವ = ಜನ್ಮರಹಿತನಾದಂಥ ; ಪುಷ್ಕರ ಕುಂತಲ ರಾಮಂ ರಾಮಂ :– ಪುಷ್ಕರ = ಆಕಾಶದಿಂದತ್ತ ; ಕುಂತಲ = ಕೇಶಗಳನುಳ್ಳಂಥ ; ರಾಮಂ = ಶ್ವೇತ ವರ್ಣದ ; ರಾಮಂ = ರೂಪವನುಳ್ಳಂಥ ; ಪುಷ್ಕರ ಹರಿಹರ :– ಪುಷ್ಕರ = ಕಮಲವೆ ; ಹರಿ = ಅಂಬುಗಳು ಮುಡಿದ ಮಾರನ ; ಹರ = ಸಂಹರಿಸಿಬಿಟ್ಟಂಥ ; ಮರುತಂ ಮರುತಂ :– ಮರುತಂ = ಹೇಮಾದ್ರಿಯನ್ನು ; ಮರುತಂ = ಧನುಸ್ಸನ್ನು ಮಡಿದಂಥ; ಪುಷ್ಕರ ಶೂಲಾಯುಧಕರ:– ಪುಷ್ಕರ = ಖಡ್ಗ ; ಶುಲಾಯುಧ = ತ್ರಿಶೂಲವೆ ಆಯುಧವ ಮಾಡಿ ಪಿಡಿದ ; ಕರ = ಹಸ್ತಗಳನುಳ್ಳಂಥಾ ಎಲೇ ಶ್ರೀ ಬಸವೇಶ್ವರನೆ, ಮಾಂ = ಎನ್ನನು ; ಪಾಹಿ = ರಕ್ಷಿಸು.
॥ ೨೦ ॥

ಮಂಡಿತ ಜೋಕನ ನಯನಂ ನಯನಂ
ಮಂಡಿತ ಮೃದುತರ ಮಂಡಿತ ಮಂಡಿತ
ಮಂಡಿತ ಮುಖಸುರ ಭೀಮಂ ಭೀಮಂ ಮಹಿಧರ ಪತಿ ಮಹಿತ
ಮಂಡಿತ ಮಾರ್ಗಣ ಕಾಲಂ ಕಾಲಂ
ಮಂಡಿತ ಶೇಖರ ಶಬರಂ ಶಬರಂ
ಮಂಡಿತ ಸೊನೆಯ ಭರ್ತನೆ ಶ್ರೀ ಬಸವೇಶ್ವರ ಮಾಂ ಪಾಹಿ

ಟೀಕು :– ಮಂಡಿತ ಜೋಕನ = ಕಮಲನಾಭಿಯನುಳ್ಳ ವಿಷ್ಣುವಿನ ; ನಯನ = ನಯನವನ್ನು ; ನಯನಂ = ನಯತರವಾಗಿ ; ಮಂಡಿತ = ಧರಿಸಿದ ;

ಮೃದತರ = ಮೃದುವಾದ; ಮಂಡಿತ ಮಂಡಿತ = ಪಾದಕಮಲವನುಳ್ಳಂಥ; ಮಂಡಿತ ಮುಖಸುರ ಭೀಮ :- ಮಂಡಿತ ಮುಖ = ಕುದುರೆಯ ಮುಖದ ಕಿಂಪುರುಷರು (ತುರಂಗವದನೋಮಯು ಇತ್ಯಮರ ಕೋಶ) ಅಂಥ ಕಿಂಪುರುಷರಿಗೆ ; ಸುರ = ದೇವತೆಗಳಿಗೆ ; ಭೀಮ = ಇಂದ್ರ ಮುಖ್ಯ ದೇವರಿಗೆ ; ಭೀಮ = ತಾಂಡವಲೀಲೆಯಲ್ಲಿ ಭೀಕರನಾದಂಥ ; ಮಹಿಧರ ಪತಿ ಮಹಿತ = ಗಿರಿಗಳಿಗೆ ಅಧಿಪತಿಯಾದ ಗಿರೀಂದ್ರ ನಿಂದ ಪೂಜಿಸಿಕೊಳ್ಳಲ್ಪಟ್ಟಂಥ ; ಮಂಡಿತ ಮಾರ್ಗಣ ಕಾಲಂ ಕಾಲಂ :- ಮಂಡಿತ = ಕಮಲದ ; ಮಾರ್ಗಣ = ಬಾಣವ ಪಿಡಿದ ಮದನನಿಗೆ ; ಕಾಲಂ ಕಾಲಂ = ಪ್ರಳಯಕಾಲನಾದಂಥ ; ಮಂಡಿತ ಶೇಖರ = ಚಂದ್ರಶೇಖರನಿಗೆ ಒಪ್ಪುತ್ತಿರುವಂಥ ; ಶಬರಂ = ಪರಶಿವನೆ ; ಶಬರಂ = ಮಂಜಿನ ; ಮಂಡಿತ = ಪರ್ವತವ ; ಸೊನೆ = ಮಗಳಾದ ಗೌರಿದೇವಿಗೆ ; ಭರ್ತ = ಪುರುಷನಾದಂಥ- ಯೆಲೆ ಶ್ರೀ ಬಸವೇಶ್ವರನೆ, ಮಾಂ = ಎನ್ನುನು ; ಪಾಹಿ = ಪಾಲಿಸು. ॥ ೨೧ ॥

ಗ್ರಾಮ ಪ್ರೇತ ಗ್ರಹ ಕಂಟಕ ಕಂಟಕ
ಗ್ರಾಮ ಮಾಲ ಸುತ ಜಾಳಕ ಜಾಳಕ
ಗ್ರಾಮರಹಿತ ತ್ರಯಾಕ್ಷಯ ಅಕ್ಷಯನಮಿತ ಪ್ರೇಕ್ಷಾನಲಾ
ಗ್ರಾಮ ಪ್ರಮಥರಿಗಚಲಂ ಅಚಲಂ
ಗ್ರಾಮಂತರಿಕ್ಷಂಗಜ ಅಂಗಜ
ಗ್ರಾಮ ಪುರಂಗಳು ದಹಿಸಿದ ಶ್ರೀ ಬಸವೇಶ್ವರ ಮಾಂ ಪಾಹಿ

ಟೀಕು :- ಗ್ರಾಮ ಪ್ರೇತಗ್ರಹ : ಗ್ರಾಮ = ಭೂತಂಗಳು ; ಪ್ರೇತ = ಪ್ರೇತಂಗಳು ಗ್ರಹ = ಕೆಟ್ಟಗ್ರಹಂಗಳು ; ಕಂಟಕ = ಪಾಪಂಗಳು ; ಇವಕ್ಕೆಲ್ಲ ಕಂಟಕ :- ಶತ್ರುವಾದಂಥ ; ಗ್ರಾಮ ಮೂಲ = ಕಿರಣಂಗಳ ಮಾಲೆಯಾಗುಳ್ಳ ಸೂರ್ಯೆ ; [ಅಂಶು ಮಾಲಿತ್ರಯಿನನೆಂ ಇತ್ಯಮರ] [illegible] ಸೂರ್ಯನ ಸುತ = ಯಮರಾಜನ ; ಜಾಳಕ= ಕುಟಿಲ ಗುಣಂಗಳಿಗೆ ; ಜಾಳಕ = ವ್ಯಂ[illegible]ದಂಥ ; ಗ್ರಾಮರಹಿತ = ಜನನ ರಹಿತನಾದಂಥ ; ತ್ರಯಕ್ಷಯ = ಮೂರು ಕಣ್ಣುಗಳನುಳ್ಳಂಥ ; ಅಕ್ಷಯ = ಸಾಧು ಸದ್ಗುಣಗಳನುಳ್ಳಂಥ; ಅಮಿತ ಪ್ರೇಕ್ಷ = ಮಿತಿ ರಹಿತವಾದ ಗುಣಗಳನುಳ್ಳಂಥ; ಪ್ರಮಥರಿಗಚಲ = ಕೇಡಿಲ್ಲದಂಥ ; ಅಚಲ = ಮುಕ್ತಿ ಪ್ರದಾಯವೆಂಬ ; ಗ್ರಾಮ = ಸಮುದ್ರನಾದಂಥ; ಅಂತರಿಕ್ಷ = ಗಗನ ಕೇಶನಾದಂಥ ; ಅಂಗಜ ಪುರಗ್ರಾಮ ; ಅಂಗಜ = ಮನ್ಮಥನನ್ನು ; ಪುರ = ಗ್ರಾಮ; ಗ್ರಾಮಪುರ = ಮುರು ಪಟ್ಟಣಗಳನ್ನು ದಹಿಸಿದ ಎಲೆ ಶ್ರೀ ಬಸವೇಶ್ವರನೆ, ಮಾಂ = ಎನ್ನನು ; ಪಾಹಿ = ಪಾಲಿಸು. ॥ ೨೨ ॥

ತಾರಂ ಕುಕ್ಷೀಲ ಭವನೆ ಭವನೆ
ತಾರಂಧಕ ಕೃತ ತಿಮಿರಂ ತಿಮಿರಂ

ತಾರಗ ಪುಷ್ಕರ ಅಮೃತ ಅಮೃತಂದಿಗಂಬರನೆ
ತಾರಪಜೂಟ ಪ್ರವಾಳ ಪ್ರವಾಳಂ
ತಾರಪ್ರಭ ಶುಚಿ ವಿಗ್ರಹ ವಿಗ್ರಹ
ತಾರೇಶನಾಭರಣಂಗನೆ ಶ್ರೀ ಬಸವೇಶ್ವರ ಮಾಂ ಪಾಹಿ

ಟೀಕು :– ತಾರಂಕುತ್ಕೀಲ ಭವನೆ :– ತಾರ = ಶ್ವೇತರೂಪವಮಾದ ಪರ್ವತ ; ಅಂಥ ತಾರಾದ್ರಿಯಲ್ಲಿ ; ಭವನ = ಮನೆಯಾಗಿರುವ ; ಭವ = ಶಿವನೆ ; ತಾರಂಧಕ = ರಾಕ್ಷಸನಾದ ಅಂಧಕಾಸುರನೆಂಬ; ಕೃತ = ಯಮನೆಂಬ ; ತಿಮಿರ = ದೋಷದುಷ್ಕೃತ್ಯಂಗಳೆಂಬ ; ತಿಮಿರಂ = ಕತ್ತಲೆಗೆ ; ತಾರಗ :– ತಾರ = ಆಕಾಶದಲ್ಲಿ ; ಗ= ಗಮಿಸುತ್ತಿರ್ಪ ಸೂರ್ಯನಾದಂಥೆ ; ಪಾಪವೆಂಬ ಕತ್ತಲೆಗೆ ಸೂರ್ಯನೆಂಬರ್ಥ; ಪುಷ್ಕರಮೃತ= ಆಕಾಶದಲ್ಲಿ ಯೋಗ್ಯರಾಗಿರುವ ಮೃಕಂಡಾದಿ ಮುನಿಗಳಿಗೆ; ಅಮೃತ = ಮುಕ್ತಿ ಸ್ವರೂಪನಾದಂಥ; ದಿಗಂಬರ = ಎಂಟು ದಿಗಂಗಳೆ ವಸನವಾಗುಳ್ಳಂಥ ; ತಾರ ಪಜೂಟ = ಚಂದ್ರಜೂಟನಾದ; ಪ್ರವಾಳ = ಜಡೆಗಳು; ಪ್ರವಾಳ = ಕೆಂಪು ವರ್ಣದಿಂದ ; ತಾರ ಪ್ರಭ = ಆಕಾಶದ ಕಡೆಗೆ ಪ್ರಕಾಶಿಸಿ ತೋರುವಂಥ; ಶುಚಿ ವಿಗ್ರಹ :– ಶುಚಿ = ಶ್ವೇತವರ್ಣದೊಡನೆ ಕೂಡಿದ; ವಿಗ್ರಹ = ವಿಸ್ತಾವರಾಗಿ ತೋರುವ ; ವಿಗ್ರಹ= ಶರೀರವನ್ನುಳ್ಳಂಥ; ತಾರೇಶನಾಭರಣಾಂಗ = ವಾಯುವೆ ಅಶನವಾಗುಳ್ಳ ಸರ್ಪಗಳಾಭರಣದಿಂದೊಪ್ಪುವ ಅಂಗವನುಳ್ಳಂಥ ಯೆಲೆ ಶ್ರೀ ಬಸವೇಶ್ವರನೆ, ಮಾಂ = ಎನ್ನನು ; ಪಾಹಿ = ರಕ್ಷಿಸು ॥ ೨೩ ॥

ಚಂದ್ರಜ ಮುಖ ಮುಖ ಪಾವಕ ಪಾವಕ
ಚಂದ್ರ ಪುರಂ ಭುಜ ಬಾಣಂ ಬಾಣಂ
ಚಂದ್ರಕು ಶಂಕರ ಲೋಚನ ಲೋಚನ ಅಂತಕನಂತಕನಂ
ಚಂದ್ರ ಶೃತಿ ಶರ ದಹನಂ ದಹನಂ
ಚಂದ್ರ ಮೇದಿನಿ ಸಾಗರ ಸಾಗರ
ಚಂದ್ರ ಭೂಯುಗಕತಿ ದೂರ ಶ್ರೀಬಸವೇಶ್ವರ ಮಾಂ ಪಾಹಿ

ಟೀಕು :– ಚಂದ್ರಜ ಮುಖ ಮುಖ :– ಚಂದ್ರ – ೧; ಅಜಮುಖ – ೪; ಇವು ಕೂಡಿ ಪಂಚಮುಖವನುಳ್ಳಂಥ ; ಪಾವಕ –೩ ; ಪವಕ– ೩ ; ಚಂದ್ರ–೧; ಪುರ – ೩ ; ಇವು ಕೂಡಿ ಭುಜ, ಹತ್ತು ಭುಜಗಳನುಳ್ಳಂಥ ; ಬಾಣ–೫ ; ಬಾಣ – ೫ ; ಚಂದ್ರ – ೧ ; ಕು–೧; ಶಂಕರಲೋಚನ–೩ ; ಇವು ಮೂರು ಕೂಡಿ ಲೋಚನ, ಹದಿನೈದು ಕಣ್ಣುಗಳನ್ನುಳ್ಳಂಥ ; ಅಂತಕನಂತಕ = ಯಮನಿಗಂತಕನಾದಂಥ ; ಚಂದ್ರ ಶ್ರುತಿ ಶರ ದಹನ :– ಚಂದ್ರ–೧ ; ಶೃತಿ–೪ ; ಇವು ಕೂಡಿ ಶರ= ಬಾಣ, ಪಂಚ ಬಾಣವನುಳ್ಳ ಮನ್ಮಥನ ದಹಿಸಿದಂಥ; ದಹನ ಚಂದ್ರ

ಮೇದಿನಿ :- ದಹನ – ೩ ; ಚಂದ್ರ – ೧ ; ಮೆದಿನಿ–೧ ; ಸಾಗರ–೨ ; ಸಾಗರ–೨ ; ಚಂದ್ರ–೧ ; ಭೂ–೧; ಇವು ಕೂಡಿ ಯುಗ ಇಪ್ಪತ್ತೊಂದು ಯುಗಂಗಳಿಗೆ ಅತಿ ದೂರನಾದಂಥ ಯೆಲೆ ಶ್ರೀ ಬಸವೇಶ್ವರನೆ ಮಾಂ = ಎನ್ನನು ; ಪಾಹಿ = ಪಾಲಿಸು ॥ ೨೪ ॥

ಭುವನಜ ನಾಥಗೆ ನಿಜಪದಮಿತ್ತನೆ
ಭುವನಜ ಜಾತಗೆ ವರದೈನೆಲೆ ವಾಸ
ಭುವನಜ ಪತಿ ಗುರು ಚನ್ನವೀರೇಶ್ವರ ಕವಿತಾಗುಣಾಂಬುಧಿಗೆ
ಭುವನಜ ಕೌಮುದಿ ಕಂಡೆನ್ನಯ ಮನ
ಭುವನದಿವುಕ್ಕೇರಲು ಕವನದ ತೆರೆ
ಭೂವನಕೆ ಹರಿ ಚೆಲ್ಲಿಸಿದೆನ್ನೈ ಶ್ರೀ ಬಸವೇಶ್ವರ ಮಾಂ ಪಾಹಿ

ಟೀಕು :- ಭುವನಜನಾಥಗೆ :- ಭುವನ = ಸಮುದ್ರದಲ್ಲಿ : ಜ = ಜನಿಸಿದ ಲಕ್ಷ್ಮಿದೇವಿಗೆ ; ನಾಥ = ವಲ್ಲಭನಾದ ವಿಷ್ಣುವಿಗೆ, ನಿಜಪದವನಿತ್ತಂಥ ; ಭವನಜಜಾತ :- ಭುವನ = ಉದಕದಲ್ಲಿ ; ಜ = ಜನಿಸಿದ ಕಮಲದಿಂದ ; ಜಾತ = ಉದ್ಭವಿಸಿದ ಬ್ರಹ್ಮನಿಗೆ ; ವರದ :- ವರವನ್ನು ; ದ= ಕೊಡುವಂಥ; ಐನೆಲೆ = ಐದೆಸಳಿನ ; ಭುವನಜ = ಕಮಲದಲ್ಲಿ ; ವಾಸ = ಕರಕಮಲ ವಾಸನೆಂಬರ್ಥ, ಎನ್ನ ಒಡೆಯನಾದ ಗುರು ಚೆನ್ನವೀರೇಶ್ವರನೆ; ಕವಿತಾಗುಣಾಂಭುಧಿಗೆ = ಕವಿತಾಗುಣವೆಂಬ ಸಮುದ್ರಕ್ಕೆ ; ಐ= ಮೋಕ್ಷಂಗಳಿಗೆ; ನೆಲೆ = ಸ್ಥಾನವಾದ ಕೈಲಾಸದ; ಭುವನ = ಮನೆಯನುಳ್ಳಂಥ ; ಭುವನಜ = ಚಂದ್ರನಾದಂಥ ; ಕೌಮುದಿ = ಅಂಥ ಚಂದ್ರನ ಬೆಳದಿಂಗಳವನೆ ಕಂಡುಯೆನ್ನ ಮನಸ್ಸುವೆಂಬ; ಭುವನದಿ ವುಕ್ಕೇರಲು = ಸಮುದ್ರ ವುಕ್ಕೇರಲು; ಕವನದ ತೆರೆ = ಕವಿತ್ವವೆಂಬ ತೆರೆಗಳು ಎನ್ನೊಳಿಂದ ಹೊರ ಹಾಯ್ದು ಈ ಭುವನಂಗಳ ಮೇಲೆ ಹರಿಚೆಲ್ಲಿಸಿ ಲೋಕದೊಳಗೆ ಪ್ರಸಿದ್ಧನಾದಂಥ ಎಲೆ ಶ್ರೀ ಬಸವೇಶ್ವರನೆ :- ಶ್ರೀ = ಅಷ್ಟೈಶ್ವರ್ಯವೆಂಬ : ಶ್ರೀ = ಸಮುದ್ರನಾದಂಥ; ಬಸವ = ಈಶ; ಇಷ್ಟಾರ್ಥವ ಕೊಡುವಂಥ ಬಸವೇಶ್ವರನೆ, ಮಾಂ = ಎನ್ನನು; ಪಾಹಿ = ಪಾಲಿಸು. ॥ ೨೫ ॥

ಬಸವೇಶ್ವರ ಸ್ತೋತ್ರದ ಪರಿವರ್ಧಿನಿ
ಸಮಾಪ್ತ ಮಂಗಳ ಮಹಾ ಶ್ರೀ ಶ್ರೀ ಶ್ರೀ

♦

ಅದ್ಯಾಯ –೫
ಬಸವೇಶ್ವರ ರಘಟಾಬಂಧ

ಶ್ರೀಗುರುವೆ ಮಹತೇಜ
ಯೋಗಿಜನ ಸುರಭೂಜ
ರಾಗದಿಂ ರಕ್ಷಿಸೈ ಬಸವರಾಜ ।
ಆಗಮ ಪುರಾಣ ಶ್ರುತಿ
ಪುಗನುತಭಕ್ತ ದಿವಿ
ಜಾಗಮ ಸುಭಾವ ಘನ ಬಸವರಾಜ ॥ ॥ ೧ ॥

ವೇದಾಶ್ವ ಆತ್ಮ ಋಷಿ
ವಾದಿ ವೃಷಭಾಕಾರ
ವಾದ ಪ್ರರಾಮಾಮೂರ್ತಿ ಬಸವರಾಜ ।
ಮೋದಕರನುಂ ಮುನಿ
ಶಿಲಾದನ ತಪಕ್ಕುದಯ
ವಾದ ಶ್ರೀ ನಂದೀಶ ಬಸವರಾಜ ॥ ॥ ೨ ॥

ಸಾರ ಗುಣಾಧ್ಯಕ್ಷ
ಸಾರ ಕೇತು ವಿಪಕ್ಷ
ಸಾರ ಭಕ್ತರ ಪಕ್ಷ ಬಸವರಾಜ ।
ಸೂರಜ ಮದ ವಿಭಂಗ
ಸೂರ ಪ್ರಭಾವಂಗ
ಸೂರ ಪ್ರತಿಮಾಂಗ ಬಸವರಾಜ ॥ ॥ ೩ ॥

ಬಸವ ಸುಜನರ ಸುಧೆಯೆ
ಬಸವ ಭಾಗ್ಯದ ನಿಧಿಯೆ
ಬಸವ ಕರುಣಾಂಬುಧಿಯೆ ಬಸವರಾಜ ।
ಬಸವ ಪರಮತ ಭೀಮ
ಬಸವ ಶಿವಮಯ ಪ್ರೇಮ
ಬಸವ ಚಿತ್ಸುಕಧಾಮ ಬಸವರಾಜ ॥ ॥ ೪ ॥

ಕುಶಲ ಲೋಕೋದ್ಧಾರ
ಸಕಲ ಜೀವಾಧರ
ಸಕಲ ಭಕ್ತಾಗಾರ ಬಸವರಾಜ ।
ಸಕಲ ಮುನಿಜನ ಜಾಲ
ಸಕಲ ಕವಿಜನಲೋಲ
ಸಕಲ ಪ್ರಮಥೋತ್ಪಾಲ ಬಸವರಾಜ ॥ ॥ ೫ ॥

ಮೊದಲೊಂದು ಯುಗದೊಳಗೆ
ವಿಧಿ ವಿಷ್ಣುಗಳಿಗೆ ದು
ರ್ಮದವಡರೆ ಈಕ್ಷಿಸಿದ ಬಸವರಾಜ ।
ಪದಿನಾಲ್ಕು ಲೋಕಗಳ
ಪದೆದು ಪಾಲಿ [ಸು] ವೆವೆನ
ಲದುಗೇಳಿ ಮೊರೆದೆದ್ದ ಬಸವರಾಜ ॥ ॥ ೬ ॥

ಮೂವತ್ತೇರಡು ಕೋಟಿ
ಗಾವದುದ್ದನೆ ಬೆಳೆದು
ಭೂವಲಯ ತೀವಿರ್ದ ಬಸವರಾಜ ।
ಮಾವರ ಬ್ರಹ್ಮಾದಿ
ದೇವ ದಾನವರುಗಳ
ನಾವರಿಸಿ ನಿಂದಿರ್ದ ಬಸವರಾಜ ॥ ॥ ೭ ॥

ಮಿಸುಗುವಾಕೃತಿಯ ನೀ
ಕ್ಷಿಸೆಯಖಿಳ ಲೋಕಗಳು
ಬಸವಳಿಯೆ ಘೂರ್ಣಿಸಿದ ಬಸವರಾಜ ।
ದಶದಿಶೆಗಳಲ್ಲಿ ವಿಹ
ರಿಸುವ ಜನರಳ್ಳುತಿರೆ
ಮಸಗುತ್ತೆ ನಿಂದಿರ್ದ ಬಸವರಾಜ ॥ ॥ ೮ ॥

ಯುದ್ಧ ಸನ್ನರ್ಧರಾ
ಗಿರ್ದ ಹರಿ ವಿಧಿ ಸುರರ
ನುದ್ಧತದಿ ನಿಟ್ಟಿಸಿದ ಬಸವರಾಜ ।
ಎದ್ದ ನೀಗಳ್ನೆಲಕೆ
ಬಿದ್ದ ಬಿಡುಗಣ್ಣವರ
ನುದ್ಧ ವಡೆಗುರುಳಿಸಿದ ಬಸವರಾಜ ॥ ॥ ೯ ॥

ಡುರುಕಿಟ್ಟು ಚರಣದಿಂ
ಧಾರುಣಿಯ ಹುಡಿಮಾಡಿ
ಸುರಪಥಕೆ ಚಿಮ್ಮಿರ್ದ ಬಸವರಾಜ ।
ಪರೆಪಿ ತಾ ಧೂಳವಂ
ಬರ ಮುಸುಕಲಳಕುತಿಹ
ವರ ಮುನೀಂದ್ರರ ಪೊರೆದ ಬಸವರಾಜ ॥ ॥ ೧೦ ॥

ಮೇನಕಿಯು ಬೇದರೆ ಗಿರಿ
ಮೈನಾಕನದುರೆ ಪಾ
ಥೋನಿಧಿಗೆ ಹುಡಿಯಿಟ್ಟ ಬಸವರಾಜ ।
ಭಾನು ಶಶಿಗಳು ಗಳಿತ
ಭಾನು ಬಾಗಿರೆ ದುಃಕೃ
ಶಾನು ವೃಷ್ಟಿಗರೆದ ಬಸವರಾಜ ॥ ॥ ೧೧ ॥

ಕಡಲೇಳು ಕದಡಿಸುತೆ
ಉಡುತತಿಗಳುದುರಿಸುತೆ
ಬಡಿವ ಬಾಲವನುಳ್ಳ ಬಸವರಾಜ ।
ಬಡಬಾಗ್ನಿಯಾಗಿಸುವ
ಸಿಡಿಲ ಸಿಖಿ ಹಾರಿಸುವ
ನಿಡಿ ಸುಯಿಲ್ಗಳನುಳ್ಳ ಬಸವರಾಜ ॥ ॥ ೧೨ ॥

ತಿಮಿತಿಮಿಂಗಳನೆರಡ
ವಿಮುಖಂಗಳಾಗೆಯಾ
ಕ್ರಮಿಸಿ ಮೊದಲಂತಿಟ್ಟ ಬಸವರಾಜ ।
ಕಮಠ ಚರ್ಮಾಂಗಸ್ಥಿ
ಸಮನಾಗಿ ನೆಗ್ಗುತಿರೆ
ಕ್ಷಮಿಸಿಯದ ನಿಲ್ಲಿಸಿದ ಬಸವರಾಜ ॥ ॥ ೧೩ ॥

ಚಕ್ರವಾಳಾದ್ರಿ ತವ
ವಿಕ್ರಮಕೆ ಕಂಪಿಸಲ
ತಿಕ್ರಮಿಸಿ ಪೊಂದಿಸಿದ ಬಸವರಾಜ ।

ಶುಕ್ರ ಶಿಷ್ಯಾದಿ ಪರ
ಚಕ್ರಗಳು ತಲ್ಲಣಿಸ
ಲಕ್ರಮಿಸಿ ತವಿಸೆರ್ದ ಬಸವರಾಜ ॥ ॥ ೧೪ ॥

ದ್ವೀಪ ಸಪ್ತಕ ರಕ್ತ
ದ್ವೀಪಗಳು ಕುಸಿಯಲಾ
ಟೋಪ ಶೌರ್ಯದಿ ನಿಂದ ಬಸವರಾಜ ।
ದ್ವೀಪಿಸುವ ಮಾತ್ರ ಕ
ನ್ಯಾಪಟಲ ಲೋಕ ಸಂ
ತಾಪಗಳ ನಿಲ್ಲಿಸಿದ ಬಸವರಾಜ ॥ ॥ ೧೫ ॥

ನಿರ್ಭರದಿಟ್ಟು ಸೂರ್ಗ
ಳಾರ್ಭಟಿಸುತಿರೆ ಪಾಯ್ದು
ಪೆರ್ಬೆಟ್ಟುಗಳು ಸಿದ್ಧ ಬಸವರಾಜ ।
ಸ್ವರ್ಭಾನುವಾಗಸ ದೊ
ಳು ಬರಗೆಟ್ಟು ವರುತಿರೆ
ಯರ್ಭಿನಿಂ ಢಣಿಕಿಟ್ಟ ಬಸವರಾಜ ॥ ॥ ೧೬ ॥

ದಶವಾಯುಗಳ ಮೂಗಿ
ನುಸೂರಿನುಪಟಳಕಡಿಗೆ
ಕುಸಿಯಲಿಳೆ ನಿಲ್ಲಿಸಿದ ಬಸವರಾಜ ।
ಮಸಗುವ ಮಂಹಾಶೇಷ
ರಸನೆಗಳ ಚಾಚಿ ಕಂ
ಪಿಸುಪಿತಿರಲು ಮಿಗೆ ಪೊರೆದ ಬಸವರಾಜ ॥ ॥ ೧೭ ॥

ಹೆಗ್ಗುರುಗಳೂರಿಳೆಯಾ
ತಗ್ಗಿಸುತೆ ತಾಪುಸುತೆ
ಸಗ್ಗ ಪೊಳಲದುರಿಸಿದ ಬಸವರಾಜ ।
ನಿಗ್ಗ ವಗಳಲುಗಿಸುತೆ
ದಿಗ್ಗ ಜಗಳೊದರುತಿರ
ದಿಗ್ಗ ಜಗಳೊದರುತಿರೆ
ಲಗ್ಗಿಯಾಟವ ತೋರ್ದ ಬಸವರಾಜ ॥ ॥ ೧೮ ॥

ಮೂರುವರೆ ಕೋಟಿ ಗೆ
ಲ್ದಾರೂಢದಳಮಾದ
ಧಾರುಣಿ ವಿದಾರಿಸಿದ ಬಸವರಾಜ ।
ಭೋರೆಂಬ ಬಹಿಜರ ಲಗ್ಗದಾ
ಳೇರಿಯೆ ಬಲ್ಗಳಂ
ಹಾರುತಿರೆ ನರ್ತಿಸಿದ ಬಸವರಾಜ ॥ ॥ ೧೯ ॥

ಈ ವಿಧದೊಳಖಿಳ ಭುವ
ನಾವಳಿಗಳುದುರೆ ಕ್ರೋ
ಧಾವಿಷ್ಟ ನಾಗಿರ್ದ ಬಸವರಾಜ ।
ಶ್ರೀವಿಭು ಬ್ರಹ್ಮೇಂದ್ರ
ದೇವ ದೈತ್ಯರು ಮುಸುಕ
ಲಾ ವಿಗ್ರಹದಿ ನಿಂದ ಬಸವರಾಜ ॥ ॥ ೨೦ ॥

ಮಾಧವನ ಚಕ್ರಕನ
ಕೋದರ[ನ] ಖಡ್ಗ ಬಲಿ
ಸೂದನನ ಪವಿ ಪಡೆದ ಬಸವರಾಜ ।
ಮೇದಿನೀ ಗಗನ ಕುಲ
ಭೂಧರ ಸಮುದ್ರಗಳ
ಭೇಧಿಸಿದ ಶೌರ್ಯನಿಧಿ ಬಸವರಾಜ ॥ ॥ ೨೧ ॥

ಕೇಶವನ ಗರುಡ ಕಮ
ಲಾಸನನ ಹಂಸ ಖಗ
ವಾಸವನಿಭವರೊಂದ ಬಸವರಾಜ ।
ಆಶಾಧಿಪತಿಗಳ ನ
ಮಾಸುಗಗಳಂ [?] ನಿಜೋ
ಚ್ಛ್ವಾಸಂಗಳಿಂ ಸುಟ್ಟ ಬಸವರಾಜ ॥ ॥ ೨೨ ॥

ಕೃಷ್ಣನಂಗವ ಸೀಳಿ
ಮುಟ್ಟು ಸಿಂಬಿಯ ಮಾಡಿ
ತೊಟ್ಟು ಜಗದೊಳು ಮೆರೆದ ಬಸವರಾಜ ।

ಜಿಷ್ಣುವನು ಸೀಳ್ದು ಕಡೆ
ವೆಟ್ಟಿಯವನಂಗ ಹಣೆ
ಪಟ್ಟಿಯನೆ ಮಾಡಿಸಿದ ಬಸವರಾಜ ॥ ॥ ೨೩ ॥

ಬಿದಿಯ ಬಿದಿ ಸಮ್ಮವನೆ
ತದಿದೇಳು ಹಿಂಭಾಗ
ಬದಿಯ ವಸ್ತ್ರವನೆಗೈದ ಬಸವರಾಜ ।
ಅದಿತಿ ನಂದನರುಗಳ
ವದನ ಸರಘಂಟೆ ಮಾ
ಡಿದ ಮಹಾಸ್ತೋಮನಿಧಿ ಬಸವರಾಜ ॥ ॥ ೨೪ ॥

ಶೃಂಗ ಶೂರಾದಿಗಳ
ಶೃಂಗದಿಂದಿರಿಯುತ್ತು
ಮಂಗ ಜಂಗುವ ತಾಳ್ದ ಬಸವರಾಜ ।
ತುಂಗ ಲಾಲಾಸುರ ಭು
ಜಂಗ ದಾನವರ ಸ
ರ್ವಾಂಗ ಪಟ್ಟೆಂಳೆಂತ [?] ಬಸವರಾಜ ॥ ॥ ೨೫ ॥

ಕ್ರೋಧಾದಿಗಳ ಮೆಟ್ಟಿ
ತಾ ತಾಡಿಸುತವರೆಲು
ಕೋಡ ಕೊಸುಗಳಗೆಯ್ದು ಬಸವರಾಜ ।
ಮೂಢ ಮೂಕಾಸುರನ
ದಾಡೆಗಳ ಕಿರುಗೆಜ್ಜೆ
ಮಾಡಿ ಕಂಠದೊಳಾಂತ ಬಸವರಾಜ ॥ ॥ ೨೬ ॥

ವ್ಯಾಳ ಸಿಂಹಾದಿಗಳ
ವಾಲಮುಖ ಚಾರಿಗಳ
ಕಾಲ ಗಗ್ಗರಿಗೈದ ಬಸವರಾಜ ।
ಜಾಲ ಘಂಟಾಸುರರ
ನಾಲಗೆಯ ಜಲಪಿ ಮುಖ
ರಾಲಘಂಟೆಯ ತಾಳ್ದ ಬಸವರಾಜ ॥ ॥ ೨೭ ॥

ಕುಸುಮಾಸ್ತ್ರನಂ ಮೂಗಿ
ನುಸುರಿನಿಂ ಸುಟ್ಟು ಖಗ
ಬಿಸರು ಗಿರಿಗಳ ತಾಳ್ದ ಬಸವರಾಜ ।
ಶಶಿ ದಿವಾಕರರಳ್ಕೆ
ನಸಿವದೀಕ್ಷಿಸಿ ನೀನೆ
ವಸೆದೆಡಬಲದೊಳಿಟ್ಟ ಬಸವರಾಜ ॥ ॥ ೨೮ ॥

ತಾರಪಥಾಂತರಕೆ
ಪಾರುವ ಭಗಣಗಳನು
ಹಾರಗಳ ಮಾಡೆಸೆವ ಬಸವರಾಜ ।
ಮೀರಿದ ಸುಧಾಮಾದ್ರಿ
ಚಾರು ಚಂಚಲದೊಳಾ
ಕಾರಮಂ ಬೆರೆಸಿರುವ ಬಸವರಾಜ ॥ ॥ ೨೯ ॥

ದಶಲಕ್ಷ ಯೋಜನದಿ
ನೆಸೆವ ಸುರನದಿ ಜಲಗ
ಸುರಿನಿಂ ಕದಡಿಸಿದ ಬಸವರಾಜ ।
ಅಸಮಾಕ್ಷ ಶಿವನ ಜಾ
ನಿಸುತಿಹ ತಪೋಲೋಕ
ಋಷಿಗಳನು ಪಾಲಿಸಿದ ಬಸವರಾಜ ॥ ॥ ೩೦ ॥

ಇಂತು ಸಚರಾಚರವ
ನಂತಗಳಳಿಯ ಕೇಳಿ
ಕಂತುರಿಪು ಬರೆಕಂಡ ಬಸವರಾಜ ।
ಅಂತಿಕಕೆ ಬಂದು ಭಯ
ಸಂತೈಸಲೆರಗಿ ಮೊದ
ಲಂತೆ ರೂಪಮನಾಂತ ಬಸವರಾಜ ॥ ॥ ೩೧ ॥

ವಾಣೀಶ ಮುಖ್ಯ ಗೀ
ರ್ವಾಣ ದಾನವರುಗಳ
ಪ್ರಾಣಂಗಳಿತ್ತ ಗುರು ಬಸವರಾಜ ।

ಕ್ಷೀಣವಾಗಿರ್ದ ಮುನಿ
ಶ್ರೇಣಿಗಳು ನಮಿಸಲ್ಕೆ
ಮಾಣದಭಯವನಿತ್ತ ಬಸವರಾಜ ॥ ॥ ೩೨ ॥

ಮುರಹರ ಸುರಜೇಷ್ಠ
ಪುರಹೂತ ಮುಖ್ಯ ನಿ
ರ್ಜರರೆರಗಲೀಕ್ಷಿಸಿದ ಬಸವರಾಜ ।
ತರತರದೊಳಿರ್ದ ಬಹು
ತರದ ವಿಭುಧರ ನೋಡಿ
ಕರೆಕರೆದು ಪದವಿತ್ತ ಬಸವರಾಜ ॥ ॥ ೩೩ ॥

ವೇದಗಳು ಪೊಗಳೆ ವಿ
ದ್ಯಾಧರರು ಪಾಡುತಿರೆ
ಯಾದರಿಸಿ ವೀಕ್ಷಿಸಿದ ಬಸವರಾಜ ।
ಸಾಧು ಕುಂಭಜ ಮೃಕಂ
ಡಾದಿ ಮುನಿಗಳ ನೋಡಿ
ಮೋದದಿಂ ಮನ್ನಿಸಿದ ಬಸವರಾಜ ॥ ॥ ೩೪ ॥

ಇಂತಖಿಳ ಲೋಕಗಳ
ಸಂತಸದೊಳುದ್ಧರಿಸಿ
ಕಂತುಹರನಂ ಪೊದ್ದ ಬಸವರಾಜ ।
ಸ್ವಾಂತಾಬ್ಜ ಮಲರಲ
ತ್ಯಂತ ಹರುಷದಿ ಶಿವದಿ
ಶಾಂತಕಂ ನಡೆತಂದ ಬಸವರಾಜ ॥ ॥ ೩೫ ॥

ಆದಿ ಪ್ರಮಥೇಂದ್ರರ
ಲ್ಹಾದದಿಂದಿರುತಿರೆ ಮ
ಹೋದಯದಿ ನಿಂದಿರ್ದ ಬಸವರಾಜ ।
ವೇದಹಯನೆಡೆಯೊಳು ವಿ
ನೋದದಿಂ ನೆಲೆಸಿರ್ದ
ದ್ವಾದಶಾಷ್ಟಯಮೂರ್ತಿ ಬಸವರಾಜ ॥ ॥ ೩೬ ॥

ಕೋಟಿ ಮುಖಗಳನುಳ್ಳ
ಕೋಟಿ ಬಾಹುಗಳುಳ್ಳ
ಕೋಟಿ ಪ್ರಮಥರಾಳಿರ್ದ ಬಸವರಾಜ ।
ಕೋಟಿ ನೇತ್ರಗಳುಳ್ಳ
ಕೋಟಿ ಶ್ರೋತ್ರರಗಳುಳ್ಳ
ಕೋಟಿ ಗಣದೊಳಗುಳ್ಳ ಬಸವರಾಜ ॥ ॥ ೩೭ ॥

ಕೋಟಿ ಹರಿ ದೃಹಿಣ ಶತ
ಕೋಟಿಧರಮುಖ ದಿವಿಜ
ಕೋಟಿಯೋಳು ಮೀರಿರ್ದ ಬಸವರಾಜ ।
ಕೋಟಿ ಕೋಟಿ ಪರಾರ್ಧ
ಕೋಟಿಮೂಲ ಪ್ರಮಥ
ಕೋಟಿಯೊಳು ಶೋಭಿಸುವ ಬಸವರಾಜ ॥ ॥ ೩೮ ॥

ಮನಸಿಜಾಂತಕನಲ
ಗ್ಗನಕಖಿಳ ಜನರ ಕರೆ
ಯೆನಲೆರಗಿ ಜಾನಿಸದ ಬಸವರಾಜ
ಮನದೊಳಗಣಿತ ಕೋಟಿ
ವನಜಜಾಂಡದ ಜನರ
ನೆನನೆನೆದು ನೆರಪಿರ್ದ ಬಸವರಾಜ ॥ ॥ ೩೯ ॥

ವಿವಿಧ ಬ್ರಹ್ಮಾಂಡ ಜನ
ನಿವಹ ಸಭೆಯೊಳು ನಿಲಿಸಿ
ತವೆ ಮಹೇಶನ ತೋರ್ದ ಬಸವರಾಜ ।
ಶಿವನ ಲಗ್ನಕೆ ಬಂದ
ಯುವತಿ ರತಿದೇವಿಯಾ
.ಧವನಸುವ ಕೊಡಿಸಿರ್ದ ಬಸವರಾಜ ॥ ॥ ೪೦ ॥

ಮೃಡನ ಏರಿಸಿಕೊಂಡು
ನಡೆದು ರಜತಾಚಲದ
ಎಡೆಯೊಳಿಳುಹಿದ ಬಸವರಾಜ ।

ಸಂಗಮೇಶ್ವರನ ಗುಡಿ
ಮುಂಗಡೆಯೊಳಿರ್ದು ಸ್ತವ
ನಂಗಳಂ ಗೈದ ಶಿವ ಬಸವರಾಜ ।
ಮಂಗಳಾಕರ ಪ್ರಭ
ವಾಂಗಸ್ತವಾಯ್ತು ಶಿವ
ಲಿಂಗದೊಳು ಬಯಲಾದ ಬಸವರಾಜ ॥ ॥ ೪೬ ॥

ಅಮರಗಣ ರುದ್ರಗಣ
ಪ್ರಮಥಗಣಮೆಯ್ದೆ ಸಂ
ಭ್ರಮಿಸುತಿರೆ ರಂಜಿಸಿದ ಬಸವರಾಜ ।
ಕ್ರಮದೊಳು ದಿವಿಜ ಭೇರಿ
ಯ ಮರ್ದಳೆಯರವ ಮತಿ
ಕ್ರಮಿಸಲಭವ ನೋಳಿರ್ದ ಬಸವರಾಜ ॥ ॥ ೪೭ ॥

ವಿದಿತ ಕೈಲಾಸಪುರಿ
ಸದನದೊಳುಳ್ಳ ಶಿವನ
ಹೃದಯದಲಿ ರೂಪವ ತೋರ್ದ ಬಸವರಾಜ ।
ಪದೆದು ಮರ್ತ್ಯದಲಿ ಕೋ
ವಿದ ಸಿದ್ಧರಾಮೇಶ
ನುದರದೊಳು ಪ್ರಜ್ವಲಿಪ ಬಸವರಾಜ ॥ ॥ ೪೮ ॥

ಸಕಲ ಮಾಹೇಶ್ವರರ
ನಿಕಟದೊಳು ಕೂಡಿರುವ
ಸಕರುಣಾಕಾರ ಗುರು ಬಸವರಾಜ ।
ಸಕಲ ಶರಣರ ಮುಖಕೆ
ಮುಕುರಮೆನಿಸುತ ಜಗದೊ
ಳಕಳಂಕನಾದ ಹರ ಬಸವರಾಜ॥ ॥ ೪೯ ॥

ಭಕ್ತ ಬ್ರಹ್ಮಾಂಡಂಗ
ಳೆತ್ತಿ ಉದುರಿದಕ್ಕೆಂ
ತೆಂಬ ಪೆಸಲಾದಂತ ಬಸವರಾಜ ।

ಅಡರಿದರೆ ರೂಪ್ಯಾದ್ರಿ
ನಡೆ ನಿಲ್ಲದೆಂದು ಹರ
ನೊಡನೆ ಕಳುಹಿಸಿಕೊಟ್ಟ ಬಸವರಾಜ ॥ ॥ ೪೧ ॥

ಊರ್ವಿಯೊಳು ಜೈನಮುನಿ
ಚಾರ್ವಾಕ ಬೌದ್ಧ ರತಿ
ಕೊರ್ವಿರಲರಿದು ನೀನೆ ಬಸವರಾಜ ।
ಸರ್ವಜ್ಞನಾಗಿಯುಂ
ಸರ್ವರೊಳುದಿಸಿಬಂದು
ಗರ್ವಗಳ ಮುರಿದಿರ್ದ ಬಸವರಾಜ ॥ ॥ ೪೨ ॥

ರನ್ನವಸಿರದೊಳು ಪ್ರ
ಸನ್ನ ಕಲ್ಯಾಣಪುರಿ
ಯಂ ನಲಿದು ಪಾಲಿಸಿದ ಬಸವರಾಜ ।
ಪನ್ನಗಾಭರಣ ನವ
ಚಿಹ್ನದಿಂ ಬರೆ ನೋಡಿ
ಮನ್ನಿಸುತೆ ಪೂಜಿಸಿದ ಬಸವರಾಜ ॥ ॥ ೪೩ ॥

ಅಖಿಳ ಭುವನಗಳೊಳಿಹ
ಸುಕರ ಶಿವಭಕ್ತ ಜನ
ನಿಕರದೊಳು ಬೆರೆದಿರುವ ಬಸವರಾಜ ।
ನಿಕಟ ಜಿನಮುನಿ ಬಸ್ತಿ
ಪ್ರಕರಂಗಳಂ ಮಹೋ
ತ್ಸುಕ ಶಿವಾಲಯ ಗೆಯ್ದು ಬಸವರಾಜ ॥ ॥ ೪೪ ॥

ಶ್ರವಣರ ಮತವ ಕೆಡಿಸಿ
ಶಿವಮತವನುದ್ಧರಿಸಿ
ಭವಿಜನರನಿರಿಸಿಸಿದ ಬಸವರಾಜ ।
ಅವನೀಶ ಬಿಜ್ಜಳನ
ತವಿಸಿರೆಂದುಸುರಿ ಬಹು
ಜವದಿಂದೆ ಗಮನಿಸಿದ ಬಸವರಾಜ ॥ ॥ ೪೫ ॥

ಮತ್ತೆ ಕಟವಾಯನೊರೆ
ಯತ್ತಣೆಂದುದಿಸಿದಾ
ಬಿತ್ತುಗಳ ಬೆಳೆಗೈದ ಬಸವರಾಜ ॥ ॥ ೫೦ ॥

ಗಾಯತ್ರಿಗಿಂದ ಫಲ
ದಾಯಧಿಕವೆನುತಲಾ
ಮ್ನಾಯಗಳು ಪೊಗಳ್ವುವೈ ಬಸವರಾಜ ।
ಶ್ರೀಯಿಂದೀರೇಶ ಗಾಂ
ಗೇಯ ಗಣೇಂದ್ರರ ಸಮು
ದಾಯ ಪೂಜಿಸುವವೈ ಬಸವರಾಜ ॥ ॥ ೫೧ ।

ನಿನ್ನ ನರ್ಚಿಸುವವರ
ಹೃನ್ನಳಿನದೊಳಭವ ಪ್ರ
ಸನ್ನ ನಾಗಿರುವನೈ ಬಸವರಾಜ ।
ನಿನ್ನ ಜಾನಿಸುವವರ
ಸನ್ನಿಧಿಯೊಳಭವಗಣ
ಇನ್ನು ನೆಲಸಿರುವುದೈ ಬಸವರಾಜ ॥ ॥ ೫೨ ॥

ಬುಧರಿಂತು ಕಥಿಸಲಾ
ನಿದ ಕೇಳಿ ನಂಬಿ ಸವಿ
ದಾದರದಿ ಮೊರೆಹೊಕ್ಕೆ ಬಸವರಾಜ ।
ಅಧಮನಿವನೆಂದು ಸ
ಮ್ಮೊದದಿ ವೀಕ್ಷಿಸಿ ನಿಮ್ಮ
ಪದವಿಯೊಳಗಿರಿಸಯ್ಯ ಬಸವರಾಜ ॥ ॥ ೫೩ ॥

ಪ್ರಾಚೀನ ಕರ್ಮದಿಂ
ನೀಚ ಸಂಸಾರಾಬ್ಧಿ
ವೀಚಿಯೊಳು ಸಿಲ್ಕಿದೆನು ಬಸವರಾಜ ।
ನೀಚದಿ ದುರಾಪೇಕ್ಷ
ಮಾಚರಿಸಿ ಬಂದು ಬಹು
ಯೋಚನೆಯೊಳಾದೆನೈ ಬಸವರಾಜ ॥ ॥ ೫೪ ॥

ಬಹಳ ಜನ್ಮಂಗಳನು
ತಾಳಿ ಸಂತಾಪಿಸುತೆ
ಬಾಳುವುದ ಬಿಡಿಸಯ್ಯ ಬಸವರಾಜ ।
ಕಾಳಿಗೊಂಡುಮ್ಮಳಿಸಿ
ಗೋಳಿಡುವುದಂಗೇಳಿ
ಯಾಳಿನಾಳನು ಮಾಡೊ ಬಸವರಾಜ ॥ ॥ ೫೫ ॥

ಎರಡೊಂದವಸ್ಥೆಯೊಳು
ಕೊರಗಿ ಬೆಂಡಾಗಿ ಬಹು
ಮೊರೆಯಿಡುವೆನ್ನೈ ನೋಡು ಬಸವರಾಜ ।
ಪರಿಭವಾಬ್ಧಿಯೊಳಾಳು
ತಿರುವವನ ಕೈವಿಡಿದು
ಪರವಶಂ ಪರಿಹರಿಸು ಬಸವರಾಜ ॥ ॥ ೫೬ ॥

ಮಿಥ್ಯ ಸುಖಕೆಳಸಿ ನಾ
ನತ್ಯಾ ಯಸದೊಳಾದೆ
ಭೃತ್ಯನಿವನೆಂದು ಪೊರೆ ಬಸವರಾಜ ।
ಸತ್ಯ ಸ್ಯೆರಣೆದೋರಿ
ನಿತ್ಯ ಪದವಿತ್ತೆನ್ನೊ
ಳತ್ಯಂತ ಪ್ರೇಮವಿಡು ಬಸವರಾಜ ॥ ॥ ೫೭ ॥

ಕೋಪ ನಿಷ್ಠುರ ವಾಕ್ಯ
ತಾಪತ್ರಯಗಳೆಂಬ
ಕೂಪದೊಳು ಮುಳುಗಿದೆನು ಬಸವರಾಜ ।
ಆಪದುತ್ಕಟಮದಾ
ಟೋಪದಿಂ ಬಳಲುವೆ ದ
ಯಾ ಪಯೋನಿಧಿಯೆ ನೀಂ ಬಸವರಾಜ ॥ ॥ ೫೮ ॥

ಕಾಲರ್ಮ ಪ್ರಳಯಾ
ಕಾಲಗಳೆನಿಪ ದುಷ್ಟ
ಕಾಲವಶನಾದೆನ್ನೈ ಬಸವರಾಜ ।

ಕಾಲಮದಹರ ವಿಲಯ
ಕಾಲವಿರಹಿತ ಸರ್ವ
ಕಾಲದೊಳು ಪಾಲಿಸೈ ಬಸವರಾಜ ॥ ॥ ೫೯ ॥

ದೃಷ್ಟ ಸಂಸೃತಿ ಸುಖದ
ಇಷ್ಟೆಯಿಂ ದುಟ್ಟ ಬಹು
ಕಷ್ಟ ಬಡುವೆನು ತಂದೆ ಬಸವರಾಜ ।
ಸೃಷ್ಟಿ ಶಿವಶರಣ ಜನ
ನಿಷ್ಠೆಯೊಳಗಿರಿಸಿ ಸಂ
ತುಷ್ಟ ಹೃದಯನ ಮಾಡು ಬಸವರಾಜ ॥ ॥ ೬೦ ॥

ಕುಟಿಲ ಕುಹಕರ ಖಳರ
ಚುಟುಲ ಚಾಂಚಲ್ಯರ ನಿ
ಕಟದೊಳಿರಿಸದಿರಯ್ಯ ಬಸವರಾಜ ।
ಸ್ಫಟ ಬ್ರಹ್ಮ ಯೋಗದೊಳು
ನಟಿಸುವ ಪುರಾತನರ
ಪಟಲದಾಳನು ಮಾಡೊ ಬಸವರಾಜ ॥ ॥ ೬೧ ॥

ನಿಂದಾಪರಾಧ ದು
ರ್ಬಂಧನ ರುಜಾಧಿಗಳ
ದಂದುಗವ ಬಿಡಿಸಯ್ಯ ಬಸವರಾಜ ।
ಹೊಂದದಿರ್ಪ ದುರಾಸೆ
ಯೆಂದೆ ಕೊರಗುವೆನೆನ್ನ
ತಂದೆ ನೀ ಕರಣಿಸೈ ಬಸವರಾಜ ॥ ॥ ೬೨ ॥

ಹೇಸಿ ನರಮಾಂಸ ದು
ರ್ವ್ಯಸನದ ದೇಹವಿದ
ರಾಸೆಯಿಂ ಕೆಡುವೆನೈ ಬಸವರಾಜ ।
ಸೂಸುವ ಮನವ ನಿಲಿಸಿ
ಯಾಸನದಿಯಾದರಿಸಿ
ದಾಸನೆಂದೋವುದೈ ಬಸವರಾಜ ॥ ॥ ೬೩ ॥

ಪಂಚೇಂದ್ರಿಯಂಗಳೊಳು
ಸಂಚರಿಪ ದುರ್ಮನದ
ವಂಚನೆಯ ಪರಿಹರಿಸೊ ಬಸವರಾಜ ।
ವಂಚನಿಲ್ಲದೆ ಮಹಾ
ಪಂಚಾಕ್ಷರಿಯೊಳು ಮನ
ಮುಂಚುವುದ ಮಾಡಯ್ಯ ಬಸವರಾಜ ॥ ॥ ೬೪ ॥

ಜ್ಞಾನದಿಂ ನಿಮ್ಮನುಂ
ಧ್ಯಾನಿಸಿ ಒಲಿಸುವದಕೆ
ನಾನೆಷ್ಟರವನಯ್ಯ ಬಸವರಾಜ ।
ನೀನೊಲಿದು ಕರೆದು ಸ
ನ್ಮಾನದಿಂ ಮೈದಡಹಿ
ಸೂನುವೆಂದೀಕ್ಷಿಸೈ ಬಸವರಾಜ ॥ ॥ ೬೫ ॥

ನಿಮ್ಮ ಜಾನಿಸುವವರ
ಚೆಮ್ಮಾವಿಗೆಗಳ ಕಾ
ಯ್ದುಮ್ಮ ಯದಿ ಬಾಳ್ವೆನೈ ಬಸವರಾಜ ।
ಹೆಮ್ಮೆ ಹ್ಯಾವಗಳಳಿದು
ದಿಮ್ಮಿದಿರ ಸೇವೆಯೊಳು
ನೆಮ್ಮಿರುವವನ ಮಾಡೊ ಬಸವರಾಜ ॥ ॥ ೬೬ ॥

ನಿಟ್ಟಿಸುವ ದುರ್ವೃತ್ತಿ
ಬೇಟದೊಳಿರುವ ಮನದ
ಕೊಟಲೆಯ ಬಿಡಿಸಯ್ಯ ಬಸವರಾಜ ।
ಬೂಟಕರ ನ್ಯಾಯದಿಂ
ಬೇಟದೊಳಿರುವ ಮನದ
ಬೇಟಕವ ಬಿಡಿಸಯ್ಯ ಬಸವರಾಜ ॥ ॥ ೬೭ ॥

ಪರವಸ್ತುಗಳ ನೋಡಿ
ಪರಿಮೋಹಿಸುವ ಮನವ
ಮುರಿದು ನಿಮ್ಮೆಡೆಯೊಳಿಡೊ ಬಸವರಾಜ ।

ಪರಮ ಚಿಜ್ಯೋತಿ ಮಂ
ದಿರದ ಮಧ್ಯದೊಳು ಸಂ
ಚರಿಸುವುದ ಮಾಡಯ್ಯ ಬಸವರಾಜ ॥ ॥ ೬೮ ॥

ಇವ ನಿಮ್ಮ ಸೇವಕನು
ಇವ ನಿಮ್ಮ ಸೇವಕನು
ಇವನಣುಗನೆಂದು ಪೊರೆ ಬಸವರಾಜ ।
ಇವ ನಿಮ್ಮ ಅಣುಗನು
ಇವ ನಮ್ಮ ಅಣುಗನು
ಇವನಣುಗನೆಂದೆನ್ನು ಬಸವರಾಜ ॥ ॥ ೬೯ ॥

ಶಿವಶರಣರಿರುವ ನಿಜ
ಭವನಗಳ ದಾಸಿಯರ
ಕುವರನಂ ಮಾಡಯ್ಯ ಬಸವರಾಜ ।
ಭವಭವಾಂತರದೊಳು
ಧ್ಭವಿಪುದಿರ್ದರೆ ಮುಂದೆ
ಕವಿಯೆನಿಸಿ ಪುಟ್ಟಿಸೈ ಬಸವರಾಜ ॥ ॥ ೭೦ ॥

ಸನ್ನು ತೈನಿಲಯಪುರಿ
ಸನ್ನಿತಾರ್ಯರೊಳು ಪ್ರ
ಸನ್ನನಾಗಿರುವ ಗುರು ಬಸವರಾಜ ।
ಚೆನ್ನವೀರೇಶ್ವರನ
ಹೃನ್ನಳಿನ ಪೀಠದೊಳು
ಸನ್ನಿಹಿತನಾದ ಗುರು ಬಸವರಾಜ ॥ ॥ ೭೧ ॥

॥ **ಕಂದ** ॥

ಎಡರುಗಳಡಸುವ ದುರ್ಭವ
ಜಡನಿಧಿಯೊಳು ಮುಳುಗಿ ತೇಲ್ವ ಜಡಮತಿಯವನಂ
ತಡಿಗೆ ತೆಗೆದೂಡನೆ ಪಾಲಿಸಿ
ಎಡವಿಡದುದ್ಧರಿಸುವುದೈ ನಿಮ್ಮೆಡೆಯಲ್ಲೀ ॥ ೭೨ ॥

ಈ ಬಸವೇಶ್ವರನಾ ರಘ
ಟಾಬಂಧಂ ಭೂಮಿ ಶಂಕರನಾತ್ಮ ಕವೀಂದ್ರ
ಶಾಬಕನು ನುತಿಸಿದಂ ಬಹು
ಶೋಭಮೈದಖಿಳ ಬುಧರು ಸ್ತುತಿಸುತ್ತಿರಲ್ಕೆ ॥ ೭೩ ॥

ಈ ರಗಳೆ ಬರೆದು ಪಠಿಸುವ
ಸೂರತ ಶರಣರ್ಗೆ ಮೋಕ್ಷಸೌಖ್ಯಮದಕ್ಕುಂ
ಸಾರ ಮನದಿಂದ ಕೇಳುವ
ಭೂರಿಜನರ್ಗಗಳಿಗೆ ಶೃದ್ಧಾಭ್ಯುದಯಮದಕ್ಕುಂ ॥ ೭೪ ॥

ಇತಿ ಶ್ರೀ ಮತ್ಕವೀಂದ್ರ ಶಾಬಕ ವಿರಚಿತಮಪ್ಪ
ಬಸವರಾಜ ರಘಟಾ ಪ್ರಬಂಧ
ಪರಿಪೂರ್ಣ ಸಮಾಪ್ತ ಮಂಗಳ ಮಹಾ ಶ್ರೀ ಶ್ರೀ ಶ್ರೀ

♦

ಅದ್ಯಾಯ – ೬

ಗುಣಸಂವಾದ ಭೋಧೆ (ಶೀಶ ಕಮಲ ವೃತ್ತ)

ಶ್ರೀ ಮಹಿಧರಾತ್ಮ ಭವ ಶೃಂಗಾರ ವದನಾಬ್ಜ
ಶ್ರೀ ಮಧುಕರ ದೇವ ಶಂಭುಲಿಂಗಾ
ತಾಮ ರಸಜಾತ ಪಿತಾಂಬರ ಘಡಿಪನುತ
ಸಾಮಗಾನ ಪ್ರಿಯ ಸಚ್ಚಿದಾಂಗಾ
ರಾಮ ಕಂಧರ ಪ್ರತುಳ ರೂಪಾದ್ರಿ ಮಂದಿರ
ಆ ಮಹಾ ಸಾಧು ಜನದಂತರಂಗಾ
ಪ್ರೇಮದಿಂದ್ಯೆನೆಲೆಯ ಪುರಕೇಂದ್ರ ದೇಶಗಿರಿಯ
ಧಾಮನಾಗಿರುವಂತ ಭೋಗಲಿಂಗಾ
ಸಾಯಾಜಾಜಿನ ಧಾರಾ ಸಕಲ ಲೋಕ ವಿಧಾರಾ
ಕಾಯ ಸಂಹಾರ ದೇವನೆ ಕಾಯ ವಿರಹಿತ ಸೋಮಕ ಸುಪ್ರಭಾವನೆ
ಗೋಮಿನೀಪತಿ ದ್ರುಗನೆ ಮದಿ ಪೂಜಿತ
ನೀ ಮರಿಯದಿರು ನಿಗಮಾತುರಂಗ ಕಾಮ ಸಂಹಾರ ದೇವನೆ॥ ೧ ॥

ನಿತ್ಯ ನಿರ್ಮಲ ಮೂರ್ತಿ ನೀನಲ್ಲದಿನ್ನಾರು ಭಕ್ತ
ವತ್ಸಲ ಶೋಕ ಭಯ ವಿನಾಶ
ಸತ್ಯ ಸಜಾನಕೆ ದಯಾಸಾಗರನೆ ನೀ ಯನ್ನ
ಕರ್ತೃ ಶ್ರೀಗುರು ವಭಯಕರ ಮಹೇಶ
ಅತ್ಯಂತ ಕೃಪೆಯಿಂದಲಂತಃಕರುಣವಿಟ್ಟು
ಹತ್ತಿರಕೆ ಬಂದ ಗುರು ಹೃನ್ನಿವಾಸ
ಭೃತ್ಯ ಬಾರೆಂದೆನ್ನ ಬುಲ್ಲವಿಸಿ ನೀ ಕರೆದು
ನೆತ್ತಿ ಮೈದಡಹುತಲಿ ನೆರೆ ವುಲ್ಲಾಸ
ಯಿತ್ತು ಪಾಲಿಪುದೆನ್ನ ಯಿನ ಸುತನ ಮರ್ದನ
ಪ್ರತ್ಯಕ್ಷವಾಗು ಶಂಕರಾ ಪಾವನ
ಮೂರ್ತಿವೆತ್ತು ಸರ್ಪಾಲಂಕಾರ
ಅತ್ಯಧಿಕ ಭವಸುತ್ತಿಕೊಂಡುಯನ್ನತ್ತರಿ ಮಿಸುಕಲೀಯದ ಈಶ ॥ ೨ ॥

ಅಂಬುಜ ಭವಾಂಡಕೆ ಆಧಾರ ನೀನಾಗಿ
ತುಂಬಿ ತುಳುಕು ವಿರಜನ ತೊರೆದಂತೆ
ಯಂಭತ್ತು ನಾಲ್ಕು ಲಕ್ಷ ಸರ್ವಜೀವನಕೆಲ್ಲ
ಯಿಂಬಾಗಿ ಸಲಹುತಾದಿರುವ ಚಿಂತೆ
ನಂಬಿ ಭಜಿಸುವರ ಹೃನ್ನಳಿದ ಪೀಠದಿ ಕುಳಿತು
ಶಂಭು ಭಕ್ತಿಗೆ ಸಿರಿ ಸೇರದಂತೆ
ಕುಂಬಿನ ಮನುಲೋಕದಂತೆ ಕುಕ್ಷದೊಳು ಮುಳುಗಿದೆ
ಬೆಂಬಿಡದೆ ಭಜಕರೊಳು ಬೆರೆದು ಮತ್ತೆ
ತುಂಬಿಸಲಾರೆ ಬಾಧೆ ತಾಪತ್ರಯದೊಳಗಾದೆ
ಸಾಂಬ ನೀನೆನ್ನವಧರಿಸಯ್ಯ ಸರ್ವಾಂತರ್ಯಾಮಿ
ಯೆಂಬ ನಾಮ ನಿಮಗಯ್ಯ ಅಂಬರ ಕೇಶದಿ
ಗಂಬರ ಭಕ್ತ ಕುಟುಂಬನೆ ನಿಮ್ಮೊಳು ಕೂಡುವ ಬ್ರಾಂತಿ
ಸಾಂಬ ನೀನೆನ್ನವಧರಿಸುವಯ್ಯ ॥ ೩ ॥

ಪೂರ್ವಜನ್ಮದ ಅಲ್ಪ ಪುಣ್ಯದ ಬಲದಿಂದ
ಮಾನವನಾಗಿ ಮರ್ತ್ಯಕ್ಕೆ ಬಂದೆ
ಸರ್ವೋತ್ತಮನೆ ನಿಮ್ಮ ಶರಣರಿಗೆ ತಲೆಬಾಗಿ
ಸೊಲ್ಲು ಸೊಲ್ಲಿಗೆ ನಿಮ್ಮ ಸ್ತುತಿಪೆ ತಂದೆ
ಶಾರ್ವ ನಿಮ್ಮಯ ಪದಕೆ ಸೇರಿಸದಿರ್ದೊಡೆ
ಸಾಧುರಾಳಿನ ಮಾಡಿ ಸಲಹು ಮುಂದೆ
ಸರ್ವದಾ ಕಾಲದಲ್ಲಿ ಶಿವ ನಿಮ್ಮ ಭಕ್ತರ
ಸೇವಕನ ಮಾಡಯ್ಯ ಸುಖದಿಂದಲಿಂದೆ
ಊರ್ವಿ ಭೋಗವನೆಚ್ಚಿ ಉಬ್ಬಿ ತಿರುಗಿದೆ ಹೆಚ್ಚಿ
ಪಾರ್ವತಿ ರಮಣ ಪಾಲಿಸೊ ಎನ್ನ
ಪಾಪ ವಿರಹಿತ ಗರ್ವಿತ ಗುಣವನಿವಾರಿಸೋ । ೪ ॥

ಮೇರು ಕಾರ್ಮುಖ ಮಾಡಿ ಮೇಧಿನಿಯ ರಥಮಾಡಿ
ಮೂರು ಪುರಗಳ ಸುಟ್ಟು ಮುರಿಯಂಬತ್ತು
ಶೂರ ದೈತ್ಯಗ ಭೂಮಿ ಚಕ್ರದಲಿ ಮರ್ದಿಸುತ
ಮೂರು ತಲೆಗಳ ಝೇಂಗು ಮಾಡುತ ಬಂತು
ಮೀರಿ ತಿರುಗುತಲಿರ್ಪ ಮೃಗರಾಜರು ವನ

ಸಿರಿಯವನ ವಡಲ ಸೀಳಿ ಬಂತು
ವಾರಿಧಿಯು ಉರಿದೆದ್ದು ವಸುಧಿಯನು ಸುಡುತಿರೆ ಕಿಚ್ಚ
ನಾರಿ ಸುತ ವಿಷವನ್ನು ನುಂಗ ಬಂತು
ಮಾರ ಮರ್ದನ ನಾನು ಮಾಡಿದ ಕರ್ಮವನು
ಹಾರಿಸಲು ನಿಮ್ಮಿಂದಾಗದೆ
ಘೋರ ದುಃಖ ಸಂಸಾರ ಪಾತಕದ
ಬಾರದೆ ಬಳಲುವೆ ಬಳಿಯಲಿ
ನಿಂತು ಹಾರಿಸಲು ನಿಮ್ಮಿಂದಾಗದೆ ॥ ೫ ॥

ಶಿವನಿಂದ ತಾನಿಟ್ಟ ಸ್ತ್ರೀಯಳ ನೆನೆ
ದವಗ ಪಾಲಿಸುತ ನೀ ಪರಮ ಪದವನಿತ್ತೆ
ಭವ ನಿಮ್ಮ ಗುಡಿಯೊಳಗೆ ಭೋಗಿಸಿದ ಬೇಡನಿ
ಗೆವಲಿದು ಸಾಯುಜ್ಯ ಪದವರವ ನಿತ್ತೆ
ಶಿವ ನಿಮಗೆ ಕುರುಡಾದ ಸುದತಿ ಪ
ತ್ರಿವಿಡ್ಯಾಡೆ ನಲಿದು ರೂಪವ ತೋರಿ ನಯನವಿತ್ತೆ
ಆವಗುಣದಳನು ಆ ಹರ ಪ್ರರಂಭುದಕ್ಕೆ
ಜವನ ಭಯವಳಿದವನಿಗೆ ಜಯವನಿತ್ತೆ
ಆವರಂತವ ನಾನಲ್ಲ ಅರಿಯದ ಬಾಲನು
ಭವಕೆನ್ನ ಭರಿಸ ಬ್ಯಾಡಯ್ಯ
ಭವರೋಗ ವೈದ್ಯ ನಿವಡಿಸು ನಿಮ್ಮ ಧರ್ಮವ
ದಿವ ರಾತ್ರಿಯೊಳು ಸ್ತವನವು ನಿಮ್ಮದು
ಭುವಿಯೊಳಗಿನ ಸುಖ ಬಹುವನಿತ್ತೆ
ಭವಕೆನ್ನ ಬರಿಸಬೇಡವೊ ॥ ೬ ॥

ಕಡಲೊಳುದಿಸಿದ ಅಗ್ನಿ ಕಡಲ ನುಂಗುವ ತೆರದಿ
ಎನ್ನ ಮನವೆನಗೆ ವೈರ್‍ಯಾದುದು
ಗಿಡದೊಳುದಿಸಿದ ಕಿಚ್ಚು ಗಿಡವೆಲ್ಲ ಸುಡುವಂತೆ
ಎನ್ನ ಮನವೆನಗೆ ಸುಡುತಲಿಹುದು
ಪಡೆದ ತಂದೆಯ ಕೊಂದ ಬಬ್ರುವಾಹನನಂತೆ
ಎನ್ನ ಮನವೆ ಎನ್ನ ಕೊಲ್ಲುತಿಹುದು
ವಡ ಹುಟ್ಟಿದನುಜರನು ಯಿನಸುತಲೆಂಬಂತೆ

ಎನ್ನ ಮನವೆನ್ನ ಪ್ರಾಣ ತಿನುತಲಿಹುದು
ಜಡಮನಯನ್ನ ದುಜಗೊಳದೆ ನಿಲ್ಲದು
ವಡಿಯ ನಾ ನಿಮ್ಮ ನಂಬಿದೆ
ಒಡ್ಯಾಡುವ ಮನಸು
ಹಿಡಿಲಾರೆ ಬಂದು ನೀ ಬಿಡಿಸೋ
ಕಡುದೋಷಾಂಬುದಿ ನಡುವೆ ಸಿಲ್ಕಿದೆನು
ತಡಮಾಡದೆಲೆ ದಡಕೆ ಸೇರಿಸೋ
ಒಡೆಯ ನಾ ನಿಮ್ಮ ನಂಬಿದೆ ॥ ೭ ॥

ಮನವೆಂಬ ಕಪಿಯಂಗ ಮರನೇರಿ ತಾಕುಳಿತು
ಅಷ್ಟಮದ ಕೊಂಬೆಗಳಿಗರಡುತಿಹುದು
ತನುಮನದ ಚಾಷ್ಟೇಗಳು ತನ್ನೊಳಗೆ ಇರಲಿಕ್ಕೆ
ಅನ್ಯರನು ಕಂಡು ತಾನಣಕಿಸುವದು
ಮನಸೀಜನೆಂದೆಂಬ ಮಗನಾನೆತ್ತಿಕೊಂಡು
ಹಲವು ಕೊಂಬೆಗಳಿಗೆ ಹಾರುತಿಹುದು
ವನಿತೆ ಹೊನ್ನು ಮಣ್ಣುಯೆಂಬ ತ್ರಿಫಲಗಳನು
ಮದದಿಂದ ಸವಿಗೊಂಡು ಮುಲುಗುತಿಹುದು
ಸನುಮತವೆಂದೆಂಬ ಸೈರಣೆ ತೋರುವ
ಅನಘ ನೀವಲ್ಲ ದಾರಯ್ಯ
ಅಂತರಿಸಿ ಪೋಪ ಮನವ ನಿರ್ಮಳ ಮಾಡಯ್ಯ
ಪುನರಪಿ ಮರ್ತ್ಯಕೆ ಜನಿಸದೆ ಸಾಕನು
ದಿನ ನಿಮ್ಮಯ ಪದದಡಿಯಲ್ಲಿರಿಸುವದು
ಅನಘ ನೀವಲ್ಲದಾರಯ್ಯ ॥ ೮ ॥

ಕತ್ತಲಿಗೆ ಸೂರ್ಯ ಮುಂಗಾಣದಿರೆ
ಯದುರಾಗಿ ಬೆಳಗು ತೋರುವರಾರು ಭೂಮಿಯೊಳಗೆ
ಪೊತ್ತವನಿಯನೆ ವಿಷ ಕಪಿಕ್ಷಂದ್ರ ತಲ್ಲಣಿಸಿ
ಮಂತ್ರಿಸುವರಾರುಂಟು ಮಹಿಮೆಯೊಳಗೆ
ಬಿತ್ತರದ ಮಾರುತನ ಬೆವರಕ್ಕೆ ಕಂಡಲಾಪಟ್ಟು
ಬೀಸುವರಾರು ವಸುಧೆಯೊಳಗೆ
ಹೆತ್ತ ತಾಯಿಯ ಮಗನ

ಹತಿಸಿಪಳೆಂದರೆ ನೋಡಿ
ಊರ್ವಿ ಕೊಂಬುವರಾರು ಊರ್ವಿಯೊಳಗೆ
ಕರ್ತೃವೆ ನಿಮ್ಮಲ್ಲಿ ಕರುಣ ತಪ್ಪಿದ ಮೇಲೆ
ಮರ್ತ್ಯರ ಮೊರೆಯ ಹೊಗಲ್ಹೇಗೆ ಮಹಿಮ
ಸತ್ಕೀರ್ತಿಯಲಿನ್ನು ಯಳಿಯ ಬಾಲನಿಗೆ
ಹತ್ತಿದ ಭವಲತೆ ಎತ್ತರಿಸುವ ಸು
ಚಿತ್ತನ ಮಾಡು ಚಿರಕಾಲ್ಯೆನಗೆ
ಯತ್ತಿನ್ನು ಯಳಯ ಬಾಲನಿಗೆ ॥ ೯ ॥

ಸಿಂಧು ಮಾರಳನಂತೆ ಸಿಳಿ ಕಾಯದ ಮಾಂಸ
ಇಂದು ಶೇಖರ ನಿಮಗೆ ಒಯ್ಯಲಾರೆ
ಕಂದುಗೊರಳನ ಬೇಡರ ಕನ್ನಪ್ಪ
ನಂದದಲಿ ನಯನಿಟ್ಟು ಪೂಜಿಸಿ ನಿಲ್ಲಲಾರೆ
ಹಿಂದೆ ಮೃಡ ಬಂಕಯ್ಯ ಹೆಡತಲೆಯ ಕತ್ತರಿಸಿ
ವಲಿಸಿದಂತೆ ನಾವಲಿಸಲಾರೆ

ಅಂದದಿಂದೊಹಿಲನು ಅಂಗಗುಗ್ಗಳ ಮಾಡಿ
ಸ್ಮರಿಸಿದಂತೆ ನಾನು ಸ್ಮರಿಸಲಾರೆ
ಮಂದಾಕಿನಿ ಭೂಷ ಮುಕುಟ ತ್ರೈಜಗದೀಶ
ಮುಂದೆನಗೆ ಆಧಾರ ನೀನೆ ಮೃತ್ಯ ವಿರಹಿತ
ಬಂದು ರಕ್ಷಿಸುಯನ್ನನೆ
ನಂದಿಗಮನ ಸಿತ ಕಂದರ ಚರಣಾರ
ದಿಂದ ಭಜನಿಯ ಬಿಟ್ಟಿರಲಾರೆ
ಮುಂದೆನ್ನಗಾಧಾರ ನೀನೆ ॥ ೧೦ ॥

ಮದನ ವೈರಿಯೆ ನಿಮ್ಮ ಮೂರ್ತಿ ನೋಡುವೆನೆನಲು
ಅಮರ ಪತಿ ಲೋಚನೆಗೆ ಅಳವಲ್ಲವೊ
ಮುದದಿ ನಿಮ್ಮಯ ಪಾದ ಮುಟ್ಟಿ ಪೂಜಿಸೆನಲು
ಅಸುರ ವೈರೋಚಿಸುತಗೆ ಅಳವಲ್ಲವೊ
ಸದಮಲಾಕಾರ ಸ್ತವನ ಮಾಡುವೆನೆನಲು
ಋಷಿಕುಲ ರಾಜನಿಗೆ ಅಳವಲ್ಲವೊ

ಅಧಿಕ ಮಾದ್ಯೈಶ್ವರ್ಯ ಅಡಸಿ ಬೇಡುವೆನೆನಲು
ಅಗಣಿತ ಪ್ರಮಥರಿಗೆ ಅಳವಲ್ಲವೊ
ಪದಿನಾಲ್ಕು ಲೋಕದ ಪತಿ ನೀನೆ ನಾಕದ
ಅಧಿಪತಿ ನಿನ್ನೊಲಿಸಿ ಬಲ್ಲನೆ
ಅದ್ಯ ರಹಿತ ಅಧಮ ನಾನಿಮ್ಮ ಬಲ್ಲೆನೆ
ಪದುಳದಿ ನಿಮ್ಮಯ ಪಾದ ಕಮಲದೊಳು
ಮಧುಕರ ವೆನಿಸಿ ಮರೆಯದೆ
ಸಲಹೊ ಅಧಿಪತಿ ನಿಮ್ಮನೊಲಿಸಬಲ್ಲೆನೆ ॥ ೧೧ ॥

ಭೃಗು ಮೊದಲಾದ ನವ ಬ್ರಹ್ಮರೆಲ್ಲರು
ನಿಮ್ಮ ಮಹಿಮದ ಮರ್ಮವನು ತಿಳಿಯಲಿಲ್ಲ
ಸೊಗಯಿಸುವ ಸಕಲಋಷಿ ಸ್ತೋಮವೆಲ್ಲವ
ನಿಮ್ಮಂತರಾತ್ಮದ ಭೇದವರಿಯಲಿಲ್ಲ
ಅಗಣಿತ ಕೋಟಿ ಜನ ಅಪ್ಪಿದಲಿರ್ದರೂ
ಅಗಣಿತ ಪ್ರಮಥರು ತಿಳಿಯಲಿಲ್ಲ
ಸುಗುಣ ದುರ್ಗುಣ ನಿಮ್ಮ ಸನ್ನಿಧಿಯೊಳಿರ್ದರು
ಸುರರು ನಿಮ್ಮಯ ಸಖವ ತಿಳಿಯಲಿಲ್ಲ
ನಿಗಮಾಗನುಂಗಳಿಗೆ ನಿಲುಕದಾತನು ನೀನು
ಪೊಗಳ ಬಲ್ಲವರಾರಯ್ಯ ಪರಮಾತ್ಮ
ನಿಮ್ಮಬಗೆಯ ಬಲ್ಲವರಾರಯ್ಯ
ಖಗಪತಿ ರಥನಂ ಮೊಗನಿಗೆ ನಿಮ್ಮಡಿ
ಮುಗುಟವು ಸಾದ್ಯನಾಗಲಿಲ್ಲ ಪೊಗಳ ಬಲ್ಲವರಾರಯ್ಯ ॥ ೧೨ ॥

ಯನ್ನ ಖೇದಾಂಬಂದಿಗೆ ಎಲ್ಲ ಕಾರಣ ನೀನೆ
ಪರಮ ಪಾವನ ಭಕ್ತಿ ಪರಿತೋಷನೆ
ಯನ್ನ ಭವ ವೃಕ್ಷಕ್ಕೆ ಯಶವ ಪರಿಸುವ ನೀನೆ
ಸಾಧು ಹೃದಯಾಬ್ಜಕ್ಕೆ ಷಟ್ ಚರಣನೆ
ಯನ್ನ ದುರ್ಗತಿಯ ರಜನಿಗೆಮ್ಮ ತಾತನು ನೀನೆ
ಮಾಂಗಲ್ಯ ಸ್ವರೂಪ ಮಹಿಮ ನೀನೆ
ಯನ್ನ ದುರ್ಗಣ ಗಿರಿಗೆ ಯರಗವ ಪವಿ ನೀನೆ
ಧೀನರಂ ಪೋಷಿಸುವ ದಾತ ನೀನೆ
ಪನ್ನಗಾಭರಣನೆ ಪಾಂಡೋರ ವರ್ಣನೆ

ಬನ್ನ ಬಡಿಲಾರೆನು ನಾನು ಭವಕಂಜಿ
ಬಂದು ನಿಮ್ಮ ಮೊರೆ ಹೊಕ್ಕೆನಯ್ಯ
ಇನ್ನು ಸನ್ನುತ ಮೂರ್ತಿ ಉನ್ನತ ತವಪದ
ಸನ್ನಿಧಿಲಿರಿಸ್ಯೋ ಬನ್ನ ಬಡಲಾರೆ ನಾನು ॥ ೧೩ ॥

ಎಸೆವ ದೃಡ ಭಕ್ತಿ ಯಿಂದೆಂಬ ಹೆದೆಯಲಿ
ಬಿಗಿದು ಬಾಗಿಸಿ ಮನವೆಂಬ ಬಿಲ್ಲನೆ ಮಾಡಿ
ಮಿಸುಪ ನಿರಾರ್ಥಕ್ಕೆ ಮೀರಿರ್ದ ಶಿವಮಂತ್ರ
ಸ್ಮರಣೆಯಂಬ ಲಲಿತ ಶರವ ಹೂಡಿ
ಅಸಮನಘ ಶಕ್ತಿಯಂದಾರೂಢ ನಾಗುತ್ತ
ಗುಣವಜಂಗೈವುತಲಿ ಗುರಿಯನೊಡ್ಡಿ
ಮುಸುಕಿಕೊಂಡಿಹ ಪಾಪವೆಂಬುವ ವೈರಿಗಳನು
ಹತ್ತಿರಕೆ ಬಾಗೊಡದೆ ಹತವ ಮಾಡಿ
ಲಸಿತ ಶ್ರೀ ಪರಂಜ್ಯೋತಿ ರಮ್ಯ ಶ್ರೀ
ಪುಣ್ಯಮೂರ್ತಿ ದೇಶಿ ನೀನೆ ನಿನ್ನೊಳು ನಾನೆ
ಧನ್ಯ ನಮೃತ ಸುಖದ ರಸನುಂಡು ನಾಶವೆಂದೆನೆ
ಶಶಿರವಿ ತೇಜದ ವಿಸರದ ಗೃಹದೊಳು
ವಶವಾಗುವ ಸ್ಥಿರ ವರವನುಲಿದೆ ದೇಶಿ ನೀನೆ ನಿನ್ನೊಳು ನಾನೆ ॥ ೧೪ ॥

ಕವಿಕುಲ ಶಿರೋರತ್ನ ಕಾಳಿದಾಸನು ನಿಮಗೆ
ನೇತ್ರವನು ಯಿರಿಸುತ ನಿತ್ಯನಾದ
ಕವಿ ಭೀಮ ಮಲುಹಣರು ಕೆರಿಯ ಪದ್ಮರಸರು
ತವ ಭಜಿಸಿ ಕಂಡರು ತವ ಶ್ರೀ ಪಾದ
ಕವಿ ಸೋಮರಾದ್ಯರು ಕೇಶಿರಾಜರು ನಿಮ್ಮ
ಸ್ತುತಿ ಮಾಡಿ ಪಡೆದರು ಸುಖ ವಿನೋದ
ಕವಿಬಾಣ ತನ್ನೆರಡು ಕರವ ಖಂಡಿಸಿ ನಿಮಗೆ
ನಿಜದಿಂದ ಧರಿಸುತಲಿ ನಿತ್ಯನಾದ
ಅವರಂತವ ನಾನಲ್ಲ ಅರಿಯದ ಬಾಲನು
ಕವಿ ಎಂದು ಬಂದು ಮನ್ನಿಸೋ
ಕಾರುಣ್ಯ ನಿಧಿಯೆ ಭವ ನಿಮ್ಮ ಬಳಿಗೆ

ಸೇರಿಸೋ ಭುವನದೊಳ್ಳೈನೆಲೆ ಭವ
ಚನ್ನವೀರೇಶ ಈ ಶೃತಿ ಕವಿ
ಗುಣ ಸಂವಾದ ಭೋದಾ ಕವಿ ಎಂದು ಬಂದು ಮನ್ನಿಸೂ ॥ ೧೫ ॥

◆

ಅಧ್ಯಾಯ ೭ – ಅಷ್ಟಕಗಳು

೧. ಪಾದಾಷ್ಟಕ

ಪಾಹಿ ಗುರುಪಾದಮಾಂ ಪಾಹಿ ಶಿವಪಾದಮಾಂ
ಪಾಹಿ ಚರಪಾದಮಾಂ ಪಾದ ಪಾಹಿ ॥ ಪಲ್ಲವಿ ॥

ವಂದಿತಜನಾನಂದ ಸಿಂಧುರಾಕೇಂದು ಪಾದ
ಸಿಂಧುರಾನನಜನಕ ಪಾದ ಪಾಹಿ
ಮಂದರಧರಾಧರ ಸುಮಂದಿರಸ್ಥಿತ ಪಾದ
ಮಂದಪಿತೃಪಾದ ಜಿತಪಾದ ಪಾಹಿ ॥ ೧ ॥

ಅಂಧಕಾಸುರದಳನ ಸುಂದರ ಶ್ರೀ ಪಾದ ಪು
ರಂಧರಾತ್ಮಜ ಶರದ ಪಾದ ಪಾಹಿ
ಅಂಧಕಾರಾರಿ ಮುಖವಂದಿತಾತುಳ ಪಾದ
ಬಂಧುರಾನಂದಯುತ ಪಾದ ಪಾಹಿ ॥ ೨ ॥

ಯತಿವಿತತಿ ಹೃದ್ವಿರಾಜಿತ ಪದ ಶ್ರೀ ಪಾದ
ವಿತತ ಸತ್ಕೀರ್ತಿಯುತ ಪಾದ ಪಾಹಿ
ಪ್ರತಿರಹಿತ ವಿದ್ವದ್ವಿತತಿ ವಿವರ್ಣಿತ ಪಾದ
ಶತಮುಖ ಮುಖಾರ್ಚಿತ ಸುಪಾದ ಪಾಹಿ ॥ ೩ ॥

ಸತ್ಯಪದ ಶೃತಿತತಿ ಸ್ತುತ್ಯ ಪದ ಪಂಚ ಸ
ತ್ಕೃತ್ಯಪತಿ ಪದ ನಿತ್ಯಪಾದ ಪಾಹಿ
ವಿತ್ತಪತಿಮಿತ್ರ ಪದ ಮೃತ್ಯು ಹರಪಾದ
ನಿರ್ಮತ್ತಜನ ನಿಕಟಸ್ಥ ಪಾದ ಪಾಹಿ ॥ ೪ ॥

ಕಮಲೇಶುಹರ ಪಾದ ಕಮಲರಿಪುಧರ ಪಾದ
ಕಮಲೇಶನುತಿ ಪಾತ್ರ ಪಾದ ಪಾಹಿ

ಯಮಲ ಯುಗಲನುತಾ ವಿಮಲ ಕೋಮಲಪಾದ
ಯಮಕುಮುದ ಕುಮುದಾರ್ಕ ಪಾದ ಪಾಹಿ ॥ ೫ ॥

ಶಂಕರ ಶ್ರೀಪಾದ ಕಿಂಕರಪ್ರೀಯ ಪದವಿ
ಶಂಕರಪಾದ ನಿಶಂಕ ಪಾದ ಪಾಹಿ
ಪಂಕರುಹನಾಭನಯನಾಂಕಿತಕನತ್ಪಾದ
ಪಂಕ ಪಂಕೇಜ ಗಜಪಾದ ಪಾಹಿ ॥ ೬ ॥

ಪನ್ನಗ ಸಪತ್ನರಜಗನ್ನಯನನಯನ ಪದ
ಪನ್ನಗ ವರಾಭರಣ ಪಾದಪಾಹಿ
ಸನ್ನುತ ಸುಜನತತಿ ವಿಪನ್ನಗ ಸ್ವರೂಪದ ಜ
ಗನ್ನಾಥ ನಾಥವರ ಪಾದ ಪಾಹಿ ॥ ೭ ॥

ಮನ್ನಾಥಪಾದ ಶ್ರೀಮನ್ನಿರಂಜನ ಪದಲ
ಸನ್ನಿರಾಮಯ ಮಹತ್ಪಾದ ಪಾಹಿ
ಚೆನ್ನಿಲಯ ಪಾದ ಗುರು ಚೆನ್ನವೀರೇಶನಪದ
ಉನ್ನತೋನ್ನತ ಲಸತ್ಪಾದ ಪಾಹಿ ॥ ೮ ॥

ಕಂದ :–

ಇಂತೀಅಷ್ಟಕದಿಂ ಪದ
ಮಂ ಸ್ತುತಿಸುತೆ ಭಜಿಪ ಸದ್ಭಕ್ತರ ಪದಮಂ ಬಿಡ
ದಾಂತುತಿಪ ಮನವನೆನಗತಿ
ಸಂತಸದಿಂದಿತ್ತು ಸಂಹ್ಯೈ ಸದ್ವಿರೇಶ । ೯ ॥

೨. ದೇವಿ ಅಷ್ಟಕ

ಶ್ರೀ ಸದಾಶಿವಾಸ ಕೃದ್ವಿರಾಶಿ ಕಾಶ ವಾಸಿ ದಿವ್ಯ
ಭಾಸುರಾಸ್ಯೆ ಕಾಶರೂಪ್ಯ ಗೋಸುವಾಸಿ ಭವ್ಯಳೆ ಕು
ಶೇಶಯಾಸ ನೈಕ ಶ್ರೀಶವಾಸ ವಾರ್ಚ್ಚಿತಾಂಘ್ರಿ ಯುಗ್ಮೆ
ದೋಷ ಖೇದನಾಶಳೆ ಮಹೇಶ ಪ್ರಿಯೆ ಮಾಮವಾ ॥ ೧ ॥

ವಾಣಿ ಶಾರ್ಙ್ಗರಾಣಿ ಜಿಷ್ಣರಾಣಿ ಹಂಸರಾಣಿ ರಾಜಿ
ತೇಣ ಲಕ್ಷರಾಣಿ ದಿವ್ಯಶ್ರೇಣಿ ಪೂರ್ಣ ವಂದ್ಯಳೆ ಕೃ
ಪಾಣ ತೂಣ ನೂನ ಬಾಣ ಪಾಣಿ ಮಂಜು ವಾಣಿ ಶಾಂತ
ಪಾಣಿ ಭೋಗಿ ವೇಣಿ ಸಂಪ್ರವೀಣೆ ಗೌರೆ ಮಾಮವಾ ॥ ೨ ॥

ಪತ್ರ ಚೈತ್ರ ನೂತ್ನ ಸತ್ಕಳತ್ರೆ ಕುಂಜ ನೇತ್ರೆ ಕಾಳೆ
ಪತ್ರ ಗೇಂದ್ರ ಪತ್ರ ಪುತ್ರ ಪತ್ರ ಪುತ್ರಿ ಸೇವಿತೆ ಸು
ಮಿತ್ರೆ ಪುಣ್ಯಗಾತ್ರೆ ಕುಂಭಿಗೋತ್ರ ಪತ್ರ ಪುತ್ರೆ ಸಪ್ತ
ಮಾತೃಕಾ ಸುಮಿತ್ರೆ ಸಿತಗೋತ್ರ ಪುತ್ರೆ ಮಾಮವಾ ॥ ೩ ॥

ಮಾರ್ವರದ್ರ ಹರ್ವ ತುಂಡ ಗೀರ್ವರೇಜ ವಾರ್ವರೇಕ್ಷ
ಖರ್ವ ನರ್ವ ಪೂರ್ವಗಾನ ಪ್ರಿಯೆ ಸರ್ವಮಂಗಳೆ
ಮೊರ್ವ್ವಿ ದ್ರೈಜ ಪೂರ್ವಜಾ ಹಿಮೌತಾರ್ವಿವಾರ್ವ್ವ ಹಾರ್ದ ಬರ್ಹಿ
ಪೂರ್ವ್ವದೇವ ಗರ್ವದೊರೆ ಶರ್ವಪ್ರಿಯೆ ಮಾಮವಾ ॥ ೪ ॥

ಸ್ಥೂಲ ಕೂಲ ಸುಪ್ರವಾಲ ವ್ಯಾಲ ವ್ಯಾಲ ಡೋಲಕಾಲ
ಗೋಲ ಲೋಲ ವಕ್ತ್ರಶಕ್ತಿ ಜಾಲಯುಕ್ತ ರೌದ್ರಳೇ ಕ
ರಾಳ ಕಾಲ ರಕ್ತ ಬೀಜ ವ್ಯಾಲ ಶುಂಭ ವ್ಯಾಲ ದೈತ್ಯ
ಜಾಲಕ ಪ್ರಮೂಲ ಭೇಧ ಶೂಲಿ ಪ್ರಿಯೆ ಮಾಮವಾ ॥ ೫ ॥

ಕ್ಷೀರೆತಾರೆ ತಾರಕಾ ತುಷಾರ ಕಂಬು ಸಾರ ಸಾರಿ
ಸಾರ ಶಂಬ ಸಾರ ಗೌರ ಮಂದಹಾಸ ವಕ್ತ್ರಳೇ ಮ
ಯೂರ ವಾರಿದಾರ್ಯಮಾ ಕುಮಾರಿ ಭೂಧರಾರಿ ರತ್ನ
ಸಾರ ನೀಲ ಸಾರಳೇ ಕುಮಾರ ಮಾತೆ ಮಾಮವಾ ॥ ೬ ॥

ಸಾಧು ಮೋದ ಪಾಟಲೀ ಪ್ರಮೋದ ಪಾರಿಜಾತ ಜಾತಿ
ಶೇದ ಶಂಭವಾದಿ ಸ್ರಗ್ವಿರಾಜ ಮಾನವಕ್ಷಳೆ ಶು
ಭೋದಯಾದಿ ಶಕ್ತಿ ಚಂದನೋದಯೆಂಬು ಜಾಮರಂದ
ಶ್ರೀದಘು ಸ್ರುಣಂಗ ಶೋಭಳೆ ಭವಾನಿ ಮಾಮವಾ ॥ ೭ ॥

ಶೌರ್ಯ ಧೂರ್ಯ ಶಕ್ತಿ ವರ್ಗ ವರ್ಯ ನಿರ್ವಿಕಾರ್ಯದುಷ್ಟ
ಕಾರ್ಯಗಾರ್ಯ ಮಾ ಜಜಿತ್ತೈಕ್ರುಷ್ಣ ಸಂಪದ್ಯೆನೆಲೆ ನಿ
ಕಾರ್ಯ ಶುಕ್ರ ವೀರ್ಯ ಚೈತ್ರ ವೀರ್ಯ ಹೃತ್ಸರೋಜ ಫುಲ್ಲ
ಸೂರ್ಯ ಚನ್ನವೀರಣಾರ್ಯ ಪ್ರಿಯೆದಾರ್ಯೆ ಮಾಮವಾ ॥ ೮ ॥

೩ . ಶಿವಾಷ್ಟಕ

ಶ್ರೀಕರೇಕ ಸಾಕ ರೋಕ ನಾಕ ಪಾಲ ನಾಕವಾಲ
ನೇಕ ಲೋಕ ರಕ್ಷಕಾ ಪರಾಕೃಪಾಬ್ಧಿ ಸಾರ ಸೂಸು
ಧಾರಕಾ ಕಲಾ ಕಲಾಪ ಪ್ರಾಕಟಾಂಗ ಕೋಕ ಸಂಗ
ಪಾಕ ಚೈತ್ರ ಪಾಕಚೈತ್ರ ಪುತ್ರ ವಂದ್ಯ ಪಾಹಿಮಾಂ ॥ ೧ ॥

ರಾಮಧಾಮ ಹೈಮ ನಿರ್ಜರಾಮ ಹೀಜ ಗೋಮಹಾ ಬ್ರ
ಸಾಮಜಾಮರಾಹರಾಬ್ದಿ ಸೋಮ ಪಾಂಡುರಂಗ ಭಾಸ
ಧಾಮಹೀಂದ್ರಜಾ ಮನೋಜ್ಞ ಭೀಮ ಬಂಧನಾ ಮಯಾದ್ರಿ
ಗೋಮಹಾಮರಾರಿ ಕೃತ್ಯ ಭಿತ್ಯ ನಿತ್ಯ ಪಾಹಿಮಾಂ ॥ ೨ ॥

ಧೀನಯಾನ ದಾನವಾರ ಯೇನಕಾನ ತಾನ ಘಾಗ್ನಿ
ಭೇನ ಭೇನ ಗೋನ ಮೀನನೂನ ಸಾನ ಮಾನಿತ ಘೃ
ಣಾನ ದೀನ ದೀನ ಸಾದ್ಯ ಶ್ರೀನ ಸೂನುದಾನ ಭೇದ್ಯ
ಹಾನಿಗೇನಲಂಕರೇನ ರೇನಮಿತ್ರ ಪಾಹಿಮಾಂ ॥ ೩ ॥

ವಾತಭೂತ ಗೀತ ಪ್ರೀತಶೂತಕಾತಿಧೂತ ಪೂತ
ಭೂತನಾಥ ಶಾತ ಕುಂಭರೇತ ರೇತ ಶಾರದ ಬಾ
ನಾಥ ಭೀತಿ ಹೋತ್ರ ಖಾಂಬಿ ಭೂತಲಂಬು ಜಾತಯೋತ
ವಾತ ಸಾತ್ಮ ಸರ್ವದಾ ಸಮೇತ ಗಾತ್ರ ಪಾಹಿಮಾಂ ॥ ೪ ॥

ಬಾಪಕೋಟಿ ಗೋಪ್ರಕಾಶ ಗೋಪಚಾಪ ತಾಪನಾಪ
ಹಾಪ ಜಾಲ ಯೋಪರೋಪ ಪಾಪ ಪಂಕ ಗೋಪತಿ ಕೃ
ಪಾಪ ಶಾಪನಾಶ ನೋಪ ತಾಪ ದೇಪದಾಪ ಧೀಶ
ಲೋಪ ಲೋಪ ಮುದ್ರಿಕಾಂತ ಗೋಪವಾಹ ಪಾಹಿಮಾಂ ॥ ೫ ॥

ಮಾಂಗ ಜಾಂಗನ ಪ್ರಸೇವ್ಯ ತುಂಗ ಗೋಶ ತಂಗ ಸೂಷ
ಡಂಗ ಸುಪ್ಲವಂಗ ಭಂಗ ಮಾಲಿಭಾ ನಿಷಿಂಗದೋರ್ಲ
ತಾಂಗ ಜಾ ಪ್ರಭಂಗ ಮಂಗಲಾಂಗ ಸಚ್ಚಿದಾಂಗ ಫಾಮ
ತಂಗ ಪಿಂಗ ಲೋಚನಾ ಕುರಂಗ ಪಾಣಿ ಪಾಹಿಮಾಂ ॥ ೬ ॥

ಅಕ್ಷರಕ್ಷ ರಂಗ ಸೂಕ್ಷ್ಮ ಲಕ್ಷಣಕ್ಷ ಚೈತ್ರ ಪೇಕ್ಷ
ಪಕ್ಷ ಪಕ್ಷಗೇಂದ್ರಗಾಕ್ಷ ಲಕ್ಷಪಾದ ಮೋಕ್ಷ ಧಾಮ
ಮೋಕ್ಷ ಲಕ್ಷ ರುಕ್ಷ ಸ್ರಗ್ವಿದಕ್ಷ ದಕ್ಷ ದಕ್ಷ ಮನ್ಯು
ಪಕ್ಷಯಾಕ್ಷ ವೃಕ್ಷಕಾಶಿ ದೃಕ್ಷರೂಪ ಪಾಹಿಮಾಂ ॥ ೭ ॥

ಈಶ ಮೋರಜಾತ ಜಾತ ಸಾರದೋರುಗಾರಿ ತುಂಬ
ರೋರುಗಾದಿ ಸಾರಗೇಯ ಹಾರಚೇತ್ಯೈನೆಲೆಯ
ಗಾರ ಶೂರ ತಾರಕಾರಿ ವಾರಣಾಸ್ಯ ವೀರತಾತ
ಸಾರ ಭಕ್ತ ಪ್ರೀಯ ಚೆನ್ನವೀರಣಾರ್ಯ ಪಾಹಿಮಾಂ॥ ೮ ॥

೪. ಶ್ರೀ ಖಟ್ವಾಂಗ ದೇವರಾಷ್ಟಕ

ಶ್ರೀಮಹಾ ಮೃತಾನಂದ ಶುಭಕರ ಶಿಷ್ಟಮಯಾಬ್ಧಿ ಹಿಮಕರ
ಕಾಮ ವಿರಹಿತ ಕಲುಷ ವೇದನ ಕಾಲಕರ್ಮ ವಿಭೇದನ
ರಾಮಣೀಯಕ ಮೂರ್ತಿ ಪೂಜಿತ ರಾಜಮಂತ್ರವ ಕವಿ ವಿರಾಜಿತ
ಸ್ವಾಮಿ ಶ್ರೀ ಖಟ್ವಾಂಗದೇವಾ ಸಮವ ನಿತ್ಯ ಕೃಪಾನಿಧೇ ॥ ೧ ॥

ವಿತತ ಭೂರುದ್ರಾಗ್ರಣ್ಯ ವಿಶೃತಾಮಲ ಪ್ರತಿವರೇಣ್ಯ
ಪ್ರಥುಳ ಸಜ್ಜನ ಭಯ ವಿಮೋಚನ ಪೂಜ್ಯ ಕರುಣಾಲೋಚನ
ಅತುಳ ಶಿವಲಿಂಗಾರ್ಚನೋತ್ಸುಕ ಅಖಿಳ ಮುದ್ರಾವೇದ್ಯ ಚಿತ್ಸುಖೀ
ಸತತ ಮನ ಖಟ್ವಾಂಗ ಶ್ರೀಗುರು ಸಾರ ನಿತ್ಯ ಕೃಪಾನಿಧೇ ॥ ೨ ॥

ಪರಮ ಲಿಂಗೈಖ್ಯಾನುಭಾವಾ ಪರತರಾತ್ಮ ಚಿತ್ಪ್ರಭಾವ
ನಿರಘ ನಿಶ್ಚಲ ನಿರ್ವಿಕಾರ ನಿರುಪಮಾಧಿಕ ಶ್ರೀಕರಾ
ಕರುಣಗುಣ ವಿಜಿತಾಪ್ರಮೇಯಾ ಕನದಸಮ ಕವಿಜನ ನಿಕಾಯ
ಸ್ಫುರಿತ ಖಟ್ವಾಂಗೇಶ ಜಯ ಪರಿಪೂರ್ಣ ನಿತ್ಯ ಕೃಪಾನಿಧೇ ॥ ೩ ॥

ಲೋಕಪಾವನ ಶೀಲ ಭಾಶ್ವಿತ ಲೋಲುಭಾತ್ಮಸುದೂರ ಶಾಶ್ವತ
ಭಕರಾಮಯ ವಿಘ್ನ ಸುಹರ ಖೇಮ ಭಾವ ಪರಾತ್ಪರಾ
ಏಕನಿಷ್ಟಲಿಂಗ ವಿಗ್ರಹ ಯೋಗ ಪಥ ಸಖ ವಿಗ್ರಹಾರಾ
ನಾಕಪ ಖಟ್ವಾಂಗೇಶ ಮಾಮವ ಸಾದ್ಯ ನಿತ್ಯ ಕೃಪಾನಿಧೇ ॥ ೪ ॥

ವೀರಶೈವವಾಚಾರ ಭೋಧಕ ವಿಮಲ ಷಟ್‌ಸ್ಥಲ ಪದ ವಿಚಾರಕ
ಭೂರಿ ಭಕ್ತೋದ್ಧಾರ ಸನ್ನುತ ಬುಧ ಜನಾವಳಿ ಸನ್ನುತಾ
ತಾರಕಾದಿ ಶೃತಿ ವಿಸಾದಕ ತನು ಗುಣೋದ್ಭವ ವಿಷಯ ಭೇದಕ
ಪರ ಖಟ್ವಾಂಗಾರ್ಯ ಮಾಮವವಿತ್ತ ನಿತ್ಯ ಕೃಪಾನಿಧೇ ॥ ೫ ॥

ಪ್ರಮಥಗಣ ಮುನಿ ಪ್ರಚಯ ನಾಯಕ ಪ್ರಕಟಿತಾಧಿಕ ಶಾಂತಿ ನಾಯಕ
ವಿಮತ ಕೃತ ದುರ್ಮತ ವಿಭಾಂಜನ ವಿದ್ಯದಂಗ ನಿರಂಜನಾ
ಅಮಿತ ಬ್ರಹ್ಮಾಕಾರ ಸಂಮ್ಮಿಳಿತಾತ್ಮ ಸಂಯುತ ಕುಸುಮಾಯಾವಳೀ
ದಮಿತ ಖಟ್ವಾಂಗೇಶ ಮಾಮಾಮವದೇತ ನಿತ್ಯ ಕೃಪಾನಿಧೇ ॥ ೬ ॥

ಪೂತ ಮೂಲ ಪ್ರಣವ ರೂಪಕ ಪೂರಿತಾ ಭವ ಮತ ಸ್ಥಾಪಕ
ಪಾತಕ್ಕೋತ್ಕರ ತಿಮಿರ ಭಾಸ್ಕರ ಪದನಿಯುತ ಪದ ಪುಷ್ಕರಾ
ದ್ಯೂತ ಚಿನ್ಮುದ್ರಾನೀರೀಕ್ಷಣದ್ಯೋಗತಿರ್ಮಯ ಭವ್ಯ ಲಕ್ಷಣ
ಜಾತ ಖಟ್ವಾಂಗಾರ್ಯ ವರ್ಯಾ ಜಯತು ನಿತ್ಯ ಕೃಪಾನಿಧೇ ॥ ೭ ॥

ಪೋನ್ನತಾಖಿಳ ಭಕ್ತಪಾಲಕ ಪೂರ್ಣ ಸೀಮಾ ಧೂರ್ಯ ಬಾಲಕ
ಚನ್ನಬಸವೇಶ್ವರ ಮನೋಂಬುಜ ಚಾರು ಸದನ ಸುದಾರ ಮೃಜ
ಸನ್ನತಪ್ರತಿಮಾನ ಬಂಧುರ ಸಾರ ಶೂಲಿಗ್ರಾಮ ಮಂದಿರ
ಎನ್ನ ಖಟ್ವಾಂಗೇಶ ಸಮ ವಮದೀಶ ನಿತ್ಯ ಕೃಪಾನಿಧೇ ॥ ೮ ॥

ವಿಧಿತ ಖಟ್ವಾಂಗೇಶ ರಕ್ಷಕ ವಿವರದಿಂ ಬರೆದೋದಿವವರಿಗೆ
ಪದ ಮುಕ್ತೈಶ್ವರ್ಯ ಯುಮತಿ ಸಂಪದಗಳೊದವಿಸಿ ಸಂತತಂ
ಸದಮಲೈನಿಲಯಾರ್ಯ ಗುರುವರನೇದ್ಯ ಶ್ರೀ ಭೂರುದ್ರಶೇಖರ
ನಧಿಕ ವೀಕ್ಷಿಸಿ ರಕ್ಷಿಸುವ ನಿದನಂಘವದು ಸಿದ್ಧಾಂತವೂ ॥ ೯ ॥

೫. ಮಹಾದೇವ ಅಷ್ಟಕ

ಶ್ರೀಮದನುಪಮಮೂರ್ತಿ ಶ್ರೀಗೌರೀಶನಂ ಮಹೇಶನಂ
ಸಾಮಜಾಜಿನ ವಸನ ಶೋಭಿತ ಗಾತ್ರನಂ ನುತಿಪಾತ್ರನಂ
ವ್ಯೂಮಕೇಶ ಭವಾಬ್ಧಿ ಬಡಬಾಗ್ನಿಸುಂದರಂ ವಿಷಕಂಧರಂ
ಸ್ವಾಮಿ ಶ್ರೀಮಹಾದೇವ ಭಜೇ ಅವರಾದಿವಾಸ ಕೃಪಾನಿಧಿ ॥ ೧ ॥

ಸದಮಲಾತ್ಮಕ ಸಕಲ ಪ್ರಮಥನಾಥನಂ ವಿಖ್ಯಾತನಂ
ಅದಿತಿನಂದನ ವಿನಮಿತಾಂಘ್ರಿ ಕಮಲನಂ ವಿಮಲನಂ
ಮದನ ಮರ್ದನ ಕಾಲಭಂಜನ ಶೂರನಂ ಗಣಸಾರನಂ
ಅಧಿಪ ಶೀಮಹಾದೆವ ಭಜೇ ಅವರಾದಿವಾಸ ಕೃಪಾನಿಧಿ ॥ ೨ ॥

ನಿಗಮ ಶಾಸ್ತ್ರಾಗಮಗಳಿಗೆ ನಿರ್ಭೇದ್ಯನಂ ಬಹುಚೋದ್ಯನಂ
ಭಗಣಪತಿ ಮಾರ್ತಾಂಡ ಪಾವಕನೇತ್ರನಂ ಅಘಜೈತ್ರನಂ
ಖಗಗಮನ ಶತಧರ್ಮ ಕಮಲಜ ಘೋಷನಂ ಪರಿತೋಷನಂ
ಸುಗುಣ ಶ್ರೀಮಹಾದೇವ ಭಜೇ ಅವರಾದಿವಾಸ ಕೃಪಾನಿಧಿ ॥ ೩ ॥

ಸಿಂಧೂ ಶರಧಿ ಕನಕಭೂಧರ ಚಾಪನಂ ಹರರೂಪನಂ
ದಂದಶೂಕಗುಣಂ ಶೃತಿಚತುರಶ್ವನಂ ಸಪ್ತಾಶ್ವನಂ
ಚಂದ್ರ ಚಕ್ರಧರಿತ್ರಿರಥ ಪುರಮಥನನಂ ಕೃತವರ್ಧನಂ
ರುದ್ರ ಶ್ರೀ ಮಹಾದೇವ ಭಜೇ ಅವರಾದಿವಾಸ ಕೃಪಾನಿಧಿ ॥ ೪ ॥

ದಾರುವನ ಮುನಿನಿಕರದೊಳು ಸಂಚಾರನಂ ಗಂಭೀರನಂ
ಚಾರು ಯಮಿಜನ ಸ್ತ್ರೀಜನೌಘಂ ಭಂಜನಂ ನಿರಂಜನಂ
ವಾರಿಧಿಯ ಮಧ್ಯದೊಳು ಸ್ವರ್ಗಂ ಪಾಲನಂ ಗುಣಮಾಲನಂ
ಧೀರ ಶ್ರೀಮಹಾದೇವ ಭಜೇ ಅವರಾದಿವಾಸ ಕೃಪಾನಿಧಿ ॥ ೫ ॥

ಅಮರವಾಹಿನಿ ಮಂಡನಂ ಕೋಟಿರನಂ ಭವದೂರನಂ
ದಮನರೇತಾನಂತ ಭುವನಂ ರಕ್ಷನಂ ಜಿತಾಕ್ಷನಂ
ಕಮನೀಯ ಹಿರಮಣಕುಲ ವಿಭೂಷಣಂ ಭಯ ಭೀಷಣಂ
ಅಮಲ ಶ್ರೀ ಮಹಾದೇವ ಭಜೇ ಅವರಾದಿವಾಸ ಕೃಪಾನಿಧಿ ॥ ೬ ॥

ಧಾತ ಮಸ್ತಕನಾಶ ದಕ್ಷನಯಾಗದವಿಬ್ಧಾಗದ
ಜಾತವೇದಾಚ್ಯುತ ಬಿಡೌಜ ಮುನಿಕುಲಂ ಸುರಜನಕುಲಂ
ಭೀತೆಗೊಳಿಸುತ ಸಕಲ ದ್ವಿಜಕುಲನಾಶಂ ಮಹಾಧೀಶನಂ
ನಾಥ ಶ್ರೀಮಹಾದೇವ ಭಜೇ ಅವರಾದಿವಾಸ ಕೃಪಾನಿಧಿ ॥ ೭ ॥

ಪರಮ ಭಕ್ತರಪಾಲ ದುರಿತ ವಿಚ್ಛೇದನಂ ವಿನೋದನಂ
ಪರಿಶೋಧಿಸುವೈನೆಲೆಪುರ ನಿಜವಾಸನಂ ಉಲ್ಲಾಸನಂ
ವರ ಶ್ರೀಗುರು ಚನ್ನವೀರದೇವನಂ ಮಜ್ಜೀವನಂ
ಸ್ಫುರಿತ ಶ್ರೀ ಮಹಾದೇವ ಭಜೇ ಅವರಾಧಿವಾಸ ಕೃಪಾನಿಧಿ ॥ ೮ ॥

೬. ಕರಿಬಸವೇಶ್ವರ ಅಷ್ಟಕ

ಶ್ರೀ ಮದನುಪಮ ಧರ್ಮರೂಪ ವಿಶಿಷ್ಟ ಗುಣನಿಧಿ ನಂದಿಕೇಶ್ವರ
ಮಾಮಕ ಸ್ವಾಂತಂಬುಜಾಂಬರಮಣಿ ಸನಾಥನ ಸರ್ವಾಂಗ
ಕಾಮರಹಿತೈನಿಲಯ ಪಶ್ಚಿಮಕಕುಭಸೀಮಾತರ ಸಂಸ್ಥಿತ
ಮಾಮಕ ವಟವಿಟಪಿ ಮಂದಿರ ಮಹಿತ ಕರಿಬಸವೇಶ್ವರ ॥ ೧ ॥

ಮೂಲಮೂರ್ತಿ ಮಹೇಶ ಪಶುಪತಿ ಮುನಿಶಿಲಾದಾತ್ಮಜಸನಕ ಗುರು
ಕಾಲಹರ ವೃಷಭೇಂದ್ರ ಕಾಪಲಿ ಕಲ್ಪವಿರಹಿತ ಚಿನ್ಮಯ
ಬಾಲಭಯ ನಿರ್ಧೂತ ರರ್ಜರ ಜಾಲಪಾಲನ ಶೀಲ ಸತತಂ
ಪಾಲಯ ವಟವಿಟಿಪಿ ಮಂದಿರ ಪರಮ ಕರಿಬಸವೇಶ್ವರ ॥ ೨ ॥

ರಾಜರಾಜ ಸಮಸ್ತ ಜಗದಾರಾಧ್ಯ ಹೃದ್ಯಸುವಿದ್ಯ ಶುಭಗೋ
ರಾಜ ಬಸವಾಹ್ವನು ತಪೋಧನ ರಾಜರಾಜಿತ ವಿಗ್ರಹ
ಭೂಜನೋದ್ಧಾರಕ ಪರತರ ಬುಧವರೇಣ್ಯ ಸುಪುಣ್ಯ ಮಾಮಕ
ಮಾಜಹರ ವಟವಿಟಪಿ ಮಂದಿರ ಮಾನ್ಯ ಕರಿಬಸವೇಶ್ವರ ॥ ೩ ॥

ಸರ್ವತೋಭದ್ರ ಪ್ರತಿಮ ಗಣಸಾರ್ವಭೌಮ ಸುಭಕ್ತವಸ್ತಲ
ಸರ್ವ ಸೂತ್ರಾಧಾರ ನಿರುಪಮ ಸತ್ಯಶಾಂತಿ ಗುಣಾನ್ವಿತ
ಧರ್ಮ ದುರಿತಾತಂಕ ಸಂಹರ ದುವ್ಯಸನ ವಿಷಯಾಬ್ಧಿ ಬಡಬಾಗ್ನಿ
ಸರ್ವದಾ ವಟವಿಟಪಿಮಂದಿರ ಸಮವ ಕರಿಬಸವೇಶ್ವರ ॥ ೪ ॥

ಮಾನಿತ ಪ್ರಮಥಾಧಿನಾಯಕ ಮಂಗಳಾಕರ ಲೋಕರಕ್ಷಕ
ದಾನವೇಶ್ವರ ದರ್ಪನಾಶನ ದಾರುಣಾಘ ವಿಸೂದನ
ಭಾನುಕೋಟಿ ವಿಕಾಸಗಾತ್ರ ಸುಭಾವಸಜ್ಜನಮಿತ್ರ ಸದಂಬ
ದೀನಹಿತ ವಟವಿಟಪಿ ಮಂದಿರ [ವಿನೀತ] ಕರಿಬಸವೇಶ್ವರ ॥ ೫ ॥

ಸಾರ------ ಮುಕ್ತಿದಾಯಕ ಸಕಲ --- ವಿಚೇತನ
ವೀರಶೈವಾಚಾರ್ಯವಾರ್ಧಿಯ ವಿಧ --- ದಿಂಧಾರ್ತಿ
ಸಾರ ಸಚ್ಚರಿತಾತ್ಮ ನಿರ್ಮಲ ---ಸಾಮ್ನಾಯಾರ್ಥ ಸಮವತು
ವೀರವರ ವಟವಿಟಪಿ ಮಂದಿರ ವಿದಿತ ಕರಿಬಸವೇಶ್ವರ ॥ ೬ ॥

ಶಮಿತ ಪಂಚೇಂದ್ರಿಯ ಗುಣಾವಳಿ ಶರಣ ಮಾನಸ ಶರಣ ಪರತರ
ವಿಮಲ ಪಂಚಪ್ರಣವ ಮನುಮಯ ವಿಶ್ವಭರಿತ ನಿರಾಮಯ
ದಮಿತ ಮತ ---ರಸಾಮಂಜರ ---------
ವಿಮತ ಘನ ವಟವಿಟಪಿ ಮಂದಿರ ವಿಶದ ಕರಿಬಸವೇಶ್ವರ ॥ ೭ ॥

ಅತುಳ ಲಿಂಗಾಂಗೆ --- ಅತಿಶಯಾತ್ಮ ವರಪ್ರದ----
ಪ್ರಥಿತ ಶಿವಲಿಂಗಾರ್ಚನೋತ್ಸುಕ ಪ್ರಕಟಿತಾಮಳ ಗುಣನಿಧಿ
ವಿತತ ವಿಶ್ವಾಕಾರ ಶಿವ ಸುಕವೀಂದ್ರ ಶಾಬಕ ಹೃತ್ಸದನಯುತ
ಸತತಮವ ವಟವಿಟಪಿ ಮಂದಿರ ಸಾರ ಕರಿಬಸವೇಶ್ವರ ॥ ೮ ॥

ಈ ವಟದ್ರುಮಧಾಮ ಕರಿಬಸವೇಶ್ವರನ ವಿಪುಲಾಷ್ಟಕಂ ಸ
ದ್ಭಾವದಿಂ ಬರೆದೋದಿದವರಿಗೆ ಭಕ್ತಿಯಿಂ ಕೇಳಿದವರಿಗೆ
ಪಾವನೈನಿಯಾರ್ಯ ಪರಮಕೃಪಾಬ್ಧಿ ಮದ್ಗುರು ಚನ್ನವೀರೇಂದ್ರನೊ
ಳಾವಗಂ ನೆಲಸಿಹ ವನುದ್ಧರಿಪನು ಮಹಿತ ಕರಿಬಸವೇಶ್ವರ ॥ ೯ ॥

೭. ಮಹಾಲಿಂಗಾಷ್ಟಕ

ಮಹಾಲಿಂಗ ಪೂಜೆ ಮಾಡಿದವರಿಗೆ ಮೋಕ್ಷಮಹುದು
ಮಹನೀಯ ಭಕ್ತಿಯನುಳ್ಳ ಮನದಿಂ
ಮಹಾಲಿಂಗ ಪೂಜೆ ಮಾಡಿದವರಿಗೆ ಮೋಕ್ಷಮಹುದು ॥ ಪ ॥

ಕಾರುಣ್ಯವಂತಿಕಾ ಮಹಾಕಾಳ ನಾಮದಲಿಂಗ
ಸೌರಾಷ್ಟ್ರ ಸೋಮನಾಥಲಿಂಗ । ಮಹಾ ॥ ॥ ೧ ॥

ಕೇವಲ ಮಹಾಹಿಮಾದ್ರಿ ಕೇದಾರೇಶ್ವರಲಿಂಗ
ಕಾವೇರಿ ತಟದೋಂಕಾರಲಿಂಗ । ಮಹಾ ॥ ॥ ೨ ॥

ವ್ಯಾಳಂಕ ಸಿಂಹ್ವಾದ್ರಿ ತ್ರಿಯಂಬಕನಾಥ ಲಿಂಗ
ಯೋಳಾಪುರಿ ಘೋಸ್ಮೇಶ್ವರ ಲಿಂಗ ॥ ಮಹಾ ॥ ॥ ೩ ॥

ಪರ್ಯಾತ್ಮ ಸೌಜ್ಞಾನಗರಿ ವರ ನಾಗನಾಥಲಿಂಗ
ಪರ್ಯಾಳಿ ವೈಜನಾಥಲಿಂಗ । ಮಹಾ । ॥ ೪ ॥

ಭೀಷಣ ಡಾಕಿಣಿ ಭೀಮಾಶಂಕರ ಲಿಂಗ
ಶ್ರೀಶೈಲ ಮಲ್ಲಿಕಾರ್ಜುನ ಲಿಂಗ । ಮಹಾ । ॥ ೫ ॥

ಪತಿಹೋತ್ರಾಕ್ಷ ಕಾಶಿ ವಿಶ್ವನಾಥಖ್ಯ ಲಿಂಗ
ಸೇತು ಬಂಧ್ಧ ರಾಮೇಶ ಲಿಂಗ । ಮಹಾ । ॥ ೬ ॥

ಶ್ರೀ ಶುಕಮುನಿ ಪುರಾಣದಿ ಶಿಷ್ಟದ್ವಾದಶ ಲಿಂಗಗಳ್
ಭಾಸುರ ಮಹಿಮೆಯ ಪೇಳ್ದರಿದೊ । ಮಹಾ ॥ ೭ ॥

ಭೂತದೊಳು ವಿಬ್ರಾಜಿಸುವ ಭೂರಿ ಮಹತ್ವ ದ್ವಾದಶ
ಜ್ಯೋತಿರ್ಲಿಂಗಗಳ ನಂಬಿ ನೆನೆದು ॥ ಮಹಾ ॥ ೮ ॥

ಪ್ರಕಟಿತೈನಿಲಯ ಪುರಿಯ ಪ್ರಭು ಚೆನ್ನವೀರೇಶ್ವರನ
ಸುಕವೀಂದ್ರ ಶಾಬಕ ವಾಕ್ಯವಿದೆಂದು । ಮಹಾ ॥ ॥ ೯ ॥

೮. ಬಸವರಾಜ ದಯಾನಿಧಿ ಅಷ್ಟಕ

ಶ್ರೀಮದನುಪಮ ಮೂರ್ತಿ ಶಂಕರ ಸಾಮಗಾನ ವಿನೋದನೆ
ತಾಮರಸಭವ ದಿವಿಜನಾಥ ಮುರಾಂತಕಾರ್ಚಿತ ಪಾದನೆ
ಸಾಮಜಾಜಿನ ವಸನ ಭಾಸ್ವತ ರಾಮಕಂಠ ನಿರಾಮಯ
ಸ್ವಾಮಿ ಸತತಂ ಪಾಹಿ ಶ್ರೀಗುರು ಬಸವರಾಜ ದಯಾನಿಧಿ ॥ ೧ ॥

ನಿಗಮದೂರ ಸುಧೀರ ವಿಕ್ರಮ ನಗಶರಾಸನ ಹಸ್ತನೆ
ಅಗಣಿತ ಪ್ರಮಥಾಗ್ರಗಣ್ಯ ಸುಶೀಲಜನ ಮಂದರನೆ
ತ್ರಿಗುಣವಿರಹಿತ ತತ್ತ್ವರೂಪಕ ಅಘಸಮೂಹ ಘಟೋದ್ಭವ
ಭಗಣಪತಿಧೃತ ಪಾಹಿ ಶ್ರೀಗುರು ಬಸವರಾಜ ದಯಾನಿಧಿ ॥ ೨ ॥

ಸಚ್ಚರಿತ ಸಕಲಾಗಮನುತ ನಿಶ್ಚಲಾತ್ಮಕ ನಿರುಪಮ
ದುಶ್ಚಿಂತ ಜನದೂರ ದುರ್ಗತಿವಾರಿವಾಹ ಪ್ರಭಂಜನ
ಸಚ್ಚಿದವಿರಳ ರೂಪ ನಿತ್ಯವಿಯಚ್ಚರಾರ್ಚಿತ ಭವ್ಯನೆ
ಸ್ವಚ್ಛಶೀಲನೆ ಪಾಹಿ ಶ್ರೀಗುರು ಬಸವರಾಜ ದಯಾನಿಧಿ ॥ ೩ ॥

ಅಮರಗಣ ಮುನಿನಿಕರ ನಿರ್ಜರ ಸಮುದಯಾರ್ಚಿತ ದೇವನೆ
ಪ್ರಮಥರುದ್ರ ಸನತ್ಕುಮಾರವಿತಾನ ನತಯುಗ ಚರಣನೆ
ಕಮಲ ಮಾರ್ಗಣ ಕಾಯಕಾನನ ದಮುನ ಕಾಲಗಭಿದುರನೆ
ಅಮಿತ ಮಹಿಮನೆ ಪಾಹಿ ಶ್ರೀಗುರು ಬಸವರಾಜ ದಯಾನಿಧಿ ॥ ೪ ॥

ಅಸದೃಶಾಚ್ಯುತನನಘ ನಿರ್ಮಳ ಸ್ವಸಮಯಾಬ್ಧಿ ಸುಧಾಕರ
ಸ್ವರ್ಶನಸಖ ಹಿಮಕರ ದಿವಾಕರ ನೇತ್ರ ಸತ್ಯ ಕೃಪಾಕರ
ಅಸುರಮದಮರ್ಧನ ವಿಶಾರದ ವಿಸರ ಪರಿಪಾಲನ ವಿಭೋ
ವಿಶದಗಾತ್ರನೆ ಪಾಹಿ ಶ್ರೀ ಗುರು ಬಸವರಾಜ ದಯಾನಿಧಿ ॥ ೫ ॥

ವಿಜಿತ ಕರಣೇಂದ್ರಿಯ ಕದಂಬನೆ ಭುಜಗ ಕುಂಡಲ ಕಂಕಣ
ಸುಜನ ಹೃದಯಾಂಭೋಜ ವಿಕಸಿತ ಚಕ್ರಾವಾಕ ವಿಬಾಂಧವಾ
ರಜತ ಶೈಲಾಗಾರರಾಜಿತ ಕುಜನದರ್ಪ ನಿವಾರಣ
ವಿಜಯವರದನೆ ಪಾಹಿ ಶ್ರೀ ಗುರು ಬಸವರಾಜ ದಯಾನಿಧಿ ॥ ೬ ॥

ದುಷ್ಟ ಸಂಸ್ಕೃತಿಕಾಷ್ಠ ಪಾವಕ ಶಿಷ್ಟಜನ ಪ್ರತಿಪಾಲಕ
ಇಷ್ಟಲಿಂಗ ಪ್ರಲೀನ ಮಾನಸ ತೇಜಪುಂಜ ಕಲೇವರ
ಸುಷ್ಟುಗುಣನಿಧಿ ವೀರಶೈವಾಭಿಷ್ಟ ಫಲದಾಯಕ
ನಿಷ್ಠಜನಸಖ ಪಾಹಿ ಶ್ರೀ ಗುರು ಬಸವರಾಜ ದಯಾನಿಧಿ ॥ ೭ ॥

ವಾರ್ಯ ಶಿವಮತವರ್ಧನೈಕಾಚಾರ್ಯ ಚಿನ್ಮಯ ಚಿತ್ಸುಖಾ
ಧೂರ್ಯ ಯೋಗಾಕರ ನಿರಂತರ ಸ್ವಾನುಭಾವ ಪ್ರಪೂರಿತಾ
ತೂರ್ಯಾತೀತಾನಂದ ಚಂದ್ರಮ ಸೂರ್ಯಕೋಟಿ ಪ್ರಭಾನ್ವಿತ
ವೀರವಿಜಿತನೆ ಪಾಹಿ ಶ್ರೀಗುರು ಬಸವರಾಜ ದಯಾನಿಧಿ ॥ ೮ ॥

ಪರಮ ಶ್ರೀ ಕಲ್ಯಾಣ ಭಾಗದಿ ಮೆರೆವ ಹುಲಸೂರೆಂಬುವ
ಪುರನಿಲಯ ದಶದಿಗ್ಭರಿತ ಸತ್ಕೀರ್ತಿ ಶರಣ ಜನೋತ್ತಮ
ಸುರಚಿರೈನೆಲೆ ಸದನನಾತ್ಮದಿ ನಿರುತ ಪ್ರಜ್ವಲಿಸುತ್ತಿಹ ಚನ್ನ
ವೀರೇಶ್ವರನೆ ಮಾಂ ಪಾಹಿ ಶ್ರೀ ಗುರು ಬಸವರಾಜ ದಯಾನಿಧಿ॥ ೯ ॥

ಬಸವಾಷ್ಟಕ

ಬಸವರಾಜ ಪಾಲಿಸಯ್ಯ
ಬಸವರಾಜ ಪಾಲಿಸಯ್ಯ ॥ ಪ ॥

ಸ್ಮಿತಮುಖದಿ ಶಿವನು ಬಂದು ಸತಿಯ ಬೇಡಲಾಗ ನಗುತೆ
ಹಿತದಿ ನೀಲಲೋಚನೆಯನು ಕೂಡಲು ಶಯನದಿ
ಪೃಥುಕನಾಗಿ ಮೊಲೆಯನುಣಲು ಕುತುಕಮೆನುತೆ ಮೈಯ್ಯದಡಕ್ಷಯ
ಅತುಳ ಧೊಳತನವನೆ ಗೈದು ಬಸವರಾಜ ಪಾಲಿಸೈಯ್ಯ ॥ ೧ ॥

ಚಿತ್ತರದೊಳು ಜಂಗಮಾಕೃತೆತ್ತಿ ಬೆರೆದೆನೆಂದು ಮುನಿದು
ಬಿತ್ತಿ ಕೆಡೆಸಿರೆಂದು ಬಿಜ್ಜಳಾಂಕನುಸುರಲು
ಚಿತ್ತ ವಂದುರ್ ಬಂದು ಚರರ ಮೊತ್ತಮ್ಯಾಲ ಕೂಡಿಕೊಂಡು
ಗೊತ್ತಿಗೊಯ್ದು ಸತ್ಕರಿಸಿದ ಬಸವರಾಜ ಪಾಲಿಸಯ್ಯ॥ ೨ ॥

ಓರ್ವ ಜಂಗಮ್ಯಯ್ಯ ಬರುತಲೂ ಸರ್ವೇಶನ ಸತಿಯ ಬೇಡ ।
ಸರ್ವರರಿಯಹಾಂಗೆ ಕೊಡಲು ಬಿಜ್ಜಳೇಂದ್ರನು
ಕೊರ್ವಿಯಿಂತ್ತ ಕೃತ್ಯಗೈದ ಸರ್ವಮೆಚ್ಚನೆನ್ನಲು ಕೇಳಿ
ಪೂರ್ವರೂಪ ಸತಿಯ ನಿತ್ತ ಬಸವರಾಜ ಪಾಲಿಸಯ್ಯ ॥ ೩ ॥

ಕೃತ್ತಿಮದಲಿ ಜೈನರೊಂದು ಪ್ರಥ್ಥಳಿಯನೆ ಮಾಡಿನ್ಯರೆದು
ಸತ್ತನೈಯ್ಯನೆಂದು ಸಲಗಿಯಲ್ಲಿ ಮಲಗಿಸಿ
ಪೊತ್ತುಕೊಂಡು ತರಲು ಪ್ರಾಣವಿತ್ತು ಬೌದ್ಧ ಜನ ಮುನಿಗಳ
ಗೊತ್ತಿಗೊಯಿದು ಸತ್ಕರಿಸಿರ ಬಸವ ಪಾಲಿಸಯ್ಯ ॥ ೪ ॥

ಗೋಡಿಯಲ್ಲಿ ಬರೆದ ಚಿತ್ರವನೋದಿಯದರ ಫಲಗಳೆಲ್ಲ ।
ಬೇಡ xxಳೀಯ ರುದ್ರ ನುಡಿಗೆ ದೊಡೆಲು ಚೆಲ್ಲತೆ ॥

ಚೆನ್ನಬಸವ ಮಡಿವಳಯ್ಯಮಾದಿ ಮುಖ್ಯರು
ಉನ್ನತೇಳ್ನೂರು ಎಪ್ಪತ್ತು ಬಸವನೊಡಸಿರುವರು
ಮುನ್ನ ಪರುಷಾಯತವ ಪಿಡಿದು ಬಸವರಾಜರು
ತನ್ನ ಲಿಂಗದೃಷ್ಟಿಯಿಂದರಿದು ಪವಾಡ ಮೆರೆದರು ॥ ೬ ॥

ಭೂರಿ ಪವಾಡಗಳಿಂದ ಮೂರು ಪಟ್ಟಣವನಾಳಿದಂ
ಕ್ರೂರ ಜೈನ ಮತವಗೆಲಿದು ತನ್ನ ಲೀಲೆ ತೋರಿದಂ
ಮಾರಹರನ ಭಕ್ತನಂ ಬಿಜ್ಜಳಾಂಕನು ನೋಯಿಸಿದಂ
ಧೀರ ಬಸವ ಕೇಳಿ ತನ್ನಗಣಕ್ಕೆ ಸಾರಿ ದೂರಿದಂ ॥ ೭ ॥

ಕೆಟ್ಟ ಬಿಜ್ಜಳನಿಗೆ ಕುಟ್ಟಿರೆಂದು ಹೇಳಿ ವೊಮ್ಮೆಗೆ
ಬಿಟ್ಟು ಕಲ್ಯಾಣದಿಂ ಗಣರು ಸಂಗಮೇಶ್ವರನಲ್ಲಿಗೆ
ಮುಟ್ಟಿ ನಮಿಸಿ ಬೆರೆದ ಸಂಗಮೇಶ್ವರನಲ್ಲಿಗೆ
ಒಟ್ಟು ಗಣರು ಕೂಡಿ ತಾವು ಹೋದರಾಗ ಉಳವಿಗೆ ॥ ೮ ॥

ಇಂತು ಮಹಾಬಸವ ಮಹಿಮಷ್ಟಕವ ತಿಳಿವುದು
ಮುಂತೆ ಬರೆದು ಪಠಿಸಿದವರ್ಗೆ ಸೌಖ್ಯಕೊಡುವುದು
ಅಂತಕಾರಿ ರೂಪ ಐನೆಲೆ ಕರಿಯಬಸವನ ಪದವಿದು
ಚಿಂತಿ ರಹಿತರಾಗಿ ನೆನೆದು ಚನ್ನವೀರೇಶನ ಕೂಡಿದುದು. ॥ ೯ ॥

ಅಧ್ಯಾಯ – ೮.
ಸ್ತೋತ್ರಗಳು
೧. ಶಂಭುವಿನ ಕಂದ

ಶ್ರೀಗುರು ಶಿವ ಮೃಡ ಶರ್ವ
ಬೋಗೇಂದ್ರನ ಕಂಕಣ ಭಾಳನೇತ್ರಂಭವಾ ।
ರೋಗಂಭೇಷಿಜ ಭಮಂ ।
ಆಗಮ ಶೃತಿ ತತಿ ದೂರಂ ಶಂಭೋ ಮಾಂ ಪಾಹಿ॥ ೧ ॥

ಪುರಹರ ಸುರಜನ ವಿನುತಂ
ಸ್ಮರಹರ ಶಂಪಾಲನವಿನ ಗಾನವಿಲೋಲಂ
ಮಿರುಗುವ ಪಿರೆರುಚಿಗಾತ್ರಂ
ಸರಸಿಜ ಭವಶಿರ ಧ್ರುತಕರ ಶಂಭೋ ಮಾಂ ಪಾಹಿ ॥ ೨ ॥

ವೃಷಭರೂಢಂಭರ್ಗಾ
ರುಷಕೇತನ ದಾಹನಂ ಸಂಜೀವನಂ ।
ಶಶಧರ ಹವಿರವಿ ನೇತ್ರಂ
ದಶಸುಪ್ರವೇಷಿತ ವಿಷಗಳ ಶಂಭೋ ಮಾಂ ಪಾಹಿ ॥ ೩ ॥

ಅಚ್ಯುತನ ಜನಮರೇಂದ್ರಂ
ಆರ್ಚಿತ ನಿರ್ಮಲ ದ್ವಂದಂ ಚರಣಾರವಿಂದಂ ।
ನಿಶ್ಚಲ ನಿರುಪಮ ಶಿವ ಸ
ಪ್ತಾರ್ಚಿತ್ಸುರೇತನೆ ಶಂಕರ ಶಂಭೋ ಮಾಂ ಪಾಹಿ ॥ ೪ ॥

ತಾರಕ ಜಿತುತಾತಂ ವೃಂ
ದಾರಕ ಪತಿನುತಂ ನಿತ್ಯ ಪಾವನ ಚರಿತಂ ।
ಘೋರ ಘದರ ಸಂಜಾತ ಕು
ಠಾರಕ ಮಖರಿಪು ದೇವನೆ ಶಂಭೋ ಮಾಂ ಪಾಹಿ ॥ ೫ ॥

ಬೇಡಿ ಕೈಗಳಿಂದೆ ಕಡಿದು ನಾಡೆ ಘಾಸು ಕದಳಿ ಪೂವ
ನೀಡಿ ಅವರ ಕಳುಹಿಸಿಕೊಟ್ಟ ಬಸವ ಪಾಲಿಸಯ್ಯ ॥ ೫ ॥

ಮತ್ತೆ ಬಿಜ್ಜಳಂಕ ಮಣ್ಣಿನೆತ್ತು ಸಭೆಗೆ ತರಿಸಿ ತೊಗಲ ।
ಪೊತ್ತು ಶಿವನ ವಾಹನವಿದು ನೋಡುತಿರೇಕೆ
ಮುತ್ತಿಕೊಂಡು ಜನರೊಳೆಸುವನೆತ್ತು ನಡೆಸಿ ಹರನ ಬಳಿಗೆ
ಚಿತ್ತವಿಟ್ಟು ಕಳಿಸಿಕೊಟ್ಟ ಬಸವ ಪಾಲಿಸಯ್ಯ ॥ ೬ ॥

ಮಿತ್ತವೆಲ್ಲ ಜಂಗಮಕ್ಕೆ ವಿತ್ತ ಪಡಕ್ಷರಿ ಮಂತ್ರ
ವೆತ್ತಿ ಬರೆದನಿಂದು ಲೆಕ್ಕ ಕೇಳಿರೆನಲಿಕ್ಕೆ
ಹತ್ತು ದಿವಸ ರವಿಯ ನಿಲಿಸಿ ವೆತ್ತರಿಸಿದ ವೋಲಗದೊಳು
ವಿತ್ತ ಲೆಕ್ಕ ಒಪ್ಪಿಸಿದ ಬಸವರಾಜ ಪಾಲಿಸಯ್ಯ ॥ ೭ ॥

ಚಿತ್ತರದೊಳು ಬರೆದ ತಾಪಸೂತ್ತಮನಿಗೆ ಜೀವ ವಿಹುದೆ
ಚಿತ್ತರಿಸುವದೆಂದು ನೃಪತಿ ಕೇಳುತಿರಲಿಕೆ
ವತ್ತಿಲಿರುವ ಜಿನ ಮುನಿಗಳ ಮೊತ್ತಮದಿರಲ ವನಿಗೆಸುವ
ನಿತ್ತುಮಹೋದಯದಿ ಮ್ಯರೆದ ಬಸವರಾಜ ಪಾಲಿಸಯ್ಯ ॥ ೮ ॥

ಮುನ್ನೆ ಮಹಾ ಪ್ರಳಯದೋಳು ಜಗನ್ನಿಚಯ ಚರಾಚರಗಳ
ನಿನ್ನ ಒಡಲೋಳಿಟ್ಟು ಸಮುದ್ಧರಿಪ ಸಂತತಂ ॥
ಸನ್ನುತೈನಿಲಯ ಪುರೇಂದ್ರ ಚನ್ನವೀರಣಾರ್ಯನ ಮಾ
ಹೊನ್ನೆಳಿನದಿ ಪೊಳವುತ್ತಿರ್ದ ಬಸವರಾಜ ಪಾಲಿಸಯ್ಯ ॥ ೯ ॥

♦

ಅಂಗಜರಿಪುಯೀಶಂ ಮಾ
ತಂಗ ಜನವಸನಂ ಭಕ್ತ ಕರುಣಾರಸನಂ ।
ತಂಗದಿರಂತೆ ಜಂ ಸಾ
ರಂಗಂ ಶಯಭಿವಮದ್ಗುರು ಶಂಭು ಮಾಂ ಪಾಹಿ ॥ ೬ ॥

ಶ್ರೀ ಪದದ್ರುತ ಪಾದಂ
ಗೋಪನ ಕಂಶಕಲ ಪಾಣಿ ಸುಜನ ವಿನೋದಂ ।
ತಾಪಸ ಮುನಿಸುತಂ ಶೈಲಂ
ಚಾಪ್ಮಚಲ ಭವೆಯರಿಯನೆ ಶಂಭೋ ಮಾಂ ಪಾಹಿ ॥ ೭ ॥

ಅಹಿಪತಿ ಕುಂಡಲ ಧರನೆ
ಬರ್ಹಿಮುಖ ತುಂಬರ ನಾರದ ತುರಂಗ ಮುಖಭಿ
ಮಹಿತಂ ಪಣಿಗರ ಗ್ರೀವಂ ।
ಮಹಿಧರ ನಿಲಯನೆ ಶಂಕರ ಶಂಭೋ ಮಾಂ ಪಾಹಿ ॥ ೮ ॥

ವಿಶ್ವಂಭರ ಪ್ರಿಯ್ಯಂಸ
ಪ್ರಾಶ್ವಂ ಹಿಮಕರ ಕೋಟಿಭಾಸ ಮುಕುಟಂ ಮಾ ।
ಹೇಶ್ವರ ಗಣವರಂ ಗುಹ್ಯ
ಕೇಶರ ಮಿತ್ರನೇಶ್ವರ ಶಂಭೋ ಮಾಂ ಪಾಹಿ ॥ ೯ ॥

ಸಾಲಾಕ್ಷಂ ವ್ಯಘ್ರಜಿನಂ
ಚೇಲಂ ಭಕ್ತಪಾಲ್ಮ ಹಿಮಾವತಿ ಲೋಲಂ ।
ಕಾಲಂದಕ ತಿಮಿರಾಂಶು
ಮಾಲನೆ ಗರಗಳಂಗೆಳಿರಳನೆ ಶಂಬೋ ಮಾಂ ಪಾಹಿ ॥ ೧೦ ॥

ಕುಂಜರ ಮುಖ ಪಿತ ದುರಿತಂ
ಭಂಜನ ಭವರುಗ್ವೈದ್ಯನೆ ಶ್ರೀಕಂಠ ಮೃ।
ತ್ಯುಂಜಯನಭ ಕಚ ಶೂಲಿನಿ
ರಂಜನ ಮಹಿಮ ಹರಂಜಿನೆ ಶಂಭೂ ಮಾಂ ಪಾಹಿ ॥ ೧೧ ॥

ನಿಜಕರವರ ಪರವಗೆಯಂ
ಅರ್ಜುನ ಚಾರುವರ್ಷಾಂ ಭವಾರಣ್ಯದಾವ ।

ಊರ್ಜಿತ ಶರಣರ ಭಯ ವಿ
ವರ್ಜಿತ ದರ್ಪಕದುರ್ಜಿತ ಶಂಭೋ ಮಾಂ ಪಾಹಿ ॥ ೧೨ ॥

ಅಂಬರಕೇಶ ಮಘೊಬ್ಧಿ
ಕುಂಭಜರುಜ ಪಂಕ ಭಾನು ಭಕ್ತ ಮಯಾರ ಕಾ ।
ದಂಬಿನಿ ಭವಗಿರಿ ಕುಲಿಶಂ
ಶಂಭರವಗೆಯಂ ವಗೆಯನೆ ಶಂಭೋ ಮಾಂ ಪಾಹಿ ॥ ೧೩ ॥

ಧಾತನ ಶಿರಭಿತ್ಮಕರಂ
ಕೆತನ ತನುಭಸ್ಮಲೇಪಂ ಕಲೆವರ ತ್ರೈಜುಗ ।
ಚ್ಪೇತನ ಪೃಥುನಗಧನು ನಿ
ರ್ಭಿತನೆ ಚಂಡಿಕನಾಥನೆ ಶಂಬೋ ಮಾಂ ಪಾಹಿ ॥ ೧೪ ॥

ಮಂಧರ ಧರನತ ಚರಣಾರ
ವಿಂದಂ ಶಿಶಿರಾಂಕ ಪಂಕಜಾಪ್ತಸು ತೇಜಂ ।
ಮಂದಾಕಿನಿ ಜೂಟಂ ವಿಷ
ಕಂಧರ ಭೂಧರ ಮಂದಿರ ಶಂಭೋ ಮಾಂ ಪಾಹಿ ॥ ೧೫ ॥

ಮಖಪರ ಫಣಿ ಮಾಲಂಶತ
ಮಖಪರ ಮೇಷ ಮುರಾಂತಕ ಕೋಟಿ ಪ್ರಬೆಮಣಿ ಮ ।
ಮುಖ ಶಿಖ ಘಟಿತಂ ಪದಶರ
ಮುಖ ಸತ್ತ್ರಮಥರ ವರದಂ ಶಂಭೋ ಮಾಂ ಪಾಹಿ ॥ ೧೬ ॥

ಆಗಭವೆ ಪ್ರಿಯಂ ಘನತ
ರಫಲತ ಕಿಸಲಿಯ ಕುಡಿಯಂ ಕೇವಲ ವಿತ್ರಂ ।
ನಘಜನ ಪೋಷನೆ ಪುಷಂ
ಭಗಗೊಡೆಯನೆ ಸಂಕಾಶನೆ ಶಂಭೋ ಮಾಂ ಪಾಹಿ ॥ ೧೭ ॥

ಗಜಧನುಜನ ಮದ ನಾಶಂ
ವೃಜಿನಂ ವಿಶ್ವಂಬರ ಹಲಂ ಪ್ರಮಥೆಶಂಭವ
ಕುಜ ಮಾಲಂ ಕುದ್ದಾಲಂ ।
ಭುಜಧವ ಕಂಕ್ಕಾಳಂ ಕರ ಶಂಭೋ ಮಾಂ ಪಾಹಿ ॥ ೧೮ ॥

ತಾರಾದ್ರಿಯ ನಿಲಯಂ ದಯ
ಪೌರವಾರಂ ಸದ್ಭಕ್ತಾವಳಿ ಹೃತ್ಕುಮುದ
ಕೊರಕ ಹಿಮಕರ ಬಿಂಬಂ
ಮಾರಂತಕ ಸುರಶೇವಿತ ಶಂಭೋ ಮಾಂ ಪಾಹಿ ॥ ೧೯ ॥

ಘಮ್ಮಾಕಜಕಂ ಜಾಲಯಧವ
ಭರ್ಮೊಡಲಂ ನತಚರಣಂಬುರಹಂ ಮುರುನಗ ।
ಕಾರ್ಮುಖ ಪರಮಾನಂದನೆ
ನಿರ್ಮಯ ನಿತ್ಯನೆ ನಿಜಗುರು ಶಂಭೋ ಮಾಂ ಪಾಹಿ ॥ ೨೦ ॥

ಕುಳಿರ್ವೆಟಣುಗೆಯ ಯರಿಯಂ
ದಳಿರಂ ಜಟದಪ್ಪಕವಗೆಯ ಖಳದೆಲೆಮಾಲ ।
ದಳಿದ ಮರಗೊಳಗಂಣಿಂ
ಗಳದಿಂ ಮುಪ್ಪಳಲುರಿಪಿದ ಶಂಭೋ ಮಾಂ ಪಾಹಿ ॥ ೨೧ ॥

ದೊವಲುಡಿಯನೆ ದಲೆಯಾರಂ
ದಿವಿಜಾಪ್ಸರಯಕ್ಷ ಸ್ತುತ ಕಲ್ಮಷ ಘನಚಯ॥
ಪವಸಂಪ್ರಮಥರಿಗೆ ಕಲ್ಪ
ಭುವಿಜಂ ಪಿರಿತಿನಿಯಾಳ್ಮಂ ಶಂಭೋ ಮಾಂ ಪಾಹಿ ॥ ೨೨ ॥

ವಸುಸಾಗರ ದ್ರುಗ ರಂದ್ರಂ
ಶಶಿ ಭಜುಶರ ವಕ್ತ್ರಂ ದುರ್ಜಟಿ ಗಜಗಾತ್ರಂ ।
ರಸ ಮುಖ ಪುರವಪುತಾತನೆ
ವಸುಮತಿ ಶ್ರುತಿ ಶರಧರ ಹರ ಶಂಭೋ ಮಾಂ ಪಾಹಿ ॥ ೨೩ ॥

ಕವಿಜನ ಮನಾಶತ ಪತ್ರಂ
ಸವಿತಂ ಕವಿಗುಣವೆಂಬಾ ಸಸಿಗೆ ಘನ ವರುಷಂ ।
ಕವಿಮತಿ ಶರಧಿಗೆ ಚಂದ್ರಂ
ನವೀನ ಜ್ಞಾನ ಮುಪಿನರ್ಚಿಸಿ ಶೂಭೋ ಮಾಂ ಪಾಹಿ ॥ ೨೪ ॥

ಧರಣಿಗೆ ವರಮೆನೆ ಪುಣ್ಯಂ
ಗರವೈನೆಲೆ ಧಾಮ ಚೆನ್ನವೀರೇಶ್ವರ ಮ ।

ತ್ಕರ ಕಮಲದಿ ಮಿರುಗುವ ಚಿದಾ
ಗರ ಪರಂಜ್ಯೋತಿ ಶ್ರೀಗುರು ಶಂಭೋ ಮಾಂ ಪಾಹಿ ॥ ೨೫ ॥

ಇಂತಿ ಕಂದಪದ್ಯ ಸಮಾಪ್ತ ಮಂಗಳ ಮಹಾಶ್ರೀ

ಶ್ರೀಗುರು ಶಂಭೋ ಪ್ರಾಸನ್ನ ಕಂದ

*****

೨. ಕವೀಂದ್ರ ಸ್ತೋತ್ರ

ವರಕವೀಂದ್ರರ ಪಾದಪದ್ಮಜ್ಜ ಷಟ್ಪದನಾಗಿ ನಾ
ಸ್ಮರಿಪೆನದ್ಭುತ ವೀರಶೈವ ಮತಾಬ್ಧಿ ಪೂರ್ಣ ಸುಧಾಕರ
ಪರಮತ ರಸಮೀರಣಾಮಯ ಪಂಕಭಾಸ್ಕರನಾದ ಪಾ-
ಲ್ಕುರಿಕೆ ಮಂದಿರ ಸೊಮನಾಥನ ಸಂತತಂ ಘನಕೀರ್ತಿಪೆಂ ॥ ೧ ॥

ಪ್ರಕಟಿತ ಪ್ರತಿಮಾನ ರೂಪಕನಾದಿ ಶಂಕರ ನಾರ್ಚನೊ
ತ್ಸುಕದಿ ತನ್ನ ಕರಂಗಳುತ್ತರಿಶೀಶನಂ ಮಿಗೆ ಮೆಚ್ಚಿಸು
ತ್ತಖಿಳ ಭೂ ಭಜವ್ರಾತ ವಂದಿತ ಭವ್ಯ ಸೂರಿ ಜನಾಸ್ಯ ಸ
ನ್ಮಕುರ ಸತ್ಕವಿ ಬಾಣನಾಂಘ್ರಿಯ ಸಂತತಂ ಘನ ಕೀರ್ತಿಪೆಂ ॥ ೨ ॥

ನಯನಕರ್ಣ ಕಲಾಪನಾಂಘ್ರಿ ಸರೋಜ ಪೂಜಿಸಿ ತನ್ನ
ನ್ನಯನಕುಂಜ ಸಮರ್ಪಿಸುತ್ತಲಗಣ್ಯ ಪರಮೇಶನಿಂ
ನಯನತಾಂ ಪಡಕೊಂಡ ನವ್ಯಕವಿಂದ್ರ ವಕ್ತ್ರವನೆ ಜಭೂ
ನಯನ ಸತ್ಕವಿ ಕಾಳಿದಾಸನ ಸಂತತಂ ಘನ ಕೀರ್ತಿಪೆಂ ॥ ೩ ॥

ಕವಿ ಮುಖಾಂಬುಜ ಭಾನು ದುರ್ಜನ ಬೃಂದ ಭೂಧರ ಶಂಬ ಸ
ತ್ಕವಿ ಕಂದಂಬ ಕುಶೇಜ ಕಾನನ ರಾಜ ಹಂಸ ವಿನೂತನಾ
ಕವಿ ಸಾಮೂಹ ರಸಾಲ ನಂದನ ಚೈತ್ರಕೀರ್ತಿ ವಧೂವರ
ಪ್ರಾವಿಮಲಾತ್ಕರ ಕೇಶಿರಾಜನ ಸಂತತಂ ಘನ ಕೀರ್ತಿಪೆಂ ॥ ೪ ॥

ಮಾನಿತೊನ್ನತ ಚಿತ್ಸುಖಾಂತ ವಿಲೀನ ಮಾನಸ ಶರ್ವನ
ಧ್ಯಾನದೋಳ್ ಪರತಂತ್ರನಾಗಿ ಸದಾ ಭಯಂಗಳ ನೀಗಿದ
ಸ್ವಾನುಭಾವದಿ ಸರ್ವ ಭೂವರ ಸಂಘ ಪೂಜಿತ ಲೋಕದೊಳ್
ಜ್ಞಾನಸಿಂಧು ಮಯೂರನಾಂಘ್ರಿಯ ಸಂತತಂ ಘನಕೀರ್ತನಂ ॥ ೫ ॥

ನಿಟಿಲನೇತ್ರನ ಭಕ್ತ ಸರ್ವಸುಂದರಾಧಿಪ ರತಾಘದೊಳ್
ಸ್ಫುಟವಿದಗ್ಧ ಕವೀಂದ್ರ ವೃಂದ ಸುಪೂಜಿತಾಮಳ ಸದ್ಗುಣಾ
ಚಟುಳವಾದಿ ತಮೋಮಾವಿತಾನ ದಿನೇಶ ಸೂರಿಜನಾದಿ ಮು
ದ್ಭಟ ಕವೀಶ್ವರ ನಾಂಘ್ರಿವಾರಿಜ ಸಂತತಂ ಘನಕೀರ್ತಿಪೆಂ ॥ ೬ ॥

ಭವ್ಯ ಸುನ್ನುತ ಮಂಗಳಾಕರ ಕಾವ್ಯಾಕಾರ ಮನೋಗ್ರಹ
ದ್ರವ್ಯ ದುಃಖವಿಹಾರ ಕಾನನ ಜಾತವೇದ ಪರಾಕ್ರಮಾ
ನವ್ಯ ಸಾಧು ಕವೀಂದ್ರ ಮಾನಸಶಯ್ಯ ಪಂಡಿತ ಪೂಗದಿಂ
ಸೇವ್ಯಮಾನ ಮಸಿತ ಭೀಮನ ಸಂತತಂ ಘನ ಕೀರ್ತಿಪೆಂ ॥ ೭ ॥

ಪರಮತಾಂಬುಧಿ ಕುಂಭ ಸಂಭವವಾದಿ ನಾಗ ಮುನೇಂದ್ರ ಶಂ
ಕರ ಮತಪ್ರತಿಪಾಲನಾರ್ಯ ವರೇಣ್ಯ ವಾರ್ಧಿಗಬೇರ್ಧ್ವಿದತ
ಕರಣನಿರ್ಜಿತ ನಿರ್ಮಲಾಂಗ ಶುಭೋದಯ ಸ್ತುತಿ ಪಾತ್ರ ವಿ
ಸ್ಫುರಿತ ಸತ್ಕವಿ ಪದ್ಮರಾಜನಂ ತತ ಘನ ಕೀರ್ತಿಪೆಂ ॥ ೮ ॥

ಮಳೆಯನೊರ್ವ್ವಿಯೊಳೇಳು ವತ್ಸರವಿಲ್ಲದಾಗೆ ಮಹತ್ವದಿಂ
ಮಳೆ ಧರಿತ್ರಿಗೆ ತಂದು ಲೋಕವನೆಯ್ದೆ ಕಾಯ್ದು ದಯಾತ್ಮಕ
ಅಳಿಕನೇತ್ರನ ಪಾದಸೇವೆಯ ಸಂವಿಧಾನ ಗಣಾನ್ವಿತ
ಮುಳಿಯರಾಜ ಕವೀಂದ್ರನಾಂಘ್ರಿಯ ಸಂತತಂ ಘನಕೀರ್ತಿಪೆಂ॥ ೯ ॥

ಹರಿಮತಾಂಬುಜ ಚಂದ್ರ ವೈಷ್ಣವನಾಗ ನಾಗ ವಿಪಕ್ಷಗಂ
ಹರಿವಿಪಾಲ ನೃಸಿಂಹ ಬಲ್ಲಾಳ ರಾಜನೋಲಗದೊಳ್ಮ ಹಾ
ಹರಿಮತಸ್ಥರ ನೆಯ್ದೆ ಸೋಲಿಸಿ ರಾಜ ಪೂಜಿತನಾದ ಶ್ರೀ
ಹರಿಹರೇಶನ ಪಾದ ಪಂಕಜ ಸಂತತಂ ಘನಕೀರ್ತಿಪೆಂ ॥ ೧೦ ॥

ಮಹಿತಪಾದ ಕರೇತನಾಂಘ್ರಿಪಯೋಜ ಸೇವಕ ಭಕ್ತರೋಳ್
ನಿಹಿತ ಚೇತನ ಪರಭದ್ರ ನಿನಾತ್ತ ಹಾರ ಸಮಾನ್ವಿತ
ಅಹಿತ ಭೇಕ ಭುಜಂಗ ಸಜ್ಜನ ಸಂಗ ಶಾಶ್ವತ ಸರ್ವದಾ
ಸುಹಿತ ಸತ್ಕವಿ ರಾಘವಾಂಕನ ಸತತಂ ಘನಕೀರ್ತಿಪೆಂ ॥ ೧೧ ॥

ಕಾಲ ಕಂಧರ ಕಾಂಚಿಯೊಳ್ಳಿಶುಮಾಂಸ ಬೇಡಿವನೆಂಬುದಾ
ಕೇಳಿ ಕೋಪದಿ ಶಂಕರಂ ಹರನೆಂದು ನಾದವನೇರಿಸಿ

ಲೀಲೆಯಿಂ ನವ ಪಟ್ಟಣಂಗಳ ಕೂಡಿ ಮೋಕ್ಷದಿರಿಸಿದಾ
ಖಿಳಶೀಲ ಹಲಾಯುಧಾರ್ಯನ ಸಂತತಂ ಘನಕೀರ್ತಿಪೆಂ ॥ ೧೨ ॥

ವಿತತ ಪ್ರೌಢ ಭುಜಂಗ ಸಂಘ ವಿಶಿಷ್ಟ ಸತ್ಕುಲ ಜಾತ ಸ
ನ್ನುತ ಸಂಚಿತ ಕಾವ್ಯಕಾರ ಜನಪ್ರಿಯೋನ್ನತ ಸುಂದರ
ಸತತಮೀಶ್ವರ ಭಕ್ತ ಸೇವಕ ಧೂರ್ಯವರ್ಯ ಜನಾವೃತ
ಕ್ಷಿತಿಜನ ಸ್ತುತ ಮಲ್ಲಣಾರ್ಯನ ಸಂತತಂ ಘನ ಕೀರ್ತಿಪೆಂ ॥ ೧೩ ॥

ಪರತರಾಮಳ ಮೂರ್ತಿ ಪೂರಿತ ಕೀರ್ತಿ ಸಾಧು ಜನಾದಿ ಜಿ
ತ್ಕರಣ ಶರ್ವ್ವ ಸಪರ್ಯೋದ್ಧೂರ್ಯ ಸುಕಾರ್ಯ ಶೌರ್ಯನಿಕಾರ್ಯ ನಾ
ಸುರಚಿರಾಂಗ ಕವೀಂದ್ರ ಕುಂಜರ ಸೌಮ್ಯಸಾರ ಗುಣಾಢ್ಯಣಾ
ವರುಣ ಮಂದಿರ ಬಲ್ಲಟಾರ್ಯನ ಸಂತತಂ ಘನ ಕಿರ್ತಿಪೆಂ॥ ೧೪ ॥

ವ್ಯಾಲಚರ್ಮ ವಿಚೇಲನಾರ್ಚಕ ವಾದಿಮಂಡಮದೆ ಭಫ
ವ್ಯಾಲಬರ್ವಿಣ ದೋಷಬರ್ಹಣ ಚಾರು ವಾಕ್ಚತುರಿಷ್ಟದ
ಕಾಲ ರುಕ್ಮವತೀಶ ಭಂಜನ ಲೋಕ ವಿಶ್ರುತ ಪೂಜ್ಯ ಸ
ಲ್ಲೀಲ ಚಾಮರಸಾರ್ಯನಾಂಘ್ರಿಯ ಸಂತತಂ ಘನಕೀರ್ತಿಪೆಂ॥ ೧೫ ॥

ರಾಜಗೋತ್ರ ಲಲಾಮ ಸತ್ಕವಿ ಜಾಲಕೋನ್ನತ ಕಲ್ಪ ಧಾ
ತ್ರಿಜ ಸದ್ಬುಧ ಮಂಡಲ ಸ್ತುತ ದಾನಶೂರ ಯಶಾಂಗನಾ
ರಾಜ ತೇಜ ಪ್ರತಾಪ ಸತ್ಕುಲದೀಪ ಭೂಪ ಸಮಾಜದೋಳ್
ಭ್ರಾತಿತಾಮಳ ಭೋಜರಾಜನ ಸಂತತಂ ಘನಕೀರ್ತಿಪೆಂ ॥ ೧೬ ॥

ನಿಜಧರಾದಿ ಸಮಸ್ತ ಭೋಗ ಸಮುದ್ರ ಬಾಡಬ ಬಂಧನ
ಮೃಜಿನ ಮೋಧ ಕ್ರುಶಾನು ಸರ್ವಕಳಾ ಪ್ರಯುಕ್ತ ವಿಶಾರದ
ವ್ರಜ ಮನೋಜ್ಞಾನುಸಾರ ಶ್ರೀಗುರು ಶಂಭುಲಿಂಗ ಪ್ರಲೋಪ ಹೃ
ನ್ನಿಜಗುಣಾರ್ಯನ ಪಾದಪಂಕಜ ಸಂತತಂ ಘನಕೀರ್ತಿಪೆಂ ॥ ೧೭ ॥

ರುಂದ್ರಜೈನ ಗಜೇಂದ್ರ ಪ್ರಾಂಕುಶ ವೈಷ್ಣವ ದ್ರುಕುರಾರ ರಾ
ಜೇಂದ್ರ ಚಕ್ರನುತ ಪ್ರಸನ್ನ ಮಹೇಶ ಪುಂಗದ ಕೌಶಲಾ
ಚಂದ್ರಮೌಳಿ ಮತಾನುಪಾಲ ಪ್ರಸಿದ್ಧಿ ಶುದ್ಧಯಳೆಂ ಪು
ರೇಂದ್ರ ಸಾಧು ಷಡಕ್ಷರಾಂಕನ ಸಂತತಂ ಘನಕೀರ್ತಿಪೆಂ ॥ ೧೮ ॥

ಮಂಜುಲಾದಿ ಕವೀಂದ್ರರ ಸ್ತುತಿಯೊಲ್ದು ಕೀರ್ತಿಪ ಮಾನವ
ರ್ಕಂಜ ಪತ್ರ ಭವಾಂಡದೊಳ್ಪರಿಕೀರ್ತಿವೆತ್ತು ವಿರಾಜಿಸಿರ್ದ
ಕುಂಜರಾಜಿನವಾಸ ಭಕ್ತಗಣಾಗ್ರ ಸಂಪದವೆತ್ತು ಮೃ
ತ್ಯುಂಜಯಾದ್ರಿತನೂಭವೇಶನ ಸಾರ್ದು ಶಾಶ್ವತ ಬಾಳ್ವಿರೊ ॥ ೧೯ ॥

ವಿಲಾಸಿತಾದಿ ಕವೀಂದ್ರರ ಸ್ತುತಿ ಪೇಳ್ದನವ್ಯಯ ಸೌಖ್ಯ ದೈ
ನಿಲಯ ಶ್ರೀಗುರು ಚನ್ನವೀರ ಮಹೇಶ ಹಸ್ತವನೆ ಓ ಜಾ
ತಲಫಲಪ್ರೇಕ್ಷ ಕವೀಂದ್ರ ಶಾಬಕನೆಂಬ ನಾಮವನಾಂತು ಭೂ
ತಳದೊಳುತ್ತಮರೆಯ್ದಿ ಪಾಲಿಸಿ ಮೆಚ್ಚುವಂತೆ ವಿನೋದದಿಂ ॥ ೨೦ ॥

ಪೂರ್ವ ಸತ್ಕವಿರಾಜ ರಾಖ್ಯ ಗಳೊಲ್ದು ಜಾನಿಸು
ತೂರ್ವಿಯೊಳ್ವರಮಾನುರಾಗದಿ ತತ್ತ್ವದಾಂಬುಜರೇಣುವಂ
ಸರ್ವಕಾರ್ಯದೆ ಲೇಪಿಸುತ್ತ ಪವಿತ್ರನಾಗಿಸುವೇದ ಗಾಂ
ಧರ್ವ ಶ್ರೀ ಪರಮೇಶನಾಂಘ್ರಿಯ ಸಂತತಂ ಘನಕೀರ್ತಿಪೆಂ ॥ ೨೧ ॥

೩. ಶಿವಪಾದ ಸ್ತೋತ್ರ

ಶ್ರೀಗುರು ಮಹಾದೇವ ಶಿವಭವದಮಲ ಪಾದ
ರಾಗದಿಂ ಪೂಜಿಸುವೆ ರಮ್ಯಪಾದ ॥ ಪ ॥

ಆದಿಯುಗದಿಂದತ್ತಲಾಧಾರ ಮಹಾಪಾದ
ಸಾಧಕರಿಗವಮಸಾಧ್ಯ ಪಾದ
ವೇದ ಶಾಸ್ತ್ರಾಗಮಕೆ ವೇದಿಸಿದ ಶ್ರೀಪಾದ
ನಾದ ಪ್ರಿಯಾನಂದ ನಿಮ್ಮ ಪಾದ ॥ ೧ ॥

ವಾಗೀಶ ವಿಷ್ಣುವಿಗೆ ವಶವನಾಗಿಹ ಪಾದ
ನಾಗ ನರಸುರರೊಳಗೆ ನಲಿವ ಪಾದ
ಭೂ ಗಗನ ಭೂತೇಶ ತವಪಾದ
ಯೋಗಿ ಜನರರ್ಚಿಸುವ ಯೋಗ್ಯ ಪಾದ ॥ ೨ ॥

ದಮನ ನ ನಾಲಿಗೆಯಂದರಿದು ಮುಟ್ಟಿದ ಪಾದ
ಕ್ರಮದೊಳು ಜಲಂಧರನ ಕೊಂದಪಾದ
ಶಮನ ವಕ್ಷದೊಳಾದ ಶರ್ವ ನಿಮ್ಮಯ ಪಾದ
ಸುಮನಸೇಂದ್ರನ ಪೊರೆದ ಶುದ್ಧಪಾದ ॥ ೩ ॥

ಬಸವರಾಜನ ಮನೆಗೆ ಬಂದು ತಿರುಗಿದ ಪಾದ
ಮುಸುಟೆ ಚೌಡರಸನಿಂ ಮೆರೆವ ಪಾದ
ಅಸಮ ಶ್ರೀ ಚನ್ನಬಸವರಸನೊಲಿಸಿದ ಪಾದ
ದಸರಯ್ಯನೊಲಿದ ಬಹುಧನ್ಯ ಪಾದ ॥ ೪ ॥

ಪ್ರಮಥನಾಥೊಗ್ರನೊಳು ಪ್ರಕಟಿಸುವ ಶ್ರೀ ಪಾದ
ಅಮರನೀತಿಗಳ ಮನದುಮರ್ದನ ಪಾದ
ನೇಮಿತಾಂಡಿಗಳ ಮುಂದೆ ನಾಟ್ಯವಾಡಿದ ಪಾದ
ಸುಮನೊಲೆ ಭಕ್ತಿನಿಗೆ ಸುಲಭ ಪಾದ ॥ ೫ ॥

ರಕ್ಕಸ ಬ್ರಹ್ಮನ ರೌದ್ರ ಕೂಡಿದ ಪಾದ
ಚಿಕ್ಕಮಾದಣ್ಣನೊಳು ಚರಿಪ ಪಾದ
ನಕ್ಕನ್ಯೆನಾರಿಗಳ ನಂಬಿಗೆಯೊಳಿಹ ಪಾದ
ಕಕ್ಕಯ್ಯಗಳ ಮನೆಯ ಕಾಯ್ದ ಪಾದ ॥ ೬ ॥

ಶ್ರೀಪತಿ ಪಂಡಿತರ ಸಿದ್ಧಿಯೊಳಿಹ ಪಾದ
ದೀಪದ ಕಲಿಗೊಲಿದ ದಿವ್ಯಪಾದ
ಧೂಪದ ಮಾಚಯ್ಯನ ಧೃಡಕೆ ಮೆಚ್ಚಿದ ಪಾದ
ಭೂಪ ಚೋಳೇಂದ್ರರ ಬಹುಪಾದ ॥ ೭ ॥

ಕಲಿಕಾಮದೇವನಂ ಕಂಡು ಓಡಿದ ಪಾದ
ಕಲಿಯಂಬರನೆನೆವ ಶೌರ್‍ಯಪಾದ
ಕಲಿಗಣನಾಥನಿಗೆ ಕಾಡಿಸಿದ ಹರಪಾದ
ಕಲಿಸುರಗಿ ಚೌಡನ ಸುಕಾಮ್ಯಪಾದ ॥ ೮ ॥

ಮಾನಕಂಜರ ಮಗಳ ಮದುವೆಯೊಳಿಹ ಪಾದ
ಜ್ಞಾನಗುಂಬಂಧಿಗಳಿಗೊಲಿದ ಪಾದ
ಭೂನಾಥ ಚೇರಮನ ಬುದ್ಧಿಯೊಳಿಹ ಪಾದ
ಭಾನು ದೇವನಿಗೊಲಿದ ಭವ್ಯಪಾದ ॥ ೯ ॥

ಕೆಂಭಾವಿ ಭೋಗಯ್ಯನ ಕೆಲಬಲದೊಳಿಹ ಪಾದ
ಜಂಬಯ್ಯನ ಮನದೊಳುಜ್ಜಳಿ ಪಾದ
ಅಂಬಿಗರ ಚೌಡಯ್ಯನಾತ್ಮದೊಳಿಹ ಪಾದ
ನಂಬಿಯಣ್ಣನ ಮುಂದೆ ನಡೆದ ಪಾದ ॥ ೧೦ ॥

ಮಾದರಸರುಂ ನಡೆದ ಮಾರ್ಗಕಟ್ಟಿದ ಪಾದ
ಸೇದಿರಾಜನು ಭಜಿಪ ಶ್ರೇಷ್ಠಪಾದ
ಮಾದರ ದೊಡ್ಡಯ್ಯನ ಮನೆಯೊಳಿರುವ ಪಾದ
ಸಾಧು ಶ್ವಪಚಯ್ಯನ ಸಾಧ್ಯ ಪಾದ ॥ ೧೧ ॥

ಕೌಮಾರ ಬ್ರಹ್ಮನೊಳು ಕೃಪೆಯನಿರಿಸಿದು ಪಾದ
ಬಾವೂರ ಬ್ರಹ್ಮನೊಳು ಬಲಿದ ಪಾದ

ಭೂವಿನುತ ಮಾಚಯ್ಯ ಭುಜದೊಳಡಸಿದ ಪಾದ
ದೇವರದಾಸಗೊಲಿದಿರ್ಪ ಪಾದ ॥ ೧೨ ॥

ಚೌರದ ಚಿಕ್ಕಯ್ಯನ ಛಲವ ಗೆಲಿಸಿದ ಪಾದ
ಸೌರಾಷ್ಟ್ರದೋಹಿಲನ ಸೌಖ್ಯಪಾದ
ಪೌರುಷದ ಗುರ್ಜರನ ಪುರವನೊಯ್ದ ಪಾದ
ಗೌರತ್ವ ದೂರ್ಜಟನ ಗೌಪ್ಯಪಾದ ॥ ೧೩ ॥

ಕವಿಬಾಣನಿಗೆ ಮೆಚ್ಚಿ ಕರಗಳಿತ್ತ ಪಾದ
ಕವಿ ಕಾಳಿದಾಸನುರುಕಾರ್ಯ ಪಾದ
ಕವಿ ಹಲಾಯುಧಗಂಜಿ ಕಂಪಿಸಿದ ಮೃಡಪಾದ
ಕವಿ ಸೋಮನಾರ್ಯನೇಕಾಂತ ಪಾದ ॥ ೧೪ ॥

ವಿಮಲೆ ನೀಲಾಂಬಿಕೆಯೊಳಿರ್ದು ಮಿನುಗುವ ಪಾದ
ಸುಮತಿ ಸತ್ಯಕ್ಕನಿಗೆ ಸುನಿದ ಪಾದ
ಕಮಳಾಯಿ ಲಿಂಗವನೆ ಕದ್ದೋಯ್ದ ಶಿವಪಾದ
ಪ್ರೇಮದಿ ಚೋಳಕ್ಕನ ಪ್ರೀತಿಪಾದ ॥ ೧೫ ॥

ಹರಿಕಾಳವ್ವೆ ಮುಂಗಡೆಯಲಿ ನಡೆದ ಪಾದ
ಹೇರೂರ ಹೆಣ್ಮಗಳ ಹೊರೆದ ಪಾದ
ನಾರಿ ನಿಂಬೆಕ್ಕನಿಗೆ ನಾಚಿ ತಿರುಗಿದ ಪಾದ
ಸೂರಮಾಂಬಿಗೆ ಮೆಚ್ಚಿ ಸುಳಿದ ಪಾದ ॥ ೧೬ ॥

ಬಿಜ್ಜಮಹಾದೇವಿಯ ಬಾಲ ತಮ್ಮಮೃದುಪಾದ
ಪಜ್ಜಳಿಪ ದುಗ್ಗಳೆಯ ಪ್ರಣಿತಪಾದ
ಸಜ್ಜನವೈಜನ್ಯ ಸ್ಥಾಪಿಸಿದ ಶಿವಪಾದ
ಅಜ್ಜಳಹ ಸುಗ್ಗಳೆಯ ಅರ್ತಿಪಪಾದ ॥ ೧೭ ॥

ಅಭಿಷ ಭಸ್ಮಾಸುಮಸೌಗಕೊಪ್ಪುವ ಪಾದ
ಅಭಿನವಾಕ್ಷತೆ ಗಂಧಕಲರ್ವಪಾದ
ವಿಬವೋಪ ಕರಣದಿಂ ವಿಭ್ರಾಜಿಸುವ ಪಾದ
ಅಭಧೂಪ ದೀಪದಿಂದೆಸೆವ ಪಾದ ॥ ೧೮ ॥

ಸಕಲಾರತಿಗಳಿಂದೆ ಶೋಭಿಸುವ ಶಿವಪಾದ
ಸುರರ ನರ್ತನ ಸಿತಸ್ತೋತ್ರ ಪಾದ
ನಿಖಿಲವಾದ್ಯ ಮನುವಿನಿಂದೆ ಸೊಗಸುವ ಪಾದ
ವಿಕಚ ಪುಷ್ಪಾಂಜಲಿಯ ವಿದ್ರೃತ ಪಾದ ॥ ೧೯ ॥

ಕರ್ಪೂರ ಜ್ಯೋತಿಯಿಂ ಕರಮೆಸೆವ ಶ್ರೀಪಾದ
ತೋರ್ಪ ನರ ವ್ಯಾಘ್ರ್ಯದಿಂ ತೊಳಿಪ ಪಾದ
ಅರ್ಪಿಸುವ ನೈವೇದ್ಯಕತಿಪ್ರೇಮವಹಪಾದ
ನಿರ್ರೋಗ ವಿಳ್ಕೆಯಂ ವಿಯುತ ಪಾದ ॥ ೨೦ ॥

ಯಿಂತೆಸೆವ ಗುರುಚೆನ್ನವೀರೇಶ ತವ ಪಾದ
ವಂತರಿಸದರ್ಚಿಸುವೆ ನಮ್ರತೆಯ ಪಾದ
ವಿತತೈನಿಲಯಪುರಿ ಸದನದಿಳಿಹ ಪಾದ
ಶಾಂತ ಪದವಿಯನೆಸೆವ ಸೌಮ್ಯ ಪಾದ ॥ ೨೧ ॥

೪.ಶಿವ ಪ್ರಾರ್ಥನಾ ಶಾರದಾ ಸ್ತೋತ್ರ

ಶ್ರೀಗುರು ಚಿದಾನಂದ
ಯೋಗಿ ಮನದಾನಂದ
ನಾಗಾಸುರಾಜಿನ ವಿಚೇಲಾ ದಿವ್ಯ
ಭೋಗೀಶ ಕುಂಡಲ ಮಾಲಾ ಕೃಪಾ
ಸಾಗರ ಪ್ರತೀಮ ಗುಣಜಾಲ
ರಾಗದಿಂ ಪೊರೆಯೋ ಭವ
ರೋಗ ವೈದ್ಯನೆ ಎನ್ನ
ಭೋಗಲಿಂಗೇಶ ಸ್ವಲೀಲಾ ತ್ವಂ ಶಾರದಾ ॥ ಪ ॥

ಯಾಕೆ ಯನ್ನೊಳಗಿಂಥ
ವ್ಯಾಕುಲವನ್ನೊಡ್ಡಿ ನೀ
ಬೇಕೆಂದು ಮುನಿದು ಕಾಡುವರೆ ಜಗಕೆ
ನೀ ಕಳುವಿ ಹಿಂಗೆ ಮಾಡುವರೆ ಯನ್ನ
ನೀಕರಿಸಿ ಕಡಿಗೆ ಕಾಡುವರೆ
ಲೋಕದೊಳಗಪಕೀರ್ತಿ
ಯೇಕೋ ದೇವನೆ ನಿಮ್ಮ
ಪಾಕನಿಗೆ ನೋಯಿಸಿ ನೋಡುವರೆ ತ್ವಂ ಶಾರದಾ ॥ ೧ ॥

ಧರಣಿಯೊಳಗವತರಿಸಿ ತೆರಹಿಲ್ಲದವಸರದ
ಹೊರೆಯಿಂದೆ ಬಹುನೊಂದೆ
ಭರಕೆ ಬಿಡಲು ನಾನಾ ಅನಿಷ್ಟ
ಪರಕೆ ಅಂಜಿ ಶಿರಬಾಗಿ ನಡೆದೆನೀ ಜನಕೆ
ಯಿರಳುಹಗಲಲೆ ರೋಗ
ದುರಿಯಿಂದ ಮೊರೆಯಿಟ್ಟ
ನರಿಕೆಯಿಲ್ಲವೇ ನಿಮ್ಮ ಮನಕೆ ತ್ವಂ ಶಾರದಾ ॥ ೨ ॥

ಪ್ರಾರಬ್ಧ ಕರ್ಮಗಳ । ನಾರಿಗೆ ಬಿಡವೆಂದು
ಸಾರ್ವದು ಶೃತಿ ಜಗಕೆವಿತ್ತಾವೇಮ
ನಾರಾದ್ಯ ರಾಜನ ಸುಪ್ರೀತಸುತೆಗೆ
ಧೀರಮಾದರನ ಸುವಿತ್ತಾ
ಮಾರಾರಿ ಯನ್ನೊಳತಿ ಘೋರಿಸುವ
ವ್ರಜಿನವಿದಾರಿಸಲಿಕಾಗದೇ ಚಿತ್ತಾ ತ್ವಂ ಶಾರದಾ ॥ ೩ ॥

ಹಿಂದೆ ಮಾಡಿದ ಪಾಪ
ಏಂದು ವ್ಯಾಧಿಯ ರೂಪ
ಹಿಂದೆ ಕಾಡಲು ನೊಂದೆನೆಯ್ಯಾ ಕಷ್ಟ
ಬಂಧನದೊಳಾಂ ಬೆಂದೆನಯ್ಯ ಕಾಯ
ಕಂದಿ ಕರಗುತ ನಿಂದೆನೆಯ್ಯ
ತಂದೆ ನೀ ಕಳುಪಲ್ಯೆತಂದೆ ಯನ್ನನು ಕರುಣ
ದಿಂದೆ ಕೈವಿಡಿದು ಕಾಯೆಯ್ಯ ತಂ ಶಾರದಾ ॥ ೪ ॥

ಸೊಕ್ಕು ಜವ್ವನ ಮದವನುಕ್ಕಿ ಸತಿಯರ ಬಲೆಗೆ
ಸಿಕ್ಕೆ ಸೊಗಸಿನ ಸುಖಕೆ ತಿರುಗಿ ಅವರ
ತಕ್ಕರತಿ ಕೂಟದೊಳು ಕೊರಗಿ ಚಲುವ
ಸಿಕ್ಕರಿಲ್ಲವ ಶಂಕೆ ಸೊರಗಿ
ರಕ್ಕವಿಲ್ಲದ ದೋಷಕಿಕ್ಕಿಯಾದೆನು ದೇವಾ
ದಕ್ಕಿಸ್ಯೆ ನಿಮ್ಮ ಮನಕರಗಿ ತ್ವಂ ಶಾರದಾ । ೫ ॥

ವಾರಿಧಿಯ ಮಥನದೊಳು
ಮೀರಿಬರುತಿರುವ ವಿಷ
ವಾರಿಸುತೆ ನುಂಗಲಿಕೆ ಬಂತೆ ಕನಲಿ
ಮೂರು ಪುರಗಳ ಮುರಿಯಬಂತೆ ವಿಧಿಯ
ಸಾರ ಶಿರವರಿಯಲಿಕೆ ಬಂತೆ
ಮೇರು ಚಾಪನೆಯನ್ನು
ಕ್ರೂರ ಕರ್ಮವನು ಸಂಹರಿಸಲಿಕಾಗದೆ ತ್ವಂ ಶಾರದಾ ॥ ೬ ॥

ಬಾಳಾಕ್ಷ ನಿಮ್ಮ ಭಕ್ತಾಳಿ ಯೊಳಗೋರ್ವ
ನಳಿದೇಳು ವರುಷಕೆ ಪ್ರಾಣಕೊಡರೆ ಶರಧಿ

ಜ್ವಾಲೆಯನು ಪಿಡಿದು ತಿಲಕಿಡರೆ ರೋಗ
ಜಾಲಗಳ ಸೆರೆಯ ಹಾಕಿದರೆ
ಆಳಿನಪಮಾನ ಹಿಡಿದಾಳುವರಿಗಲ್ಲದೆ
ಸ್ಥೂಲವೆ ನಿಮಗೆಯಂ ನ್ಯಡರೆ ತ್ವಂ ಶಾರದಾ ॥ ೭ ॥

ಸೋನೆಗಾರನ ಮನಿಗೆ ಹಾನಿ ಬಂದರೆ
ಜನರು ಯೇನೆಂದು ಕೇಡಾ ಹಾಂಗೆ
ನಾನಾದೆ ಕಷ್ಟಗಳಿಗೀಡಾಹೋಕ್ಕೆ
ನೂನ ಸಂಸಾರದಾ ಕಾಡಾ
ನೀನಾಗಿ ವಲಿದೆನ್ನ ಸೂನುಬಾರೆಂದು ಸು
ಜ್ಞಾನ ಭೋಧಿಸಿ ದಯದಿನೋಡಾ ತ್ವ ಶಾರದಾ ॥ ೮ ॥

ಸತ್ಯ ಶರಣರೊಳೊಲಿದು ನಿತ್ಯ ನಾಂ ಕೂಡಿರದೆ
ಮಿತ್ಯ ಸುಖಕೆಳಸಿ ನಾಂ ಕೆಟ್ಟೆ ಅವರ
ಭೃತ್ಯನಾಗಿರದೆ ನಾ ಬಿಟ್ಟೆ ದುಷ್ಟ
ಕೃತ್ಯಗಳಿಗಾನು ಮನವಿಟ್ಟೆ
ಅತ್ಯಂತ ಕಾಡುವಾದಿತ್ಯ ಅಣುಗಗೆ ಕೊಡದೆ
ಪ್ರತ್ಯಕ್ಷವಾಗು ನೀ ಘಟ್ಟಿತ್ವಂ ಶಾರದಾ ॥ ೯ ॥

ವಿದಳನಿಗೆ ಶ್ವೇತನಿಗೆ ಪದವನಿತ್ತುದು ಬಲ್ಲೆ
ನದರಿಂದೆ ಮೊರೆಯಿಡುವೆ ತಂದೆಯನ್ನ
ದಧಿಕ ಪಾಪವೆ ಅವರಿಗಿಂದೆ ಹೊಲ್ಲ
ಗದಕೇನು ಗತಿಪೇಳು ಮುಂದೆ
ಕುದಿಕುದಿದು ಕ್ಲೇಶದಾಂಬುಧಿಯೊಳಗೆ ಮುಳಿಗಿದೆನು
ವದಗಿತೆ ನಿರ್ಯಂನ್ನುದಯದಿಂದೆ ತ್ವಂ ಶಾರದಾ ॥ ೧೦ ॥

ಕಿಚ್ಚಿಗಾಹುತಿಯಾದ ಮತ್ಸ್ಯನೇತ್ರಿಯ ಮೈಯ್ಯ
ನಿಶ್ಚಲದಿಕಾರಿಸಿದರಂದೂ ಕಾಡ
ಕಿಚ್ಚು ಹಿಮಮಾಡಿದರು ನಿಂದೂಕಮಲ
ಕಿಚ್ಚಿನೊಳು ಬೆಳೆದರವರಂದೂ
ಕಿಚ್ಚುಗಂಣವಡಲ
ಕಿಚ್ಚು ಮಾಣಿಸಲಿಕ್ಕೆ ಆಶ್ಚರ್ಯವೇನು ನಿಮಗಿಂದೂ ತ್ವಂ ಶಾರದಾ॥ ೧೧ ॥

ತಲಿಗೆ ತಲೆಯಿತ್ತವರ ತಲಿಗೆ ತನುಪಡದವರ
ತಲೆಯಿಂದೆ ಹಾದಿ ನಡೆದವರಾ ಆರು
ತಲೆಗೊಟ್ಟು ಜೀವಪಡೆದವರ ನಿಮಗೆ
ತಲೆಯಿತ್ತು ಕೀರ್ತಿ ಪಡದವರಾ
ಸಲೆ ಪಾದರಕ್ಷಿಗಳ ಹೊಲಿವವರ ಮಗನೆನಿಸಿ
ಸಲವೈಯ್ಯ ಶಿವನೆ ಬಿಡೆನವರಾ ತ್ವಂ ಶಾರದಾ ॥ ೧೨ ॥

ಶರೂರಮನವೆಂಬ ಕಾಂತಾರದೊಳು ಮದವೆಂಬ
ವಾರಣದ ಸಂಚರವೂ ಬಾಳಾ ಅಲ್ಲಿ
ಆರು ಗುಣವೆಂಬ ಮೃಗಜಾಲಾ ಭೂಮಿ
ಧಾರವೆಳೆನಗೆ ಬಹುಕಾಳಾ
ಧೀರ ಪೂರ್ವದ ಬೆಟ್ಟಿಕಾರ ನೀನಟ್ಟಿ ಸಂ
ಹಾರಿಸಿ ಮೊರೆಯ ನೀ ಕೇಳಾ ತ್ವಂ ಶಾರದಾ ॥ ೧೩ ॥

ಮನವೆಂಬ ಕಪಿಯಂಗ ವನದೊಳಗೆ ಚೆರಿಸುತಲಿ
ಘನ ಚೇಷ್ಟಿಗಳನು ತೋರುವದೂ ಮೂರು
ಯಿನಿದಾದ ಫಲಕೆ ಹಾರುವದೂ ಮೆಲಿದು
ತನು ವುಬ್ಬಿತಾನೆ ಚೀರುವುದು
ಯನಗೆ ಮೀರಿದ ಚಿತ್ತವನ ಚರನಪಿಡಿದು ವಶ
ವನೆಮಾಡು ನಿಮಗೆ ಸೇರುವದು ತ್ವಂ ಶಾರದಾ ॥ ೧೪ ॥

ಶ್ರೀಕರೈನಿಲಯಪುರ ದೋಕ ಭುವನೈಕಸು
ಶ್ಲೋಕ ಗುರುಚನ್ನವೀರೇಂದ್ರ ದಿವ್ಯ
ನಾಕ ಜನನಮಿತ ಪ್ರಮಥೇಂದ್ರ ಸಕಲ
ಲೋಕ ಪಾಲಕ ಸತ್ಯ ಸಾಂದ್ರ
ಕೋಕ ಹಿತನಾತ್ಮಜನ ಭೀಕರವ ಪರಿಹರಿಸಿ.
ಸಾಕಾರವಾಗು ಧೃತಚಂದ್ರ ತ್ವಂ ಶಾರದಾ ॥ ೧೫ ॥

೫. ರುದ್ರ ಮುನೀಂಧ್ರ ಕಂದಸ್ತೋತ್ರ

ಶ್ರೀಕರ ಗುಣನಿಧಿ ಭಕ್ತ ವ
ಶ್ರೀಕರ ವೇದಾಂತ ವೇದ್ಯ ಶಿವಕರ ತುರವಿತ
ಟಾಕ ಪುಟಭೇದನಾಲಯ
ರುಕರಧರ ರೂಪ ಪಾಹಿ ರುದ್ರ ಮುನೀಂದ್ರ ॥ ೧ ॥

ವಿಪ್ರಾಂಗಾರುಚಿ ವಿಗ್ರಹ
ಕ್ಷುದ್ರ ಮತಾಬ್ರಾಶುಗ ಮುಮುಕ್ಷುಗಣ ವರೇಣ್ಯ
ಮುದ್ರಾಸಂಧಾನಕ ಭೂ
ರುದ್ರಾನ್ವಯ ತಿಲಕ ಪಾಹಿ ರುದ್ರ ಮುನೀಂದ್ರ ॥ ೨ ॥

ದ್ವಿಜಚಯ ಮಾನಿತ ಕವಿಜನ
ವ್ರಜಸೇವಿತ ಚರಣ ಭವ್ಯ ವ್ರತ ನಿಯುತಾತ್ಮ
ಭಜಕ ಫಲಪ್ರದ ಶಾಶ್ವತ
ರುಜಮೋಹನ ದೇವ ಪಾಹಿ ರುದ್ರ ಮುನೀಂದ್ರ ॥ ೩ ॥

ತ್ರಿಟ್ಕಾಂತಾತ್ಮ ಜಮದ ವಿ
ದ್ವಟ್ಕರುಣಾಕಾರ ಕಲುಷದ್ವಿರದ ಮೃಗೇಂದ್ರ
ಈಟ್ಕಮಲಜೇಂದ್ರ ಸನ್ನುತ
ರುಟ್ಕರ್ಮ ವಿರಹಿತ ಪಾಹಿ ರುದ್ರ ಮುನೀಂದ್ರ ॥ ೪ ॥

ಗೂಢಶಿವ ತತ್ವಜ್ಞಾನ ಪ್ರ
ಗಾಢ ವಿಖಂಡಿತ ವಿನೂತನ ಗಾನವಿಲೋಲ
ಪಾಢ ವಿಚಕ್ಷಣ ಸದಯ
ರೂಢಾತ್ಮಕ ದೇವ ಪಾಹಿ ರುದ್ರ ಮುನೀಂದ್ರ ॥ ೫ ॥

ಅಸಮಾನ ಶೀಲ ಸಂಯುತ
ವಿಷಯಾತುರ ವಿರಳ ವಿಘ್ನ ವಿಪಿನೋದ್ಧಾವ

ವಿಷದ ಪ್ರಣವಾರ್ಥ ಬೋಧಕ
ವೃಷಕೂಲ ಚಕ್ರೇಶ ಪಾಹಿ ರುದ್ರ ಮುನೀಂದ್ರ ॥ ೬ ॥

ಅಭವಾಗದು ವಿಜ್ಞಯೋಗ
ವಿಭವಾನ್ವಿತ ವಿಕೃತಿ ವಿಕಟಾ ವಿಜಿತ ವಿಧೇಯ
ಶುಭ ಸಚ್ಚರಿತ್ರ ಶೋಭನ
ರುಭೋರ್ಚಿತ ದೇವ ಪಾಹಿ ರುದ್ರ ಮುನೀಂದ್ರ ॥ ೭ ॥

ಉಗ್ರಮತಾಂಬುಧಿ ಚಂದ್ರಮ
ಪ್ರಾಂಗ್ರ ಪ್ರಮಥಾಗ್ರ ಗಣ್ಯ ಪ್ರಣುತ ಶರಣ್ಯ
ವಿಗ್ರಹ ಮಹಿಮಾನುಗ್ರಹ
ರುಗ್ರಾಜಿತ ಮೂರ್ತಿ ಪಾಹಿ ರುದ್ರ ಮುನೀಂದ್ರ ॥ ೮ ॥

ಪ್ರಚುರತರ ಲೋಕಪಾವನ
ಸುಚರಿತ ಭುವನೈಕ ಪೂಜ್ಯ ಸೂನೃತ ವಚನ
ಶುಚಿ ಲಿಂಗೈಕ್ಯ ಸನಾತನ
ರುಚಿರಾಮಳ ಮೂರ್ತಿ ಪಾಹಿ ರುದ್ರ ಮುನೀಂದ್ರ ॥ ೯ ॥

ಭೂಜನ ವಿನಮಿತ ಚರಣಾಂ
ಭುಜಾಪ್ರಚಿಮಾನ ವಿಕಾರ ಓಘವಿದೂರ ।
ರಾಜಾ ಜತ್ವಲ ಕಳಾಭಿರಾಮ
ರೂಜ ಪ್ರಮದಘ್ನಿ ಪಾಹಿ ರುದ್ರ ಮುನೀಂದ್ರ ॥ ೧೦ ॥

ತಾವಕ ಶರಣ ಜನಾವಳಿ
ಸೇವಕ ಶುಭದೈನಿಲಯ ಸುಶರಣ ಕವೀಂದ್ರ
ಶಾವಕ ಹೃದಯಾಬ್ಜ ಸೂರ್ಯ
ಚನ್ನವೀರಾರ್ಯ ರೂಪ ದಾಹಿ ರುದ್ರ ಮುನೀಂದ್ರ ॥ ೧೧ ॥

೬. ಪಾಹಿಮಾಂ ಬಸವಸ್ತೋತ್ರ

ಪಾಹಿಮಾಂ ಶರಣು ಬಸವ
ಪಾಹಿಮಾಂ ಶರಣು ಬಸವ
ಪಾಹಿಮಾಂ ಶರಣು ಬಸವ ॥ ಧ್ರು ॥

ಆದಿಯುಗದಿಂದಲತ್ತತ್ತ
ಆದಿಮೂಲ ಮೂರ್ತಿ ನೀನೆ
ಮೇದಿನಿ ಉದ್ಧರಿಸಿದಂಥ ಬಸವ ॥ ೧ ॥

ಶಿವನೆ ಬಸವ ಬಸವ ಶಿವನೆ
ಅಸಮ ಋಷಿಯ ವೃಷಭ ನೀನೆ
ವಸುಧೆ ಜನರ ಸಲುಹಿದಂಥ ಬಸವ ॥ ೨ ॥

ಸಾಂಬಶಿವನ ಮತವ ಹಿಡಿದು
ಕುಂಭಿನಿಯೊಳು ಬಂದು ಮಾದ
ಲಾಂಬಿಕೆಯೊಳು ಜನಿಸಿದಂಥ ಬಸವ ॥ ೩ ॥

ಕಲ್ಯಾಣಕ್ಕೆ ಬಂದು ಬಿದ್ದ
ಕಲ್ಲ ಲಿಪಿಯನೋದಿ ತಕ್ಕೆ
ಯಲ್ಲಿ ದ್ರವ್ಯ ತೋರಿದಂಥ ಬಸವ ॥ ೪ ॥

ಶ್ರೀಪತಿಯ ವೋಲಗದಲ್ಲಿ
ಜೇಷ್ಠ ಅಕ್ಕನಾಗಮ್ಮಳ
ಹೊಟ್ಟೆ ಶಿಶುವ ನುಡಿಸಿದಂಥ ಬಸವ ॥ ೫ ॥

ಧರಣಿಪತಿಯ ಸಭೆಯಲ್ಲಿ
ಶರಣ ನಾಗಮಯ್ಯ ಬರಲು
ಬೆರಳಿನಲ್ಲಿ ಹಾಲುಗರೆದ ಬಸವ ॥ ೬ ॥

ಕೊರೆದ ಕಟ್ಟಿಗೆ ಬೊಂಬೆಮಾಡಿ
ಚರನು ಸತ್ತನೆನುತ ಬರಲು
ಭರದಿ ಅದಕೆ ಪ್ರಾಣವಿತ್ತ ಬಸವ ॥ ೭ ॥

ಖಿಲ್ಲ ಜೈನರೆಲ್ಲ ಕೂಡಿ
ಹುಲ್ಲು ಜಂಗಮವನೆ ಮಾಡಿ
ನಿಲ್ಲದದಕೆ ಪ್ರಾಣವಿತ್ತ ಬಸವ ॥ ೮ ॥

ನಿಂಬೆಹಣ್ಣು ಕಟ್ಟಿಕೊಂಡು
ರಂಭೆ ಸಭೆಗೆ ಬರಲು ನೃಪಗೆ
ಬಿಂಬಲಿಂಗ ತೋರಿದಂಥ ಬಸವ ॥ ೯ ॥

ಸತ್ತ ಆಕಳವನು ಹಿಡಿದು
ಎತ್ತಿ ಹಾಲುಗರೆದು ತಂದು
ಪಿತೃ ಪ್ರಯೋಜನಕ ವಿತ್ತ ಬಸವ ॥ ೧೦ ॥

ಊರವೊಳಗೆ ಗೊಲ್ಲವನಿತೆ
ಮಾರುತಿರಲು ಹಾಲು ಮೊಸರು
ಜಾರಿ ಬಸವಯೆನಲು ಕಾಯ್ದ ಬಸವ ॥ ೧೧ ॥

ಮಾಣಿಕವನು ಸೋತು ಚರನು
ಮಾನಕೊಂಬುತಿರಲು ತೊಗರಿ
ಮಾಣಿಕವನು ಮಾಡಿಕೊಟ್ಟ ಬಸವ ॥ ೧೨ ॥

ಗಣಿತವಿಲ್ಲದಂಥ ಪ್ರಮಥಗಣಕೆ
ಶ್ರೇಷ್ಠ ಬಸವರಾಜ ಪ್ರಣಯ ರೂಪು
ಪಂಚ ಪರುಷ ಬಸವ ॥ ೧೩ ॥

ಧರಣಿಯೊಳ್ಳೈನಿಲಯ ವಾಸ
ಗುರು ಚನ್ನ ವೀರೇಶ
ಕರ್ಪೋರೇಶ ಇಷ್ಟಲಿಂಗ ಬಸವ ॥ ೧೪ ॥

೭.ಭೀಮಾಶಂಕರ ಸ್ತೋತ್ರ

ಕ್ಷಮಾದ್ರಜಾಮುಖಾಂಬು ಜಾಂಬುಜಾಪ್ತ ಶುಕ್ರರೇತ ಗೋ- ।
ರಮದ್ವಜಭ್ರ ಶುಭ್ರ ಭಾನು ಭಾನು ಚಿತ್ರ ಭಾನುಕಂ ।
ಕ್ಷಮಾ ಸಮೀರಣಾತ್ಮಗಾತ್ರ ಗೋತ್ರ ಕಾರ್ಮಾಖದ್ರಸ ।
ದ್ರಮಾಪ ಗೋಪಕಾಂಡ ಸೂತ ಪಾಹಿ ಭೀಮಾಶಂಕರ ॥ ೧ ॥

ಗಣೇಂದ್ರ ರುದ್ರ ಭದ್ರ ಭದ್ರ ವಾಹವಾಹವೇದವಾ ।
ರಣೇಂದ್ರ ಪತ್ರ ಪತ್ರರಾಜ ಯಾನಕಂಜ ಜಾರ್ಜಿತ ।
ಮಣೇಂದ್ರ ಭುಷಣಾಬ್ಜರಾಜ ಮಿತ್ರ ನೇತ್ರ ನೇತ್ರ ಶೃ ।
ದ್ಗುಣೇಂದ್ರ ಪುತ್ರ ಗೋಪ್ರದಾತ ಪಾಹಿ ಭೀಮಾಶಂಕರ ॥ ೨ ॥

ಭರಾಟ್ತ್ರಕಾಶ ಕಾಶ ನಾಕಕೇಶ ಕೇಶವಾಶುಗ ।
ಸ್ವರಾಷ್ಟ್ರ ದುಷ್ಟ ವಿಘ್ನಗ್ರಾವ ಶಂಬ ಶಂಬರಾಹಿತ ।
ಸ್ಫುರತ್ಕಲೇವರಿದ್ಮ ಮಾರುತೇಷ ಪದ್ಮ ಸದ್ಮಕಂ ।
ಧರ ಪ್ರತರ್ಕ್ಯ ಶೌರ್ಯವರ್ಯ ಪಾಹಿ ಭೀಮಾಶಂಕರ ॥ ೩ ॥

ಕುರುಂಗವಾಣಿ ಕಾಲಕಾಲ ಕುಧ್ರ ಜಾಸು ಪ್ರಿಯ ಮು-
ತ್ತರಂಗ ರಂಗಲೀನ ಚಿತ್ತಸಾಧು ಹಂಸಪುಸ್ಕರ
ದ್ವಿರೇಫ ಗೋಪ ಗೋಪ ಪುತ್ರವಂದ್ಯೆ ದೇವ ದೀರ್ಘಿಕಾ
ಕಿರೀಟ ಬ್ರಾಜಮಾನ ಶರ್ವ ಪಾಹಿ ಭೀಮಾಶಂಕರ ॥ ೪ ॥

ಜಿತಂಗ ಜವುಜ ಪ್ರಸೇವಿತ ಪ್ರಸಿದ್ಧ ಸರ್ವವಿ
ನ್ಮತಂಗ ಜಾಸುರಾಂಗ ಚರ್ಮಾಚೇಲ ಫಾಲಲೋಚನಾ
ಪತಂಗಜ ಪ್ರಭೇದ ಪಂಚವಕ್ತ್ರ ಘೋರಜನ್ಮ ಹೃ
ತ್ಸಿತಂಗ ಜಾತಮೂಲ ಮೂರ್ತಿ ಪಾಹಿ ಭೀಮಾಶಂಕರ ॥ ೫ ॥

ಭುಜಂಗ ಭೂಪ್ರವಾಹ ಶಾನಕುವಾಹತಾತ ವಿಸ್ಫುರ
ದ್ವಿಜೇಂದ್ರ ದಾರಕಾರ್ಚಿತಾಂಘ್ರಿ ಶಂಬರೇಜ ಶಾಸ್ವತ
ರುಜೋಪತಾಖೇದಶಾದ ಬ್ರಹ್ಮ್ಯದಾನವಾನನ
ಶ್ಯಜ ಪ್ರಭಾನ್ವಿತೋರುವಕ್ಷ ಪಾಹಿ ಭೀಮಾಶಂಕರ ॥ ೬ ॥

ಪಿನಾಕ ಹಸ್ತಶಸ್ತ ತೇಜ ಯುಕ್ತ ಸರ್ವದಾ
ಧನಾದಿಪ್ರಾಪ್ತಿ ಸಪ್ತ ಮಾತೃಕಾಪ್ತ ವಿಶ್ವನಾಯಕ
ಕನಜ ಪ್ರಭಾವ ಸಾಂದ್ರಸಾರ ಮೋಕ್ಷದ ಪ್ರಭಂ
ಜನಾತ್ಮಜ ಪ್ರಗೇಯ ಶೂಲ ಪಾಹಿ ಭೀಮಾಶಂಕರ ॥ ೭ ॥

ಕಪಾಲ ಬೃದ್ಗರಂಕ ಕಂದರಾಂ ಧರದ್ವಿಷಗ್ಗೃಣಾ
ಬ್ಧಿ ಪೂರ ಸಾಮಗಾನ ಪ್ರಿಯ ಸರ್ವಲೋಕ ರಕ್ಷಕ
ಕೃಪಾಕರಾತ್ಮ ಜಾರ್ಜಿತ ಕ್ರಮಾಬ್ಜ ದೋಷಮೋಚಭಿ
ದ್ವಿಪಾಕೃಪಾಂಕ ಭಕ್ತಲೋಲ ಪಾಹಿ ಭೀಮಾಶಂಕರ ॥ ೮ ॥

ಪರಮಪದ ಪ್ರಮಾರ್ಗ ಮೃಗ್ಯಯೋಗಯೋಗಿ ಹೃತ್ಸಲಾ
ಮರಂದಲೋಭ ಲಬ್ಧ ಬೃಂಗಮೂಲ ವರ್ಣರೂಪಕ
ಅರಿಧ್ಯತೇಕ್ಷನಂಬುಜ ಪ್ರಪೂಜಿತ ಸ್ವತಂತ್ರ ಚಿ
ತ್ಪರತ್ಮ ಭವ್ಯ ಸುಪ್ರಸನ್ನ ವಾಹಿ ಭೀಮಾಶಂಕರ ॥ ೯ ॥

ವಿಧೂತಪಾತ ಕೌಗ ನಾಕ ಪದ್ಮ ಸಾರ್ವಭೌಮದಿ ।
ಕ್ಷದಾ ಪರಾಣ್ಮನೋರಥ ಭೂತನಾಥ ಚಿ
ಚ್ಛುದಾತ ಪ್ರಲೀನ ಚೇತನಾಂತರಂಗ ಸಂಗ ಸರ್ವದಾ
ಸದಾ ಮಮಾತ್ಮ ಸೌಖ್ಯದೇಹಿ ಪಾಹಿ ಭೀಮಾಶಂಕರ ॥ ೧೦ ॥

ಹರಿದ್ವಿಪಾಲ ಪಾಲ ಯಕ್ಷರಾಟ್ ಸಮಾಜ ಪೂಜ್ಯತ್ರೈ
ಪುರಾಂತಕಾರ್ಧ್ವರಾಂತ ಕಸ್ಮರಾಂಗನಾರ್ಚಿತ ಪ್ರಭೋ
ಸುರಾಸುರೇಂದ್ರ ವಂದಿತ ಪ್ರಕೃಷ್ಟಿ ಮೋಕ್ಷದೈನೆಲೆ
ಪುರೇಂದ್ರ ಚನ್ನವೀರಣಾರ್ಯ ಪಾಹಿ ಭೀಮಾಶಂಕರ ॥ ೧೧ ॥

೮. ಪಾದ ಸ್ತೋತ್ರ

ಶ್ರೀಮದಮಲ ಸುಸ್ಥಿರ ಶಿವಪಾದಂ
ನೇಮದೆ ಪೂಜಿಪೆ ನಿರುಪಮ ಪಾದಂ ॥ ಧ್ರು ॥

ಆದಿಪ್ರಮಥ ಗಾಣರ್ಚಿತ ಪಾದಂ
ಆದಿಯುಗಾಂತ ಸದಾಕರ ಪಾದಂ
ವೇದಾಗಮ ಸಂವೇದಿತ ಪಾದಂ
ವೇದಾಚ್ಯುತ ಸೇವಿತ ಶ್ರೀ ಪಾದಂ ॥ ೧ ॥

ವಿಶ್ವರೂಪ ಘನವಿಶ್ರುತ ಪಾದಂ
ವಿಶ್ವಲೋಕಚಯ ವಿಭುಮೃಡ ಪಾದಂ
ವಿಶ್ವಂಭರ ದೃಗ್ ವಿದ್ಯುತ್ ಪಾದಂ
ವಿಶ್ವೇಶ್ವರ ಭವ ವಿದೃತ ಪಾದಂ ॥ ೨ ॥

ಸಪ್ತಕೋಟಿ ಮನು ಸಂಯುತ ಪಾದಂ
ಸಪ್ತಋಷಿವ್ರಜ ಸನ್ನುತ ಪಾದಂ
ಸಪ್ತಶ್ಯಾಮಲ ಸದೃಚಿ ಪಾದಂ
ಸಪ್ತಲಪುಷ್ಪ ವಿಶೋಭಿತ ಪಾದಂ ॥ ೩ ॥

ಭಂಡಾಸುರ ಮದ ಭಂಜನ ಪಾದಂ
ಚಂಡಾಂಧಕ ವಿಭೇದನ ಪಾದಂ
ದಂಡಧರಾಂಗ ವಿದಂಡಿತ ಪಾದಂ
ತಾಂಡವ ತಲಾತ್ತತ ಮೃದು ಪಾದಂ ॥ ೪ ॥

ವಿದ್ಯೇಶ್ವರ ಗಣ ವಿದಿಯುತ ಪಾದಂ
ವಿದ್ಯಾಧರ ವ್ರಜ ವಿನಮಿತ ಪಾದಂ
ವೇದ್ಯಮೌನಿಗಣ ವೇಷ್ಟಿತ ಪಾದಂ
ಹೃದ್ಯಮದಬನ ಸಂಹೃತ ಯುಗ ಪಾದಂ ॥ ೫ ॥

ಸಕಲ ಸುಜನ ಹೃತ್ಸಂಚರ ಪಾದಂ
ವಿಕಟ ಕುಜನ ಹೃದ್ವಿರಹಿತ ಪಾದಂ
ಪ್ರಕಟತರ ಕುಂಭಜ ಪ್ರಸ್ತುತ ಪಾದಂ
ಸುಕರ ಶಿಲಾದ ಸ್ತುತಿಯುತ ಪಾದಂ ॥ ೬ ॥

ನಂದಿಕೇಶ್ವರಾನಂದ ಸುಪಾದಂ
ನಂದನಿಷಿಂನ ಸನಾತನ ಪಾದಂ
ಸಿಂಧುರ ದೈತ್ಯ ವಿಸೂಧನ ಪಾದಂ
ಮಂದರ ಭೂಧರ ಮಂದಿರ ಪಾದಂ ॥ ೭ ॥

ಭಕ್ತಕದಂಬಕ ಭಾಷ್ಟಿತ ಪಾದಂ
ರಕ್ತ ವಿರಹಿತ ನಿರಂಜನ ಪಾದಂ
ವ್ಯಕ್ತ ಮುನೀತಾವ್ಯಯ ಪಥ ಪಾದಂ
ರಕ್ತಿ ತಿಮಿರ ವಿರೋಚನ ಪಾದಂ ॥ ೮ ॥

ಕನಕಗರ್ಭ ಸುತಕಾಂಕ್ಷಿತ ಪಾದಂ
ದಿನಕರ ಶಶಿವಂ ದಿತಹರ ಪಾದಂ
ಸನಕಸ ನಂದನ ಸಾಧಿತ ಪಾದಂ
ಆನಕ ಪುತ್ರಿ ಪೂಜಿತ ಶುಭ ಪಾದಂ ॥ ೯ ॥

ನವಬ್ರಹ್ಮಾರ್ಚಿತನವನಲ ಪಾದಂ
ದಿವಿಜ ಮುಕುಟ ಮಣಿ ದೀಪಿತ ಪಾದಂ
ವಿವಿಧಾ ಮರಿತನ ವಿತ್ತಸು ಪಾದಂ
ಕವಿಜನ ಹೃದಯಾಕರ ಶಿವ ಪಾದಂ ॥ ೧೦ ॥

ವಸು ಮೃಕಂಡ ದೃಪವರ್ಣಿತ ಪಾದಂ
ವಸುಭಜಾ ಭವನಂದನ ಪಾದಂ
ವಸುರಸಲೋಕಂ ವರ್ಧಿತ ಪಾದಂ
ವಸುಜಿಮೂತ ಭವನಯುತ ಪಾದಂ ॥ ೧೧ ॥

ವರುಣಾಧರ ಭಯವಾರಣ ಪಾದಂ
ನಿರಘಜನ ಪ್ರಿಯನಿಶ್ಚಲ ಪಾದಂ

ಸ್ಫುರದುರ್ಮೈನಿಲಯ ಪುರಪತಿ ಪಾದಂ
ಪರ ಚನ್ನವೀರೇಶ್ವರ ಗುರುಪಾದಂ ॥ ೧೨ ॥

ಈ ಪಾದ ಸ್ತುತಿ ವಿನಯದಿ ಕೇಳ್ವುದು
ಪಾಪಭವಾಮಯ ಪರಿದೋಡುವದು
ತಾಪತ್ರಯ ಸಂತಾಪವನಳಿವುದು
ಶ್ರೀ ಪರಮೇಶ್ವರನ ಸಿದ್ಧಿಯಮಹುದು ॥ ೧೩ ॥

೯. ಲಿಂಗ ಸ್ತೋತ್ರ

ಲಿಂಗಮಹೇಶ್ವ ಲಿಂಗಮದೀಶ್ವ
ಲಿಂಗ ಸಮವಾಯಿ ಲಿಂಗ ಲಿಂಗಯ್ಯ ॥ ಪ ॥

ಭಂಗವಿರಹಿತ ಲಿಂಗನಸುವಿನೊಳು
ಸಂಗಮಾಹಿಹ ಪ್ರಾಣಿಲಿಂಗ ಲಿಂಗಯ್ಯ ॥ ೧ ॥

ನುಲಿಯ ಚಂದಯ್ಯನ ತೊಲಗಿ ನಿರೊಳು ಬಿದ್ದ
ನುಲಿಯ ಮಾರಿಬಂದ ಚೆಲುವ ಲಿಂಗಯ್ಯ ॥ ೨ ॥

ಹುಟ್ಟಿದ ಶಿಶು ಕೊಲ್ವ ದಿಟ್ಟುಗ್ರದಂಡಿಯ
ನಿಷ್ಠೆಗೆ ಮಾತಾಡಿದಿಷ್ಟಲಿಂಗಯ್ಯ ॥ ೩ ॥

ಅಂಗನೆ ತಾನುಂಡು ಪೊಂಗಿ ಳಿಟ್ಟ ತಳಿಗೆ
ನುಂಗಿದ ವರ ಭೀಮಲಿಂಗ ಲಿಂಗಯ್ಯ ॥ ೪ ॥

ಕಮಳಾಯಿಯಸು ಸಹಗಮಿಸಲ್ಕೆ ಮುಕ್ತಿ ಯುಕ್ತಿ
ಸಮರಸವಾಗಿಟ್ಟ ವಿಮಲಲಿಂಗಯ್ಯ ॥ ೫ ॥

ಚಿತಭಸ್ಮವಿಲ್ಲೆಂದು ಸತಿಯದಹಿಸಿ ಧರಿಸ
ಲತಿಶಯ ಪದವನಿತ್ತತುಳ ಲಿಂಗಯ್ಯ ॥ ೬ ॥

ಅಂಗವಿಸಿ ಶತಚುಂಬನಂಗಳಿತ್ತವಳಿಗೆ
ಮಂಗಳ ವರವಿತ್ತ ತುಂಗ ಲಿಂಗಯ್ಯ ॥ ೭ ॥

ಹೊಳೆಬರಲು ನಡುವೆ ಕುಳಿತು ಪೂಜಿಸುವಾತ
ನೊಳು ಮಾತಾನಾಡಿದ ಸುಲಭ ಲಿಂಗಯ್ಯ ॥ ೮ ॥

ವ್ರತಿಗೆ ಲಿಂಗವನಾಗಿ ಸತಿಗೆ ಪುರುಷನಾಗಿ
ಹಿತದಿಂದೆ ಕೂಡಿದ ಪೃಥುಲ ಲಿಂಗಯ್ಯ ॥ ೯ ॥

ನಾಗಕನ್ನೆಯರು ಮಾಳ್ಪ ರಾಗಕೊಲಿದು ತಲೆಯ
ದೂಗಿ ಬಾಗಿನಿಂದ ಭೋಗಲಿಂಗಯ್ಯ ॥ ೧೦ ॥

ವಿತತೈನೆಲೆಯ ಪುರಪತಿ ಚೆನ್ನವೀರೇಂದ್ರ
ಸತಿಯ ಒಲಿಸುವ ಪ್ರತಿಮ ಲಿಂಗಯ್ಯ ॥ ೧೧ ॥

೧೦. ಬಸವರಾಜ ಸ್ತೋತ್ರ

ಪಾಲಿಸಯ್ಯ ಪರಮಪುರಷ ಬಸವರಾಜ
ಶ್ರೀ ವಿಶಾಲೈನಿಲಯ ಶರಣ ಸತ್ಯ ಬಸವರಾಜ

ಆದಿ ವೃಷಭ ಅಪ್ರಮೇಯ ಬಸವರಾಜ
ಮುನಿ ಶಿಲಾದನ ನಂದನ ನಂದಿ ಬಸವರಾಜ

ವೇದವೇತ್ತ ವಿಶದಗಾತ್ರ ಬಸವರಾಜ
ನಿತ್ತನಾದಿಯುಗದ ನಾದಮೂರ್ತಿ ಬಸವರಾಜ

ಭವದಿಂದೆ ನಾ ಬಾಯಿಬಿಡುವೆ ಬಸವರಾಜ
ಸುತ್ತಿ ಕವಿದ ರುಜಕ ಕರಗುವೆನು ಬಸವರಾಜ

ಅವಕಾಶವಿದಕಿಲ್ಲವಿನ್ನು ಬಸವರಾಜ
ನಿಮ್ಮ ಕುವರನೆಂದು ಕುಶಲವಿರಿಸು ಬಸವರಾಜ

ಹುರುಳಿಲ್ಲದ ಹುಸಿಯ ತನವು ಬಸವರಾಜ
ಇದಕೆ ಪರಿಣಾಮದ ಪಥವನುಂಟೆ ಬಸವರಾಜ

ಮರವೆ ಬಂದುನ್ಮತ್ತನಾದೆ ಬಸವರಾಜ
ಅಂತಃಕರಣವಿಟ್ಟು ಕರುಣಿಸಯ್ಯ ಬಸವರಾಜ

ಭೃತ್ಯ ನಾನು ಭೂಪ ನೀನು ಬಸವರಾಜ
ಸಲೆ ಅನಿತ್ಯ ನಾನು ನಿರಘ ನೀನು ಬಸವರಾಜ

ಮಿಥ್ಯ ನಾನು ಮೇರು ನೀನು ಬಸವರಾಜ
ನೋಡಪತ್ಯ ನಾನು ಪಿತನು ನೀನು ಬಸವರಾಜ

ಆರೂಢ ಪ್ರಮಥಾಗ್ರಗಣ್ಯ ಬಸವರಾಜ
ಕ್ರೂರಾಕಾರ ಜೈನಗರ್ವನಾಶ ಬಸವರಾಜ

ಸಾರ್ರೈನಿಲಯ ಸುಜನಾಧಾರ ಬಸವರಾಜ
ಚನ್ನವೀರೇಶ್ವರನ ವಿಗ್ರಹಾತ್ಮ ಬಸವರಾಜ

◆

ಅಧ್ಯಾಯ – ೯
ಸ್ತೋತ್ರ ರತ್ನಾಕರ ಶಿವಸ್ತೋತ್ರ ಗೀತೆಗಳು
೧. ಮಾಂ ಪಾಹಿತ್ವಂ ಹೇರಂಬ

ಸಾಂಬ ಮಾಂ ಪಾಹಿತ್ವಂ ಹೇರಂಬ
ಸವಿತೃ ಶ್ರೀಧವ ಕಲಂಬ
ಶೈಲೇಂದ್ರಧನ್ವ ವಿಡಂಬ
ನುತ ದಿವಿಜ ಕದಂಬ ಸಾಂಬ ಸಾಂಬ ಶ್ರೀ ಸಾಂಬ ॥ ಪ ॥

ದೇವಾಸ್ನುತ ಯಮಿಜನ ರಾಜೀವ
ಮಿತ್ರ (ಖಾಂಡ) ವವನದಾವ
ಜಿಮೂತರುಚಿನಿಭಗ್ರೀವ
ಸಜ್ಜನ ಸಂಜೀವ ॥ ೧ ॥

ಸೋತ್ರ ಶ್ರೋತ್ರಾಲಂಕಾರ ಕೃತಿ ಶುಚಿಗಾತ್ರ
ಜಲಧರಂಧಕ ಚೈತ್ರ
ಮಹೋಕ್ಷಗಮನ ಗೋತ್ರ
ರಥವಿದಿಕಂ ಪಾತ್ರ ॥ ೨ ॥

ಕಾಮಜಿತ ರುಚಿರ್ಯನೆಲೆ ನಿಜಧಾಮ
ಗುರುಚೆನ್ನವೀರೇಶ ಭೀಮ
ಕವಿತಾಬ್ಧಿವರ್ಧನ ಸೋಮ
ಚಿನ್ಮಯ ಮತ್ರೇಮ ॥ ೩ ॥

೨. ಪಾಲಯ ಮಾಂ ದೇವ

ಪಾಲಯ ಮಾಂ ದೇವ ಶ್ರೀ ಕ್ಷಪಾಕರಶೇಖರ ಹರ
ಫಾಲನಯನ ಚಟುಲ ದುರಿತಪಟಲ ಕುಧರ ವಿಧುರ ॥ ದ್ರು ॥

ವೃಷಾಕಪಿ ಈಶಯೋಗಿವೃಂದಾರ್ಚಿತ ಪದಾಂಭೋಜ
ವೃಷಭಾರೂಢ ಸುಜನ ಚಕ್ರ ವೃಂದಾರಕ ಭೂಜ ॥ ೧ ॥

ರುಕ್ಮವತಿಪತಿ ವಿಪಕ್ಷ ರುಚಿರಾರುಣವರ್ಣ ನೇತ್ರ
ರುಕ್ಮಗೋತ್ರಧನ್ವ ಸುಕರಣಕಲಾಪ ನೇತ್ರ ॥ ೨ ॥

ವಿನಾಯಕ ಜನಕ ಮಹೇಶ ವಿತತ್ಯೈನಿಲಯಾಧಿನಾಥ
ವಿನಾಯಕ ಗಮಿತ ಚೆನ್ನವೀರೇಶ್ವರ ಮಹಿತ ॥ ೩ ॥

೩. ಪಾಲಯಾಂಬು ರಾಮಲಿಂಗ

ರಾಗ – ವರಾಳಿ

ಪಾಲಯಾಂಬು ರಾಮಲಿಂಗ ರಾಜಶೇಖರ
ಪಾಲನೇತ್ರ ಕವಿಗಣಾಂಬುನಿಧಿ ಸುಧಾಕರ ॥ ದ್ರು ॥

ಶಾರದ ತುಷಾರ ಹೀರ
ಸಾರಸಾರಿ ನೀರದ ಭ
ವಾರಣ ಕುಪಾರ ಡಿಂಡೀರ ನಾರದ
ಕ್ಷೀರ ಬೃಂದಾರಕ ಹಾರ
ಶಂಭು ತಾರ ಶುಭ್ರ ಸಾರ ಸಘನ
ಸಾರ ಚತಾರ ಗೌರನಿಭಶರೀರ ಶಂಭು ॥ ೧ ॥

ಸಲಕಲಂಬ ಕಲಗಲ ಕಜ್ಜಲ
ಜಲಭವದೃಗ್ಮಲ ಶ್ಯಾಮಲ
ಸಲಿಲಜಾಮ್ಮಗ ಮದನ ಭ್ರನಲಿನ ಹಿತಸುತ
ಬಲರಿಪು ಪಲವು ಮಾಮ್ರಸವ
ಜಲಜ ವಿಹಗ ಕುಲವಿಸರ
ಜಲದ ಲಲಿತ ಕಾಳಿಕುಂತಲ ವಿನೀಲಗಲ ಗಿರೀಶ ॥ ೨ ॥

ಸೂರ ವಾರಿಜಾಸನ ಮಾ–
ಮಾರುತೇಷ್ಟ ಕೀರಚಂಚು
ಸಾರ ಕೋಕನದ ಸುಕಾಶ್ಮೀರ ವಿದ್ರುಮ
ಸಾರರತ್ನ ದಿವ್ಯ ಪ್ರ
ಭಾರುಣಾಭ ಮಂಜು ಜಟಾ
ಭಾರಕೈನಿಲಯ ಚೆನ್ನವೀರಣಾರ್ಯ ಶಂಕರ ॥ ೩ ॥

೪. ಗೌರೀಶ ಸ್ತವನ

ಘನರುಚಿಗಲದೇವ ಸಮವ
ಗೌರೀಶ ಸತತಂ
ಕನದನುಪಮ ಭರ್ಮಗೋತ್ರ
ಕಾಂಡಾಸನ ವಿಧೃತ ॥ ಪ ॥

ಸಾಮಸಂಭವಾನನ ಪಿತ
ಸನದಗ ಪರವಿಧು ವಿನಮಿತ
ಸಾಮಸಂಭವಗಾನವೀನ
ಶರ್ವಸರ್ವ ಮಹಿತ ॥ ೧ ॥

ವೀಚಿಮಾಲಿ ತೂಣೀರಕ
ವಿಹೃತ ವಿರಾಮ ವಿಗತ ಬಾಣ
ವೀಚಿಮಾಲಿಯೇಕ
ಯಜ್ಞ ವಿಘ್ನನಾಶ ಸುಹಿತ ॥ ೨ ॥

ವಿಶದ್ಯೈನಿಲಯೇಶ ಚನ್ನ
ವೀರೇಶ ಪ್ರತಿಮ ಭೇಶ
ವಿಶದ ವಿಗ್ರಹ ಪ್ರತರ್ಕ
ವಿಶ್ವರೂಪ ಸಹಿತ ॥ ೩ ॥

೫. ಫಾಲಾಕ್ಷ ಬಾರಾ

ಫಾಲಾಕ್ಷ ಬಾರ ಕೇಶಪಾಹಿ ಗೌರೀಶ
ಲಲಿತ ಚಲಿತ ಮಲೆತ ಕಲಿತ
ಶೂಲವ್ಯಾಲ ಮಾಲಲೋಲ ಕೋಲಜಾಲಹಾಲನೆ ॥ ಪ ॥

ಚಾಮೀರಕ ಗೋಕೋದಂಡ
ರಾಮನಾಗ ಮಾರ್ತಂಡ
ಜಿಮೂತೇಶ ಗೋಪ್ರಚಂಡ
ಅಮಿತಾಭ್ಯಮಿತ ಗಮಿತನಮಿತ
ಸೋಮವಾಮ ಪ್ರೇಮ ಭೀಮ
ರಾಮ ರಾಮ ಗ್ರಿವನೇ ॥ ೧ ॥

ಜಾತವೇದ ಸುರೇತ
ಮಾತಂಗಾನನ ತಾತ
ಭೂತ ಸಂಘಾತ ನಾಥ
ಪ್ರತೀತ ಪತಿತಿ ಪತಿತನುತಿತ
ಧಾತ ಭುತಜಾತ ಸೂತ
ಬ್ರಾತರೇತ ಪ್ರೀತನೆ ॥ ೨ ॥

ವಾಸವಾರ್ಚಿತ್ಯೆನೆಲೆಯೆ
ವಾಸಚೆನ್ನವೀರೇಶ ಹರಿಯ
ವಸನ ಕಾಕೋದರವಲಯ
ಅಸುರ ವಿಸುರಾಯ ಸರ
ಕಸರ ಪೋಷ ಪೂಷ ಭಾಷ ಭೀಷ
ದೋಷನಾಶ ಈಶನೆ ॥ ೩ ॥

೬. ಶ್ರೀರಮಾಶುಗ ಭರ್ಗ ಪುನರ್ಭವ

ಶ್ರೀರಮಾಶುಗ ಭರ್ಗ ಪುನರ್ಭವ
ಶ್ರೀರಮಾ ಮಾಮತದೇವ
ಸಾರ ಮಾನಿತ ಸನ್ಮುನಿ ಸಮುದಯ
ಸಾರ ಮಾಮಕ ಮಾನ ವಿರಾಮ ॥ ದ್ರು ॥

ಮಾಧವಾಪ್ತ ಶಾಂಬರ ವಿಧ್ಯದು
ಮಾಧವ ಭರ್ಮಾಚಲ ಕಾರ್ಮುಕ
ಮಾಧವಾನ್ವಿತ ಮಾರ ಪರಾಪ್ರತಿ
ಮಾಧವಾ ಬರ ಗೋ
ಗೋಧವ ಧ್ವಜ ಗೋಧವೇಂದ್ರನುತ
ಗೋಧವ ಧ್ವಜ ಗೋಶ್ರುತಿಧರ ಧರ
ಗೋಧವಖಿಳ ಗೋಧವ ಸೇವಿತ
ಗೋಧವಧ್ವರ ಪಾಲನ ಶೀಲ ॥ ೧ ॥

ಕಂಧರಾವಳಿ ಸನ್ನಿಭಮೇಚಕ
ಕಂಧರ ವಿಧುರ ವಿಶಿಖ ಮಾರುತ
ಕಂಧರಾತ್ಮಾಂಗ ಮರ ತಟನಿ
ಕಂಧರ ಕರ್ಷ
ಸುಂದರಾಚಲ ದುಹಿತಾರ್ಧ ತನು
ಸುಂದರ ನೇತ್ರಾಯುಧ ವಿಮಲ ವ–
ಸುಂದರ ಸ್ಯಂದನ ನುಗಮಾಶ್ವ ವ–
ಸುಂದರಾಂಚಿತ ಹಸ್ತ ಮಹೇಶ ॥ ೨ ॥

ತಾರಕವರ ಶೇಖರ ಶಂಕರ
ತಾರಕಾಹಿತ ತಾತ ಭವಾಂಬುಧಿ
ತಾರಕ ಕರುಣಾರಸಯುತ ದೃಕ್

ತಾರಕ ಹರಿಣೋ
ದ್ಧಾರಕ ಮಿತ್ರೋತ್ಕಟ ವಿಘ್ನ ವಿ
ದಾರಕ ಶುಭದ್ಯೆನಿಲಯ ಬ್ಯಂ
ದಾರಕಾರ್ಚಿತ ಪದ ಕವಿಜನ ಮಂ
ದಾರಕ ಚೆನ್ನವೀರೇಂದ್ರ ॥ ೩ ॥

೭. ಭಜರೆ ಭಜರೆ ಮಹಾದೇವತ್ವಂ

ಭಜರೆ ಭಜರೆ ಮಹಾದೇವತ್ವಂ
ಭುಜಗಹಾರಂ ವಿಷಗ್ರೀವಂ ॥ ಪ ॥

ಕಮಲಜ ಭಾವಶಿರ ಪಾತ್ರಂ
ದಮುನರೇತಂ ಶುಚಿಗಾತ್ರ
ಹಿಮಕರಾನಲ ರವಿನೇತ್ರಂ ॥ ೧ ॥

ದಿವಿಷದ ನುತಕ್ರಮ ಪದ್ಮಂ
ಪ್ರವಿಮಲ ಯಮಿಮನ ಸದ್ಮಂ
ಸವಿತೃಜಕೃತ ಕರ್ಮಛದ್ಮಂ ॥ ೨ ॥

ಗಿರಿಜಾಸ್ಯಂ ಭೋಜ ಸೂರ್ಯಂ
ಸ್ಫುರತ್ಸೈನಿಲಯ ನಿಕಾಯ್ಯಂ
ವರಗುರು ಚೆನ್ನವೀರಣಾರ್ಯಂ ॥ ೩ ॥

೮. ಪಾಲಯ ವಟಪಾದ ಪಾಲಯಧೀಶ

ಪಾಲಯ ವಟಪಾದ ಪಾಲಯ ಧೀಶ
ಫಾಲನಯನ ಗೌರೀಪತಿ ಪರಮೇಶ ॥ ಧ್ರು ॥

ರಾಜೀವ ಪಾರಿಜಾತ ವೇಷ್ಟ
ರಾಜೀವಾಂಗ ವಿರಾಜಿತ ವೇಷ್ಟ ॥ ೧ ॥

ಜಂಬೂನದ ನಗೋಜ್ವಲ ಕೋದಂಡ
ಜಂಬೂಕಾಲಮೇಷದಿ ದೋರ್ದಂಡ ॥ ೨ ॥

ಅಬ್ಜಾರ್ಯಮ ಶಿಖಿಯಾಕ್ಷ ಸುಧೇಶ
ಅಬ್ಜ ಕರ್ಪೂರಾರ್ಚನಾಂಗ ಮದೀಶ ॥ ೩ ॥

ಪದ್ಮಸದಾತ್ಮಜ ಪರಪ್ರಮಥೇಂದ್ರ
ಪದ್ಮ ಸದ್ಮಾಮರ ಪಟಲ ರಾಜೇಂದ್ರ ॥ ೪ ॥

ಚತುರೈನಿಲಯಾರ್ಯ ಚನ್ನವೀರೇಶ
ವಿತತ ಕಂದರಪುರ ವಿಭು ಪರಮೇಶ ॥ ೫ ॥

೯. ಶಂಕರ ಸಾಂಬಶಿವ

ಶಂಕರ ಸಾಂಬಶಿವ ಮಾಮಕ ನಿರಾ
ತಂಕ ಶೋಭಾಂಕ ಮೃಗಾಂಕ ಶೇಖರ
ಶಂಕರ ಸಾಂಬ ಶಿವ ॥ ಪ ॥

ಮಾನಂದ ನಾಂಗ ವಿದಾಹನ
ಅಸಮಾನಾದಿ ವೃಷಭ ವಾಹನ
ವಿಧಿ ವನಜಾಕ್ಷ ಸುರೇಂದ್ರ ಸೇವಿತ ॥ ೧ ॥

ವಾರಣ ಸುರಮದ ಭಂಜನ
ಆಘುವಾರ ಮುದಿರ ಪ್ರಭಂಜನ
ಘನಸಾರ ಡಿಂಡೀರ ಪುಷಾರ ಶುಭ್ರಾಂಗ ॥ ೨ ॥

ಜಾತ್ಯೈನಿಲಯ ಪುರೀಶ್ವರ
ಗಣಜಾತಾಡ್ಯ ಚೆನ್ನವೀರೇಶ್ವರ
ಪರಿಪೂತ ಪ್ರಭೂತ ಪ್ರಖ್ಯಾತ ಮಹೇಶ ॥ ೩ ॥

೧೦.ಕಾಯೋ ಕೃಪಾಂಗ

ಕಾಯಜದರ್ಪ ವಿಭಂಗ
ಕಾಯೋ ಕಾಯೋ ಕೃಪಾಂಗ ॥ ಧ್ರು ॥

ಅತುಲಮಹಿಮಪುರ ಮಥನ ಶುಭ್ರಾಂಗ
ಪೃತುಲಘ ತಿಮಿರ ಪತಂಗ
ಮಚ್ಛೇತಾಂಬುಜ ಭೃಂಗ ॥ ೧ ॥

ಮೇರು ಶರಾಸನ ಧಾತ್ರಿ [ರಥಾಂಗ]
ಪಾರಾವಾರ ನಿಷಂಗ
ಭವ್ಯನಿಗಮ ತುರಂಗ ॥ ೨ ॥

ನಿರುತ್ತೈನಿಲಯ ಶ್ರೀ ಸೋಮೋತ್ಸಂಗ
ಗುರು ಚೆನ್ನವೀರಣಾರ್ಯಗಂಗ
ಮಕುಟ ಸುಜನ ಸುಸಂಗ ॥ ೩ ॥

೧೧. ರಾಜಮೌಳಿ ಮಹಾದೇವ

ರಾಜಮೌಳಿ ಮಹಾದೇವ
ಭೂತನಾಯಕ ವಿಬುಧ ವಿನುತ
ಸರ್ವದಾ ಮಾಂಪಾಲಯ ಶ್ರೀ ಗೌರಿಕಾಂತ ॥ ಪ ॥

ದಾನವಾರಿ ಪ್ರಿಯಗೋಪ
ಯಾನಾದ್ರಿ ಕೋದಂಡಪಾಣಿ
ಮಿನಾಂಕಾರಿ ಮಂತ್ರಮೂರ್ತಿ ಗಂಗಾಧರ ॥ ೧ ॥

ಶಾತಕುಂಭೋದಯ ದೇವ
ನಾಥಗಣ ವಿನುತ ಪಾಲ
ರೇತ ಮಂದರೂಪ ಕಾಪ್ಸಶೈಲಗಾರ ॥ ೨ ॥

ರುಚಿರೈನೆಲೆಮಂದಿರ ದಿವ್ಯ
ಶುಚಿವಿಗ್ರಹ ಚೆನ್ನವೀರೇಶ
ಅಚಲ ಮೋಕ್ಷ ಸೌಖ್ಯದೇಹಿ ನಿರ್ವಿಕಾರ ॥ ೩ ॥

೧೨. ವಾರಿನಿಧಿ ತೂಣ

ವಾರಿನಿಧಿ ತೂಣ
ವಾರಿಧರ ಗ್ರೀವ ಮಾಮಕ ಮಹಾಪ್ರಾಣ ॥ ದ್ರು ॥

ಪಾಕಸುಧಾಕರ
ಪ್ರಕಟಿತ ಮೇಷ್ಟಾಹಿಂದ್ರಹಾರ
ನಾಕ ಕುಂತಲ ಕಲುಷಿವಿ ದೂರ ॥ ೧ ॥

ಪಾತಕವ್ರಜ ವನ
ಪಾದಪಾಶನ ವೃಷಗಮನ
ಜಾತವೇದಾಕ್ಷರನ ಧರನ ॥ ೨ ॥

ರಾಜಿತ್ಶೈನಿಲಯ
ರಾಜ ಚೆನ್ನವೀರೇಶ್ವರ ಸದಯ
ಐಜನಾಗ್ರಣಿ ಪ್ರಮಥ ನಿಕಾಯ ॥ ೩ ॥

೧೩. ಶಂಕರ ಪಾಹಿ ಶಂಭು

ಶಂಕರ ಪಾಹಿ ಶಂಭು
ಕಾರುಣ್ಯನಿಧಿ ಸರ್ಪಾಲಂಕಾರ ಕೃಪಾಕರ ॥ ದ್ರು ॥

ಪಾರಾವಾರ ಬಾಣಗೇಹ
ಮಾರಮಣ ಶುಕ
ಮೇರುಧನ್ವಂ ಭೋಜ ಜಾತಸೂತ ಭುವರೂಥ ॥ ೧ ॥

ರಾಜಾನಲ ಗ್ರಹರಾಜ ನೇತ್ರ
ರಾಜೀವಶರಮಾತ
ರಾಜಕಿರೀಟ ಪ್ರಮಥೇಂದ್ರ ಸತ್ಯಸಾಂದ್ರ ॥ ೨ ॥

ಪೂತ್ಕೈನಿಲಯ ಕೇತನಾರ್ಯ
ನಾಥ ಚನ್ನವೀರೇಂದ್ರ
ವೀತ ವಿಕಾರ ಸ್ವರ್ಗಧಾಮ ಸಾರ್ವಭೌಮ ॥ ೩ ॥

೧೪. ಪಾಹಿ ಶಂಕರ

ಪಾಹಿಶಂಕರ ಶಿವಸುಖಧಾಮ
ದೇಹಿ ಮೇ ಪರಾಭಿರಾಮ ॥ ಧ್ರು ॥

ಶಾತಕುಂಭಾಚಲ ಕೋದಂಡ
ಭೂತ ಮಂಡವನ ವೇದಂಡ ॥ ೧ ॥

ಮಾಯಾಪಾತ ವಿರೋಚನ
ಮಾಯಾಪಾಶ ವಿಮೋಚನ ॥ ೨॥

ಕಪಾವೀಚಿಮಾಲಿ ಸಾಂಬ
ಭಪಭೃದಘ ಶೈಲ ಶಂಬ ॥ ೩ ॥

ದುಷ್ಟಾರಿಷ್ಟ ದುಃಖವಿನಾಶ
ಶಿಷ್ಟಾನಂದ ಜಿತಕೀನಾಶ ॥ ೪ ॥

ಚೆನ್ನವೀರಾರ್ಯ ನಿರ್ವಿಕಾರ
ಸನ್ನುತೈನಿಲಯ ನಿಕಾಯ ॥ ೫ ॥

೧೫. ಹೇ ಅಭವ

ಹೇ ಅಭವಾ ಮಹೇಂದ್ರಕಟಕ
ದೇಹಿ ತವಪಾದಾಂಬುಜ ಭಜನಂ
ಶ್ರೀನಗಜಾ ಮನೋಹರ ನಿರತಂ ॥ ಪ ॥

ಜನ್ಮ ಜರಾಮಯ ಭಯವಿದೂರ
ಮನ್ಮಾನಸಕಾಸಾರ ರಾಜ ಮರಾಳ ॥ ೧ ॥

ಪತಿತಪಾವನ ಗುಣಗಣ ಭರಿತ
ಯತಿಜನ ವರದ ಸುಚರಿತ ನಿರ್ವಿಕಾರ ॥ ೨ ॥

ರುಚಿರೈನೆಲೆನಿಲಯ ಸ್ಥಿತ ಸಾರ
ಪ್ರಚುರಮೂರ್ತಿ ಚೆನ್ನವಿರಾಚಾರ್ಯ ವೃಷ ॥ ೩ ॥

೧೬. ಭವಹರ ನಿಲಗ್ರೀವ

ಭವಹರ ನಿಲಗ್ರೀವ
ಮಾಮಕ ಶಿವಶಂಕರ ದೇವ
ಅವನಿಧರೇಂದ್ರಸುತಾಸ್ಯಾಬ್ಜಾರ್ಯ ಮ
ದ್ದಿವಿಜಪತಿ ವಿನಮಿತ ಪದ ರಾಜೀವ ॥ ದ್ರು ॥

ಪಾಕಸುಧಾಕರ ಭೂಷ ವಿಧಿ
ಪಾತಹರಾಚ್ಯುತ ಪೋಷ್ಯ
ನಾಕಚಿಕುರ ಶರನಿಧಿ ಶರನಿಧಿಧೃತ
ಕಾಕೋದರ ವರಧರಹೃತ ದೋಷ ॥ ೧ ॥

ಕಾಂಡರುಹಾಶುಗ ವಿಜಯ ಹರಿ
ಕಾಂಡ ಭೂದ್ರಧನು ವಿಜಯ
ಕಾಂಡಪ್ರದ ದಿಂಡೀರಾಖಂಡಲ
ಕುಂಡಲಾರ್ಣವ ಪಾಂಡುರ ಕಾಯ ॥ ೨ ॥

ಭಾನುಪ್ರಭಂಜನ ಮಿತ್ರ ಹಿಮ
ಭಾನುಗೋಧನ ಮಿತ್ರ
ಮಾನಿತ್ಯೆನಿಲಯ ಚೆನ್ನವೀರೇಶ್ವರ
ಮೇನಪ್ರಿಯ ಭವಸಾಗರ ಚೈತ್ರ ॥ ೩ ॥

೧೭. ಸ್ಮರಾರಿತ್ವಂ ಶಿವನಾಮಂ

ಸ್ಮರಾರಿತ್ವಂ ಶಿವನಾಮಂ
ಹರಿಣ ವಿಧುತ ರುಚಿರಾಮಂ ॥ ದ್ರು ॥

ಶಾವಕ ಹಿಮಕರ ಭೂಷ
ಸೇವಕಜನ ಪರಿತೋಷ
ಪಾವಕ ಜಾತ ಸುವೇಷ
ತಾವಕ ಭಕ್ತತಮ ಪೋಷ ॥ ೧ ॥

ರದನಾಯುಧಗುಹ ತಾತ
ಮದನ ವಿಕಾರ ವಿಕಾರ ವಿಧೂತ
ವದನಸ್ರಗ್ಧರ ಖ್ಯಾತ
ನಿಧನಾದ್ರಿಪ ಪರಿಪೂತ ॥ ೨ ॥

ಪರಮೈನಿಲಯ ಪುರೇಂದ್ರ
ಪರಿಭವ ನಾಗ ಮೃಗೇಂದ್ರ
ಪರಿಪಾಲನ ಗುಣಸಾಂದ್ರ
ಪರತರ ಚನ್ನವೀರೇಂದ್ರ ॥ ೩ ॥

೧೮. ಭಜರೆ ಶಂಭು

ಭಜರೆ ಶಂಭು ಪಾದಾಬ್ಜ
ಸುಜನ ಹೃತ್ಕುಮುದಾಬ್ಜ ॥ ಪ ॥
ಕಲ್ಯಾಣಾದ್ರಿ ಕೋದಂಡ
ಕಲ್ಯ ಕದಳಿ ವೇದಂಡ ॥ ೧ ॥

ಪರತರ ಮೋಕ್ಷಪ್ರದಾಯಕ
ಮರುದಾಪೇಕ್ಷಣ ಸಾಯಕ ॥ ೨ ॥

ಅಮಿತಜ್ಯೋತಿ ಚಿದಾಕರ
ಯಮಿಜನ ಹೃದಯ ಸದಾಕರ ॥ ೩ ॥

ಗಿರಿಜಾಸ್ಯಾಂಭೋಜ ಮಿತ್ರ
ವರವೈಶ್ರವಣ ಸುಮಿತ್ರ ॥ ೪ ॥

ನಿರುತ್ಯೈನಿಲಯ ನಿವೇಶ
ವರದ ಚೆನ್ನವೀರೇಶ ॥ ೫ ॥

೧೯. ಸೋಮೇಶ ಸಮವಿಭು ಮಹೇಶ

